ಶುಕ್ರವಾರ, ಡಿಸೆಂಬರ್ 1, 2023 | ಬೆಂಗಳೂರು | ₹ 7.00 | ಸಂಪುಟ 76 | ಸಂಚಿಕೆ 331 | ಪುಟ 16
● www.prajavani.net
prajavani.net prajavani prajavani prajavani

ಪ್ರಜಾ ವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಆಳ-ಅಗಲ

ವಿದೇಶದಲ್ಲಿ ಡೆಸ್ಟಿನೇಷನ್ ವೆಡ್ಡಿಂಗ್: ಭಾರತೀಯರ ಸಂಖ್ಯೆ ಕಡಿಮೆ

‘ಪನ್ನೂ ಹತ್ಯೆಗೆ ಸಂಚು: ಅಮೆರಿಕದ ಆರೋಪ ಕಳವಳಕಾರಿ- ಭಾರತ 7

ಜಿಡಿಪಿ: ನಿರೀಕ್ಷೆಗೂ ಮೀರಿ ಬೆಳವಣಿಗೆ 12

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
66,988 ▲	20,133 ▲	₹64,650 (ಬೆಂಗಳೂರು) ▼	₹78,100 (ಬೆಂಗಳೂರು) ▼	83.37 ▼

ಹೆಣ್ಣುಭ್ರೂಣ ಹತ್ಯೆ ಪ್ರಕರಣ: ಸಿಐಡಿ ತನಿಖೆ

ಬೆಂಗಳೂರು: ರಾಜ್ಯದಲ್ಲಿ ನಡೆದಿದ್ದ ಭ್ರೂಣಲಿಂಗ ಪತ್ತೆ ಪರೀಕ್ಷೆ ಹಾಗೂ ಹೆಣ್ಣುಭ್ರೂಣ ಹತ್ಯೆ ಪ್ರಕರಣವನ್ನು ರಾಜ್ಯ ಸರ್ಕಾರ ಸಿಐಡಿ ತನಿಖೆಗೆ ಒಪ್ಪಿಸಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಗೃಹ ಸಚಿವ ಡಾ.ಜಿ.ಪರಮೇಶ್ವರ ಅವರ ಜತೆಗೆ ದೂರವಾಣಿ ಮೂಲಕ ಚರ್ಚಿಸಿ, ಸಿಐಡಿ ತನಿಖೆ ನಡೆಸುವಂತೆ ಸೂಚಿಸಿದ್ದಾರೆ. 9

ಚಿನಕುರಳಿ

ಪ್ರಕಾಶ್ ಶೆಟ್ಟಿ



ಮತಗಟ್ಟೆ ಸಮೀಕ್ಷೆ ಪ್ರಕಟ ● ತೆಲಂಗಾಣ, ಛತ್ತೀಸಗಢ ಕಾಂಗ್ರೆಸ್‌ಗೆ, ಮಧ್ಯಪ್ರದೇಶ, ರಾಜಸ್ಥಾನದಲ್ಲಿ ಬಿಜೆಪಿ

‘ಕೈ’, ಕಮಲಕ್ಕೆ ತಲಾ 2, ಒಂದು ಅತಂತ್ರ

ಪ್ರಜಾವಾಣಿ ವಾರ್ತೆ

ನವದೆಹಲಿ: ಐದು ರಾಜ್ಯಗಳ ಮತದಾನ ಪ್ರಕ್ರಿಯೆ ಮುಗಿದ ಬೆನ್ನಲ್ಲೇ, ವಿವಿಧ ವಿದ್ಯುನ್ಮಾನ ಮಾಧ್ಯಮಗಳು ನಡೆಸಿದ ಮತಗಟ್ಟೆ ಸಮೀಕ್ಷೆ ಪ್ರಕಟವಾಗಿದೆ. ತೆಲಂಗಾಣ ಹಾಗೂ ಛತ್ತೀಸಗಢ ರಾಜ್ಯಗಳ ಮತದಾರರು ಕಾಂಗ್ರೆಸ್ ಪಕ್ಷವನ್ನು ಗದ್ದುಗೆಯ ಸನಿಹಕ್ಕೆ ಕರೆದೊಯ್ಯುವ ಸಾಧ್ಯತೆ ಇದೆ ಎಂದು ಬಹುತೇಕ ಮತಗಟ್ಟೆ ಸಮೀಕ್ಷೆಗಳು ಹೇಳಿವೆ. ‘ಕೈ’ ಪಾಳಯದ ಪ್ರಬಲ ಸ್ಪರ್ಧೆಯ ನಡುವೆಯೂ ಮಧ್ಯಪ್ರದೇಶ ಹಾಗೂ ರಾಜಸ್ಥಾನದಲ್ಲಿ ಬಿಜೆಪಿಯು ಅಧಿಕಾರದ ಚುಕ್ಕಾಣಿ ಹಿಡಿಯಲಿದೆ ಎಂದು ಸಮೀಕ್ಷೆಗಳು ‘ಭವಿಷ್ಯ’ ನುಡಿದಿವೆ.

ಐದು ರಾಜ್ಯಗಳಿಗೆ ನವೆಂಬರ್ 7 ರಿಂದ 30 ರ ನಡುವೆ ಮತದಾನ ನಡೆದಿದ್ದು, ಡಿಸೆಂಬರ್ 3 ರಂದು ಮತ ಎಣಿಕೆ ನಡೆಯಲಿದೆ. ಮತಗಟ್ಟೆ ಸಮೀಕ್ಷೆಯನ್ನು ಆಧರಿಸಿದ ಸಂಭಾವ್ಯ ಫಲಿತಾಂಶವನ್ನು 9ಕ್ಕೂ ಹೆಚ್ಚು ಸಂಸ್ಥೆಗಳು ಗುರುವಾರ ಸಂಜೆ ಪ್ರಕಟಿಸಿದವು.

ಲೋಕಸಭೆ ಚುನಾವಣೆಗೆ ನಾಲ್ಕೈದು ತಿಂಗಳು ಉಳಿದಿದ್ದು, ಐದು ರಾಜ್ಯಗಳ ಚುನಾವಣೆಯನ್ನು ಕಾಂಗ್ರೆಸ್, ಬಿಜೆಪಿ ಹಾಗೂ ಕೆ. ಚಂದ್ರಶೇಖರ ರಾವ್ ನೇತೃತ್ವದ ಭಾರತ ರಾಷ್ಟ್ರ ಸಮಿತಿ (ಬಿಆರ್‌ಎಸ್) ಮತ್ತು ಪ್ರಾದೇಶಿಕ ಪಕ್ಷಗಳು ಪ್ರತಿಷ್ಠೆಯಾಗಿ ತೆಗೆದುಕೊಂಡಿದ್ದವು. ಪ್ರಧಾನಿ ನರೇಂದ್ರ ಮೋದಿ, ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ.ನಡ್ಡಾ, ಗೃಹ ಸಚಿವ ಅಮಿತ್ ಶಾ, ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಕಾಂಗ್ರೆಸ್ ನಾಯಕರಾದ ರಾಹುಲ್ ಗಾಂಧಿ, ಪ್ರಿಯಾಂಕಾ ಗಾಂಧಿ, ಬಿಆರ್‌ಎಸ್ ಮುಖಂಡ ಕೆ.ಚಂದ್ರ ಶೇಖರ ರಾವ್, ಮತ್ತಿತರ ನಾಯಕರು ಭರ್ಜರಿ ಪ್ರಚಾರ ನಡೆಸಿದ್ದರು.

ಮಧ್ಯಪ್ರದೇಶದಲ್ಲಿ ಬಿಜೆಪಿಯು ‘ಅಭೂತಪೂರ್ವ’ (140ಕ್ಕೂ ಅಧಿಕ ಸ್ಥಾನ) ಜಯ ಗಳಿಸಲಿದೆ ಎಂದು ‘ಇಂಡಿಯಾ ಟುಡೇ’, ‘ಇಂಡಿಯಾ ಟಿವಿ’ ಹಾಗೂ ‘ಟುಡೇಸ್ ಚಾಣಕ್ಯ’ ಸಮೀಕ್ಷೆ ತಿಳಿಸಿವೆ. ಸಿ ವೋಟರ್, ಟೈಮ್ಸ್ ನೌ ಹಾಗೂ ಟಿವಿ 9 ಭಾರತವರ್ಷ ಸಮೀಕ್ಷೆಗಳ ಪ್ರಕಾರ, ಕಾಂಗ್ರೆಸ್ ದೊಡ್ಡ ಪಕ್ಷವಾಗಿ ಹೊರಹೊಮ್ಮಲಿದೆ. ರಾಜ್ಯದಲ್ಲಿ ಬಿಜೆಪಿ ಹಾಗೂ ಕಾಂಗ್ರೆಸ್ ನಡುವೆ ತುರುಸಿನ ಸ್ಪರ್ಧೆ ಏರ್ಪಟ್ಟಿದ್ದು, ಕಮಲ ಪಡೆ ಕೊಂಚ ಮೇಲುಗೈ ಸಾಧಿಸಿದೆ ಎಂದು ಕೆಲ ಸಮೀಕ್ಷೆಗಳು ಹೇಳಿವೆ.

ರಾಜಸ್ಥಾನದಲ್ಲಿ ಕಮಲ ಪಡೆಯು ಅಧಿಕಾರದ ಚುಕ್ಕಾಣಿ ಹಿಡಿಯಲಿದೆ ಎಂದು ಹೆಚ್ಚಿನ ಸಮೀಕ್ಷೆಗಳು ಹೇಳಿವೆ.

9ನೇ ಪುಟ ನೋಡಿ

• ಮಧ್ಯಪ್ರದೇಶ — ಒಟ್ಟು ಕ್ಷೇತ್ರಗಳು 230 — ಬಹುಮತಕ್ಕೆ ಅಗತ್ಯ ಸಂಖ್ಯೆ 116

ಸಮೀಕ್ಷೆ	ಬಿಜೆಪಿ	ಕಾಂಗ್ರೆಸ್	ಇತರ
ಎಬಿಪಿ ನ್ಯೂಸ್-ಸಿ ವೋಟರ್	88-112	113-137	2-8
ದೈನಿಕ್ ಭಾಸ್ಕರ್	95-115	105-120	0-15
ಇಂಡಿಯಾ ಟುಡೇ–ಆಕ್ಸಿಸ್ ಮೈ ಇಂಡಿಯಾ	140-162	68-90	0-3
ಇಂಡಿಯಾ ಟಿವಿ–ಸಿಎನ್‌ಎಕ್ಸ್	140-159	70-89	0-2
ಜನ್ ಕಿ ಬಾತ್	100-123	102-125	5
ನ್ಯೂಸ್ 24–ಟುಡೇಸ್ ಚಾಣಕ್ಯ	139-163	62-86	1-9
ರಿಪಬ್ಲಿಕ್ ಟಿವಿ–ಮ್ಯಾಟ್ರಿಜ್	118-130	97-107	0-2
ಟೈಮ್ಸ್ ನೌ- ಇಟಜಿ	105-117	109-125	1-5
ಟಿವಿ 9 ಭಾರತವರ್ಷ- ಪೋಲ್‌ಸ್ಟ್ರಾಟ್	106-116	111-121	0-6

• ರಾಜಸ್ಥಾನ — ಒಟ್ಟು ಕ್ಷೇತ್ರಗಳು 199 — ಬಹುಮತಕ್ಕೆ ಅಗತ್ಯ ಸಂಖ್ಯೆ 100

ಸಮೀಕ್ಷೆ	ಬಿಜೆಪಿ	ಕಾಂಗ್ರೆಸ್	ಇತರ
ಎಬಿಪಿ ನ್ಯೂಸ್-ಸಿ ವೋಟರ್	94-114	71-91	9-19
ದೈನಿಕ್ ಭಾಸ್ಕರ್	98-105	85-95	10-15
ಇಂಡಿಯಾ ಟುಡೇ- ಆಕ್ಸಿಸ್ ಮೈ ಇಂಡಿಯಾ	80-100	86-106	9-18
ಇಂಡಿಯಾ ಟಿವಿ- ಸಿಎನ್‌ಎಕ್ಸ್	80-90	94-104	14-18
ಜನ್ ಕಿ ಬಾತ್	100-122	62-85	14-15
ನ್ಯೂಸ್ 24-ಟುಡೇಸ್ ಚಾಣಕ್ಯ	77-100	89-113	2-16
ಪಿ–ಮಾರ್ಕ್ಯು	105-125	69-91	5-15
ರಿಪಬ್ಲಿಕ್ ಟಿವಿ- ಮ್ಯಾಟ್ರಿಜ್	115-130	65-75	12-19
ಟೈಮ್ಸ್ ನೌ- ಇಟಜಿ	108-128	56-72	13-21
ಟಿವಿ 9 ಭಾರತವರ್ಷ- ಪೋಲ್‌ಸ್ಟ್ರಾಟ್	100-110	90-100	05-15

• ತೆಲಂಗಾಣ — ಒಟ್ಟು ಕ್ಷೇತ್ರಗಳು 119 — ಬಹುಮತಕ್ಕೆ ಅಗತ್ಯ ಸಂಖ್ಯೆ 60

ಸಮೀಕ್ಷೆ	ಬಿಆರ್‌ಎಸ್	ಕಾಂಗ್ರೆಸ್	ಬಿಜೆಪಿ	ಎಐಎಂಐಎಂ
ಇಂಡಿಯಾ ಟಿವಿ- ಸಿಎನ್‌ಎಕ್ಸ್	31-47	63-79	2-4	5-7
ಜನ್ ಕಿ ಬಾತ್	40-55	48-64	7-13	4-7
ನ್ಯೂಸ್ 24-ಟುಡೇಸ್ ಚಾಣಕ್ಯ	24-42	62-80	2-12	0
ರಿಪಬ್ಲಿಕ್ ಟಿವಿ- ಮ್ಯಾಟ್ರಿಜ್	46-56	58-68	4-9	5-7
ಟೈಮ್ಸ್ ನೌ-ಇಟಜಿ	37-45	60-70	6-8	5-7
ಟಿವಿ9 ಭಾರತವರ್ಷ- ಪೋಲ್‌ಸ್ಟ್ರಾಟ್	48-58	49-59	5-10	6-8
ಎಬಿಪಿ ನ್ಯೂಸ್-ಸಿ ವೋಟರ್	38-54	49-65	5-13	5-9

• ಛತ್ತೀಸಗಢ — ಒಟ್ಟು ಕ್ಷೇತ್ರಗಳು 90 — ಬಹುಮತಕ್ಕೆ ಅಗತ್ಯ ಸಂಖ್ಯೆ 46

ಸಮೀಕ್ಷೆ	ಬಿಜೆಪಿ	ಕಾಂಗ್ರೆಸ್	ಇತರ
ಎಬಿಪಿ ನ್ಯೂಸ್-ಸಿ ವೋಟರ್	36-48	41-53	0-4
ದೈನಿಕ್ ಭಾಸ್ಕರ್	35-45	46-55	0-10
ಇಂಡಿಯಾ ಟುಡೇ- ಆಕ್ಸಿಸ್ ಮೈ ಇಂಡಿಯಾ	36-46	40-50	1-5
ಇಂಡಿಯಾ ಟಿವಿ- ಸಿಎನ್‌ಎಕ್ಸ್	30-40	46-56	3-5
ಜನ್ ಕಿ ಬಾತ್	34-45	42-53	3
ನ್ಯೂಸ್ 24-ಟುಡೇಸ್ ಚಾಣಕ್ಯ	25-41	49-65	0-3
ರಿಪಬ್ಲಿಕ್ ಟಿವಿ- ಮ್ಯಾಟ್ರಿಜ್	34-42	44-52	00-02
ಟೈಮ್ಸ್ ನೌ-ಇಟಜಿ	32-40	48-56	2-4
ಟಿವಿ9 ಭಾರತವರ್ಷ- ಪೋಲ್‌ಸ್ಟ್ರಾಟ್	35-45	40-50	0-3

‘ರೈತರಿಗೆ ₹ 2 ಸಾವಿರ ತುರ್ತು ಪರಿಹಾರ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಕೇಂದ್ರ ಸರ್ಕಾರ ಬರ ಪರಿಹಾರ ಬಿಡುಗಡೆ ಮಾಡುವವರೆಗೆ ಬೆಳೆ ನಷ್ಟ ಅನುಭವಿಸಿದ ರೈತರಿಗೆ ಮಧ್ಯಂತರ ಪರಿಹಾರವಾಗಿ ₹ 2 ಸಾವಿರ ನೀಡಲು ರಾಜ್ಯ ಸರ್ಕಾರ ನಿರ್ಧರಿಸಿದೆ.

ಗೃಹ ಕಚೇರಿ ಕೃಷ್ಣಾದಲ್ಲಿ ಕರೆದ ತುರ್ತು ಸುದ್ದಿಗೋಷ್ಠಿಯಲ್ಲಿ ಗುರುವಾರ ಈ ವಿಷಯ ತಿಳಿಸಿದ ಮುಖ್ಯಮಂತ್ರಿ ಸಿದ್ದರಾಮಯ್ಯ, ‘ಬರ ಪರಿಹಾರ ಸಂಬಂಧ ಕೇಂದ್ರ ಗೃಹ ಸಚಿವರ ನೇತೃತ್ವದ ಉನ್ನತ ಮಟ್ಟದ ಸಭೆ ಈವರೆಗೂ ನಡೆದಿಲ್ಲ. ಪರಿಹಾರವನ್ನೂ ಕೊಟ್ಟಿಲ್ಲ’ ಎಂದರು.

‘ರಾಜ್ಯದಲ್ಲಿರುವ ಒಟ್ಟು 236 ತಾಲ್ಲೂಕುಗಳ ಪೈಕಿ, ಈ ಬಾರಿ 223 ಬರಪೀಡಿತ ತಾಲ್ಲೂಕುಗಳೆಂದು ಘೋಷಿಸಲಾಗಿದೆ. ಬರದಿಂದ 48.19 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ₹ 33,770.10 ಕೋಟಿಯ ಬೆಳೆ ನಷ್ಟ ಅಂದಾಜಿಸಲಾಗಿದೆ. ಕೇಂದ್ರದಿಂದ ₹18,171.44 ಕೋಟಿ ಆರ್ಥಿಕ ನೆರವು ನೀಡಲು ಸೆ. 21ರಂದು ಕೇಂದ್ರಕ್ಕೆ ಮೊದಲ ಮನವಿ ಸಲ್ಲಿಸಲಾಗಿದೆ’ ಎಂದರು.

9ನೇ ಪುಟ ನೋಡಿ


KALEESUWARI
REFINERY PRIVATE LIMITED
50 Years of Health & Happiness
Gold Winner®
ಪ್ರತಿಯೊಂದು ಪ್ಯಾಕ್ 80 ಗುಣಮಟ್ಟ ಪರೀಕ್ಷೆಗಳನ್ನು ಹಾಯ್ದು ಬರುತ್ತದೆ
ಹಾಗೂ ನಿಮ್ಮ ಆರೋಗ್ಯ ಮತ್ತು ಸಂತಸವನ್ನು ಖಚಿತಪಡಿಸುತ್ತದೆ.
ಜಾಗತಿಕವಾಗಿ ಅನುಮೋದಿಸಲ್ಪಟ್ಟದೆ USFDA ಯೊಂದಿಗೆ ನೋಂದಾಯಿತ
ಹಗುರ ಮತ್ತು ರುಚಿಕರ
30+ ವರ್ಷಗಳಿಂದ ವಿಶ್ವಾಸಪಾತ್ರ
ಕಾಲೆಸ್ಟರಾಲ್ ಇಲ್ಲ ಟೆನ್ಶನ್ ಇಲ್ಲ
ವಿಟಮಿನ್ ಎ, ಡಿ, ಇ ಆರೋಗ್ಯಭರಿತ
TRUSTED BY 30+ YEARS MILLIONS OF MOTHERS
Gold Winner
Refined Sunflower Oil
Clear, Light & Non-sticky
Zero Cholesterol
Vitamins A, D, E
Improves Digestion
80 QUALITY CHECKS
ಕರ್ನಾಟಕದ ಏಕಮಾತ್ರ ವಿನ್ನರ್!
ಆರ್ಡರ್ ಮಾಡಿ 99621 50000



‘ಬಿ.ಎಲ್‌ಆರ್ ಹಬ್ಬ’ದ ಅಂಗವಾಗಿ ಚಿಕ್ಕಪೇಟೆಯಲ್ಲಿ ಗುರುವಾರ ನಡೆದ ಮೆರವಣಿಗೆಗೆ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಚಾಲನೆ ನೀಡಿದರು

ಬಿಎಲ್‌ಆರ್ ಹಬ್ಬದಲ್ಲಿ ಪಾಲ್ಗೊಳ್ಳಲು ಉಪ ಮುಖ್ಯಮಂತ್ರಿ ಡಿಕೆಶಿ ಮನವಿ

ಪ್ರತಿ ವಾರ್ಡ್‌ನಲ್ಲಿ ‘ಬೆಂಗಳೂರು ಹಬ್ಬ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮುಂದಿನ ದಿನಗಳಲ್ಲಿ ನಗರದ ಪ್ರತಿ ವಾರ್ಡ್ ಹಾಗೂ ವಿಧಾನಸಭೆ ಕ್ಷೇತ್ರದಲ್ಲಿ ‘ಬೆಂಗಳೂರು ಹಬ್ಬ’ವನ್ನು ಆಯೋಜಿಸಲಾಗುತ್ತದೆ ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೇಳಿದರು.



‘ಅನ್‌ಬಾಕ್ಸಿಂಗ್ ಬೆಂಗಳೂರು ಫೌಂಡೇಷನ್’ ವತಿಯಿಂದ ಆಯೋಜಿಸಲಾಗಿರುವ ‘ಬಿ.ಎಲ್.ಆರ್ ಹಬ್ಬ’ದ ಅಂಗವಾಗಿ ಚಿಕ್ಕಪೇಟೆಯಲ್ಲಿ ಗುರುವಾರ ನಡೆದ ಕೆಂಪೇಗೌಡರ ಎತ್ತಿನ ಬಂಡಿ ಮೆರವಣಿಗೆಗೆ ಚಾಲನೆ ನೀಡಿ ಅವರು ಮಾತನಾಡಿದರು.

‘ಬೆಂಗಳೂರು ಹಬ್ಬ’ದ ಸಂದರ್ಭದಲ್ಲಿ ಎಲ್ಲರೂ ತಮ್ಮ ಮನೆಗಳಲ್ಲೂ ಹಬ್ಬದ ರೀತಿ ಅಲಂಕಾರ ಮಾಡಿ ಸುಂದರ ವಾತಾವರಣ ಮೂಡಿಸಬೇಕು. ಆ ಮೂಲಕ ನಮ್ಮ ಇತಿಹಾಸ ಪರಂಪರೆ ಮುಂದುವರಿಸಿಕೊಂಡು ಹೋಗಬೇಕು’ ಎಂದು ಹೇಳಿದರು.

‘ನಮ್ಮ ಮೂಲವನ್ನು ಮರೆತರೆ ಯಶಸ್ಸು ಸಾಧಿಸುವುದಿಲ್ಲ. ನಾವು ನಮ್ಮ ಬೆಂಗಳೂರಿನ ಮೂಲವನ್ನು ಉಳಿಸಿಕೊಂಡು ಹೋಗಬೇಕು. ಅನ್‌ಬಾಕ್ಸಿಂಗ್ ಬೆಂಗಳೂರು ಸಂಸ್ಥೆಯ ಪ್ರಶಾಂತ್ ಪ್ರಕಾಶ್ ಹಾಗೂ ಅವರ ಸ್ನೇಹಿತರು ತಮ್ಮ ದುಡ್ಡಿನಲ್ಲಿ ಹಬ್ಬ ಆಚರಿಸುತ್ತಿದ್ದಾರೆ. ನಾಗರಿಕರೂ ಭಾಗವಹಿಸಬೇಕು’ ಎಂದರು.

‘ನಾಡಪ್ರಭು ಕೆಂಪೇಗೌಡರು ಚಿಕ್ಕಪೇಟೆಯಿಂದ ನಾಲ್ಕು ದಿಕ್ಕಿಗೆ ನಾಲ್ಕು ಜೋಡಿ ಎತ್ತಿನ ಗಾಡಿಯನ್ನು ತೆಗೆದುಕೊಂಡು ಹೋಗಿದ್ದರು. ಎಲ್ಲ ವೃತ್ತಿ, ಎಲ್ಲಾ ಜನಾಂಗ, ಎಲ್ಲಾ ಧರ್ಮದವರನ್ನೂ ಒಟ್ಟಿಗೆ ಸೇರಿಸಿ ಬೆಂಗಳೂರು ನಗರ ಕಟ್ಟಿದರು. ಪ್ರಪಂಚದ ಎಲ್ಲ ಜನ ಬೆಂಗಳೂರಿನ ಮೂಲಕ ಭಾರತವನ್ನು ನೋಡುತ್ತಿದ್ದಾರೆ. ಇದಕ್ಕೆ ಕೆಂಪೇಗೌಡರು ಹಾಕಿಕೊಟ್ಟ ಅಡಿಪಾಯ ಕಾರಣ. ಇದನ್ನು ನಾವು ಉಳಿಸಿಕೊಂಡು, ಬೆಳೆಸಿಕೊಂಡು ಹೋಗಬೇಕು’ ಎಂದು ಹೇಳಿದರು.

ಯುವ ಉತ್ಸವ ಇಂದಿನಿಂದ

ಬೆಂಗಳೂರು: ನೆಹರೂ ಯುವ ಕೇಂದ್ರ ಸಂಘಟನೆ ವತಿಯಿಂದ ಡಿ. 1 ಮತ್ತು 2 ರಂದು ‘ಯುವ ಉತ್ಸವ ಇಂಡಿಯಾ@2047’ ಎಂಬ ರಾಜ್ಯಮಟ್ಟದ ಯುವ ಉತ್ಸವವನ್ನು ನಗರದ ಸೆಂಟ್ರಲ್ ಕಾಲೇಜಿನ ಜ್ಞಾನಜ್ಯೋತಿ ಸಭಾಂಗಣದಲ್ಲಿ ಆಯೋಜಿಸಲಾಗಿದೆ ಎಂದು ದಕ್ಷಿಣ ರಾಜ್ಯಗಳ ಪ್ರಾದೇಶಿಕ ನಿರ್ದೇಶಕ ಎಂ.ಎನ್. ನಟರಾಜ್ ತಿಳಿಸಿದರು.

ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ‘ರಾಜ್ಯದಾದ್ಯಂತ ನಡೆದ ಜಿಲ್ಲಾಮಟ್ಟದ ಉತ್ಸವಗಳಲ್ಲಿ ಆಯ್ಕೆಯಾದ 31 ಜಿಲ್ಲೆಗಳ 550 ಯುವಜನರು ಈ ಉತ್ಸವದಲ್ಲಿ ಭಾಗವಹಿಸಲಿದ್ದಾರೆ. ಚಿತ್ರಕಲೆ ಸ್ಪರ್ಧೆ, ಕವನ ರಚನಾ ಸ್ಪರ್ಧೆ, ಫೋಟೊಗ್ರಫಿ ಸ್ಪರ್ಧೆ, ಭಾಷಣ ಸ್ಪರ್ಧೆ ಸೇರಿದಂತೆ ವಿವಿಧ ಸ್ಪರ್ಧೆಗಳಲ್ಲಿ ಪಾಲ್ಗೊಳ್ಳಲಿದ್ದಾರೆ’ ಎಂದು ಮಾಹಿತಿ ನೀಡಿದರು.

‘ಕೇಂದ್ರ ಸಚಿವ ಭಗವಂತ ಖೂಬಾ ಅವರು ಉತ್ಸವವನ್ನು ಉದ್ಘಾಟಿಸಲಿದ್ದಾರೆ, ಸಚಿವ ಬಿ. ನಾಗೇಂದ್ರ, ಶಾಸಕ ರಿಜ್ವಾನ್ ಅರ್ಷದ್ ಭಾಗವಹಿಸಲಿದ್ದಾರೆ ಎಂದರು.

ಜಲಮಂಡಳಿಗೆ ಪ್ರಶಸ್ತಿ

ಬೆಂಗಳೂರು: ‘ಮುನಿಸಿಪಾಲಿಕಾ-2023’ 17ನೇ ಅಂತರರಾಷ್ಟ್ರೀಯ ಸಮ್ಮೇಳನ ಹಾಗೂ ಪ್ರದರ್ಶನದಲ್ಲಿ ಬೆಂಗಳೂರು ಜಲಮಂಡಳಿ (ಬಿಡಬ್ಲ್ಯು‌ಎಸ್‌ಎಸ್‌ಬಿ) ‘ಬೆಸ್ಟ್ ಡೆಕೊರೇಟಿವ್’ ಪ್ರಶಸ್ತಿ ಪಡೆದುಕೊಂಡಿದೆ.

ನಗರಾಭಿವೃದ್ಧಿ ಇಲಾಖೆ, ಬಿಬಿಎಂಪಿ, ಪೌರಾಡಳಿತ ನಿರ್ದೇಶನಾಲಯ, ಸ್ಥಳೀಯ ಸಂಸ್ಥೆಗಳು ಹಾಗೂ ಗುಡ್ ಗವರ್ನೆನ್ಸ್ ಇಂಡಿಯಾ ಫೌಂಡೇಷನ್ ವತಿಯಿಂದ ಆಯೋಜಿಸಲಾಗಿದ್ದ ಸಮ್ಮೇಳನದಲ್ಲಿ, ಮಳೆ ನೀರು ಸಂಗ್ರಹ ವಿಧಾನದ ಬಗ್ಗೆ ಜಲಮಂಡಳಿ ಪ್ರಾತ್ಯಕ್ಷಿಕೆಯನ್ನು ಪ್ರದರ್ಶಿಸಿತ್ತು.

ಪ್ರಾತ್ಯಕ್ಷಿಕೆ ಅತ್ಯುತ್ತಮ ಮಾದರಿಯಾಗಿದ್ದು, ಉತ್ತಮ ಪ್ರದರ್ಶನ, ಸಮಗ್ರ ಮಾಹಿತಿಯನ್ನು ಒಳಗೊಂಡಿದೆ ಎಂದು ಪ್ರಶಂಸಿಸಿ ಪ್ರಶಸ್ತಿ ನೀಡಲಾಗಿದೆ. ಬಿಡಬ್ಲ್ಯುಎಸ್‌ಎಸ್‌ಬಿ ಅಧ್ಯಕ್ಷ ಎನ್. ಜಯರಾಮ್ ನೇತೃತ್ವದಲ್ಲಿ ಈ ಪ್ರಾತ್ಯಕ್ಷಿಕೆ ಸಿದ್ಧಪಡಿಸಲಾಗಿತ್ತು ಎಂದು ಮಂಡಳಿ ತಿಳಿಸಿದೆ.

‘ಸರ್ಕಾರಿ ಶಾಲೆಗಳನ್ನು ದುರಸ್ತಿಗೊಳಿಸಿ’

ಬೆಂಗಳೂರು: ಬಿಬಿಎಂಪಿ ವ್ಯಾಪ್ತಿಯಲ್ಲಿ ಬರುವ ಎಲ್ಲ ಸರ್ಕಾರಿ ಶಾಲೆಗಳ ಕಟ್ಟಡಗಳನ್ನು ಪರಿಶೀಲಿಸಿ ಸೂಕ್ತ ಭದ್ರತೆ ಕೈಗೊಳ್ಳಬೇಕು ಎಂದು ಬಿಬಿಎಂಪಿ ಪೂರ್ವವಲಯದ ಜಂಟಿ ಆಯುಕ್ತ ಪಲ್ಲವಿ ಅವರನ್ನು ಆಲ್ ಇಂಡಿಯಾ ಡೆಮಾಕ್ರಟಿಕ್ ಸ್ಟೂಡೆಂಟ್ ಆರ್ಗನೈಸೇಷನ್ (ಎಐಡಿಎಸ್‌ಒ) ಮನವಿ ಮಾಡಿದೆ.

‘ಇತ್ತೀಚೆಗೆ ಶಿವಾಜಿನಗರದಲ್ಲಿನ ಶಾಲೆಯೊಂದು ಬೆಳಗಿನ ಜಾವದಲ್ಲಿ ಕುಸಿದು ಬಿದ್ದಿತ್ತು. ಅದೃಷ್ಟವಶಾತ್, ಕಟ್ಟಡ ಕುಸಿದ ಸಂದರ್ಭದಲ್ಲಿ ಶಾಲೆಯ ಆವರಣದಲ್ಲಿ ಯಾರು ಇಲ್ಲದ ಕಾರಣ, ಯಾವುದೇ ಅಪಘಡಗಳು ಸಂಭವಿಸಿಲ್ಲ. ಆದರೆ, ನಗರದಲ್ಲಿ ಇದೇ ರೀತಿಯ ಹಲವು ಶಾಲೆಗಳು ಕುಸಿದು ಬೀಳುವ ಹಂತದಲ್ಲಿವೆ. ಅಂತಹ ಶಾಲೆಗಳನ್ನು ಗುರುತಿಸಬೇಕು. ಎಲ್ಲ ಸರ್ಕಾರಿ, ಬಿಬಿಎಂಪಿ ಶಾಲೆಗಳಲ್ಲಿ ಕಲಿಯುವ ವಿದ್ಯಾರ್ಥಿಗಳು ಹಾಗೂ ಶಿಕ್ಷಕರಿಗೆ ಸೂಕ್ತ ಭದ್ರತೆಯನ್ನು ಒದಗಿಸಬೇಕು’ ಎಂದು ಆರ್ಗನೈಸೇಷನ್‌ನ ಜಿಲ್ಲಾ ಕಾರ್ಯದರ್ಶಿ ಕಲ್ಯಾಣ್ ಕುಮಾರ್ ಒತ್ತಾಯಿಸಿದ್ದಾರೆ.





‘ಎಚ್‌.ಎಸ್‌. ಪಾರ್ವತಿ ದತ್ತಿ ಪ್ರಶಸ್ತಿ’ ಪ್ರದಾನ ಮಾಡಿದ ಬರಗೂರು ರಾಮಚಂದ್ರಪ್ಪ

ವಿಮರ್ಶೆಯು ಸಂವೇದನೆ ವಿಸ್ತರಿಸಲಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ವಿಮರ್ಶೆಯು ಸಾಹಿತ್ಯದ ಸಹೃದಯತೆ, ಸಂವೇದನೆಯನ್ನು ವಿಸ್ತರಿಸುವ ಸಕಾರಾತ್ಮಕ ವಿಶ್ಲೇಷಣೆಯಾಗಿರಬೇಕು. ಪೂರ್ವಾಗ್ರಹ ಮನಃಸ್ಥಿತಿ ಇಟ್ಟುಕೊಂಡು ವಿಮರ್ಶೆ ಮಾಡಬಾರದು’ ಎಂದು ಸಾಹಿತಿ ಬರಗೂರು ರಾಮಚಂದ್ರಪ್ಪ ತಿಳಿಸಿದರು.

ನಗರದಲ್ಲಿ ಗುರುವಾರ ಲೇಖಕಿಯರಾದ ಇಂದಿರಾ ಹೆಗ್ಡೆ ಮತ್ತು ಎಂ.ಎಸ್.ಆಶಾದೇವಿಯವರಿಗೆ ಕರ್ನಾಟಕ ಲೇಖಕಿಯರ ಸಂಘದ ‘ಎಚ್.ಎಸ್. ಪಾರ್ವತಿ ದತ್ತಿ ಪ್ರಶಸ್ತಿ’ ಪ್ರದಾನ ಮಾಡಿ ಅವರು ಮಾತನಾಡಿದರು.

ವಿಮರ್ಶೆ ಶ್ರೇಷ್ಠತೆಯ ಸೊಕ್ಕು ಆಗಬಾರದು, ಶೋಧವಾಗಬೇಕು. ವಿಮರ್ಶೆಯ ವಿವೇಕ ಇರಬೇಕು. ಈ ಶ್ರೇಷ್ಠತೆಯ ಸೊಕ್ಕಿಗೂ ವರ್ಣಾಶ್ರಮ ಪದ್ಧತಿಗೂ ಇರುವ ಸಂಬಂಧವೇನು ಎಂಬುದರ ಶೋಧವೂ ಆಗಬೇಕು ಎಂದು ವಿಶ್ಲೇಷಿಸಿದರು.

ಎಚ್.ಎಸ್. ಪಾರ್ವತಿ ಅವರು ಅನುವಾದಕರು, ಕಾದಂಬರಿ ಕಾರ್ತಿ, ರೇಡಿಯೊ ನಾಟಕ ಬರೆದವರು. ಅವರನ್ನು ಜನಪ್ರಿಯ ಸಾಹಿತಿ ಎಂದು ಸಾಹಿತ್ಯ ಲೋಕ ಗುರುತಿಸಿದೆ. ಜನಪ್ರಿಯ ಸಾಹಿತಿಗಳು ನಿರ್ಲಕ್ಷ್ಯಕ್ಕೆ ಒಳಗಾದವರು. ನಿರ್ಲಕ್ಷ್ಯ ಮಾಡುವ ಬದಲು ಕನ್ನಡ ಕಟ್ಟುವ ಪ್ರಕ್ರಿಯೆಯಲ್ಲಿ ಅವರ ಕೊಡುಗೆಯನ್ನು ಗುರುತಿಸಬೇಕು ಎಂದು ತಿಳಿಸಿದರು.

ಎಂ.ಎಸ್. ಆಶಾದೇವಿ ವಿಮರ್ಶಾ ಕ್ಷೇತ್ರದಲ್ಲಿ ಗಟ್ಟಿ ಕೆಲಸವನ್ನು ಮಾಡಿದವರು. ಅವರ ನಂತರ ಯಾರು ಎಂಬ ಪ್ರಶ್ನೆಯೇ ಆಶಾದೇವಿಯವರ ಕೆಲಸದ ಮಹತ್ವವನ್ನು ತೋರಿಸುತ್ತದೆ. ಇಂದಿರಾ ಹೆಗ್ಡೆ ಅವರು ಸಂಶೋಧಕಿಯಾಗಿ ಸ್ಥಳೀಯ ಸಂಸ್ಕೃತಿಗೆ ಮಹತ್ವ ತಂದುಕೊಟ್ಟವರು. ಸ್ಥಳೀಯತೆ ಇಲ್ಲದೇ ರಾಷ್ಟ್ರೀಯತೆಯೂ ಇಲ್ಲ, ಅಂತರರಾಷ್ಟ್ರೀಯತೆಯೂ ಇಲ್ಲ ಎಂದು ಹೇಳಿದರು.

ಕರ್ನಾಟಕ ಲೇಖಕಿಯರ ಸಂಘದ ಅಧ್ಯಕ್ಷೆ ಎಚ್.ಎಲ್. ಪುಷ್ಪ ಅಧ್ಯಕ್ಷತೆವಹಿಸಿದ್ದರು. ಲೇಖಕಿ ವಸುಂಧರಾ ಭೂಪತಿ ಅಭಿನಂದನಾ ನುಡಿಗಳನ್ನಾಡಿದರು. ಅಬ್ಬಾಸ್ ಖಾನ್ ಮಹಿಳಾ ಕಾಲೇಜಿನ ಪ್ರಾಂಶುಪಾಲರಾದ ಎಂ.ಎಸ್. ವಿದ್ಯಾ, ಲೇಖಕಿಯರ ಸಂಘದ ಕಾರ್ಯದರ್ಶಿ ಭಾರತಿ ಹೆಗಡೆ ಇದ್ದರು.




‘ಎಚ್‌.ಎಸ್‌. ಪಾರ್ವತಿ’ ದತ್ತಿ ಪ್ರಶಸ್ತಿಯನ್ನು ಸಂಶೋಧಕಿ ಇಂದಿರಾ ಹೆಗ್ಡೆ, ವಿಮರ್ಶಕಿ ಎಂ.ಎಸ್‌. ಆಶಾದೇವಿ ಅವರಿಗೆ ಪ್ರದಾನ ಮಾಡಲಾಯಿತು. ಕರ್ನಾಟಕ ಲೇಖಕಿಯರ ಸಂಘದ ಅಧ್ಯಕ್ಷೆ ಎಚ್‌.ಎಲ್‌. ಪುಷ್ಪ, ಕಾರ್ಯದರ್ಶಿ ಭಾರತಿ ಹೆಗಡೆ, ಲೇಖಕಿ ವಸುಂಧರಾ ಭೂಪತಿ, ಸಂಘದ ಸಹ ಕಾರ್ಯದರ್ಶಿ ಮಂಜುಳ ಬಿ.ವಿ, ಸಾಹಿತಿ ಬರಗೂರು ರಾಮಚಂದ್ರಪ್ಪ ಹಾಗೂ ಅಬ್ಬಾಸ್ ಖಾನ್ ಮಹಿಳಾ ಕಾಲೇಜಿನ ಪ್ರಾಂಶುಪಾಲರಾದ ಎಂ.ಎಸ್‌. ವಿದ್ಯಾ ಇದ್ದರು. –ಪ್ರಜಾವಾಣಿ ಚಿತ್ರ

ಗೃಹ ಇಲಾಖೆಗೆ ಉಮಾಶಂಕರ್ ವರ್ಗ

ಬೆಂಗಳೂರು: ಉನ್ನತ ಶಿಕ್ಷಣ ಇಲಾಖೆ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ (ಎಸಿಎಸ್) ಉಮಾಶಂಕರ್ ಎಸ್.ಆರ್. ಅವರನ್ನು ಗೃಹ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿಯಾಗಿ ವರ್ಗಾವಣೆ ಮಾಡಲಾಗಿದೆ.

ಗೃಹ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿಯಾಗಿದ್ದ ರಜನೀಶ್ ಗೋಯಲ್ ಅವರು ಮುಖ್ಯ ಕಾರ್ಯದರ್ಶಿಯಾಗಿ ನೇಮಕಗೊಂಡಿರುವುದರಿಂದ ತೆರವಾದ ಹುದ್ದೆಗೆ ಉಮಾಶಂಕರ್ ಅವರನ್ನು ನಿಯೋಜಿಸಲಾಗಿದೆ.

ಉಮಾಶಂಕರ್ ಅವರಿಗೆ ಉನ್ನತ ಶಿಕ್ಷಣ ಇಲಾಖೆಯ ಎಸಿಎಸ್ ಹುದ್ದೆಯನ್ನು ಹೆಚ್ಚುವರಿಯಾಗಿ ನೀಡಲಾಗಿದೆ.



ಸೇವೆ ನಿಲ್ಲಿಸಿದ ಡಯಾಲಿಸಿಸ್ ಸಿಬ್ಬಂದಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಾಕಿ ವೇತನ ಪಾವತಿಯೂ ಸೇರಿದಂತೆ ವಿವಿಧ ಬೇಡಿಕೆಗಳನ್ನು ಈಡೇರಿಸಲು ಆಗ್ರಹಿಸಿ ಡಯಾಲಿಸಿಸ್ ಸಿಬ್ಬಂದಿ ರಾಜ್ಯದಾದ್ಯಂತ ಸೇವೆ ಸ್ಥಗಿತಗೊಳಿಸಿ ಗುರುವಾರ ಸ್ವಾತಂತ್ರ್ಯ ಉದ್ಯಾನದಲ್ಲಿ ಅನಿರ್ದಿಷ್ಟಾವಧಿ ಮುಷ್ಕರ ಆರಂಭಿಸಿದ್ದಾರೆ.

ಬಿಆರ್‌ಎಸ್ ಹೆಲ್ತ್ ಆ್ಯಂಡ್ ರಿಸರ್ಚ್ ಇನ್‌ಸ್ಟಿಟ್ಯೂಟ್‌ನಿಂದ 9 ತಿಂಗಳ ಇಎಸ್‌ಐ ಮತ್ತು ಇಪಿಎಫ್ ಬಾಕಿ ಉಳಿಸಿಕೊಂಡಿದೆ. ನಂತರ ಡಯಾಲಿಸಿಸ್ ಕೇಂದ್ರಗಳ ನಿರ್ವಹಣೆ ವಹಿಸಿಕೊಂಡ ಎಸ್ಕಾಗ್ ಸಂಜೀವಿನಿ ಪ್ರೈವೇಟ್ ಸಂಸ್ಥೆ ಎರಡು ತಿಂಗಳ ವೇತನ, 20 ತಿಂಗಳ ಪಿಎಫ್ ಮತ್ತು ಇಎಸ್‌ಐ, ಜೊತೆಗೆ ಪ್ರತಿ ತಿಂಗಳಿಗೆ ₹ 2 ಸಾವಿರದಂತೆ 20 ತಿಂಗಳ ಅರಿಯರ್ಸ್ ನೀಡಿಲ್ಲ. ಹೆರಿಗೆ ರಜೆ ತೆರಳಿದ್ದ 22 ಸಿಬ್ಬಂದಿಯ ಆರು ತಿಂಗಳ ಬಾಕಿ ವೇತನ ಪಾವತಿಯಾಗಿಲ್ಲ.

ಪ್ರತಿಭಟನೆ: ಸೇವೆ ವ್ಯತ್ಯಯ

ಕರ್ನಾಟಕ ರಾಜ್ಯ ಡಯಾಲಿಸಿಸ್ ಸಿಬ್ಬಂದಿ ಪ್ರತಿಭಟನೆಯಿಂದಾಗಿ ಸೇವೆಯಲ್ಲಿ ವ್ಯತ್ಯಯ ಉಂಟಾಗಿದೆ. ಕೆಲವು ಕಡೆಗಳಲ್ಲಿ ರೋಗಿಗಳು ಖಾಸಗಿ ಆಸ್ಪತ್ರೆ ಮೊರೆ ಹೋದರು.

ಮನವೊಲಿಸಲು ಯತ್ನ: ರಾಷ್ಟ್ರೀಯ ಆರೋಗ್ಯ ಅಭಿಯಾನದ ನಿರ್ದೇಶಕ ನವೀನ್ ಭಟ್ ಅವರು ಪ್ರತಿಭಟನೆಯ ಸ್ಥಳಕ್ಕೆ ಭೇಟಿ ನೀಡಿ ಧರಣಿ ನಿರತರಿಂದ ಮನವಿ ಪತ್ರ ಸ್ವೀಕರಿಸಿದರು. ಜಿಲ್ಲಾ ಆರೋಗ್ಯಾಧಿಕಾರಿಗಳ ಖಾತೆಗೆ ವೇತನ ಹಣ ವರ್ಗಾಯಿಸಲಾಗಿದ್ದು, ಪ್ರತಿಭಟನೆ ಕೈಬಿಡುವಂತೆ ಮನವೊಲಿಸಿದರು. ಶುಕ್ರವಾರ ಆರೋಗ್ಯ ಸಚಿವರೊಂದಿಗೆ ಸಭೆ ಏರ್ಪಡಿಸುವ ಭರವಸೆ ನೀಡಿದರು. ಆದರೆ ಇದರಿಂದ ತೃಪ್ತರಾಗದ ಸಿಬ್ಬಂದಿ ಮುಷ್ಕರ ಮುಂದುವರಿಸಿದ್ದಾರೆ.

ಮೃತಪಟ್ಟಿರುವ ಇಬ್ಬರು ಸಿಬ್ಬಂದಿಯ ಕುಟುಂಬಕ್ಕೆ ಪರಿಹಾರ ನೀಡಿಲ್ಲ ಎಂದು ಪ್ರತಿಭಟನಕಾರರು ಆರೋಪಿಸಿದರು. ಬಾಕಿ ಉಳಿಸಿಕೊಂಡಿರುವ ಎಲ್ಲ ವೇತನ, ಭತ್ಯೆಗಳನ್ನು ನೀಡಬೇಕು. ಸಾರ್ವಜನಿಕ ಖಾಸಗಿ ಸಹಭಾಗಿತ್ವದಲ್ಲಿ 108 ಸಿಬ್ಬಂದಿಗೆ ನೀಡುವಂತೆ ಹೆಚ್ಚುವರಿ ವೇತನವನ್ನು ಕೊಡಬೇಕು ಎಂದು ಆಗ್ರಹಿಸಿದರು.

ಒಂದು ತಿಂಗಳ ಒಳಗೆ ಬೇಡಿಕೆ ಈಡೇರಿಸುವುದಾಗಿ ಕಳೆದ ಬಾರಿಯ ಪ್ರತಿಭಟನೆಯ ಸಂದರ್ಭದಲ್ಲಿ ಸಚಿವರು ಭರವಸೆ ನೀಡಿದ್ದರು. ಇದಾಗಿ ನಾಲ್ಕು ತಿಂಗಳು ಕಳೆದರೂ ಬೇಡಿಕೆ ಈಡೇರಿಸಿಲ್ಲ. ವೇತನ ಬಾಕಿ ಉಳಿಸಿ ಕೊಂಡಿರುವುದರಿಂದ ಜೀವನ ನಡೆಸುವುದೇ ಕಷ್ಟವಾಗಿದೆ ಎಂದು ತಿಳಿಸಿದರು.

17ಕ್ಕೆ ಪ್ರತಿಭಟನೆ

ಬೆಂಗಳೂರು: ನಟ ದಿವಂಗತ ವಿಷ್ಣುವರ್ಧನ್ ಅವರ ಪುಣ್ಯಭೂಮಿಯನ್ನು ಅಭಿವೃದ್ಧಿಪಡಿಸಬೇಕು ಎಂದು ಆಗ್ರಹಿಸಿ ಡಿ.17ರಂದು ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ಡಾ.ವಿಷ್ಣುವರ್ಧನ್ ಅಭಿಮಾನಿ ಸಂಘಗಳ ಒಕ್ಕೂಟ ಪ್ರತಿಭಟನೆ ನಡೆಸಲು ತೀರ್ಮಾನಿಸಿದೆ ಎಂದು ಒಕ್ಕೂಟದ ಮುಖಂಡ ವೀರಕಪುತ್ರ ಶ್ರೀನಿವಾಸ ಅವರು ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಸಾರ್ವಜನಿಕ ಸೇವಾ ವಾಹನ: ಇಂದಿನಿಂದ ವಿಎಲ್‌ಟಿ ಡಿವೈಸ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಹಿಳೆಯರು ಸೇರಿದಂತೆ ಪ್ರಯಾಣಿಕರ ಭದ್ರತೆಗಾಗಿ ಸಾರ್ವಜನಿಕ ಸೇವಾ ವಾಹನಗಳಿಗೆ ವೆಹಿಕಲ್ ಲೊಕೇಶನ್ ಟ್ರ್ಯಾಕಿಂಗ್ (ವಿಎಲ್‌ಟಿ) ಡಿವೈಸ್ ಮತ್ತು ಎಮರ್ಜೆನ್ಸಿ ಪ್ಯಾನಿಕ್ ಬಟನ್ ಅಳವಡಿಸುವ ಯೋಜನೆ ರಾಜ್ಯದಲ್ಲಿ ಡಿ.1ರಿಂದ ಜಾರಿಗೆ ಬರಲಿದೆ.

ಸಾರ್ವಜನಿಕ ಸೇವಾ ವಾಹನಗಳಲ್ಲದೇ ರಾಷ್ಟ್ರೀಯ ರಹದಾರಿ ಹೊಂದಿರುವ ಸರಕು ಸಾಗಾಣಿಕೆ ವಾಹನಗಳು ಕೂಡ ವಿಎಲ್‌ಟಿ ಮತ್ತು ಪ್ಯಾನಿಕ್ ಅಳವಡಿಸಿಕೊಳ್ಳುವುದನ್ನು ಕಡ್ಡಾಯಗೊಳಿಸಲಾಗಿದೆ. ಹಳದಿ ನಂಬರ್ ಪ್ಲೇಟ್ ಹೊಂದಿದ್ದರೂ ಸ್ಟೇಟ್ ಪರ್ಮಿಟ್ ಇರುವ ಗೂಡ್ಸ್ ವಾಹನಗಳಿಗೆ ಇದು ಅನ್ವಯವಾಗುವುದಿಲ್ಲ. 2024ರ ನ.30ರ ವರೆಗೆ ಈ ಸಾಧನ ಅಳವಡಿಸಿಕೊಳ್ಳಲು ಅವಕಾಶ ನೀಡಲಾಗಿದೆ.

ಇನ್ ಬಸ್ ಸರ್ವೆಲೆನ್ಸ್ ವ್ಯವಸ್ಥೆ: ನಿರ್ಭಯಾ ಯೋಜನೆಯಡಿ ಬಿಎಂಟಿಸಿಯ 5,000 ಬಸ್‌ಗಳಲ್ಲಿ ಮಹಿಳಾ ಸುರಕ್ಷತೆಗಾಗಿ ಇನ್ ಬಸ್ ಸರ್ವೆಲೆನ್ಸ್ ವ್ಯವಸ್ಥೆ ಮತ್ತು ಬಸ್ ನಿಲ್ದಾಣಗಳಲ್ಲಿ ಪ್ರಯಾಣಿಕರ ಮಾಹಿತಿ ಪ್ರದರ್ಶಿಸುವ ಮೊಬೈಲ್ ಅಪ್ಲಿಕೇಶನ್ ಒಳಗೊಂಡ ಅಟೊಮೆಟಿಕ್ ವೆಹಿಕಲ್ ಲೊಕೇಶನ್ ಸಿಸ್ಟಂ (ಎವಿಎಲ್‌ಎಸ್) ಯೋಜನೆಯನ್ನು ಅನುಷ್ಠಾನಗೊಳಿಸಲಾಗಿದೆ.

ಈಗಾಗಲೇ ಬಿಎಂಟಿಸಿಯ ವಾಹನಗಳಲ್ಲಿ ಆಂಥ್ರೊಪ್ರೊಮೊರ್ಫಿಕ್ ಡಿವೈಸ್ (ಎಟಿಡಿ), ಪ್ಯಾನಿಕ್ ಬಟನ್, ಮೊಬೈಲ್ ನೆಟ್‌ವರ್ಕ್ ವಿಡಿಯೊ ರೆಕಾರ್ಡರ್ (ಎಂಎನ್‌ವಿಆರ್) ತಲಾ ಒಂದೊಂದು ಹಾಗೂ ಎರಡು ಸಿಸಿಟಿವಿ ಕ್ಯಾಮೆರಾ ಅಳವಡಿಸಲಾಗಿದೆ. ಬಸ್ಸಿನಲ್ಲಿ ಅಹಿತಕರ ಘಟನೆಗಳು ನಡೆದರೆ ಮಹಿಳೆಯರು ಈ ಬಟನ್‌ಗಳನ್ನು ಒತ್ತಿ ಮಾಹಿತಿ ನೀಡಬಹುದು ಎಂದು ಬಿಎಂಟಿಸಿ ವ್ಯವಸ್ಥಾಪಕ ನಿರ್ದೇಶಕಿ ಜಿ. ಸತ್ಯವತಿ ತಿಳಿಸಿದ್ದಾರೆ.

ಮಹಿಳಾ ಪ್ರಯಾಣಿಕರಿಗೆ ತೊಂದರೆಯಾದಾಗ ಮಾತ್ರವಲ್ಲ, ಸಿಬ್ಬಂದಿ–ಪ್ರಯಾಣಿಕರ ನಡುವೆ ಜಗಳ ಉಂಟಾದರೆ, ಪ್ರಯಾಣಿಕರೇ ಜಗಳ ಮಾಡಿಕೊಂಡರೆ ಈ ಬಟನ್ ಒತ್ತಿದಲ್ಲಿ ಕಂಟ್ರೋಲ್ ರೂಂಗೆ ಮಾಹಿತಿ ಹೋಗುತ್ತದೆ. ಅಲ್ಲಿಂದ ಟ್ರ್ಯಾಕ್ ಸಿಬ್ಬಂದಿ ಆ ವಾಹನವನ್ನು ಪತ್ತೆ ಹಚ್ಚಿ, ಅಲ್ಲಿಗೆ ಸಾರಥಿ ವಾಹನಗಳು ತೆರಳಿ ಮುಂದಿನ ಕ್ರಮ ಕೈಗೊಳ್ಳುವರು. ಅಗತ್ಯಬಿದ್ದರೆ ಪೊಲೀಸ್ ಠಾಣೆಗೂ ಮಾಹಿತಿ ನೀಡಲಾಗುತ್ತದೆ ಎಂದರು.

ಇನ್ ಬಸ್ ಸರ್ವೆಲೆನ್ಸ್ ವ್ಯವಸ್ಥೆಗೆ ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಚಾಲನೆ ನೀಡಿದರು.

ಬುಡಕಟ್ಟು ಯುವಜನ ವಿನಿಮಯ 5ರಿಂದ

ಬೆಂಗಳೂರು: ಕೇಂದ್ರ ಸರ್ಕಾರದ ಯುವಜನ ವ್ಯವಹಾರ ಹಾಗೂ ಕ್ರೀಡಾ ಸಚಿವಾಲಯದ ಸಹಯೋಗದಲ್ಲಿ 15ನೇ ರಾಷ್ಟ್ರೀಯ ಬುಡಕಟ್ಟು ಯುವಜನ ವಿನಿಮಯ ಕಾರ್ಯಕ್ರಮ ಡಿ.5 ರಿಂದ 31ರವರೆಗೆ ಮೈಸೂರು, ಬೆಂಗಳೂರು ಮತ್ತು ಕೊಡುಗು ಜಿಲ್ಲೆಗಳಲ್ಲಿ ನಡೆಯಲಿದೆ ಎಂದು ದಕ್ಷಿಣ ರಾಜ್ಯಗಳ ಪ್ರಾದೇಶಿಕ ನಿರ್ದೇಶಕ ಎಂ.ಎನ್. ನಟರಾಜ್ ಹೇಳಿದರು.

ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ‘ದೇಶದಾದ್ಯಂತವಿರುವ ವಿವಿಧ ಸಂಸ್ಕೃತಿ, ಕಲೆ, ಆಹಾರ ಪದ್ಧತಿಗಳು ಹಾಗೂ ಅಭಿವೃದ್ಧಿ ಕಾರ್ಯಕ್ರಮಗಳನ್ನು ಪರಿಚಯಿಸುವುದು ಯುವ ವಿನಿಮಯ ಕಾರ್ಯಕ್ರಮದ ಉದ್ದೇಶವಾಗಿದೆ ಎಂದು ತಿಳಿಸಿದರು.

‘ಡಿ.5 ರಿಂದ 11ರವರೆಗೆ ಮೈಸೂರಿನ ಮಾನಸ ಗಂಗೋತ್ರಿ ಮುಕ್ತ ವಿಶ್ವವಿದ್ಯಾಲಯದ ಆವರಣದಲ್ಲಿ ಈ ಕಾರ್ಯಕ್ರಮ ನಡೆಯಲಿದೆ. ಛತ್ತೀಸಗಢ, ಜಾರ್ಖಂಡ್, ಒಡಿಶಾ ಮತ್ತು ಬಿಹಾರ ರಾಜ್ಯಗಳ ಬುಡಕಟ್ಟು ಸಮುದಾಯದ 220 ಯುವಜನರು ಈ ಕಾರ್ಯಕ್ರಮದಲ್ಲಿ ಭಾಗವಹಿಸಲಿದ್ದಾರೆ’ ಎಂದು ತಿಳಿಸಿದರು.

‘ಡಿ. 15ರಿಂದ 21ರವರೆಗೆ ಬೆಂಗಳೂರಿನ ಯುವನಿಕಾ ಸಭಾಂಗಣದಲ್ಲಿ ನಡೆಯುವ ಬುಡಕಟ್ಟು ಯುವ ವಿನಿಮಯ ಕಾರ್ಯಕ್ರಮದಲ್ಲಿ ಜಾರ್ಖಂಡ್, ಒಡಿಶಾ ರಾಜ್ಯಗಳ 220ಕ್ಕೂ ಯುವಜನರು ಮತ್ತು ಅಧಿಕಾರಿಗಳು ಭಾಗವಹಿಸಲಿದ್ದಾರೆ. ರಾಜ್ಯಪಾಲ ಥಾವರಚಂದ್ ಗೆಹಲೋತ್ ಅವರು ಕಾರ್ಯಕ್ರಮವನ್ನು ಉದ್ಘಾಟಿಸಲಿದ್ದು, ವಿಧಾನಸಭೆಯ ಅಧ್ಯಕ್ಷ ಯು.ಟಿ. ಖಾದರ್, ಸಚಿವ ಬಿ. ನಾಗೇಂದ್ರ ಭಾಗವಹಿಸಲಿದ್ದಾರೆ’ ಎಂದರು.

‘ಡಿ. 26ರಿಂದ 31ರವರೆಗೆ ಕೊಡಗು ಜಿಲ್ಲೆಯಲ್ಲಿ ಗೋಣಿಕೊಪ್ಪದ ಕಾಶ್ಮೀರಿ ಯುವ ವಿನಿಮಯ ಕಾರ್ಯಕ್ರಮ ನಡೆಯಲಿದ್ದು, ಕಾಶ್ಮೀರದ 120 ಯುವಜನರು ಭಾಗವಹಿಸಲಿದ್ದಾರೆ. ಕೊಡಗಿನ ಕಲೆ, ಸಂಸ್ಕೃತಿ, ಆಚಾರ–ವಿಚಾರ, ಉಡುಗೆ–ತೊಡುಗೆ ಜೀವನಶೈಲಿಯ ಸೇರಿದಂತೆ ವಿವಿಧ ವಿಷಯಗಳ ಬಗ್ಗೆ ವಿಚಾರ ವಿನಿಮಯ ಮಾಡಿಕೊಳ್ಳಲಿದ್ದಾರೆ’ ಎಂದು ಅವರು ವಿವರಿಸಿದರು.

ಸೈಬರ್ ಕ್ರೈಂ: ಜಾಗೃತಿಯೇ ಮದ್ದು

ತಂತ್ರಜ್ಞಾನದ ಸುರಕ್ಷಿತ ಬಳಕೆ ಕುರಿತು ಜಾಗೃತಿ • ಭದ್ರತಾ ಕ್ಷೇತ್ರದ ವಿವಿಧ ತಜ್ಞರುಗಳ ಅಭಿಮತ

• ಅವಿನಾಶ್ ಬಿ.

ಬೆಂಗಳೂರು: ಮಾಹಿತಿ ತಂತ್ರಜ್ಞಾನ ಬೆಳವಣಿಗೆಯಾದಂತೆಯೇ ನಿತ್ಯವೂ ಸೈಬರ್ ಅಪರಾಧದ ಅಪಾಯವು ಬೆಳೆಯುತ್ತಿದೆ. ಅಂತರ್ಜಾಲ ಹಾಗೂ ತಂತ್ರಜ್ಞಾನದ ಸುರಕ್ಷಿತ ಬಳಕೆಯ ಕುರಿತು ಕಾರ್ಪೊರೇಟ್ ಕಂಪನಿಗಳು, ಸಾಂಸ್ಥಿಕ ಮಟ್ಟದಲ್ಲಿ ಮಾತ್ರವಲ್ಲ; ಮನೆಯಲ್ಲಿರುವ ಮಕ್ಕಳು, ಹಿರಿಯರು ಸೇರಿದಂತೆ ಜನಸಾಮಾನ್ಯರಲ್ಲಿ ಜಾಗೃತಿ ಮೂಡಿಸುವ ಅಗತ್ಯದ ಬಗ್ಗೆ ಬೆಂಗಳೂರು ತಂತ್ರಜ್ಞಾನ ಶೃಂಗದಲ್ಲಿ ಕಾಳಜಿ ವ್ಯಕ್ತವಾಯಿತು.

ಬೆಂಗಳೂರು ಟೆಕ್ ಸಮಿಟ್ 2023 ಇದರ 2ನೇ ದಿನವಾದ ಗುರುವಾರ ನಡೆದ 'ನ್ಯಾವಿಗೇಟಿಂಗ್ ದ ಡಿಜಿಟಲ್ ಫ್ರಾಂಟಿಯರ್: ಇಂಟರ್ನೆಟ್ ಗವರ್ನೆನ್ಸ್, ಸೈಬರ್ ಸೆಕ್ಯುರಿಟಿ ಮತ್ತು ಸೈಬರ್ ವಾರ್‌ಫೇರ್' ವಿಷಯ ಕುರಿತ ಗೋಷ್ಠಿಯಲ್ಲಿ ಈ ಬಗ್ಗೆ ಬೆಳಕು ಚೆಲ್ಲಲಾಯಿತು.

ಇಂದು ಎಟಿಎಂ, ಕ್ರೆಡಿಟ್ ಕಾರ್ಡ್, ಟಿಕೆಟ್ ಕಾಯ್ದಿರಿಸುವಿಕೆ, ಇ-ಕಾಮರ್ಸ್ ಮುಂತಾದೆಡೆ ತಂತ್ರಜ್ಞಾನ ವ್ಯಾಪಕವಾಗಿ ಬಳಕೆಯಾಗುತ್ತಿದೆ ಮತ್ತು ಜನಸಾಮಾನ್ಯರೂ ಇದಕ್ಕೆ ತೆರೆದು-ಕೊಂಡಿದ್ದಾರೆ. ಪ್ರತಿದಿನವೂ ಹೊಸ ಬಳಕೆದಾರರು ಸೇರಿಕೊಳ್ಳುತ್ತಿದ್ದಾರೆ. ಜೊತೆಗೆ ಸೈಬರ್‌ವಾರ್ (ಅಪರಾಧಿ ಚಟುವಟಿಕೆ) ಕೂಡ ಹೆಚ್ಚಾಗುತ್ತಿದೆ.



ಟೆಕ್ ಸಮಿಟ್‌ನ 2ನೇ ದಿನವಾದ ಗುರುವಾರ ನಡೆದ ನ್ಯಾವೇಗೇಟಿಂಗ್ ದಿ ಡಿಜಿಟಲ್ ಫ್ರಾಂಟಿಯರ್ ಇಂಟರ್ನೆಟ್ ಆಡಳಿತ, ಸೈಬರ್ ಭದ್ರತೆ ಮತ್ತು ಸೈಬರ್ ವಾರ್‌ಫೇರ್ ಗೋಷ್ಠಿಯಲ್ಲಿ ಗ್ಲೋಬಲ್ ಇಂಕ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಸುಹಾಸ್ ಗೋಪಿನಾಥ್ ಮಾತನಾಡಿದರು. ಇಸ್ರೋ ಮುಖ್ಯ ಮಾಹಿತಿ ಭದ್ರತಾ ಅಧಿಕಾರಿ ರಾಜೀವ್ ಚೇತ್ವಾನಿ ಇನ್ ಮೊಬಿಯದ ಮುಖ್ಯ ಕಾರ್ಪೊರೇಟ್ ವ್ಯವಹಾರಗಳು ಮತ್ತು ಸಾರ್ವಜನಿಕ ನೀತಿ ಅಧಿಕಾರಿ ಸುಬಿ ಚತುರ್ವೇದಿ, , ಟೆಕ್, ಟೈಮ್ ಆ ಇಂಡಿಯಾದ ಟೆಕ್ ಮತ್ತು ಟೆಲಿಕಾಂ ರಾಷ್ಟ್ರೀಯ ಸಂಪಾದಕ ಪಂಕಜ್ ದೋವಲ್ ಮತ್ತು ಕ್ಯಾಪ್ಟನ್ ಆನಂದ್ ನಾಯ್ಡು ಉಪಸ್ಥಿತರಿದ್ದರು ಪ್ರಜಾವಾಣಿ ಚಿತ್ರ/ಪ್ರಶಾಂತ್ ಎಚ್.ಜಿ.

ಹೀಗಾಗಿ ಜನಸಾಮಾನ್ಯರಲ್ಲಿ ಈ ಸೈಬರ್ ಸುರಕ್ಷತೆ ಕುರಿತು ಜಾಗೃತಿ ಮೂಡಿಸುವ ಕಾರ್ಯ ಆಗಬೇಕಿದೆ ಎಂದು ಇನ್‌ಮೊಬಿ ಕಂಪನಿಯ ಜಾಗತಿಕ ಹಿರಿಯ ಉಪಾಧ್ಯಕ್ಷೆ ಡಾ. ಸುಬಿ ಚತುರ್ವೇದಿ ಹೇಳಿದರು.

ಅಂತರ್ಜಾಲ ವ್ಯವಸ್ಥೆಯನ್ನು ಯಾರು ನಿಯಂತ್ರಿಸಬೇಕು ಎಂಬುದರ ಕುರಿತು ಜಾಗತಿಕ ಮಟ್ಟದಲ್ಲಿ ನೀತಿ ನಿರ್ಣಯ-ವಾಗಬೇಕಿದೆ ಎಂದ ಅವರು, ಸೈಬರ್ ಅಪರಾಧದ ಪರಿಧಿ ಏನು ಎಂಬುದರ ಕುರಿತು ಅಂತರರಾಷ್ಟ್ರೀಯ ಮಟ್ಟದಲ್ಲಿ ಇನ್ನೂ ಖಚಿತವಾಗಿ ನಿರ್ಣಯವಾಗಿಲ್ಲ. ಬುಡಾಪೆಸ್ಟ್ ಶೃಂಗದ ಬಳಿಕ ಈ ಕುರಿತು ಯಾವುದೇ ಜಾಗತಿಕ ಶೃಂಗ ನಡೆದಿಲ್ಲ ಎಂದು ಗಮನ ಸೆಳೆದರು.

'ತಂತ್ರಜ್ಞಾನ ಅಭಿವೃದ್ಧಿ ಮತ್ತು ಬಳಕೆ ಹೆಚ್ಚಾದಂತೆ ಅಪಾಯದ ವಲಯವೂ ವಿಸ್ತರಣೆಯಾಗುತ್ತಿದೆ. ಅದಕ್ಕೆ ಪರಿಹಾರವೂ ನಮ್ಮಲ್ಲಿದೆ. ತಂತ್ರಜ್ಞಾನದ ಅಭಿವೃದ್ಧಿ ಮತ್ತು ಸೈಬರ್ ಬೆದರಿಕೆಗಳಿ-ಗಿರುವ ಪರಿಹಾರ ಜೊತೆ ಜೊತೆಯಾಗಿ ಸಾಗಬೇಕಿದೆ' ಎಂದು ಹೇಳಿದ ಇಸ್ರೋದ ಮುಖ್ಯ ಮಾಹಿತಿ ಮತ್ತು ಭದ್ರತಾ ಅಧಿಕಾರಿ ರಾಜೀವ್ ಚೇತ್ವಾನಿ, 'ಸೈಬರ್ ದಾಳಿಗಳ ನಿಯಂತ್ರಣಕ್ಕೆ ಅಂತರ-ರಾಷ್ಟ್ರೀಯ ಮಟ್ಟದ ಸಹಯೋಗದ ಅಗತ್ಯವಿದೆ' ಎಂದರು.

ಮುಖ್ಯಾಂಶಗಳು

- ತಂತ್ರಜ್ಞಾನದ ಬಳಕೆ ಹೆಚ್ಚಿದಂತೆ ಅಪರಾಧ ಏರಿಕೆ
- ಕಡಿವಾಣಕ್ಕೆ ಜಾಗತಿಕ ಮಟ್ಟದ ನೀತಿ ಅಗತ್ಯ
- ಸೈಬರ್ ಅಪರಾಧ ದೇಶದಲ್ಲಿಯೇ ಅಧಿಕ

'ಗ್ಲೋಬಲ್ಸ್ ಇಂಕ್" ಸಿಇಒ ಸುಹಾಸ್ ಗೋಪಿನಾಥ್ ಮಾತನಾಡಿ, ಏಮ್ಸ್‌ನಂತಹ ಆಸ್ಪತ್ರೆಗಳಿಂದಲೇ ದತ್ತಾಂಶ ಕದಿಯಲಾಗುತ್ತಿದೆ, ವಿಮಾನಗಳ ಹಾರಾಟ ವ್ಯವಸ್ಥೆಯ ಮೇಲೆ ಸೈಬರ್ ದಾಳಿ ಮಾಡಿ ವಿಮಾನಗಳ ದಿಕ್ಕನ್ನೇ ಬದಲಿಸಲಾಗುತ್ತಿದೆ. ಇಂಥ ಸಂದರ್ಭದಲ್ಲಿ ನೆಲದ ಮೇಲಿನ ಯುದ್ಧದಂತೆಯೇ ಸೈಬರ್ ಸಮರ ಕ್ಷೇತ್ರಕ್ಕೂ ಪ್ರಾಮುಖ್ಯತೆ ನೀಡಬೇಕಿದೆ' ಎಂದರು.

ಭಾರತವು ತಂತ್ರಜ್ಞಾನ ಪರಿಣಿತರನ್ನು ಮಾತ್ರವೇ ಸೃಷ್ಟಿ ಮಾಡುತ್ತಿಲ್ಲ. ಬದಲಾಗಿ, ಭಾರತದಲ್ಲೇ ಗರಿಷ್ಠ ಸಂಖ್ಯೆಯ ಸೈಬರ್ ಕ್ರಿಮಿನಲ್‌ಗಳು ಕೂಡ ಕಾಣಿಸಿಕೊಳ್ಳುತ್ತಿ-ದ್ದಾರೆ ಎಂಬುದರ ಕುರಿತು ಸೈಬರ್‌ಏಜ್ ನಿರ್ದೇಶಕ, ನಿವೃತ್ತ ಗ್ರೂಪ್ ಕ್ಯಾಪ್ಟನ್ ಆನಂದ್ ನಾಯ್ಡು ಬೆಳಕು ಚೆಲ್ಲಿದರು.

'ಉದ್ಯಮ ಸ್ನೇಹಿ ಪಠ್ಯಕ್ರಮ ರಚನೆಗೆ ಸರ್ಕಾರದ ಕ್ರಮ'

ಬೆಂಗಳೂರು: 'ಕೌಶಲಾಧಾರಿತ ಕಲಿಕೆಗೆ ಪೂರಕ ಪಠ್ಯಕ್ರಮವನ್ನು ಸಿದ್ಧಪಡಿಸಲು ಉನ್ನತ ಶಿಕ್ಷಣ ಇಲಾಖೆ ಕಾರ್ಯೋನ್ಮು-ಖವಾಗಿದೆ' ಎಂದು ಉನ್ನತ ಶಿಕ್ಷಣ ಸಚಿವ ಡಾ. ಎಂ.ಸಿ.ಸುಧಾಕರ್ ಹೇಳಿದರು.

ತಂತ್ರಜ್ಞಾನ ಶೃಂಗದಲ್ಲಿ ಗುರುವಾರ ಸ್ಟಾರ್ಟ್‌ಅಪ್ ಉತ್ಪನ್ನಗಳ ಬಿಡುಗಡೆ ಕಾರ್ಯಕ್ರಮದಲ್ಲಿ ಮಾತನಾಡಿದರು.

'ಈ ಬಗ್ಗೆ ಮಾಹಿತಿ ಹಾಗೂ ಜೈವಿಕ ತಂತ್ರಜ್ಞಾನ ಹಾಗೂ ಕೌಶಲಾಭಿವೃದ್ಧಿ ಸಚಿವರ ಜೊತೆಗೂ ಚರ್ಚೆ ನಡೆದಿದೆ ಎಂದು ಹೇಳಿದರು.

'ಉದ್ಯಮಗಳ ಅಗತ್ಯ ಆಧರಿಸಿ 6 ರಿಂದ 8 ವಾರಗಳ ಸರ್ಟಿಫಿಕೇಟ್ ಕೋರ್ಸ್‌ಗಳನ್ನು ಪ್ರಾರಂಭಿಸುವ ಚಿಂತನೆ ನಡೆದಿದೆ. ಈ ಕಾರ್ಯಕ್ರಮಗಳ ಮೂಲಕ ಕರ್ನಾಟಕ ತಂತ್ರಜ್ಞಾನ, ಉತ್ಪಾದನೆಯಲ್ಲಿ ಅಗ್ರಸ್ಥಾನ ಕಾಯ್ದುಕೊಳ್ಳುವ ವಿಶ್ವಾಸವಿದೆ ಎಂದರು.

ರಕ್ಷಣಾ ಬಿಡಿಭಾಗ: ಸಣ್ಣ ಉದ್ಯಮಕ್ಕೂ ಅವಕಾಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ರಕ್ಷಣಾ ಸಾಮಗ್ರಿಗಳ ಬಿಡಿಭಾಗ ತಯಾರಿಕೆಗೆ ಸಣ್ಣ ಖಾಸಗಿ ಉದ್ಯಮಗಳಿಗೂ ಅವಕಾಶ ದೊರಕಿರುವುದು ರಕ್ಷಣಾ ಕ್ಷೇತ್ರದ-ಲ್ಲಿನ ಭಾರತದ ಸ್ವಾವಲಂಬನೆಯಲ್ಲಿ ಮಹತ್ವದ ಹೆಜ್ಜೆ'.

–ಇದು ಬೆಂಗಳೂರು ಅರಮನೆ ಆವರಣದಲ್ಲಿ ನಡೆಯುತ್ತಿರುವ ಬೆಂಗಳೂರು ತಂತ್ರಜ್ಞಾನ ಶೃಂಗಸಭೆಯಲ್ಲಿ ರಕ್ಷಣಾ ಸಾಮಗ್ರಿಗಳ ಬಿಡಿಭಾಗಗಳನ್ನು ಪ್ರದರ್ಶನಕ್ಕಿಟ್ಟಿರುವ ಬೆಳಗಾವಿಯ ಉದ್ಯಮಿ ಶೈಲೇಶ್ ಅವರ ವಿವರಣೆ.

ಸ್ವದೇಶಿ ಉತ್ಪಾದನೆಗೆ ಕೇಂದ್ರ ಸರ್ಕಾರ ಪ್ರೋತ್ಸಾಹ ನೀಡಿದ ನಂತರ ರಕ್ಷಣಾ ಸಾಮಗ್ರಿಗಳ ಬಿಡಿಭಾಗಗಳನ್ನು ತಯಾರಿಸಲು ಭಾರತೀಯ ಖಾಸಗಿ ಕಂಪನಿಗಳಿಗೂ ದೊಡ್ಡ ಪ್ರಮಾಣದಲ್ಲಿ ಅವಕಾಶಗಳು ದೊರೆಯುತ್ತಿವೆ. ಎನ್.ಕೆ.ಶೆಟ್ಟಿ ಅವರ ಸಹಭಾಗಿತ್ವದಲ್ಲಿ ಸಣ್ಣದಾಗಿ ಆರಂಭಿಸಿದ ಇಎಂ ಎಲೆ-ಕ್ಟ್ರಾನಿಕ್ಸ್ ಲಿಮಿಟೆಡ್ ಇಂದು ದೊಡ್ಡ ಅವಕಾಶಗಳನ್ನು ಪಡೆಯುತ್ತಿರುವುದು ಹೆಮ್ಮೆಯ ಸಂಗತಿ ಎಂದರು.



ಯುದ್ಧ ವಿಮಾನಗಳಿಗೆ ಅಳವಡಿಸುವ ಎಲೆಕ್ಟ್ರಾನಿಕ್ ಸಾಧನವನ್ನು ಉದ್ಯಮಿ ಶೈಲೇಶ್ ಅವರು ಪ್ರದರ್ಶಿಸಿದರು –ಪ್ರಜಾವಾಣಿ ಚಿತ್ರ

'ಯುದ್ಧ ವಿಮಾನಗಳಿಗೆ ಅಳವಡಿಸುವ ಎಲೆಕ್ಟ್ರಾನಿಕ್ಸ್ ಸಾಮಗ್ರಿಗಳು ಸೇರಿದಂತೆ ವರ್ಷಕ್ಕೆ ಸುಮಾರು 6 ಸಾವಿರ ಬಿಡಿಭಾಗಗ-ಳನ್ನು ಉತ್ಪಾದಿಸುತ್ತಿದ್ದೇವೆ. ಯುದ್ಧ ವಿಮಾನಗಳು ರಸ್ತೆ ಹೊರತಾದ ಭಾಗಗಳಲ್ಲೂ ಇಳಿಯುವುದರಿಂದ ವಿಭಿನ್ನವಾದ ಬಿಡಿ ಭಾಗಗಳನ್ನು ಬಳಸಲಾಗುತ್ತದೆ. ಅಂತಹ ಸಾಮಗ್ರಿಗ-ಳನ್ನು ಉತ್ಪಾದಿಸುವ ಅವಕಾಶ ಈಚಿನ ದಿನಗಳಲ್ಲಿ ಸಣ್ಣ ಕಂಪನಿಗಳಿಗೂ ದೊರಕುತ್ತಿದೆ' ಎಂದು ಹರ್ಷ ವ್ಯಕ್ತ-ಪಡಿಸಿದರು.

ಯುದ್ಧಾಸ್ತ್ರಗಳ ವೀಕ್ಷಿಸಲು ಮುಗಿಬಿದ್ದ ವಿದ್ಯಾರ್ಥಿಗಳು:

ರಕ್ಷಣಾ ಸಂಶೋಧನೆ ಮತ್ತು ಅಭಿವೃದ್ಧಿ ಸಂಸ್ಥೆಯ (ಡಿಆರ್‌ಡಿಒ) ಪ್ರದರ್ಶನ ಮಳಿಗೆಗಳ ಮುಂದೆ ವಿದ್ಯಾರ್ಥಿಗಳ ದಟ್ಟಣೆ ಇತ್ತು. ಕ್ಷಿಪಣಿಗಳು, ಕ್ಷಿಪಣಿ ನಾಶಕಗಳು, ವಿವಿಧ ಮಾದರಿಯ ಯುದ್ಧ ವಿಮಾನಗಳು, ಜಲಾಂತರ್ಗಾಮಿಗಳ ಮಾದರಿಗಳನ್ನು ಪ್ರದರ್ಶನಕ್ಕೆ ಇಡಲಾಗಿತ್ತು.

ವಿದ್ಯಾರ್ಥಿಗಳಿಗೆ ಹಾಗೂ ಯುವ ಜನರಿಗೆ ಸೈಬರ್ ಅಪರಾಧ ತಡೆಯಲು ಹಾಗೂ ವಂಚನೆಗೆ ಒಳಗಾದ ತಕ್ಷಣ ಅನುಸರಿಸಬೇಕಾದ ವಿಧಾನ, ಹೈಟೆಕ್ ತಂತ್ರಜ್ಞಾನ ಬಳಸಿ ವಂಚನೆ ಜಾಲ ಭೇದಿಸುವ ಕ್ರಮಗಳ ಕುರಿತು ಐಎಸ್‌ಎಸಿ ಕಂಪನಿ ಮಾಹಿತಿ ಕೋಶ ತೆರೆದಿದೆ. ಸಮ್ಮೇಳನದಲ್ಲಿ ಸೇವಾವಲಯದ ಮಳಿಗೆಗಳೇ ಹೆಚ್ಚಿನ ಸಂಖ್ಯೆಯಲ್ಲಿದ್ದವು.



ಬೆಂಗಳೂರು ತಂತ್ರಜ್ಞಾನ ಶೃಂಗಸಭೆಯಲ್ಲಿ ಗುರುವಾರ ಆರೋಗ್ಯ ಕ್ಷೇತ್ರದಲ್ಲಿ ಮಹಿಳಾ ನಾಯಕತ್ವ ಗೋಷ್ಠಿಯಲ್ಲಿ ಶೋಭಾ ಮಿಶ್ರ ಘೋಷ್ ಮಾತನಾಡಿದರು. ಮೆಹನಾಜ್ ಅನ್ಸಾರಿ, ಕಾಚಿನ ಚಾವ್ಲಾ, ಜ್ಯೋತ್ಸ್ನಾ ಘೋಶಲ್ ಇದ್ದರು –ಪ್ರಜಾವಾಣಿ ಚಿತ್ರ

'ವೈದ್ಯಕೀಯ ಕ್ಷೇತ್ರ: ಮಹಿಳೆಗೆ ಹೆಚ್ಚಿನ ಪ್ರಾತಿನಿಧ್ಯ ಅಗತ್ಯ'

ಬೆಂಗಳೂರು: ಅಭಿವೃದ್ಧಿ ಹೊಂದಿದ ರಾಷ್ಟ್ರದ ಕನಸು ಸಾಕಾರಗೊಳ್ಳಲು ವೈದ್ಯಕೀಯ ಹಾಗೂ ತಂತ್ರಜ್ಞಾನ ಕ್ಷೇತ್ರಗಳಲ್ಲಿ ಮಹಿಳಾ ಪ್ರಾತಿನಿಧ್ಯ-ಕ್ಕೆ ಹೆಚ್ಚಿನ ಅವಕಾಶ ದೊರಕಬೇಕು ಎಂದು ಯುಎಸ್‌ಎಐಡಿ ಸಂಸ್ಥೆಯ ಭಾರತ ಆರೋಗ್ಯ ವ್ಯವಸ್ಥೆ ಬಲವರ್ಧನೆ ವಿಭಾಗದ ಮುಖ್ಯಸ್ಥೆ ಕಚಿನಾ ಚಾವ್ಲಾ ಹೇಳಿದರು.

ಬೆಂಗಳೂರು ತಂತ್ರಜ್ಞಾನ ಶೃಂಗಸಭೆಯಲ್ಲಿ ಆಯೋಜಿಸಿದ್ದ 'ಆರೋಗ್ಯ ಕ್ಷೇತ್ರದಲ್ಲಿ ಮಹಿಳಾ ನಾಯಕತ್ವ' ಕುರಿತ ಗೋಷ್ಠಿಯಲ್ಲಿ ಅವರು ಮಾತನಾಡಿದರು.

ಭಾರತದಲ್ಲಿ ಮಹಿಳೆಯರ ಅನುಪಾತಕ್ಕೆ ಅನುಗುಣವಾಗಿ ಯಾವ ಕ್ಷೇತ್ರಗಳಲ್ಲೂ ಸಮಾನ ಅವಕಾಶಗಳು ದೊರೆಯುತ್ತಿಲ್ಲ. ಶುಶ್ರೂಷೆ ಸೇರಿದಂತೆ ಕೆಳ ಹಂತದ ಸೇವಾ ವಿಭಾಗಗಳನ್ನು ಹೊರತುಪಡಿಸಿದರೆ ಆರೋಗ್ಯ ಕ್ಷೇತ್ರದಲ್ಲೂ ಮಹಿಳೆಯರ ಪ್ರಾತಿನಿಧ್ಯ ಅತ್ಯಂತ ಕಡಿಮೆ. ಶೇ 11ರಷ್ಟು ಮಹಿಳೆಯರಷ್ಟೇ ನಿರ್ಣಾಯಕ ಹುದ್ದೆಗಳಲ್ಲಿ ಅವಕಾಶ ಪಡೆದಿದ್ದಾರೆ. ಬಾಣಂತಿ, ಹೆರಿಗೆ, ಕುಟುಂಬದ ಆರೋಗ್ಯ, ಪೌಷ್ಟಿಕ ಆಹಾರ ಹಂಚಿಕೆ, ಮಕ್ಕಳ ಬೆಳವಣಿಗೆಯಲ್ಲಿ ಪ್ರಮುಖ ಪಾತ್ರ ವಹಿಸುವ ಮಹಿಳೆಯರಿಗೆ ಆರೋಗ್ಯ ಕ್ಷೇತ್ರದಲ್ಲಿ ಸೂಕ್ತ ಪ್ರಾತಿನಿಧ್ಯ ದೊರಕದಿರುವುದು ಇತರೆ ವ್ಯವಸ್ಥೆಗಳ ಮೇಲೂ ಪರಿಣಾಮ ಬೀರುತ್ತದೆ ಎಂದರು.

ಬೆಂಗಳೂರು ತಂತ್ರಜ್ಞಾನ ಶೃಂಗ-ಸಭೆಗಳಂತಹ ವೇದಿಕೆಗಳ ಮೂಲಕ ಮಹಿಳೆಯರನ್ನು ವಿಜ್ಞಾನ ತಂತ್ರಜ್ಞಾನ ಹಾಗೂ ವೈದ್ಯಕೀಯ ಕ್ಷೇತ್ರಗಳಲ್ಲಿ ತೊಡಗಿಸಲು ಸರ್ಕಾರ ಗಂಭೀರ ಪ್ರಯತ್ನ ಮಾಡುತ್ತಿರುವುದು ಶ್ಲಾಘನೀಯ ಎಂದು ಹೇಳಿದರು.

ಯುಎಸ್ ವ್ಯಾಪಾರ ಅಭಿವೃದ್ಧಿ ಏಜೆನ್ಸಿಯ ಏಷಿಯಾ ಹಾಗೂ ಇಂಡೊ– ಪೆಸಿಫಿಕ್ ಪ್ರಾದೇಶಿಕ ಪ್ರತಿನಿಧಿ ಮೆಹನಾಜ್ ಅನ್ಸಾರಿ ಮಾತನಾಡಿ, ಮಾರಾಟ, ಉತ್ಪಾ-ದನೆಯಂತಹ ಪುರುಷ ಪ್ರಾಬಲ್ಯದ ಕ್ಷೇತ್ರಗಳಲ್ಲಿ ಪ್ರಮುಖ ಸ್ಥಾನ ಪಡೆಯುವುದು ಮಹಿಳೆಯರಿಗೆ ಸವಾಲಾಗಿದೆ. ಈ ಅಡೆತಡೆಗಳನ್ನು ತೊಡೆದುಹಾಕಲು ತಳಮಟ್ಟದಲ್ಲಿ ಗಂಭೀರ ಪ್ರಯತ್ನಗಳು ನಡೆಯಬೇಕು ಎಂದರು.

ಜಾನ್ಸನ್ ಆ್ಯಂಡ್ ಜಾನ್ಸನ್ ಕಂಪನಿಯ ನಿರ್ದೇಶಕಿ ಶೋಭಾ ಮಿಶ್ರಾ ಘೋಷ್, ಕುಟುಂಬ ನಿರ್ವಹಣೆ, ಮಕ್ಕಳ ಪಾಲನೆ ಜತೆಗೆ ಸಾಮಾಜಿಕ ಹೊಣೆಗಾರಿಕೆ ನಿಭಾಯಿಸುವ ಮಹಿಳೆಯರ ಸಾಧನೆಗೆ ಕುಟುಂಬ ಹಾಗೂ ಸಮಾಜ ಸಂಪೂರ್ಣ ಬೆಂಬಲ ನೀಡಬೇಕು ಎಂದು ಹೇಳಿದರು.

ಜೆ ಆ್ಯಂಡ್ ಜೆ ಕಂಪನಿಯ ಯೋಜನಾ ವಿಭಾಗದ ಮುಖ್ಯಸ್ಥೆ ಜ್ಯೋತ್ಸ್ನಾ ಘೋಶಲ್, ಜೆ ಸಾಗರ್ ಅಸೋಸಿಯೇಟ್ಸ್ ಪಾಲುದಾರರಾದ ಆಯಿಷಾ ಮನ್ಸೂರ್ ಉಪಸ್ಥಿತರಿದ್ದರು.



ಗ್ರಾಮೀಣ ಐಟಿ ರಸಪ್ರಶ್ನೆ ಸ್ಪರ್ಧೆಯಲ್ಲಿ ಪ್ರಥಮ ಸ್ಥಾನ ಪಡೆದ ಛತ್ತೀಸ್‌ಗಢದ ಉದಿತ್ ಪ್ರತಾಪ್ ಸಿಂಗ್ ಅವರಿಗೆ ಗುರುವಾರ ಸಚಿವ ಪ್ರಿಯಾಂಕ್ ಖರ್ಗೆ ನಗದು ಬಹುಮಾನ ವಿತರಿಸಿದರು

ರಸಪ್ರಶ್ನೆ: ಉದಿತ್ ಪ್ರಥಮ

ಬೆಂಗಳೂರು: ತಂತ್ರಜ್ಞಾನ ಶೃಂಗಸಭೆ ನಿಮಿತ್ತ ನಡೆದ ಗ್ರಾಮೀಣ ಐಟಿ ರಸಪ್ರಶ್ನೆ ಸ್ಪರ್ಧೆಯಲ್ಲಿ ಛತ್ತೀಸ್‌ಗಢದ ಭಿಲಾಯ್‌ನ ಬಿಎಸ್‌ಪಿ ಶಾಲೆಯ ಉದಿತ್ ಪ್ರತಾಪ್ ಸಿಂಗ್ ಪ್ರಥಮ, ಗೋವಾದ ಬಿಚೋಲಿಂನ ಡಾ.ಕೆ.ಬಿ.ಹೆಡ್ಗೆವಾರ್ ವಿದ್ಯಾ ಮಂದಿರದ ವಿಘ್ನೇಶ್ ನೌಸೋ ಶೆಟ್ಯೆ ದ್ವಿತೀಯ ಸ್ಥಾನ ಪಡೆದರು.

26 ರಾಜ್ಯಗಳು, ಐದು ಕೇಂದ್ರಾಡಳಿತ ಪ್ರದೇಶಗಳ 5.5 ಲಕ್ಷಕ್ಕೂ ಹೆಚ್ಚು 8 ರಿಂದ 12ನೇ ತರಗತಿ ವಿದ್ಯಾರ್ಥಿಗಳು ಸ್ಪರ್ಧಿ-ಸಿದ್ದರು. ಅಂತಿಮ ಸ್ಪರ್ಧೆಗೆ ಎಂಟು ತಂಡ ಆಯ್ಕೆಯಾಗಿದ್ದವು.

ಪ್ರಥಮ ಸ್ಥಾನಕ್ಕೆ ₹1 ಲಕ್ಷ, ದ್ವಿತೀಯ ಸ್ಥಾನಕ್ಕೆ ₹50 ಸಾವಿರ ನಗದು, ಇತರೆ ಸ್ಪರ್ಧಿಗಳಿಗೆ ಟಿಸಿಎಸ್‌ನ ತಲಾ ₹10 ಸಾವಿರ ವಿದ್ಯಾರ್ಥಿ ವೇತನವನ್ನು ಐಟಿ–ಬಿಟಿ ಸಚಿವ ಪ್ರಿಯಾಂಕ್ ಖರ್ಗೆ ಅವರು ವಿತರಿಸಿದರು.



ಕಬ್ಬನ್ ಉದ್ಯಾನದಲ್ಲಿರುವ ಬಾಲಭವನದಲ್ಲಿ ಗುರುವಾರ ನಡೆದ 'ಡೆಕ್ಕನ್ ಹೆರಾಲ್ಡ್' ಮಾಸ್ಟರ್‌ಮೈಂಡ್ ಅಂತರಶಾಲಾ ಚಿತ್ರಕಲೆ ಮತ್ತು ಸೃಜನಶೀಲ ಬರವಣಿಗೆ ಸ್ಪರ್ಧೆಯ ಹಿರಿಯರ ವಿಭಾಗದಲ್ಲಿ ಐಟಿಐ ಸೆಂಟ್ರಲ್ ಸ್ಕೂಲ್‌ನ ಲಕ್ಷಣಾಲಯ ಎನ್ (ಪ್ರಥಮ ಸ್ಥಾನ), ಕಾರ್ಮೆಲ್ ಇಂಗ್ಲಿಷ್ ಸ್ಕೂಲ್‌ನ ಅನ್ವಿತಾ ಎಸ್ ಭಟ್ (ದ್ವಿತೀಯ ಸ್ಥಾನ), ರಾಜಾಜಿನಗರದ ಶ್ರೀವಾಣಿ ಪಬ್ಲಿಕ್ ಶಾಲೆಯ ದ್ಯುತಿ ಎಚ್ (ತೃತೀಯ ಸ್ಥಾನ), ಐಟಿಐ ಸೆಂಟ್ರಲ್ ಸ್ಕೂಲ್‌ನ ಹರಿಣಿ ಆರ್ (ನಾಲ್ಕನೆ ಸ್ಥಾನ) ಪಡೆದುಕೊಂಡಿದ್ದಾರೆ. ಕಿರಿಯ ವಿಭಾಗದಲ್ಲಿ (ಎಡದಿಂದ ಕುಳಿತವರು) ಸೇಂಟ್ ಜೋಸೆಫ್ ಬಾಯ್ಸ್ ಹೈಸ್ಕೂಲ್‌ನ ದೇವ್ ಜಿ. ಆನಂದ (ಪ್ರಥಮ ಸ್ಥಾನ), ಆಚಾರ್ಯ ಪಾಠಶಾಲಾ ಪಬ್ಲಿಕ್ ಶಾಲೆಯ ಮನಸ್ವಿನಿ ರಾಮಯ್ಯ (ದ್ವಿತೀಯ ಸ್ಥಾನ), ಹೋಲಿ ಸ್ಪಿರಿಟ್ ಸ್ಕೂಲ್ ಸಿಐಎಸ್‌ಇ ಶಾಲೆಯ ಹಂಸಿಕಾ ಡಿ (ತೃತೀಯ ಸ್ಥಾನ), ಜ್ಞಾನ ಸರಸ್ವತಿ ಪಬ್ಲಿಕ್ ಶಾಲೆಯ ಭುವನ್ ಎಸ್ (ನಾಲ್ಕನೆ ಸ್ಥಾನ) ಪಡೆದುಕೊಂಡಿದ್ದಾರೆ. ಸ್ಪರ್ಧೆಯ ತೀರ್ಪುಗಾರರಾದ ಸುಶ್ಮಿತಾ ಬಿದರಿ, ನಮ್ರತಾ ಸಾಗರ್ ಇದ್ದಾರೆ –ಪ್ರಜಾವಾಣಿ ಚಿತ್ರ

'ಜಾತಿ ಗಣತಿ ಆರಂಭಿಸಿದ್ದೇ ನಾವು'

ಸಂತ ಶ್ರೇಷ್ಠ ಕನಕದಾಸ ಜಯಂತಿ ಕಾರ್ಯಕ್ರಮದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಪ್ರತಿಪಾದನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಪ್ರತಿಯೊಂದು ಜಾತಿ ಸಮುದಾಯಗಳ ಆರ್ಥಿಕ, ಸಾಮಾಜಿಕ ಸ್ಥಿತಿ ಗತಿ ತಿಳಿಯಲು ಮತ್ತು ಸಂವಿಧಾನದ ಆಶಯಗಳನ್ನು ಕಾರ್ಯಕ್ರಮಗಳ ಮೂಲಕ ಎಲ್ಲಾ ಸಮುದಾಯಗಳಿಗೂ ತಲುಪಿಸಲು ನಾನೇ ಜಾತಿಗಣತಿ ಆರಂಭಿಸಿದ್ದೆ' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದರು.

ಕನ್ನಡ ಮತ್ತು ಸಂಸ್ಕೃತಿ ಇಲಾಖೆ ರವೀಂದ್ರ ಕಲಾಕ್ಷೇತ್ರದಲ್ಲಿ ಗುರುವಾರ ಹಮ್ಮಿಕೊಂಡಿದ್ದ ಸಂತ ಶ್ರೇಷ್ಠ ಕನಕದಾಸ ಜಯಂತಿಯನ್ನು ಉದ್ಘಾಟಿಸಿ, ಸಮಾಜ ಸೇವಕ ದಿವಂಗತ ಲಿಂಗಪ್ಪ ಅವರಿಗೆ ಮರಣೋತ್ತರ ಕನಕಶ್ರೀ ಪ್ರಶಸ್ತಿ ಪ್ರದಾನ ಮಾಡಿ ಮಾತನಾಡಿದರು.

ಜಾತಿ ಗಣತಿಗೆ ಕಾಂಗ್ರೆಸ್ ಬದ್ಧವಾಗಿದೆ. ಇಡೀ ದೇಶದಲ್ಲಿ ಮುಂದೆ ಜಾತಿ ಗಣತಿಯನ್ನು ಕಾಂಗ್ರೆಸ್ ನಡೆಸಲಿದೆ ಎಂದು ಹೇಳಿದರು.

'ಕನಕದಾಸರು ಕುರುಬರಾಗಿ ಹುಟ್ಟಿದ ವಿಶ್ವಶ್ರೇಷ್ಠ ಮಾನವೀಯ ಚೈತನ್ಯರಾಗಿದ್ದರು. ನಾನು ಕುರುಬನಾಗಿ ಜನಿಸಿದ್ದೇನೆ. ಕುರುಬ ಸಮುದಾಯದಲ್ಲಿ ನೀವೆಲ್ಲ ಜನಿಸಿರಬಹುದು. ಎಲ್ಲರೂ ಅಪ್ಪಟ ಮನುಷ್ಯರಾಗಬೇಕು ಎಂದು ಸಲಹೆ ನೀಡಿದರು.



ಕಾರ್ಯಕ್ರಮದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಸಮಾಜ ಸೇವಕ ಲಿಂಗಪ್ಪ ಅವರಿಗೆ ನೀಡಿದ ಮರಣೋತ್ತರ ಕನಕಶ್ರೀ ಪ್ರಶಸ್ತಿಯನ್ನು ಅವರ ಪುತ್ರಿ ಡಾ. ಲೀಲಾ ಸ್ವೀಕರಿಸಿದರು. ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಕಾರ್ಯದರ್ಶಿ ಎನ್. ಮಂಜುಳಾ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಚಿವ ಶಿವರಾಜ್ ಎಸ್. ತಂಗಡಗಿ, ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ತಿಂಥಣಿಯ ಕನಕಗುರು ಪೀಠದ ಸಿದ್ಧರಾಮಾನಂದ ಸ್ವಾಮೀಜಿ, ಕಾಂಗ್ರೆಸ್ ಮುಖಂಡ ಎಚ್.ಎಂ. ರೇವಣ್ಣ ಇದ್ದಾರೆ –ಪ್ರಜಾವಾಣಿ ಚಿತ್ರ

ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು, 'ಕನಕದಾಸರು 300ಕ್ಕೂ ಹೆಚ್ಚು ಕೀರ್ತನೆಗಳನ್ನು ಹಾಡಿ ಜನರ ಹೃದಯ ಗೆದ್ದಿದ್ದಾರೆ. ಬಸವಣ್ಣನ ಜಯಂತಿ, ಅಂಬೇಡ್ಕರ್ ಜಯಂತಿ ಹಾಗೂ ಕನಕದಾಸರ ಜಯಂತಿಯನ್ನು ಆಯಾ ಸಮಾಜದವರು ಮಾತ್ರ ಆಚರಿ-ಸುವುದಲ್ಲ. ಎಲ್ಲ ಧರ್ಮ, ಜನಾಂಗಗಳಿಗೆ ಸೇರಿದ ಆಚರಣೆ. ಸಮಾಜವನ್ನು ಪರಿವರ್ತನೆ ಮಾಡಿದ ಈ ಶ್ರೇಷ್ಠರನ್ನು ಎಲ್ಲರೂ ಸ್ಮರಿಸಬೇಕು' ಎಂದರು.

'ಯಾವ ರಾಜನೂ ಸದಾ ರಾಜನಾಗಿರಲು ಸಾಧ್ಯವಿಲ್ಲ. ಯಾವುದೇ ಶ್ರೀಮಂತ ಕೊನೆಯವರೆಗೂ ಶ್ರೀಮಂತನಾಗಿ ಇರುವುದಿಲ್ಲ. ಯಾವುದೇ ಬಡವ ಕೊನೆವರೆಗೂ ಬಡವವನಾಗಿರುವುದಿಲ್ಲ. ಜಗತ್ತಿನಲ್ಲಿ ಯಾವುದೂ ಶಾಶ್ವತವಲ್ಲ. ಸಂಸ್ಕೃತಿಯೇ ನಮ್ಮ ದೇಶದ ಆಸ್ತಿ. ವಚನಗಳು, ದಾಸರ ಪದಗಳು ಬದುಕಿನಲ್ಲಿ ಬದಲಾವಣೆ ತರಲಿವೆ' ಎಂದರು.

'ಬಿಜೆಪಿ ಸರ್ಕಾರವು ಕನಕಶ್ರೀ ಪ್ರಶಸ್ತಿ ನೀಡುವುದನ್ನು ಮೂರು ವರ್ಷಗಳಿಂದ ನಿಲ್ಲಿಸಿತ್ತು. ಸೇವೆ ಮಾಡಿದವರನ್ನು ಗುರುತಿಸಿ ಪ್ರಶಸ್ತಿ ನೀಡುವುದನ್ನು ನಿಲ್ಲಿಸುವಂತಹ ಕೀಳು ಮಟ್ಟಕ್ಕೆ ನಾವು ಇಳಿಯಬಾರದು' ಎಂದು ತಿಳಿಸಿದರು.

ತಿಂಥಣಿಯ ಕನಕಗುರು ಪೀಠದ ಸಿದ್ದರಾಮಾನಂದ ಸ್ವಾಮೀಜಿ ಸಾನ್ನಿಧ್ಯ ವಹಿಸಿದ್ದರು. ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಚಿವ ಶಿವರಾಜ ತಂಗಡಗಿ, ಮಾಜಿ ಸಚಿವ ಎಚ್.ಎಂ. ರೇವಣ್ಣ ಇದ್ದರು.

'ಕನಕದಾಸರಿಂದ ಮೌಲ್ಯಯುತ ಸಂದೇಶ'

ಪೀಣ್ಯ ದಾಸರಹಳ್ಳಿ: ಶೆಟ್ಟಿಹಳ್ಳಿಯಲ್ಲಿ ಕ್ಷೇತ್ರದ ಬಿಜೆಪಿ ಆಯೋಜಿಸಿದ್ದ ಕನಕದಾಸ ಜಯಂತಿ ಕಾರ್ಯಕ್ರಮದಲ್ಲಿ ಶಾಸಕ ಎಸ್.ಮುನಿರಾಜು ಅವರು ಕನಕದಾಸರ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿದರು. 'ಕನಕದಾಸರ ಸಂದೇಶಗಳು ಒಂದು ಜಾತಿ, ಮತ, ಪ್ರದೇಶ, ಭಾಷೆಗೆ ಸೀಮಿತವಲ್ಲ' ಎಂದು ಹೇಳಿದರು.

ಕ್ಷೇತ್ರದ ಬಿಜೆಪಿ ಪ್ರಧಾನ ಕಾರ್ಯದ-ರ್ಶಿಗಳಾದ ಪಿ.ಎಚ್.ರಾಜು, ವಿನೋದ್ ಗೌಡ, ಬಿಜೆಪಿ ಮುಖಂಡರಾದ ಸುರೇಶ್ ಕೆಂಪೇಗೌಡ, ರಘು, ಕಣ್ಣಪ್ಪ ಇದ್ದರು.



ಶೆಟ್ಟಿಹಳ್ಳಿಯಲ್ಲಿ ಕ್ಷೇತ್ರದ ಬಿಜೆಪಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಶಾಸಕ ಎಸ್. ಮುನಿರಾಜು ಕನಕದಾಸರ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿದರು.

ಹಾವು ಕಡಿದು ವೈದ್ಯ ಸಾವು

ತುಮಕೂರು: ಸಿದ್ಧಾರ್ಥ ವೈದ್ಯಕೀಯ ಕಾಲೇಜಿನಲ್ಲಿ ವೈದ್ಯಕೀಯ ಪದವಿ ಪಡೆದಿದ್ದ ವೈದ್ಯರೊಬ್ಬರು ಹಾವು ಕಚ್ಚಿ ಮೃತಪಟ್ಟರು. ಕೇರಳ ಮೂಲದ ಅದಿತ್ ಬಾಲಕೃಷ್ಣನ್ ಮೃತರು. ಇವರು, ಹೆಗ್ಗೆರೆಯ ತಮ್ಮ ಮನೆಯ ಬಳಿ ಕಾರು ನಿಲ್ಲಿಸುವಾಗ ಹಾವು ಕಚ್ಚಿದೆ.

'ಜಾತಿ ಗಣತಿ ವರದಿ ಸ್ವೀಕರಿಸಿದ ಬಳಿಕ ಚರ್ಚೆ ಆಗಲಿ'

ಬೆಂಗಳೂರು: 'ಎಚ್. ಕಾಂತರಾಜ ಅವರು ಹಿಂದುಳಿದ ವರ್ಗಗಳ ಆಯೋಗದ ಅಧ್ಯಕ್ಷರಾಗಿದ್ದ ಅವಧಿಯಲ್ಲಿ ನಡೆಸಿದ ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆ (ಜಾತಿ ಗಣತಿ) ವರದಿಯನ್ನು ಸರ್ಕಾರ ಸ್ವೀಕರಿಸಲಿದ್ದು, ಆ ಬಳಿಕ ಸಾಧಕ-ಬಾಧಕಗಳ ಚರ್ಚೆ ನಡೆಯಲಿ' ಎಂದು ಹಿಂದುಳಿದ ವರ್ಗಗಳ ಕಲ್ಯಾಣ ಸಚಿವ ಶಿವರಾಜ ತಂಗಡಗಿ ಹೇಳಿದರು.

ಸುದ್ದಿಗಾರರ ಜೊತೆ ಗುರುವಾರ ಮಾತನಾಡಿದ ಅವರು, 'ವರದಿ ಸ್ವೀಕರಿಸುವುದಾಗಿ ಈಗಾಗಲೇ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಕೂಡ ಸ್ಪಷ್ಟಪಡಿ-ಸಿದ್ದಾರೆ. ವರದಿ ಸಲ್ಲಿಕೆಯಾಗಿ, ಸಾಧಕ- ಬಾಧಕಗಳ ಬಗ್ಗೆ ಚರ್ಚೆ ನಡೆದು ಆ ಬಳಿಕ ನಿರ್ಧಾರ ಮಾಡಲಾಗುವುದು. ವರದಿಯಲ್ಲಿ ಏನಿದೆ ಎಂದು ಯಾರಿಗೂ ಗೊತ್ತಿಲ್ಲ. ವರದಿ ಬಗ್ಗೆ ಮೊದಲೇ ಕಲ್ಪಿಸಿಕೊಳ್ಳುವುದು ಸರಿಯಲ್ಲ' ಎಂದರು.

'ಒಕ್ಕಲಿಗ ಸಮುದಾಯದ ಮುಖಂಡರು ನನ್ನನ್ನು ಭೇಟಿಯಾಗಿ ಕಾಂತರಾಜ ವರದಿ ಸ್ವೀಕರಿಸದಂತೆ ಮನವಿ ಮಾಡಿದರು. ಅದಕ್ಕೆ, ನಾನು ವರದಿಯಲ್ಲಿ ಏನಿದೆ ಎಂಬುದು ಗೊತ್ತಿದೆಯೇ ಎಂದು ಕೇಳಿದೆ. ಅವರು ಇಲ್ಲವೆಂದರು. ವರದಿ ಸ್ವೀಕರಿಸಿದ ಬಳಿಕ ಅದರಲ್ಲಿ ಏನಿದೆ ಎಂಬುದು ತಿಳಿಯಲಿದೆ. ಆದರೆ, ಈ ಹಂತದಲ್ಲಿ ವಿರೋಧ ಮಾಡುವ ಅಗತ್ಯವಿಲ್ಲ. ಯಾವುದೇ ಆತಂಕಪಡುವ ಅಗತ್ಯವಿಲ್ಲ ಎಂದು ಮನವರಿಕೆ ಮಾಡಿದ್ದೇನೆ' ಎಂದರು.

ತಡೆಹಿಡಿಯಲಾದ ಯೋಜನೆಗೆ ಸರ್ಕಾರದಿಂದ ಹಸಿರು ನಿಶಾನೆ • ಶೀಘ್ರ ಕಾಮಗಾರಿ ಆರಂಭ

9 ಹೈ ಟ್ರಾಫಿಕ್ ಡೆನ್ಸಿಟಿ ಕಾರಿಡಾರ್‌ಗೆ ಚಾಲನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹಿಂದಿನ ಬಿಜೆಪಿ ಸರ್ಕಾರ ಅನುಮೋದನೆ ನೀಡಿ, ಟೆಂಡರ್ ಪ್ರಕ್ರಿಯೆ ಪೂರ್ಣಗೊಂಡಿದ್ದ 9 ಹೈ ಟ್ರಾಫಿಕ್ ಡೆನ್ಸಿಟಿ ಕಾರಿಡಾರ್‌ಗಳ ಕಾಮಗಾರಿ ಆರಂಭಿಸಲು ಕಾಂಗ್ರೆಸ್ ಸರ್ಕಾರ ಹಸಿರು ನಿಶಾನೆ ತೋರಿದೆ.

ಹಿಂದಿನ ಬಿಜೆಪಿ ಸರ್ಕಾರ ಅನುಮೋದಿಸಿ, ಆರಂಭವಾಗದ ಕಾಮಗಾರಿಗಳನ್ನು ಸ್ಥಗಿತಗೊಳಿಸುವಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಅಧಿಕಾರ ವಹಿಸಿಕೊಂಡ ಸಂದರ್ಭದಲ್ಲಿ ಬಿಬಿಎಂಪಿಗೆ ಸೂಚಿಸಿದ್ದರು. ಇದೀಗ, ಸಿದ್ದರಾಮಯ್ಯ ಹಾಗೂ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಹೈ ಟ್ರಾಫಿಕ್ ಡೆನ್ಸಿಟಿ ಕಾರಿಡಾರ್ ಯೋಜನೆಗೆ ಸಮ್ಮತಿ ಸೂಚಿಸಿರುವುದ-ರಿಂದ ಡಿಸೆಂಬರ್ ಮೊದಲ ವಾರದಲ್ಲೇ ಕಾಮಗಾರಿ ಆರಂಭವಾಗಲಿದೆ.

ನಗರದಲ್ಲಿ 12 ಹೈ ಟ್ರಾಫಿಕ್ ಡೆನ್ಸಿಟಿ ಕಾರಿಡಾರ್‌ಗಳ ಅಭಿವೃದ್ಧಿಗೆ ಹಿಂದಿನ ಸರ್ಕಾರ ಸಮ್ಮತಿಸಿತ್ತು. ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತದ (ಕೆಆರ್‌ಡಿಸಿಎಲ್) ಮೂಲಕ ನಡೆಸಲಾಗುವ ಈ ಕಾಮಗಾರಿಗಳಿಗೆ ₹400 ಕೋಟಿ ವೆಚ್ಚ ಮಾಡಲು ನಿರ್ಧರಿ-ಸಲಾಗಿತ್ತು. ನಂತರ ಅದನ್ನು ರದ್ದುಪಡಿಸಿ, 9 ಹೈ ಟ್ರಾಫಿಕ್ ಡೆನ್ಸಿಟಿ ಕಾರಿಡಾರ್‌ಗಳನ್ನು ಬಿಬಿಎಂಪಿಯಿಂದಲೇ ನಿರ್ವಹಣೆ ಮಾಡಲು ₹273 ಕೋಟಿಗೆ 2022ರ ಡಿ.17ರಂದು ಅನುಮೋದಿಸಲಾಗಿತ್ತು. ಇದಕ್ಕೆ ಸಂಬಂಧಿಸಿದ ಎಲ್ಲ ಟೆಂಡರ್ ಪ್ರಕ್ರಿಯೆ ಮುಗಿದಿದ್ದು, ಕಾರ್ಯಾದೇಶವನ್ನೂ ನೀಡಲಾಗಿತ್ತು.

ಹೈ ಟ್ರಾಫಿಕ್ ಡೆನ್ಸಿಟಿ ಕಾರಿಡಾರ್‌ಗಳ ಅಭಿವೃದ್ಧಿ ಕಾಮಗಾರಿಯೊಂದಿಗೆ ಮೂರು ವರ್ಷಗಳ ಅವಧಿಗೆ ಸುಸ್ಥಿತಿಯಲ್ಲಿ ಮತ್ತು ಪರಿಣಾಮಕಾರಿಯಾಗಿ (ಡಿಫೆಕ್ಟ್ ಲಿಯಾಬಿಲಿಟಿ ಪಿರಿಯಡ್) ನಿರ್ವಹಿಸುವ ಜವಾಬ್ದಾರಿಯೂ ಗುತ್ತಿ-ಗೆದಾರರದ್ದಾಗಿರುತ್ತದೆ. ನಿರ್ವಹಣೆಗೆ ಅಥವಾ ಇತರೆ ಕಾಮಗಾರಿಗೆ ಹೆಚ್ಚಿನ ಅನುದಾನ ನೀಡಲಾಗುವುದಿಲ್ಲ ಎಂದು ಸರ್ಕಾರ ಆದೇಶದಲ್ಲಿ ಸ್ಪಷ್ಟಪಡಿಸಿದೆ. 2022ರ ಆದೇಶಕ್ಕೆ ನಗರಾಭಿವೃದ್ಧಿ ಇಲಾಖೆ ನ.17ರಂದು ಅನುಮೋದನೆ ನೀಡಿದೆ.

'9 ಹೈ ಟ್ರಾಫಿಕ್ ಡೆನ್ಸಿಟಿ ಕಾರಿಡಾರ್‌ಗಳ ಅಭಿವೃದ್ಧಿಗೆ ಕಾರ್ಯಾದೇಶ ನೀಡಲಾಗಿದ್ದು, ಪ್ರಾಥಮಿಕ ಕಾಮಗಾರಿಗಳು ಆರಂಭವಾಗಿವೆ. ಪೂರ್ಣಪ್ರಮಾಣದ ಕಾಮಗಾರಿ ಶೀಘ್ರವೇ ಆರಂಭವಾಗಲಿದೆ. ಮುಂದಿನ ಮಳೆಗಾಲದೊಳಗೆ ಅಂದರೆ ಜೂನ್ ಒಳಗೆ ಈ ಕಾಮಗಾರಿಗಳನ್ನು ಪೂರ್ಣಗೊಳಿಸುವ ಗುರಿ ಹೊಂದಲಾಗಿದೆ' ಎಂದು ಬಿಬಿಎಂಪಿ ಪ್ರಧಾನ ಎಂಜಿನಿಯರ್ ಬಿ.ಎಸ್. ಪ್ರಹ್ಲಾದ್ ತಿಳಿಸಿದರು.

'ರಸ್ತೆ ಡಾಂಬರೀಕರಣ, ಒಂದೇ ರೀತಿಯ ವಿಸ್ತೀರ್ಣ, ಪಾದಚಾರಿ ಮಾರ್ಗ, ಸೇವಾ ರಸ್ತೆ ಅಭಿವೃದ್ಧಿ, ಕ್ಯಾರಿಯೇಜ್ ವೇಗಳ ಅಭಿವೃದ್ಧಿ ಕಾಮ-ಗಾರಿಗಳನ್ನು ಈ ಹೈ ಟ್ರಾಫಿಕ್ ಡೆನ್ಸಿಟಿ ಕಾರಿಡಾರ್‌ಗಳಲ್ಲಿ ಕೈಗೊಳ್ಳಲಾಗುತ್ತದೆ. ಟೆಂಡರ್ ಶ್ಯೂರ್ ಮಾದರಿಯನ್ನು ಹೋಲುವಂತಿದ್ದರೂ, ಹೈ ಟ್ರಾಫಿಕ್ ಡೆನ್ಸಿಟಿ ಕಾರಿಡಾರ್‌ಗಳಿಗೆ ಪ್ರತ್ಯೇಕ ನಿಯಮಗಳನ್ನು ಅನುಸರಿಸಿಕೊಂಡು ಅಭಿವೃದ್ಧಿ ಮಾಡಲಾಗುತ್ತದೆ. ಸಂಚಾರ ದಟ್ಟಣೆಯನ್ನು ಕಡಿಮೆಗೊಳಿಸುವ ಉದ್ದೇಶ ಹೊಂದಲಾಗಿದೆ' ಎಂದು ಮಾಹಿತಿ ನೀಡಿದರು.



ನಗರದ ಮೈಸೂರು ರಸ್ತೆಯಲ್ಲಿನ ಸಂಚಾರ ದಟ್ಟಣೆ

₹273 ಕೋಟಿ 9 ಹೈ ಡೆನ್ಸಿಟಿ ಕಾರಿಡಾರ್‌ಗೆ ವೆಚ್ಚ | **117.2 ಕಿ.ಮೀ** ಒಟ್ಟು ಉದ್ದ | **83.33 ಕಿ.ಮೀ** ರಸ್ತೆ ಅಭಿವೃದ್ಧಿ

ಕಾರಿಡಾರ್‌ಗಳು	ಒಟ್ಟು ಉದ್ದ	ಅಭಿವೃದ್ಧಿ	ವೆಚ್ಚ
ಪ್ಯಾಕೇಜ್ 1			
ಬಳ್ಳಾರಿ ರಸ್ತೆಯಿಂದ ಚಾಲುಕ್ಯ ವೃತ್ತದಿಂದ ಹೆಬ್ಬಾಳ	7.45 ಕಿ.ಮೀ	4.5 ಕಿ.ಮೀ	₹15 ಕೋಟಿ
ಹೊರ ವರ್ತುಲ ರಸ್ತೆಯಿಂದ ಗೊರಗುಂಟೆಪಾಳ್ಯ ಜಂಕ್ಷನ್ ಮೂಲಕ ಕೆ.ಆರ್. ಪುರ	18.6 ಕಿ.ಮೀ	17.93 ಕಿ.ಮೀ	₹74 ಕೋಟಿ
ಪ್ಯಾಕೇಜ್ 2			
ಹಳೆ ಮದ್ರಾಸ್ ರಸ್ತೆ ಕಾರಿಡಾರ್– ಟ್ರಿನಿಟಿ ವೃತ್ತ, ಹಲಸೂರು ಕೆರೆ, ಒಎಂಆರ್ ಬೆನ್ನಿಗಾನಹಳ್ಳಿ, ಕೆ.ಆರ್. ಪುರ, ಎನ್‌ಎಚ್–648ರ ಮೂಲಕ ಹೂಡಿ, ಐಟಿಪಿಎಲ್, ಕೆ.ಆರ್. ರೈಲುನಿಲ್ದಾಣದಿಂದ ಮೂಲಕ ಮೇಡಿಹಳ್ಳಿ	18.5 ಕಿ.ಮೀ	15.45 ಕಿ.ಮೀ	₹40 ಕೋಟಿ
ಹಳೆ ವಿಮಾನ ರಸ್ತೆ ಕಾರಿಡಾರ್– ಎಎಸ್‌ಸಿ ಕೇಂದ್ರದಿಂದ ದೊಮ್ಮಲೂರು, ಮಾರತಹಳ್ಳಿ, ಕುಂದಲಹಳ್ಳಿ, ವರ್ತೂರು ಮೂಲಕ ಕಾಡುಗೋಡಿ	17.15 ಕಿ.ಮೀ	11 ಕಿ.ಮೀ	₹48 ಕೋಟಿ
ಪ್ಯಾಕೇಜ್ 3			
ಹೊಸೂರು ರಸ್ತೆ ಕಾರಿಡಾರ್– ವೆಲ್ಲಾರ ಜಂಕ್ಷನ್– ಆಡುಗೋಡಿ, ಫೋರಂ ಮಾಲ್– ಮಡಿವಾಳ– ಕೇಂದ್ರ ರೇಷ್ಮೆ ಮಂಡಳಿ	6.45 ಕಿ.ಮೀ	5.28 ಕಿ.ಮೀ	₹26 ಕೋಟಿ
ಕನಕಪುರ ರಸ್ತೆ ಕಾರಿಡಾರ್– ಕೆ.ಆರ್. ರಸ್ತೆಯಿಂದ ಬನಶಂಕರಿ–ಸಾರಕ್ಕಿಯಿಂದ ನೈಸ್ ರಸ್ತೆವರೆಗೆ	13.75 ಕಿ.ಮೀ	9.1 ಕಿ.ಮೀ	₹15 ಕೋಟಿ
ಮೈಸೂರು ರಸ್ತೆ ಕಾರಿಡಾರ್– ಹಡ್ಸನ್ ವೃತ್ತದಿಂದ ಟೌನ್‌ಹಾಲ್, ನಾಯಂಡಹಳ್ಳಿ, ಜ್ಞಾನಭಾರತಿ ಜಂಕ್ಷನ್	15.4 ಕಿ.ಮೀ	9.3 ಕಿ.ಮೀ	₹15 ಕೋಟಿ
ಮಾಗಡಿ ರಸ್ತೆ ಕಾರಿಡಾರ್– ಹಳೆ ಬಿನ್ನಿಮಿಲ್‌ನಿಂದ ಟೋಲ್‌ಗೇಟ್ ಜಂಕ್ಷನ್, ಜೈಮುನಿರಾವ್ ವೃತ್ತ, ಹೌಸಿಂಗ್ ಬೋರ್ಡ್, ಕಾಮಾಕ್ಷಿಪಾಳ್ಯ, ಶ್ರೀಗಂಧದಕಾವಲ್, ಸುಂಕದಕಟ್ಟೆ, ಅಂಜನಾನಗರದಿಂದ ನೈಸ್ ರಸ್ತೆವರೆಗೆ	12 ಕಿ.ಮೀ	3.45 ಕಿ.ಮೀ	₹25 ಕೋಟಿ
ತುಮಕೂರು ರಸ್ತೆ ಕಾರಿಡಾರ್– ಸಂಗೊಳ್ಳಿರಾಯಣ್ಣ ವೃತ್ತದಿಂದ ಓಕಳಿಪುರಂ, ಡಾ.ರಾಜ್‌ಕುಮಾರ್ ರಸ್ತೆ, ಸೋಪ್ ಫ್ಯಾಕ್ಟರ್ ಜಂಕ್ಷನ್‌ನಿಂದ ಯಶವಂತಪುರ, ಗೊರಗುಂಟೆಪಾಳ್ಯ ಜಂಕ್ಷನ್	7.9 ಕಿ.ಮೀ	7.32 ಕಿ.ಮೀ	₹15 ಕೋಟಿ

ಅರಕೆರೆ ಗ್ರಾ.ಪಂ. ನೂತನ ಉಪಾಧ್ಯಕ್ಷರ ಆಯ್ಕೆ

ಯಲಹಂಕ: ಅರಕೆರೆ ಗ್ರಾಮ ಪಂಚಾಯಿತಿಯ ನೂತನ ಉಪಾಧ್ಯಕ್ಷರಾಗಿ ಎಂ.ವಿ. ಪದ್ಮ ಮುನಿಕೃಷ್ಣಪ್ಪ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.



ಎಂ.ವಿ. ಪದ್ಮ

ಈ ಹಿಂದಿನ ಉಪಾಧ್ಯಕ್ಷರ ರಾಜೀನಾಮೆಯಿಂದ ತೆರವಾಗಿದ್ದ ಸ್ಥಾನಕ್ಕಾಗಿ ಬುಧವಾರ ಆಯ್ಕೆ ಪ್ರಕ್ರಿಯೆ ನಡೆಯಿತು. ಒಟ್ಟು 22 ಸದಸ್ಯಬಲ ಹೊಂದಿರುವ ಪಂಚಾಯಿತಿಯಲ್ಲಿ ಪದ್ಮ ಒಬ್ಬರೇ ನಾಮಪತ್ರ ಸಲ್ಲಿಸಿದ್ದರು.

ಗ್ರಾಮಪಂಚಾಯಿತಿ ಅಧ್ಯಕ್ಷೆ ಮುನಿಲಕ್ಷ್ಮಮ್ಮ ಪರಶುರಾಮು, ಮಾಜಿ ಅಧ್ಯಕ್ಷರಾದ ಕೆ.ಆರ್. ತಿಮ್ಮೇಗೌಡ, ಬಿ.ಸಿ.ಶಶಿಕುಮಾರ್, ಲಕ್ಷ್ಮೀ ನಾರಾಯಣಗೌಡ, ಬಿಜೆಪಿ ಮುಖಂಡರಾದ ಎಸ್.ಎನ್.ರಾಜಣ್ಣ, ಸತೀಶ್ ಕಡತನಮಲೆ, ಚೊಕ್ಕನಹಳ್ಳಿ ವೆಂಕಟೇಶ್, ನಾಗೇಶ್, ಮುನಿದಾಸಪ್ಪ, ಎನ್.ಡಿ.ಜಗದೀಶ್, ಮತ್ತಿತರರು ಉಪಸ್ಥಿತರಿದ್ದರು.

2019ರಲ್ಲಿ ಪ್ರಸ್ತಾಪ; ಆಸ್ತಿ ತೆರಿಗೆಯಿಂದ ಸೇವಾ ಶುಲ್ಕಕ್ಕೆ ಪರಿಷ್ಕರಣೆ

ಮೆಟ್ರೊದಿಂದ ಸೇವಾಶುಲ್ಕ: ಶೀಘ್ರ ಸುತ್ತೋಲೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸರ್ಕಾರದ ಆದೇಶದಂತೆ ಬಿಎಂಆರ್‌ಸಿಎಲ್– ಮೆಟ್ರೊ ನಿಲ್ದಾಣಗಳ ಆಸ್ತಿಗಳಿಂದ ಸೇವಾ ಶುಲ್ಕ ಸಂಗ್ರಹಿಸಲು ಸುತ್ತೋಲೆ ಹೊರಡಿಸಲಾ-ಗುವುದು ಎಂದು ಬಿಬಿಎಂಪಿ ಕಂದಾಯ ವಿಭಾಗದ ವಿಶೇಷ ಆಯುಕ್ತ ಮುನೀಶ್ ಮೌದ್ಗಿಲ್ ತಿಳಿಸಿದರು.

ಬಿಎಂಆರ್‌ಸಿಎಲ್‌ನ ನಿಲ್ದಾಣ, ಕಚೇರಿ, ಡಿಪೊ ಸೇರಿದಂತೆ ವಿವಿಧ ಆಸ್ತಿಗಳಿಂದ ಆಸ್ತಿ ತೆರಿಗೆ ಪಡೆಯಲು ಸರ್ಕಾರದ ಮುಖ್ಯ ಕಾರ್ಯದರ್ಶಿ ಅವರ ನೇತೃತ್ವದಲ್ಲಿ 2019ರಲ್ಲಿ ನಡೆದ ಸಭೆಯಲ್ಲಿ ಚರ್ಚಿಸಲಾಗಿತ್ತು. ಅದರಂತೆ 2020ರ ಡಿ.9ರಿಂದ ತೆರಿಗೆ ಪಡೆಯಲು ಒಪ್ಪಂದ ಮಾಡಿಕೊಳ್ಳಲಾಗಿದೆ ಎಂದು ಮಾಹಿತಿ ನೀಡಿದರು.

ಸರ್ಕಾರದ ಆದೇಶ, ಒಪ್ಪಂದದ ನಂತರ 2022ರಲ್ಲಿ ನಡೆದ ಸಭೆಯಲ್ಲಿ ಆಸ್ತಿ ತೆರಿಗೆ ಪರಿಷ್ಕರಣೆ, ನಿಯಮಗಳ ಅಳವಡಿಕೆ ಬಗ್ಗೆ ಚರ್ಚಿಸಲಾಯಿತು. 2020ರ ಡಿ.9ರಿಂದ ಜಾರಿಗೆ ಬರುವಂತೆ ಆಸ್ತಿ ತೆರಿಗೆ ಬದಲು ಸೇವಾ ಶುಲ್ಕ ಪಾವತಿಸುವಂತೆ ಆದೇಶ ನೀಡಬೇಕು ಎಂದು ಬಿಎಂಆರ್‌ಸಿಎಲ್ ವ್ಯವಸ್ಥಾಪಕರು ಸರ್ಕಾರಕ್ಕೆ ಪತ್ರ ಬರೆದಿದ್ದರು. ಅದರಂತೆ 2023ರ ಆ.19ರಂದು ಸರ್ಕಾರ ಆದೇಶ ಹೊರಡಿಸಿದ್ದು, ಅದರಂತೆ ಸೇವಾ ಶುಲ್ಕ ಪಾವತಿಸಬೇಕಿದೆ. ಇದರ ಸವಿವರ ಸುತ್ತೋಲೆಯನ್ನು ಬಿಬಿಎಂಪಿ ಸದ್ಯವೇ ಹೊರಡಿಸಿ, ಅದನ್ನು ವಸೂಲಿ ಮಾಡಲಿದೆ ಎಂದು ಹೇಳಿದರು.

2019ರಿಂದ ಬಾಕಿ: 2019ರಿಂದ ಪ್ರಸ್ತಾವದಲ್ಲಿದ್ದ ಬಿಎಂಆರ್‌ಸಿಎಲ್ ಆಸ್ತಿಗಳಿಗೆ ತೆರಿಗೆ ವಿಷಯ ಇದೀಗ ಅಂತಿಮ ಹಂತಕ್ಕೆ ತಲುಪಿದೆ. ಬಿಬಿಎಂಪಿ ವ್ಯಾಪ್ತಿಯಲ್ಲಿ ಆಸ್ತಿ ತೆರಿಗೆ ಸಂಗ್ರಹಕ್ಕೆ ಹೆಚ್ಚಿನ ಒತ್ತು ನೀಡಲಾಗಿದ್ದು, ಯಾವ ಬಾಬ್ತಿನಲ್ಲಿ ಹೆಚ್ಚು ವಸೂಲಿ ಸಾಧ್ಯ ಎಂಬುದರ ಪರಿಶೀಲನೆ ನಡೆಯುತ್ತಿದೆ. ಈ ಸಂದರ್ಭದಲ್ಲಿ ಬಾಕಿ ಉಳಿದಿದ್ದ ನಮ್ಮ ಮೆಟ್ರೊದ ಸೇವಾ ಶುಲ್ಕ ಪ್ರಸ್ತಾವ ಪತ್ತೆಯಾಗಿದ್ದು, ಅದನ್ನು ಸರ್ಕಾರದಿಂದ ಆದೇಶ ಮಾಡಿಸಿಕೊಳ್ಳಲಾಗಿದೆ.

'ಬಿಬಿಎಂಪಿ ವ್ಯಾಪ್ತಿಯಲ್ಲಿ ಈ ಆರ್ಥಿಕ ಸಾಲಿನಲ್ಲಿ ₹4,500 ಕೋಟಿ ಆಸ್ತಿ ತೆರಿಗೆ ಸಂಗ್ರಹಿಸುವ ಗುರಿ ಹೊಂದಲಾಗಿದೆ. ಆದರೆ, ನಾವು ಇನ್ನೂ ₹3,000 ಕೋಟಿ ಆಸುಪಾಸಿನಲ್ಲೇ ಇದ್ದೇವೆ. ಇನ್ನು ನಾಲ್ಕು ತಿಂಗಳಲ್ಲಿ ವಸೂಲಿ ಪ್ರಕ್ರಿಯೆಗೆ ವೇಗ ನೀಡಲಾಗುತ್ತಿದೆ' ಎಂದು ಮುನೀಶ್ ಮೌದ್ಗಿಲ್ ಹೇಳಿದರು.

ಕಂದಾಯ ಸಿಬ್ಬಂದಿಯೊಂದಿಗೆ ಚರ್ಚೆ

'ಬಿಬಿಎಂಪಿ ವ್ಯಾಪ್ತಿಯಲ್ಲಿರುವ ಆಸ್ತಿಗಳನ್ನು ಡಿಜಿಟಲೀಕರಣ ಮತ್ತು ಆಸ್ತಿ ತೆರಿಗೆ ವಿಮರ್ಶೆ ಪ್ರಕ್ರಿಯೆಗೆ ಗುರಿ ನೀಡಿರುವುದಕ್ಕೆ ಕಂದಾಯ ಸಿಬ್ಬಂದಿಯಿಂದ ಅಸಮಾಧಾನ ವ್ಯಕ್ತವಾಗಿರುವುದು ನಮ್ಮ ಗಮನಕ್ಕೆ ಬಂದಿದೆ. ಅವರೊಂದಿಗೆ ಚರ್ಚೆ ನಡೆಸಲಾಗುತ್ತಿದ್ದು, ಪರಿಹಾರ ಕಂಡುಕೊಳ್ಳಲಾಗುತ್ತದೆ' ಎಂದು ಕಂದಾಯ ವಿಭಾಗದ ವಿಶೇಷ ಆಯುಕ್ತ ಮುನೀಶ್ ಮೌದ್ಗಿಲ್ ಹೇಳಿದರು.

'ಆಸ್ತಿ ತೆರಿಗೆ ಸಂಗ್ರಹ, ಅದಕ್ಕೆ ಸಂಬಂಧಿಸಿದ ಪರಿಶೀಲನೆ ಪ್ರಕ್ರಿಯೆಗಳು ಕಂದಾಯ ವಿಭಾಗದ ಸಿಬ್ಬಂದಿಯ ಮೂಲ ಜವಾಬ್ದಾರಿ. ನಿತ್ಯ 20 ಆಸ್ತಿಗಳ ಪರಿಶೀಲನೆ ಅಸಾಧ್ಯವಾದುದೇನೂ ಅಲ್ಲ. ಮತದಾರರ ಪಟ್ಟಿ ಪರಿಶೀಲನೆ ಪ್ರಕ್ರಿಯೆಗಳೂ ನಡೆಯುತ್ತಿವೆ. ಹೀಗಾಗಿ, ಮಾತುಕತೆ ನಡೆಸುತ್ತೇವೆ' ಎಂದರು.

ನ್ಯಾಯಾಲಯದಲ್ಲಿ ಪ್ರಕರಣ

'ಬಿಬಿಎಂಪಿಯ ಐಟಿ ವಿಭಾಗದಲ್ಲಿ ಗುತ್ತಿಗೆ ಆಧಾರದಲ್ಲಿ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿಯ ವೇತನ ವಿಷಯ ನ್ಯಾಯಾಲಯದಲ್ಲಿದೆ. ಅವರೆಲ್ಲ ಮೊಕದ್ದಮೆ ದಾಖಲಿಸಿರುವುದರಿಂದ ಅಲ್ಲಿಯೇ ತೀರ್ಮಾನವಾಗಬೇಕಿದೆ' ಎಂದು ಐಟಿ ವಿಭಾಗದ ವಿಶೇಷ ಆಯುಕ್ತ ಮುನೀಶ್ ಮೌದ್ಗಿಲ್ ತಿಳಿಸಿದರು.

'ಗುತ್ತಿಗೆದಾರರ ಬದಲಾವಣೆ ಹಾಗೂ ಕಾರ್ಯಾಚರಣೆಯಲ್ಲಿ ಗೊಂದಲ ಸೃಷ್ಟಿಯಾಗಿರುವುದರಿಂದ ಐಟಿ ವಿಭಾಗದಲ್ಲಿ ಹತ್ತಾರು ವರ್ಷಗಳಿಂದ ಗುತ್ತಿಗೆ ಆಧಾರದಲ್ಲೇ ಕಾರ್ಯ ನಿರ್ವಹಿಸುತ್ತಿರುವವರಿಗೆ ಮೇ ತಿಂಗಳಿನಿಂದ ವೇತನ ನೀಡಲಾಗಿಲ್ಲ. ಹೊಸದಾಗಿ ಗುತ್ತಿಗೆಯನ್ನು ನವೀಕರಿಸಿಕೊಂಡಿದ್ದರೂ ವೇತನ ನೀಡಿಲ್ಲ' ಎಂದು ಸಿಬ್ಬಂದಿ ದೂರುತ್ತಿದ್ದಾರೆ.

ಬಾಗಿಲು ಹಾಕಲಿದೆ 'ನ್ಯೂ ಕೃಷ್ಣಭವನ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಹೆಗ್ಗುರುತಾಗಿರುವ ಹಳೆಯ ಹೋಟೆಲ್‌ಗಳಲ್ಲಿ ಒಂದೆನಿಸಿರುವ ಮಲ್ಲೇಶ್ವರದ ನ್ಯೂಕೃಷ್ಣ ಭವನ್ (ಎನ್‌ಕೆಬಿ) ಡಿಸೆಂಬರ್ 6ರಂದು ಶಾಶ್ವತವಾಗಿ ಬಾಗಿಲು ಮುಚ್ಚಲಿದೆ. ರುಚಿಯಾದ ತಿಂಡಿಗಳ ಜೊತೆ ಈ ಹೋಟೆಲ್ ಬಟನ್ ಇಡ್ಲಿ, ಮಸಾಲೆ ದೋಸೆಗೆ ಹೆಸರಾಗಿತ್ತು.

ಮಲ್ಲೇಶ್ವರದ ಸಂಪಿಗೆ ಚಿತ್ರಮಂದಿರ ಎದುರಿನ 'ನ್ಯೂ ಕೃಷ್ಣ ಭವನ್' ಮುಚ್ಚುವ ಸುದ್ದಿ ಸಾಮಾಜಿಕ ಜಾಲತಾಣಗಳಲ್ಲಿ ಈಗ ಚರ್ಚೆಯಾಗುತ್ತಿದೆ.

'1974ರಲ್ಲಿ ಮೊದಲ ಬಾರಿಗೆ ಬೆಂಗಳೂರಿಗೆ ಬಂದಾಗ, ಇದೇ ಹೋಟೆಲ್‌ನಲ್ಲೇ ತಿಂಡಿ ತಿಂದಿದ್ದು. ಬಟನ್ ಇಡ್ಲಿ–ಸಾಂಬಾರ್ ರುಚಿ ಅದ್ಭುತವಾಗಿತ್ತು' ಎಂದು ಒಬ್ಬರು ಸ್ಮರಿಸಿಕೊಂಡರೆ, 'ಈ ಹೋಟೆಲ್‌ನ ಕಾಫಿ ರುಚಿಯ ಸ್ವಾದವೇ ಚಂದ' ಎಂದು ಮತ್ತೊಬ್ಬರು ನೆನಪಿಸಿಕೊಂಡಿದ್ದಾರೆ. ಕೆಲವರು ಹೋಟೆಲ್ ಸಿಬ್ಬಂದಿಯೊಂದಿಗಿನ ಒಡನಾಟವನ್ನೂ ಮೆಲುಕು ಹಾಕಿದ್ದಾರೆ.

ಮಲ್ಲೇಶ್ವರದ ಅತ್ಯಂತ ಹಳೆಯ ಹೋಟೆಲ್‌ಗಳಲ್ಲಿ ನ್ಯೂ ಕೃಷ್ಣಭವನ್ ಕೂಡ ಒಂದು. 1954 ರಲ್ಲಿ ಗೋಪಿನಾಥ ಪ್ರಭು ಅವರು ಈ ಹೋಟೆಲ್ ಆರಂಭಿಸಿದರು. ಈ ಹೋಟೆಲ್‌ನಲ್ಲಿ ಬಟನ್ ಇಡ್ಲಿ, ಮಂಗಳೂರು ನೀರು ದೋಸೆ, ಸೇಲಂ ಸಾಂಬಾರ ವಡ, ಗ್ರೀನ್ ಮಸಾಲಾ ಇಡ್ಲಿ, ಉಡುಪಿ ಬನ್ಸ್ ಮತ್ತು ಉಡುಪಿ ಗುಳಿಯಪ್ಪ, ಮಂಡ್ಯ ರಾಗಿ ದೋಸೆ, ಓಪನ್ ಬಟರ್ ಮಸಾಲೆ ದೋಸೆ ಬಹಳ ಹೆಸರುವಾಸಿ.

ಆರಂಭದಲ್ಲಿ ಹೋಟೆಲ್ ಜೊತೆಗೆ ಲಾಡ್ಜ್ ಕೂಡ ಇತ್ತು. ವೈದ್ಯರು, ಜ್ಯೋತಿಷಿಗಳು ಇಲ್ಲಿನ ಕಾಯಂ ಗ್ರಾಹಕರು. ಇವರೆಲ್ಲ ಈ ಲಾಡ್ಜ್‌ನಲ್ಲೇ ಕನ್ಸಲ್ಟೇಷನ್ ಮಾಡುತ್ತಿದ್ದರು' ಎಂದು ನೆನ-ಪಿಸಿಕೊಳ್ಳುತ್ತಾರೆ ಮಲ್ಲೇಶ್ವರಂ ಸ್ವಾಭಿಮಾನ್ ಇನಿಶಿಯೇಟಿವ್‌ನ ಕಾರ್ಯದರ್ಶಿ ವಿ.ಆರ್. ಮಹೇಶ್.

ನ್ಯೂ ಕೃಷ್ಣಭವನ್ 'ಶೂನ್ಯ ತ್ಯಾಜ್ಯ' ಪರಿಕಲ್ಪನೆಯನ್ನು ಪೂರ್ಣಪ್ರಮಾಣದಲ್ಲಿ ಅನುಷ್ಠಾನಗೊಳಿಸಿದ ಮೊದಲ ಹೋಟೆಲ್ ಎಂದು ವಿದ್ಯಾರ್ಥಿ ಭವನದ ಮ್ಯಾನೇಜಿಂಗ್ ಪಾರ್ಟನರ್ ಅರುಣ್ ಅಡಿಗ ನೆನಪಿಸಿಕೊಳ್ಳುತ್ತಾರೆ.

'ಆಗ ಬೆಂಗಳೂರಿನ ಪ್ರಮುಖ ಭಾಗವಾಗಿದ್ದ ಇಲ್ಲಿ ದಕ್ಷಿಣ ಭಾರತ ಶೈಲಿಯ ಊಟವನ್ನು ಗ್ರಾಹಕರಿಗೆ ಬಡಿಸುತ್ತಿದ್ದ ಮೊದಲ ಹೋಟೆಲ್ ಇದಾಗಿತ್ತು' ಎಂದು ನೆನಪಿಸುತ್ತಾರೆ ಬೃಹತ್ ಬೆಂಗಳೂರು ಹೋಟೆಲ್ ಮಾಲೀಕರ ಸಂಘದ ಅಧ್ಯಕ್ಷ ಪಿ.ಸಿ.ರಾವ್ ಅವರು.



ಮಲ್ಲೇಶ್ವರದ ಸಂಪಿಗೆ ರಸ್ತೆಯಲ್ಲಿರುವ ನ್ಯೂ ಕೃಷ್ಣಭವನ್ ಹೋಟೆಲ್

'ಎನ್‌ಇಪಿ ರದ್ದು: ಕನ್ನಡಿಗ ಮಕ್ಕಳಿಗೆ ಅನ್ಯಾಯ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಶಿಕ್ಷಣದ ವಿಚಾರದಲ್ಲಿ ಕಾಂಗ್ರೆಸ್ ಸರ್ಕಾರ ಹುಡುಗಾಟ ಆಡುತ್ತಿದೆ. ಶಿಕ್ಷಣ ವ್ಯವಸ್ಥೆಯನ್ನು ಹಲವು ದಶಕಗಳಷ್ಟು ಹಿಂದಕ್ಕೆ ಒಯ್ಯುವ ಕೆಲಸ ನಡೆದಿದೆ. ಇದರಿಂದ ಕನ್ನಡಿಗ ವಿದ್ಯಾರ್ಥಿಗಳಿಗೆ ಅನ್ಯಾಯವಾಗುತ್ತದೆ' ಎಂದು ಬಿಜೆಪಿ ಶಾಸಕ ಡಾ.ಸಿ.ಎನ್. ಅಶ್ವತ್ಥನಾರಾಯಣ ಕಿಡಿ ಕಾರಿದ್ದಾರೆ.

ಬಿಜೆಪಿ ಕಚೇರಿಯಲ್ಲಿ ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ರಾಷ್ಟ್ರೀಯ ಶಿಕ್ಷಣ ನೀತಿ ವಿಷಯದಲ್ಲಿ ರಾಜ್ಯ ಸರ್ಕಾರದ ರಾಜಕೀಯ ಪ್ರೇರಿತ ನಿರ್ಧಾರದಿಂದ ಇಲ್ಲಿನ ವಿದ್ಯಾರ್ಥಿಗಳಿಗೆ ಸಮಸ್ಯೆ ಆಗಲಿದೆ ಎಂದು ಹೇಳಿದರು.

'ಪಠ್ಯಕ್ರಮ ಮತ್ತು ಶಿಕ್ಷಣ ನೀತಿ ಪ್ರತ್ಯೇಕ. ಇದರ ಪರಿಜ್ಞಾನ ಇಲ್ಲಿನ ಸಿಎಂ, ಶಿಕ್ಷಣ ಸಚಿವರಿಗೆ ಇದೆಯೇ? ಕಲಿಯುವ ಮತ್ತು ಕಲಿಸುವುದು ಇದು ರಾಷ್ಟ್ರೀಯ ಶಿಕ್ಷಣ ನೀತಿಯ ಪ್ರಮುಖ ಅಂಶ. ಹಳೆಯ ನೀತಿಯಲ್ಲಿ ಇದ್ದ ನ್ಯೂನತೆಗಳನ್ನು ಹೋಗಲಾಡಿಸಿ 34 ವರ್ಷಗಳ ಬಳಿಕ ಹೊಸ ನೀತಿ ತರಲಾಗಿತ್ತು. ಸಮಾನತೆ ಮತ್ತು ಗುಣಮಟ್ಟದ ಶಿಕ್ಷಣ ಕೊಡಬೇಕಿದೆ. ಇದಕ್ಕಾಗಿ 3ನೇ ರಾಷ್ಟ್ರೀಯ ಶಿಕ್ಷಣ ನೀತಿ ಜಾರಿ ಮಾಡಲಾಗಿತ್ತು. ತಯಾರಿ, ಅಧ್ಯಯನ, ಚರ್ಚೆ ಇಲ್ಲದೆ ಏಕಾಏಕಿ ರಾಷ್ಟ್ರೀಯ ಶಿಕ್ಷಣ ನೀತಿಯನ್ನು ಕೊನೆಗೊಳಿಸುತ್ತೇ-ವೆ ಎಂದು 2024 ರಿಂದ ರಾಜ್ಯ ಶಿಕ್ಷಣ ನೀತಿ ತರುವ ಪ್ರಯತ್ನ ನಡೆಸಿರುವುದು ಖಂಡನೀಯ' ಎಂದು ಹೇಳಿದರು.

ವಿಧಾನಪರಿಷತ್ ಸದಸ್ಯ ಕೆ.ಎಸ್. ನವೀನ್ ಮಾತನಾಡಿ, 'ಅನ್ನ, ಆರೋಗ್ಯ, ಶಿಕ್ಷಣದಲ್ಲಿ ರಾಜಕೀಯ ತರಬೇಡಿ. ರಾಷ್ಟ್ರೀಯ ಶಿಕ್ಷಣ ನೀತಿಯಿಂದ ಜಾಗತಿಕ ಮಟ್ಟದಲ್ಲಿ ಸ್ಪರ್ಧಿಸುವ ಸಾಮರ್ಥ್ಯ ಪಡೆಯುವ ಕನ್ನಡಿಗರ ಮಕ್ಕಳ ಭವಿಷ್ಯವನ್ನು ಕತ್ತಲಿಗೆ ನೂಕಬೇಡಿ. ಶಿಕ್ಷಕರು, ವಿದ್ಯಾರ್ಥಿಗಳು ಮತ್ತು ಪೋಷಕರು ಎನ್‌ಇಪಿ ಪರವಾಗಿದ್ದಾರೆ. ಐಸಿಎಸ್‌ಇ, ಸಿಬಿಎಸ್‌ಇ ಶಾಲೆಗಳಲ್ಲಿ ಎನ್‌ಇಪಿ ಸಿಗುತ್ತದೆ. ಸರ್ಕಾರಿ ಶಾಲೆಗಳ ಮಕ್ಕಳು ಅದರಿಂದ ವಂಚಿತರಾಗುತ್ತಾರೆ' ಎಂದರು. ವಿಧಾನ ಪರಿಷತ್ ಸದಸ್ಯ ಹನುಮಂತ ನಿರಾಣಿ ಮಾತನಾಡಿದರು.

ಬೇರೆ ಗುಂಪಿನ ರಕ್ತ: ಆರೋಗ್ಯದಲ್ಲಿ ಏರುಪೇರು

ರಾಮನಗರ: ರಕ್ತದ ಮಾದರಿ ಪರೀಕ್ಷೆ ಮಾಡಿದ ಡಯಾಗ್ನಾಸ್ಟಿಕ್ ಸೆಂಟರ್ ಸಿಬ್ಬಂದಿ ತಮ್ಮ ವರದಿಯಲ್ಲಿ ರಕ್ತದ ಗುಂಪಿನ ಮಾಹಿತಿಯನ್ನು ತಪ್ಪಾಗಿ ನಮೂದಿಸಿದ್ದರಿಂದಾಗಿ, ತಮ್ಮದಲ್ಲದ ಗುಂಪಿನ ರಕ್ತ ಪಡೆದ ರೋಗಿಯೊಬ್ಬರ ಆರೋಗ್ಯದಲ್ಲಿ ಏರುಪೇರಾಗಿದೆ.

ಶಿವಮ್ಮ ಎಂಬುವವರು ಸೆ. 2ರಂದು ಜಿಲ್ಲಾಸ್ಪತ್ರೆಗೆ ದಾಖಲಾಗಿದ್ದರು. ಈ ವೇಳೆ, ರೋಗಿಯ ರಕ್ತ ಪರೀಕ್ಷೆಯನ್ನು ಐಜೂರಿನ ಪೂಜಿತಾ ಡಯಾಗ್ನಾಸ್ಟಿಕ್ ಸೆಂಟರ್‌ನಲ್ಲಿ ಮಾಡಿಸಿದ್ದರು. ಸಿಬ್ಬಂದಿ ರಕ್ತದ ಗುಂಪು 'ಎಬಿ ಪಾಸಿಟಿವ್' ಎಂದು ವರದಿ ನೀಡಿದ್ದರು. ಆ ಮೇರೆಗೆ, ರೋಗಿಗೆ ಅದೇ ಗುಂಪಿನ ಎರಡು ಬಾಟಲಿ ರಕ್ತವನ್ನು ವೈದ್ಯರು ನೀಡಿದ್ದರು.


ಶಿವಮ್ಮ ಅವರ ಆರೋಗ್ಯ ಕೆಲ ದಿನಗಳ ಬಳಿಕ ಏರುಪೇರಾಯಿತು. ಅವರನ್ನು ನ. 28ರಂದು ಮತ್ತೆ ಜಿಲ್ಲಾಸ್ಪತ್ರೆಗೆ ದಾಖಲಿಸಲಾಯಿತು. ರಕ್ತ ಪರೀಕ್ಷೆ ಮಾಡಿಸಿದಾಗ, ವರದಿಯಲ್ಲಿ ರಕ್ತದ ಗುಂಪು 'ಎ ಪಾಸಿಟಿವ್' ಎಂದು ನಮೂದಾಗಿತ್ತು.

ನಗರದಲ್ಲಿ ಇಂದು

'ಸ್ಪೆಲ್ ಬೀ' ಅಂತರಶಾಲಾ ಸ್ಪರ್ಧೆ: ಆಯೋಜನೆ: 'ಡೆಕ್ಕನ್ ಹೆರಾಲ್ಡ್', ಸ್ಥಳ: ಬಾಲಭವನ, ಕಬ್ಬನ್ ಉದ್ಯಾನ, ಬೆಳಿಗ್ಗೆ 9.30

ವಿಶ್ವ ಏಡ್ಸ್ ದಿನ–2023: ಉದ್ಘಾಟನೆ: ಸಿದ್ದರಾಮಯ್ಯ, ಉಪಸ್ಥಿತಿ: ಡಿ.ಕೆ. ಶಿವಕುಮಾರ್, ಬಸವರಾಜ ಎಸ್. ಹೊರಟ್ಟಿ, ಯು.ಟಿ. ಖಾದರ್, ದಿನೇಶ್ ಗುಂಡೂರಾವ್, ಅಧ್ಯಕ್ಷತೆ: ರಿಜ್ವಾನ್ ಅರ್ಷದ್, ಆಯೋಜನೆ: ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಸ್ಥಳ: ಬ್ಯಾಂಕ್ವೆಟ್ ಹಾಲ್, ವಿಧಾನಸೌಧ, ಬೆಳಿಗ್ಗೆ 10.30

'ಗವಿಮಾರ್ಗ' ಪುಸ್ತಕ ಬಿಡುಗಡೆ, 'ವಿ.ಪಿ. ಸಿಂಗ್ ಪ್ರಶಸ್ತಿ ಪ್ರದಾನ, 'ಮಂಡಲ್ ವರದಿ ಆಗಿದ್ದೇನು?' ಕುರಿತು ವಿಚಾರಸಂಕಿರಣ: ಪುಸ್ತಕ ಬಿಡುಗಡೆ: ಎಚ್.ಎಂ. ರೇವಣ್ಣ, ವಿಚಾರಸಂಕಿರಣದ ಉದ್ಘಾಟನೆ: ವಿ.ಆರ್. ಸುದರ್ಶನ್, ಪ್ರಶಸ್ತಿ ಪ್ರದಾನ: ಎಚ್. ಆಂಜನೇಯ, ಪ್ರಶಸ್ತಿ ಪುರಸ್ಕೃತರು: ಸಿದ್ಧರಾಜು, ಗಂಗಾಧರ ಮೊದಲಿಯಾರ್, ಕಾಂತರಾಜ, ಕೆ.ವಿ. ಪ್ರಭಾಕರ್, ಲಕ್ಷ್ಮಣ ಕೊಡಸೆ, ಬಿ.ಕೆ. ರವಿ, ಅಧ್ಯಕ್ಷತೆ: ಕೆ.ಆರ್. ನೀಲಕಂಠ, ಪುಸ್ತಕದ ಕುರಿತು: ಷಡಕ್ಷರ ಮುನಿ ದೇಶೀಕೇಂದ್ರ ಸ್ವಾಮೀಜಿ, ಅತಿಥಿಗಳು: ಎಸ್. ನಾಗಣ್ಣ, ಕೆ.ಎಂ. ರಾಮಚಂದ್ರಪ್ಪ, ಆಯೋಜನೆ: ಕರ್ನಾಟಕ ಹಿಂದುಳಿದ ವರ್ಗಗಳ ಮಾನ್ಯತೆ ಪಡೆದ ಸಂಪಾದಕರ ಮತ್ತು ವರದಿಗಾರರ ಸಂಘ, ಐ.ಎಚ್.ಎಸ್. ಪ್ರಕಾಶನ, ಸ್ಥಳ: ಅರಕೇರಿ ಸಭಾಂಗಣ, ಕೃಷಿ ತಂತ್ರಜ್ಞಾನ ಸಂಸ್ಥೆ, ನಂ. 15, ಕ್ವೀನ್ಸ್ ರಸ್ತೆ, ಬೆಳಿಗ್ಗೆ 11ರಿಂದ



ಐಂದ್ರಿತಾ ರೇ

ವಾಯುಮಾಲಿನ್ಯ ನಿಯಂತ್ರಣ ಮಾಸಾಚರಣೆ–2023 ಸಮಾರೋಪ ಸಮಾರಂಭ: ಉದ್ಘಾಟನೆ: ರಾಮಲಿಂಗಾರೆಡ್ಡಿ ಅತಿಥಿಗಳು: ಡಿ.ಕೆ. ಶಿವಕುಮಾರ್, ಐಂದ್ರಿತಾ ರೇ, ಅಧ್ಯಕ್ಷತೆ: ರಿಜ್ವಾನ್ ಅರ್ಷದ್, ಆಯೋಜನೆ: ಸಾರಿಗೆ ಇಲಾಖೆ, ಸ್ಥಳ: ಯುವನಿಕಾ ಸಭಾಂಗಣ, ನೃಪತುಂಗ ರಸ್ತೆ, ಮಧ್ಯಾಹ್ನ 3

'ವೇಗದ ಬಗ್ಗೆ ಸಮೂಹ ಮಾಧ್ಯಮ ಅಭಿಯಾನ'ಕ್ಕೆ ಚಾಲನೆ: ಅತಿಥಿಗಳು: ರಾಮಲಿಂಗಾರೆಡ್ಡಿ, ಅತಿಥಿಗಳು: ಎನ್. ವಿ. ಪ್ರಸಾದ್, ಬಿ.ಆರ್. ರವಿಕಾಂತೇಗೌಡ, ಎ.ಎಂ. ಯೋಗೀಶ್, ಎಂ.ಎನ್. ಅನುಚೇತ್, ಜೆ. ಪುರುಷೋತ್ತಮ್, ಆಯೋಜನೆ: ಸ್ಥಳ: ಕೆಎಸ್‌ಆರ್‌ಟಿಸಿ ಕೇಂದ್ರ ಕಚೇರಿ, ಶಾಂತಿನಗರ, ಮಧ್ಯಾಹ್ನ 12

'ಬಿ.ಎಲ್.ಆರ್. ಹಬ್ಬ' ಆರ್ಟ್ ಇಸ್ ಲೈಫ್–ಓಲ್ಡ್ ಥ್ರೆಡ್ಸ್, ನ್ಯೂ ಸ್ಟೋರೀಸ್ ಉತ್ಸವ: ಸ್ಥಳ: ಮ್ಯೂಸಿಯಂ ಆಫ್ ಆರ್ಟ್ ಆ್ಯಂಡ್ ಫೋಟೊಗ್ರಫಿ, ಕಸ್ತೂರಿ ಬಾ ರಸ್ತೆ, ಮಧ್ಯಾಹ್ನ 12

30ನೇ ರಾಗಶ್ರೀ ಸಮ್ಮೇಳನೋತ್ಸವ: ಸಮ್ಮೇಳನಾಧ್ಯಕ್ಷ: ಜಿ.ಎನ್. ನಾಗಮಣಿ ಶ್ರೀನಾಥ್, ಅತಿಥಿಗಳು: ಎಂ.ಆರ್. ಅನಂತ್, ಡಿ.ವಿ. ನಾಗರಾಜನ್, ಟಿ.ಎಸ್. ಚಂದ್ರಶೇಖರ್, ಶ್ರೀನಿವಾಸ್ ತಿರುಮಲೆ, ರಾಧಿಕಾ ನಂದಕುಮಾರ್, ಆಯೋಜನೆ: ಡಿ. ಸುಬ್ಬರಾಮಯ್ಯ ಫೈನ್ ಆರ್ಟ್ಸ್ ಟ್ರಸ್ಟ್, ಸ್ಥಳ: ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ವರ್ಲ್ಡ್ ಕಲ್ಚರ್, ಬಿ.ಪಿ. ವಾಡಿಯಾ ರಸ್ತೆ, ಬಸವನಗುಡಿ, ಸಂಜೆ 5.30ರಿಂದ

'ಕನ್ನಡೋತ್ಸವ' ನೃತ್ಯ ನಾಟಕ ಪ್ರದರ್ಶನ: ರಚನೆ: ಸತ್ಯೇಶ್ ಎನ್. ಬೆಳ್ಳೂರ್, ಅತಿಥಿಗಳು: ಶಿವರಾಜ ತಂಗಡಗಿ, ಕೃಷ್ಣ ಬೈರೇಗೌಡ, ಮಂಜುಳಾ ಎಸ್., ಮೀನಾಕ್ಷಿ ಕೃಷ್ಣ ಬೈರೇಗೌಡ, ಕಾಂಡ್ರ ಸತೀಶ್ ಕುಮಾರ್, ಆಯೋಜನೆ: ನರ್ತನ ಪ್ರಿಯಾ ಸ್ಕೂಲ್ ಆಫ್ ಆರ್ಟ್ಸ್, ಕ್ರಿಷ್ಟಿ ಆರ್ಟ್ಸ್ ಫೌಂಡೇಷನ್, ಸ್ಥಳ: ರವೀಂದ್ರ ಕಲಾಕ್ಷೇತ್ರ, ಜೆ.ಸಿ. ರಸ್ತೆ, ಸಂಜೆ 5.30

'ಪ್ರೀತಿ, ಸಹಬಾಳ್ವೆಯ ಯಾತ್ರೆ ರಾಷ್ಟ್ರೀಯ ಸಾಂಸ್ಕೃತಿಕ ಜಾಥಾದ ಉದ್ಘಾಟನೆ: ಸಿ. ನಾರಾಯಣ ಸ್ವಾಮಿ, ಅತಿಥಿಗಳು: ಎಂ.ಎಸ್. ಸತ್ಯು, ಬಿ.ಆರ್. ಪಾಟೀಲ, ಬಿ.ಎಲ್. ಶಂಕರ್, ವಿಜಯಮ್ಮ, ಎನ್. ಆರ್. ವಿಶುಕುಮಾರ್, ಅಧ್ಯಕ್ಷತೆ: ವೂಡೇ ಪಿ. ಕೃಷ್ಣ, ಆಯೋಜನೆ: ಸಮುದಾಯ ಬೆಂಗಳೂರು, ಇಪ್ಟಾ ಕರ್ನಾಟಕ, ರಾಗಿಕಣ ಬೆಂಗಳೂರು, ಸ್ಥಳ: ಬಾಪು ಸಭಾಂಗಣ, ಗಾಂಧಿಭವನ, ಕುಮಾರಕೃಪಾ ರಸ್ತೆ, ಸಂಜೆ 5.30ರಿಂದ



ಎಂ.ಎಸ್. ಸತ್ಯು

ಗಾನನಿನಾದ: 50 ಗಾಯಕರಿಂದ ಸಮೂಹ ಗಾಯನ, ಆಯೋಜನೆ: ಸತ್ಯ ಪ್ರಮೋದ ತೀರ್ಥರ ಪಾದುಕಾ ಮಹಾಸಮಾರಾಧನಾ, ಸ್ಥಳ: ನ್ಯಾಷನಲ್ ಕಾಲೇಜಿನ ಮೈದಾನ, ಬಸವನಗುಡಿ, ಸಂಜೆ 6.30

ಸಾಹಿತ್ಯ, ಸಾಂಸ್ಕೃತಿಕ ಸೇರಿ ವಿವಿಧ ಪ್ರಕಾರಗಳ ಕಾರ್ಯಕ್ರಮ ಗಳ ಆಮಂತ್ರಣ ಪತ್ರಿಕೆಗಳನ್ನು 'ನಗರದಲ್ಲಿ ಇಂದು' ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ–ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ
nagaradalli_indu@prajavani.co.in

ಸುದ್ದಿ 2 ನಿಮಿಷ

'ಮತದಾರರ ಪಟ್ಟಿ: 8,700 ಶಿಕ್ಷಕರು ಹೊರಕ್ಕೆ'

ಬೆಂಗಳೂರು: ಶಿಕ್ಷಕರ ಕ್ಷೇತ್ರದ ಕರಡು ಮತದಾರರ ಪಟ್ಟಿಯಲ್ಲಿ ಕೈಬಿಟ್ಟುಹೋಗಿರುವ 8,700 ಮತದಾರರ ಹೆಸರುಗಳನ್ನು ಮರುಸೇರ್ಪಡೆಗೊಳಿಸಬೇಕು ಎಂದು ಜೆಡಿಎಸ್ ಕಾನೂನು ಘಟಕ ಅಧ್ಯಕ್ಷ ಎ.ಪಿ.ರಂಗನಾಥ ಒತ್ತಾಯಿಸಿದ್ದಾರೆ.

ಈ ಕುರಿತು ಬೆಂಗಳೂರು ಶಿಕ್ಷಕರ ಕ್ಷೇತ್ರದ ಮತದಾರ ನೋಂದಣಾಧಿಕಾರಿಗ-ಳೂ ಆಗಿರುವ ಪ್ರಾದೇಶಿಕ ಆಯುಕ್ತರಿಗೆ ಪತ್ರ ಬರೆದಿರುವ ಅವರು, ಈಗಾಗಲೇ ಬಿಡುಗಡೆ ಮಾಡಿರುವ ಮತದಾರರ ಕರಡು ಪಟ್ಟಿಯಲ್ಲಿ ಬೆಂಗಳೂರು ನಗರ ಜಿಲ್ಲೆ ವ್ಯಾಪ್ತಿಯ ಪ್ರೌಢಶಾಲೆಯ 8 ಸಾವಿರ, ಬೆಂಗಳೂರು ದಕ್ಷಿಣ ಹಾಗೂ ಉತ್ತರದ ಪಿಯು ಉಪ ನಿರ್ದೇಶಕರ ವ್ಯಾಪ್ತಿಯ 4 ಸಾವಿರ, ಉನ್ನತ ಶಿಕ್ಷಣ ಇಲಾಖೆಯ ವಿವಿಧ ಪ್ರಾಂಶುಪಾಲರು ಸಲ್ಲಿಸಿದ್ದ 3 ಸಾವಿರ ಸೇರಿ 15 ಸಾವಿರ ಅರ್ಜಿಗಳಲ್ಲಿ 6,300 ಹೆಸರು ಮಾತ್ರ ಕರಡು ಪಟ್ಟಿಯಲ್ಲಿವೆ.

ಕರಡು ಪಟ್ಟಿಯಲ್ಲಿ ಸೇರ್ಪಡೆಗೊಂಡಿರದ ಶಿಕ್ಷಕರಿಗೆ ಆಕ್ಷೇಪ ಸಲ್ಲಿಸಲು ಅವಕಾಶ ನೀಡಲಾಗಿದೆ. ಆದರೆ, ಶಿಕ್ಷಣ ಸಂಸ್ಥೆಯ ಮುಖ್ಯಸ್ಥರು ಅನುಮೋದಿಸಿ, ಅಧಿಕಾರಿಗಳು ಪರಿಶೀಲಿಸಿದ ನಂತರ ನೋಂದಣಿಗಾಗಿ ಕಳುಹಿಸಿರುವ ಸಾವಿರಾರು ಶಿಕ್ಷಕರ ಹೆಸರು ಕೈಬಿಟ್ಟದ್ದಕ್ಕೆ ಸೂಕ್ತ ಕಾರಣ ನೀಡಿಲ್ಲ. ಇಲಾಖೆಯ ಅಧಿಕಾರಿಗಳಿಂದ ಸ್ವೀಕೃತವಾಗಿರುವ ಎಲ್ಲಾ ಅರ್ಜಿಗಳನ್ನು ಪರಿಶೀಲಿಸಿ ಮತದಾರರ ಪಟ್ಟಿಯಲ್ಲಿ ಸೇರ್ಪಡೆ-ಗೊಳಿಸಲು ಸ್ವಯಂ ಕ್ರಮವಹಿಸಬೇ-ಕು. ನ್ಯಾಯಯುತ, ಪಾರದರ್ಶಕ ಚುನಾವಣೆ ನಡೆಸಬೇಕು ಎಂದು ಆಗ್ರಹಿಸಿದ್ದಾರೆ.

₹2.40 ಕೋಟಿ ವೆಚ್ಚದ ಕಾಮಗಾರಿಗಳಿಗೆ ಚಾಲನೆ



ಯಲಹಂಕ: ಉಪನಗರ ಹಾಗೂ ಅಟ್ಟೂರು ವಾರ್ಡ್ ವ್ಯಾಪ್ತಿಯ ಬಡಾವಣೆಗಳಲ್ಲಿ ₹ 2.40 ಕೋಟಿ ವೆಚ್ಚದಲ್ಲಿ ಕೈಗೊಂಡಿರುವ ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ಶಾಸಕ ಎಸ್.ಆರ್.ವಿಶ್ವನಾಥ್ ಚಾಲನೆ ನೀಡಿದರು. ಪೂರ್ಣಗೊಂಡಿರುವ ಕಾಮಗಾರಿಗಳನ್ನು ಉದ್ಘಾಟಿಸಿದರು.

ನ್ಯಾಯಾಂಗ ಬಡಾವಣೆ ಮತ್ತು ಉಪನಗರದ ಶಂಕರ್‌ನಾಗ್ ಉದ್ಯಾನ ಬಳಿಯ ರಸ್ತೆಗಳ ಅಭಿವೃದ್ಧಿ ಕಾಮಗಾರಿಗೆ ಚಾಲನೆ ನೀಡಲಾಯಿತು. ನೂತನ ಅಂಬೇಡ್ಕರ್ ಭವನ ಮತ್ತು ಶೌಚಾಲಯಗಳನ್ನು ಉದ್ಘಾಟಿಸಲಾಯಿತು. ಅಟ್ಟೂರು ಮತ್ತು ಎಂ.ಎಸ್.ಪಾಳ್ಯದಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರಗಳ ದುರಸ್ತಿ ಕಾಮಗಾರಿಗಳಿಗೆ ಶಂಕುಸ್ಥಾಪನೆ ಮಾಡಲಾಯಿತು.

ಪಾಲಿಕೆ ಮಾಜಿ ಸದಸ್ಯರಾದ ಎಂ. ಮುನಿರಾಜು, ಎಂ. ಸತೀಶ್, ಬಿಜೆಪಿ ಮುಖಂಡರಾದ ಡಾ. ಶಶಿಕುಮಾರ್, ಎ.ಸಿ. ಮುನಿಕೃಷ್ಣಪ್ಪ, ಎಸ್. ಸೋಮಶೇಖರ್, ಚಂದ್ರೇಗೌಡ, ನಟರಾಜ್, ವಸಂತ್, ಪವನ್, ಬಿಬಿಎಂಪಿ ಕಾರ್ಯನಿರ್ವಾಹಕ ಎಂಜಿನಿಯರ್ ಸುಧಾಕರ ರೆಡ್ಡಿ, ಸಹಾಯಕ ಕಾರ್ಯ ನಿರ್ವಾಹಕ ಎಂಜಿನಿಯರ್‌ಗಳಾದ ನಂದೀಶ್, ಮೋಹನ್ ಇದ್ದರು.

ಶೂನ್ಯ ತ್ಯಾಜ್ಯ ಪರಿಸರಕ್ಕೆ ಇ-ಪಾರ್ಕ್

ಆನೇಕಲ್ : ತಾಲ್ಲೂಕಿನ ಎಲೆಕ್ಟ್ರಾನಿಕ್‌ಸಿಟಿಯಲ್ಲಿ ಎಲೆಕ್ಟ್ರಾನಿಕ್‌ಸಿಟಿ ಇಂಡಸ್ಟ್ರಿಯಲ್ ಟೌನ್‌ಶಿಪ್ ಅಥಾರಿಟಿಯಿಂದ ನಿರ್ಮಿಸಿರುವ ತ್ಯಾಜ್ಯ ವಿಲೇವಾರಿ ಘಟಕವನ್ನು ಎಲ್ಸಿಟಾ ಮುಖ್ಯಸ್ಥ ವಿ.ವೀರಪ್ಪನ್ ಅವರು ಉದ್ಘಾಟಿಸಿದರು.

ಎಲ್ಸಿಟಾ ಅಧ್ಯಕ್ಷ ವಿ.ವೀರಪ್ಪನ್ ಮಾತನಾಡಿ, ಎಲೆಕ್ಟ್ರಾನಿಕ್‌ಸಿಟಿ ಮತ್ತು ಸುತ್ತಮುತ್ತಲಿನ ಪ್ರದೇಶದಲ್ಲಿ ಶೂನ್ಯ ತ್ಯಾಜ್ಯ ವಾತಾವರಣವನ್ನು ನಿರ್ಮಿಸುವ ನಿಟ್ಟಿನಲ್ಲಿ ಎಲ್ಸಿಟಾ ಇ-ಪಾರ್ಕ್‌ನ್ನು ಸ್ಥಾಪಿಸಿದೆ. 16 ಟನ್‌ನಷ್ಟು ತ್ಯಾಜ್ಯ ವಸ್ತುಗಳನ್ನು ಮರುಬಳಕೆ ಮಾಡಲು ಅವಶ್ಯಕವಾದ ಯಂತ್ರಗಳು ಈ ಪಾರ್ಕ್‌ನಲ್ಲಿವೆ ಎಂದು ತಿಳಿಸಿದರು.



ಬಾನಲ್ಲಿ ಬಣ್ಣದ ಬಿಲ್ಲು ಬೆಂಗಳೂರಿನ ಅರಮನೆ ಮೈದಾನದ ಬಳಿಯ ಆಗಸದಲ್ಲಿ ಮೋಡಗಳ ಮಧ್ಯೆ ಗುರುವಾರ ಮೂಡಿದ ಕಾಮನಬಿಲ್ಲಿನ ಚಿತ್ತಾರ –ಪ್ರಜಾವಾಣಿ ಚಿತ್ರ/ಕಿಶೋರ್ ಕುಮಾರ್ ಬೋಳಾರ್

ಮಹಿಳೆ ಮೇಲೆ ಚಿರತೆ ದಾಳಿ

ಪ್ರಜಾವಾಣಿ ವಾರ್ತೆ

ದಾಬಸ್ ಪೇಟೆ: ಶಿವಗಂಗೆ ಬೆಟ್ಟದ ತಪ್ಪಲಿನ ಕಂಬಾಳು ಗೊಲ್ಲರಹಟ್ಟಿಯಲ್ಲಿ ಬುಧವಾರ ಮಹಿಳೆಯೊಬ್ಬರ ಮೇಲೆ ಚಿರತೆ ದಾಳಿ ನಡೆಸಿದ್ದು, ಅದೃಷ್ಟವಶಾತ್ ಮಹಿಳೆ ಪ್ರಾಣಾಪಾಯದಿಂದ ಪಾರಾಗಿದ್ದಾರೆ.

ಅಮ್ಮಯ್ಯ (55) ಚಿರತೆ ದಾಳಿಗೆ ಒಳಗಾದವರು. ಗಾಯಗೊಂಡಿದ್ದ ಅವರಿಗೆ ಚಿಕಿತ್ಸೆ ಕೊಡಿಸಲಾಗಿದೆ. ಈ ಘಟನೆಯಿಂದ ಹೋಬಳಿಯ ಜನ ಭಯಭೀತರಾಗಿದ್ದಾರೆ.

'ಸಮೀಪದ ತೊರೆಹಳ್ಳದ ಪಕ್ಕದಲ್ಲಿ ಎಂದಿನಂತೆ ಹಸು, ಮೇಕೆಗಳನ್ನು ಮೇಯಿಸುತಿದ್ದೆ. ಏಕಾಏಕಿ ಚಿರತೆ ಮೇಕೆಗಳ ಮೇಲೆ ದಾಳಿ ನಡೆಸಿತು. ಮೇಕೆಗಳು ತಪ್ಪಿಸಿಕೊಂಡು ಓಡಿ ಹೋದವು. ಆಗ ಚಿರತೆ ನನ್ನ ಮೇಲೆ ದಾಳಿ ಮಾಡಿತು. ಗಾಬರಿಗೊಂಡು ಜೋರಾಗಿ ಕೂಗಿದೆ. ಅಕ್ಕಪಕ್ಕದ ಜಮೀನುಗಳಲ್ಲಿದ್ದ ರೈತರು ಕೂಗುತ್ತಾ ಓಡಿ ಬಂದರು. ಚಿರತೆ ಓಡಿಹೋಯಿತು. ಜನ ಬರುವುದು ತಡವಾಗಿದ್ದರೆ ನನ್ನ ಪ್ರಾಣ ಉಳಿಯುತ್ತಿರಲಿಲ್ಲ' ಎಂದು ಚಿರತೆ ದಾಳಿಯ ಬಗ್ಗೆ ಅಮ್ಮಯ್ಯ ವಿವರಿಸಿದರು.

ನೆಲಮಂಗಲ ತಾಲ್ಲೂಕಿನ, ಸೋಂಪುರ ಹೋಬಳಿಯಲ್ಲಿ ಚಿರತೆ ಹಾವಳಿ ದಿನೇ ದಿನೇ ಹೆಚ್ಚುತ್ತಿದ್ದು, ಚಿರತೆ ಓಡಾಡುವ ದೃಶ್ಯಗಳು ಸಿಸಿಟಿವಿ ಕ್ಯಾಮೆರಾದಲ್ಲಿ ಸೆರೆಯಾಗಿವೆ. ಈ ಬಗ್ಗೆ ಹಲವು ಬಾರಿ ಅರಣ್ಯ ಅಧಿಕಾರಿಗಳಿಗೆ ದೂರು ನೀಡಿದ್ದರು ಪ್ರಕರಣವನ್ನು ಗಂಭೀರವಾಗಿ ಪರಿಗಣಿಸುತ್ತಿಲ್ಲ ಎಂದು ಸಾರ್ವಜನಿಕರು ದೂರುತ್ತಾರೆ.



ಚಿರತೆ ಸೆರೆ ಹಿಡಿಯಲು ಬೋನು ಇಟ್ಟ ಅರಣ್ಯ ಇಲಾಖೆ

> **ಚಿರತೆ ಸಮಸ್ಯೆಗೆ ಶಾಶ್ವತ ಪರಿಹಾರ ಕಂಡುಕೊಳ್ಳುವಂತೆ ಅರಣ್ಯ ಅಧಿಕಾರಿಗಳಿಗೆ ಸೂಚಿಸಲಾಗಿದೆ. ಗಾಯಗೊಂಡ ಮಹಿಳೆಗೆ ಸೂಕ್ತ ಪರಿಹಾರ ಒದಗಿಸುವ ಪ್ರಯತ್ನ ಮಾಡಲಾಗುವುದು**
> **ಎನ್. ಶ್ರೀನಿವಾಸ್,** ಶಾಸಕರು, ನೆಲಮಂಗಲ

> **ಕಾಡಂಚಲ್ಲಿ ಮಹಿಳೆಯ ಮನೆ ಇದ್ದು, ಚಿರತೆ ದಾಳಿ ಮಾಡಿದ ಸ್ಥಳವನ್ನು ಪರಿಶೀಲಿಸಿದ್ದೇವೆ. ಮಹಿಳೆಯನ್ನು ಭೇಟಿ ಮಾಡಿ ಆರೋಗ್ಯ ವಿಚಾರಿಸಿದ್ದೇವೆ. ಚಿರತೆ ಉಗುರಿನಿಂದ ಗಾಯವಾಗಿದ್ದು, ಚಿರತೆ ಸೆರೆ ಹಿಡಿಯಲು ಬೋನು ಇಟ್ಟಿದ್ದೇವೆ**
> **ಎಸ್. ಶ್ರೀಧರ್,** ತಾಲ್ಲೂಕು ವಲಯ ಅರಣ್ಯ ಅಧಿಕಾರಿ, ನೆಲಮಂಗಲ

481 ಹೊಸ ಶೌಚಾಲಯ ನಿರ್ಮಿಸಲು ಬಿಬಿಎಂಪಿ ಆಯುಕ್ತ ತುಷಾರ್ ಗಿರಿನಾಥ್ ಸೂಚನೆ

ಸಾರ್ವಜನಿಕ ಶೌಚಾಲಯ ನಿರ್ವಹಣೆಗೆ ಸಮಿತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಬಿಎಂಪಿ ವ್ಯಾಪ್ತಿಯಲ್ಲಿ ಸಾರ್ವಜನಿಕ ಶೌಚಾಲಯ ನಿರ್ವಹಣೆ ಮತ್ತು ಹೊಸದಾಗಿ ನಿರ್ಮಿಸಲು ಸಮಗ್ರ ಯೋಜನೆ ರೂಪಿಸಲು ಮುಖ್ಯ ಆಯುಕ್ತರ ನೇತೃತ್ವದಲ್ಲಿ ಸಮಿತಿ ರಚಿಸಲಾಗಿದೆ.

ಹೈಕೋರ್ಟ್ ನಿರ್ದೇಶನದಂತೆ, ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ನೇತೃತ್ವದಲ್ಲಿ ನಡೆದ ಸಭೆಯಲ್ಲಿ ಈ ಸಮಿತಿ ರಚಿಸಲಾಗಿದೆ. ಶೌಚಾಲಯಗಳನ್ನು ನಿರ್ಮಿಸಲು ಜನದಟ್ಟಣೆ ಪ್ರದೇಶ, ಮಾರುಕಟ್ಟೆಗಳು ಸೇರಿದಂತೆ ಪ್ರಮುಖ ಸ್ಥಳಗಳನ್ನು ಗುರುತಿಸಿ ಕೂಡಲೇ ಪಟ್ಟಿ ನೀಡಲು ವಲಯ ಆಯುಕ್ತರಿಗೆ ಸೂಚನೆ ನೀಡಿದರು.

ನಗರದಲ್ಲಿ 255 ಸ್ಥಳಗಳಲ್ಲಿ ಶೌಚಾಲಯಗಳನ್ನು ನಿರ್ಮಿಸಲು ಸ್ಥಳಗಳನ್ನು ಗುರುತಿಸಲಾಗಿದೆ. ಶೌಚಾಲಯ ನಿರ್ಮಿಸುವ ಸ್ಥಳ ವಿಶಾಲವಾಗಿರಬೇಕಿದ್ದು, ಕೇಂದ್ರ ಪ್ರದೇಶದಲ್ಲಿರಬೇಕು ಎಂದು ಹೇಳಿದ ಅವರು, ಹೊಸದಾಗಿ 46 ಶೌಚಾಲಯಗಳನ್ನು ನಿರ್ಮಾಣ ಮಾಡಲು ಅಧಿಕಾರಿಗಳಿಗೆ ಸೂಚಿಸಿದರು.

ಸ್ವಚ್ಛ ಭಾರತ್, ಶುಭ್ರ ಬೆಂಗಳೂರು, ನಗರೋತ್ಥಾನ ಮತ್ತು ಬಿಬಿಎಂಪಿ ಅನುದಾನಗಳನ್ನು ಸಾರ್ವಜನಿಕ ಶೌಚಾಲಯ ಮತ್ತು ಸಮುದಾಯ ಶೌಚಾಲಯಗಳ ನಿರ್ಮಾಣಕ್ಕೆ ತುರ್ತಾಗಿ ಬಳಸಿಕೊಳ್ಳಬೇಕು. ಶೌಚಾಲಯ ಬಳಕೆಗೆ ಶುಲ್ಕ ವಸೂಲಿ ಮಾಡಬಹುದು. ಸಾರ್ವಜನಿಕ-ಖಾಸಗಿ ಸಹಭಾಗಿತ್ವ (ಪಿಪಿಪಿ) ಮಾದರಿಯಲ್ಲಿ ಶೌಚಾಲಯ ನಿರ್ಮಿಸಲು ಸಮಿತಿ ಮುಂದೆ ಪ್ರಸ್ತಾಪ ಮಂಡಿಸಿ, ಸಮ್ಮತಿ ಪಡೆಯಬೇಕು ಎಂದರು.

'ಶಿ' ಟಾಯ್ಲೆಟ್ ನಿರ್ಮಾಣ: ನಗರದಲ್ಲಿ ಮಹಿಳೆಯರು ಹೆಚ್ಚಾಗಿ ಸಂಚರಿಸುವ/ ಓಡಾಡುವ ಸ್ಥಳಗಳನ್ನು ಗುರುತಿಸಿ 100 ಮಹಿಳಾ ಶೌಚಾಲಯ (ಶಿ ಟಾಯ್ಲೆಟ್) ಗಳನ್ನು ನಿರ್ಮಾಣ ಮಾಡಬೇಕು ಎಂದು ತುಷಾರ್ ಗಿರಿನಾಥ್ ಸೂಚಿಸಿದರು.

ಇಂದಿರಾ ಕ್ಯಾಂಟೀನ್ ಶೌಚಾಲಯ ಸಾರ್ವಜನಿಕರಿಗೆ: ನಗರದಲ್ಲಿರುವ ಇಂದಿರಾ ಕ್ಯಾಂಟೀನ್‌ಗಳಲ್ಲಿ ನಿರ್ಮಿಸಿರುವ ಶೌಚಾಲಯಗಳನ್ನು ಸಾರ್ವಜನಿಕರ ಬಳಕೆಗೆ ಅವಕಾಶ ನೀಡಬೇಕು. ಈ ಸಂಬಂಧ ಆದೇಶ ಹೊರಡಿಸಲು ಸೂಚನೆ ನೀಡಲಾಯಿತು.

ಸಭೆಯಲ್ಲಿ ಘನತ್ಯಾಜ್ಯ ವಿಭಾಗದ ವಿಶೇಷ ಆಯುಕ್ತ ಡಾ. ಕೆ. ಹರೀಶ್ ಕುಮಾರ್, ಕಲ್ಯಾಣ ವಿಶೇಷ ಆಯುಕ್ತ ರೆಡ್ಡಿ ಶಂಕರ ಬಾಬು, ಎಲ್ಲಾ ವಲಯ ಆಯುಕ್ತರು, ಘನತ್ಯಾಜ್ಯ ವಿಭಾಗದ ಜಂಟಿ ಆಯುಕ್ತೆ ಪ್ರತಿಭಾ, ಬಿಎಸ್‌ಡಬ್ಲ್ಯುಎಂಎಲ್ ಮುಖ್ಯ ಪ್ರಧಾನ ವ್ಯವಸ್ಥಾಪಕ ಬಸವರಾಜ್ ಕಬಾಡೆ ಇದ್ದರು.

ಸಮಿತಿಯ ವಿವರ: ಶೌಚಾಲಯ ನಿರ್ಮಾಣ, ನಿರ್ವಹಣೆ ಸಮಿತಿ: ಅಧ್ಯಕ್ಷ- ಮುಖ್ಯ ಆಯುಕ್ತ, ಸದಸ್ಯರು- ಘನತ್ಯಾಜ್ಯ ನಿರ್ವಹಣೆ ವಿಭಾಗದ ವಿಶೇಷ ಆಯುಕ್ತ, ಕಲ್ಯಾಣ ವಿಭಾಗದ ವಿಶೇಷ ಆಯುಕ್ತ, ಎಂಟು ವಲಯಗಳ ಆಯುಕ್ತರು, ಪ್ರಧಾನ ಎಂಜಿನಿಯರ್, ಘನತ್ಯಾಜ್ಯ ನಿರ್ವಹಣೆ ವಿಭಾಗದ ಮುಖ್ಯ ಎಂಜಿನಿಯರ್, ಮಹಿಳಾ ಸದಸ್ಯರು (ಗುರುತಿಸಲಾಗುವುದು), ಮುಖ್ಯ ಆರೋಗ್ಯಾಧಿಕಾರಿ, ಕಲ್ಯಾಣ ವಿಭಾಗದ ಉಪ ಆಯುಕ್ತ, ಸಕ್ರಿಯ ಎನ್‌ಜಿಒದಿಂದ ಮಹಿಳಾ ಪ್ರತಿನಿಧಿ. ಸದಸ್ಯ ಕಾರ್ಯದರ್ಶಿ- ಘನತ್ಯಾಜ್ಯ ನಿರ್ವಹಣೆ ವಿಭಾಗದ ಜಂಟಿ ಆಯುಕ್ತರು.

ಯಾರಿಗೆ ಯಾವ ಜವಾಬ್ದಾರಿ?

- **ಪ್ರಧಾನ ಎಂಜಿನಿಯರ್:** ಪಾದಚಾರಿ ಮಾರ್ಗದಲ್ಲಿ ಸಾರ್ವಜನಿಕ ಶೌಚಾಲಯ ನಿರ್ವಹಣ ಹಾಗೂ ನಿರ್ಮಾಣಕ್ಕೆ ಅಡೆತಡೆಗಳನ್ನು ನಿವಾರಿಸುವುದು.
- **ವಿಶೇಷ ಆಯುಕ್ತ (ಕಲ್ಯಾಣ):** ಶೌಚಾಲಯಗಳನ್ನು ಆಗಾಗ್ಗೆ ತಪಾಸಣೆ ನಡೆಸಿ, ಮಹಿಳೆಯರಿಗೆ ಹೆಚ್ಚಿನ ಸೌಲಭ್ಯ ಕಲ್ಪಿಸುವುದು.
- **ಮುಖ್ಯ ಎಂಜಿನಿಯರ್ (ರಸ್ತೆ ಮೂಲಸೌಕರ್ಯ):** ಟಿಇಸಿ ವಿಭಾಗದ ಮೂಲಕ ಶೌಚಾಲಯಗಳಿಗೆ ನಾಮಫಲಕ (ಸೈನೇಜ್ ಬೋರ್ಡ್) ಅಳವಡಿಸುವುದು.
- **ಮುಖ್ಯ ಆರೋಗ್ಯಾಧಿಕಾರಿ:** ಶೌಚಾಲಯಗಳ ಸ್ವಚ್ಛತೆ ಮತ್ತು ಸೂಕ್ತ ಉಪಕರಣಗಳ ಲಭ್ಯತೆ, ಸೌಲಭ್ಯಗಳನ್ನು ಪರಿಶೀಲಿಸುವುದು.
- **ಘನತ್ಯಾಜ್ಯ ಮುಖ್ಯ ಎಂಜಿನಿಯರ್:** ಶೌಚಾಲಯಗಳ ನಿರ್ಮಾಣಕ್ಕೆ ಜಾಗಗಳನ್ನು ಗುರುತಿಸುವುದಕ್ಕೆ ವಲಯ ಜಂಟಿ ಆಯುಕ್ತರೊಂದಿಗೆ ಸಮನ್ವಯ ಸಾಧಿಸುವುದು.

ಇ ಶೌಚಾಲಯ ಸ್ಥಗಿತ!

ನಗರದಲ್ಲಿ 229 ಇ-ಶೌಚಾಲಯಗಳಿದ್ದು, ನಿರ್ವಹಣೆ ಇಲ್ಲದೆ ಅವುಗಳನ್ನು ಸ್ಥಗಿತಗೊಳಿಸಲಾಗಿದೆ. ನಿರ್ವಹಣೆಗೆ ಟೆಂಡರ್ ಆಹ್ವಾನಿಸಿದ್ದರೂ ಯಾರೂ ಮುಂದೆ ಬಂದಿಲ್ಲ. ಎರಡನೇ ಬಾರಿ ಟೆಂಡರ್ ಕರೆಯಲಾಗಿದೆ. ಇ-ಶೌಚಾಲಯಗಳ ನಿರ್ವಹಣೆಗೆ ಶೀಘ್ರ ಕ್ರಮ ಕೈಗೊಳ್ಳಬೇಕು. ಬಸ್ ತಂಗುದಾಣಗಳ ಬಳಿ ಇ-ಶೌಚಾಲಯಗಳನ್ನು ಅಳವಡಿಸು ಸಾಧ್ಯವೇ ಎಂಬುದನ್ನು ಪರಿಶೀಲಿಸಿ ಕ್ರಮ ಕೈಗೊಳ್ಳಬೇಕು ಎಂದು ತುಷಾರ್ ಗಿರಿನಾಥ್ ಅವರು ಸಭೆಯಲ್ಲಿ ಅಧಿಕಾರಿಗಳಿಗೆ ಸೂಚಿಸಿದರು.

ಹೊಸ ಶೌಚಾಲಯ ನಿರ್ಮಾಣ ಪ್ರಸ್ತಾವ

ವರ್ಗ	ಸಂಖ್ಯೆ	ಸಾಮರ್ಥ್ಯ	ಸ್ಥಿತಿ
ಪರಿಸರ ಸ್ನೇಹಿ ವಾಸನೆಮುಕ್ತ ಪ್ರೀಕಾಸ್ಟ್ ಶೌಚಾಲಯ- ಹಂತ-1	15	331	ಕಾಮಗಾರಿ ಪ್ರಗತಿಯಲ್ಲಿದೆ
ಪರಿಸರ ಸ್ನೇಹಿ ವಾಸನೆಮುಕ್ತ ಪ್ರೀಕಾಸ್ಟ್ ಶೌಚಾಲಯ- ಹಂತ-2	46	460	ಸಮ್ಮತಿ ಪತ್ರ ಬಾಕಿ
ಸಾರ್ವಜನಿಕ ಶೌಚಾಲಯ	225	1,020	ಟೆಂಡರ್ ಕರೆಯಬೇಕಿದೆ
ಸಮುದಾಯ ಶೌಚಾಲಯ	15	75	ಟೆಂಡರ್ ಹಂತದಲ್ಲಿದೆ
ಮಹಿಳೆಯರಿಗೆ 'ಶಿ ಟಾಯ್ಲೆಟ್'	100	400	ಟೆಂಡರ್ ಮತ್ತೆ ಆಹ್ವಾನ
ಪೌರಕಾರ್ಮಿಕರ ಶೌಚಾಲಯ	50	100	ಸಮ್ಮತಿ ಪತ್ರ ನೀಡಲಾಗಿದೆ
ಒಟ್ಟು	481	2,386	

ನಗರದಲ್ಲಿರುವ ಸಾರ್ವಜನಿಕರ ಶೌಚಾಲಯಗಳ ವಿವರ

ವರ್ಗ	ಸಂಖ್ಯೆ	ಸಾಮರ್ಥ್ಯ
ಸಾರ್ವಜನಿಕ ಶೌಚಾಲಯ	360	2,160
ಸಮುದಾಯ ಶೌಚಾಲಯ	6	60
ಇ-ಶೌಚಾಲಯ	229	229
ಮಾಡ್ಯುಲರ್ ಶೌಚಾಲಯ	17	34
ಪರಿಸರ ಸ್ನೇಹಿ ಪ್ರೀಕಾಸ್ಟ್ ಶೌಚಾಲಯ	10	120
ಪೌರಕಾರ್ಮಿಕರಿಗೆ ಶೌಚಾಲಯ	181	362
ಒಟ್ಟು	803	2,965

ಅಪಘಾತ: ಸ್ಥಳದಲ್ಲೇ ದಂಪತಿ ಸಾವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ನೈಸ್ ರಸ್ತೆಯ ವಜ್ರಮುನೇಶ್ವರ ಕೇಳಸೇತುವೆ ಬಳಿ ಕ್ಯಾಂಟರ್ ವಾಹನ ಹಾಗೂ ಬೈಕ್ ನಡುವೆ ಗುರುವಾರ ಸಂಭವಿಸಿದ ಅಪಘಾತದಲ್ಲಿ, ದಂಪತಿ ಸ್ಥಳದಲ್ಲೇ ಮೃತಪಟ್ಟಿದ್ದಾರೆ.

ವಿಜಯನಗರದ ಹೊಸಹಳ್ಳಿ ನಿವಾಸಿಗಳಾದ ಬೈಯಣ್ಣ(55) ಮತ್ತು ನಿರ್ಮಲ(44) ಮೃತಪಟ್ಟವರು.

ಗುರುವಾರ ಮಧ್ಯಾಹ್ನ ಹಾರಗದ್ದೆ ಎಂಬಲ್ಲಿ ನಡೆದಿದ್ದ ಸಂಬಂಧಿಕರ ಗೃಹ ಪ್ರವೇಶ ಕಾರ್ಯಕ್ರಮ ಮುಗಿಸಿ ವಾಪಸ್ ಬರುವಾಗ ಈ ಅಪಘಾತ ನಡೆದಿದೆ.

'ದಂಪತಿ ತಮ್ಮ ಹೋಂಡಾ ಆಕ್ಟಿವಾ ವಾಹನದಲ್ಲಿ ನೈಸ್ ರಸ್ತೆಯ ಮೂಲಕ ವಿಜಯನಗರಕ್ಕೆ ಬರುತ್ತಿದ್ದರು. ಹಿಂದಿನಿಂದ ಬಂದ ಕ್ಯಾಂಟರ್ ವಾಹನ ಡಿಕ್ಕಿಯಿಂದ ಈ ಘಟನೆ ನಡೆದಿದೆ' ಎಂದು ಪೊಲೀಸರು ತಿಳಿಸಿದರು.

ಘಟನೆ ಬಳಿಕ ಕ್ಯಾಂಟರ್ ವಾಹನ ಚಾಲಕ ಸ್ಥಳದಲ್ಲೇ ವಾಹನ ಬಿಟ್ಟು ಪರಾರಿಯಾಗಿದ್ದಾನೆ.

ತಲಘಟ್ಟಪುರ ಸಂಚಾರ ಠಾಣೆ ಪೊಲೀಸರು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿದರು. ಮೃತದೇಹಗಳನ್ನು ಮರಣೋತ್ತರ ಪರೀಕ್ಷೆಗಾಗಿ ಕಿಮ್ಸ್ ಆಸ್ಪತ್ರೆಗೆ ರವಾನಿಸಲಾಗಿದೆ.

ಕ್ಯಾಂಟರ್ ಚಾಲಕನ ಅತಿಯಾದ ವೇಗ ಹಾಗೂ ನಿರ್ಲಕ್ಷ್ಯದ ಚಾಲನೆಯೇ ಅಪಘಾತಕ್ಕೆ ಕಾರಣ ಎಂಬುದು ಮೇಲ್ನೋಟಕ್ಕೆ ಕಂಡು ಬಂದಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ನಿವೃತ್ತ ಪೊಲೀಸ್ ಕಮಿಷನರ್ ಹೆಸರಿನಲ್ಲಿ ನಕಲಿ ಫೇಸ್‌ಬುಕ್

ಬೆಂಗಳೂರು: ನಿವೃತ್ತ ಪೊಲೀಸ್ ಆಯುಕ್ತ ಜ್ಯೋತಿ ಪ್ರಕಾಶ್ ಮಿರ್ಜಿ ಅವರ ಭಾವಚಿತ್ರವನ್ನು ಸಾಮಾಜಿಕ ಜಾಲತಾಣದಲ್ಲಿ ಡೌನ್‌ಲೋಡ್ ಮಾಡಿಕೊಂಡು, ನಕಲಿ ಫೇಸ್‌ಬುಕ್ ಖಾತೆ ಸೃಷ್ಟಿಸಿರುವ ಸಂಬಂಧ ಸೈಬರ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಆರೋಪಿಗಳ ಪತ್ತೆಗೆ ಪೊಲೀಸರು ಕಾರ್ಯಾಚರಣೆ ಮುಂದುವರಿಸಿದ್ದಾರೆ. 'ಖಾತೆ ಸೃಷ್ಟಿಸಿ ಸಾರ್ವಜನಿಕರಿಗೆ ಕಳುಹಿಸಿ ಹಣ ಪಡೆದುಕೊಂಡಿದ್ದಾರೆ. ಯಾರೂ ಹಣ ನೀಡಬಾರದು. ಸೈಬರ್ ವಂಚಕರು ಈ ರೀತಿ ನಕಲಿ ಖಾತೆಗಳ ಸೃಷ್ಟಿಸಿ ಮೋಸ ಎಸಗುತ್ತಿದ್ದಾರೆ. ಜನರು ಎಚ್ಚರಿಕೆ ವಹಿಸುವಂತೆ' ಪೊಲೀಸರು ಮನವಿ ಮಾಡಿದ್ದಾರೆ.

₹1.50 ಕೋಟಿ ಮೌಲ್ಯದ ನಕಲಿ ಬಟ್ಟೆ ಜಪ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪ್ರತಿಷ್ಠಿತ ಕಂಪನಿಗಳ ಬ್ರ್ಯಾಂಡ್ ಹೆಸರಿನಲ್ಲಿ ನಕಲಿ ಬಟ್ಟೆ ಮಾರಾಟ ಮಾಡುತ್ತಿದ್ದ ಗೋದಾಮುಗಳ ಮೇಲೆ ದಾಳಿ ನಡೆಸಿರುವ ಸಿಸಿಬಿ ಪೊಲೀಸರು ₹1.50 ಕೋಟಿ ಮೌಲ್ಯದ ನಕಲಿ ಬಟ್ಟೆ ಜಪ್ತಿ ಮಾಡಿಕೊಂಡಿದ್ದಾರೆ.

ಬೊಮ್ಮನಹಳ್ಳಿ ಪೊಲೀಸ್ ಠಾಣೆ ವ್ಯಾಪ್ತಿಯ ಪಟೇಲ್ ಎಕ್ಸ್‌ಪರ್ಟ್ ಹಾಗೂ ಆರ್.ಬಿ.ಫ್ಯಾಷನ್ ಗೋದಾಮುಗಳ ಮೇಲೆ ದಾಳಿ ನಡೆಸಿದ ಪೊಲೀಸರು, ಒಟ್ಟು 6,500 ಬಟ್ಟೆಗಳನ್ನು ವಶಕ್ಕೆ ಪಡೆದುಕೊಂಡಿದ್ದಾರೆ.

ಗೋದಾಮು ಮಾಲೀಕ ಭರತ್ ಕುಮಾರ್ ಮತ್ತು ರಾಧಾ ಎಂಬುವವರನ್ನು ಬಂಧಿಸಲಾಗಿದೆ.

ಗ್ರಾಹಕರಿಗೆ ಲೆವಿಸ್, ಪೋಲೊ ಸೇರಿದಂತೆ ಪ್ರತಿಷ್ಠಿತ ಕಂಪನಿಗಳ ಬ್ಯಾಡ್ಜ್ ಬಳಸಿ ನಕಲಿ ಬಟ್ಟೆಗಳಿಗೆ ಅಂಟಿಸಿ ಮಾರಾಟ ಮಾಡುತ್ತಿದ್ದರು. ಈ ಮಾಹಿತಿ ಮೇರೆಗೆ ದಾಳಿ ನಡೆಸಲಾಯಿತು. ಸುಧಾಮನಗರ, ಎಸ್.ಆರ್. ನಗರ, ಮಾಗಡಿ ರಸ್ತೆ, ಬೇಗೂರು ಸೇರಿ ಇತರೆ ಗೋದಾಮುಗಳಲ್ಲಿ ಪ್ರತಿಷ್ಠಿತ ಬ್ರ್ಯಾಂಡ್ ಹೆಸರಿನಲ್ಲಿ ನಕಲಿ ಬಟ್ಟೆಗಳನ್ನು ಸಿದ್ಧ ಮಾಡಲಾಗುತ್ತಿತ್ತು ಎಂದು ಪೊಲೀಸರು ಹೇಳಿದರು.

ನಕಲಿ ಟೀ ಪುಡಿ: ಟಾಟಾ ಕಂಪನಿಯ ಟೀ ಪುಡಿಯನ್ನು ನಕಲಿ ಮಾಡಿ ಮಾರಾಟ ಮಾಡುತ್ತಿದ್ದ ಆರೋಪಿಯನ್ನು ಸಿಸಿಬಿ ಪೊಲೀಸರು ಬಂಧಿಸಿದ್ದಾರೆ.

ಶಿವಾಜಿನಗರ ನಿವಾಸಿ 34 ವರ್ಷದ ವ್ಯಕ್ತಿ ಬಂಧಿತ ಆರೋಪಿ.

ಆರೋಪಿ ಶಿವಾಜಿನಗರದ ಸ್ಟ್ರೀಟ್ ವಾಲ್ ಮಸೀದಿ ರಸ್ತೆಯಲ್ಲಿ ಟಾಟಾ ಕಂಪನಿಯ ಅಗ್ನಿ ಟೀ ಪುಡಿಯನ್ನು ನಕಲಿ ಮಾಡಿ, ಅಸಲಿ ಎಂದು ಮಾರಾಟ ಮಾಡುತ್ತಿದ್ದ. ಆರೋಪಿಯಿಂದ ₹ 1.26 ಲಕ್ಷ ಮೌಲ್ಯದ 1 ಕೆ.ಜಿ. 250 ಗ್ರಾಂ ಪ್ಯಾಕೆಟ್‌ಗಳಿರುವ ಒಟ್ಟು 450 ಕೆ.ಜಿ ಟೀ ಪುಡಿ ವಶಕ್ಕೆ ಪಡೆಯಲಾಗಿದೆ ಎಂದು ಸಿಸಿಬಿ ಪೊಲೀಸರು ಹೇಳಿದರು.

₹ 50 ಲಕ್ಷ ಮೌಲ್ಯದ ಮಾದಕ ವಸ್ತು ಜಪ್ತಿ

ಬೆಂಗಳೂರು: ಮಾರತ್‌ಹಳ್ಳಿ ಹಾಗೂ ಹೆಣ್ಣೂರು ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಮಾದಕ ವಸ್ತು ಮಾರಾಟ ಮಾಡುತ್ತಿದ್ದ ವಿದೇಶಿ ಪ್ರಜೆ ಸೇರಿದಂತೆ ಒಡಿಶಾದ ಇಬ್ಬರು ಆರೋಪಿಗಳನ್ನು ಸಿಸಿಬಿ ಮಾದಕ ದ್ರವ್ಯ ನಿಗ್ರಹ ದಳದ ಅಧಿಕಾರಿಗಳು ಬಂಧಿಸಿದ್ದಾರೆ.

ನೈಜಿರಿಯಾ ಮೂಲದ ಅಡಿಸೌಜಿ (30), ಒಡಿಶಾ ಮೂಲದ ರಾಕೇಶ್ ಕುಮಾರ್(26), ಲಕ್ಷ್ಮೀಧರ್ (23) ಬಂಧಿತರು.

ಬಂಧಿತ ಆರೋಪಿಗಳಿಂದ ₹50 ಲಕ್ಷ ಮೌಲ್ಯದ 180 ಗ್ರಾಂ ಎಂಡಿಎಂಎ ಕ್ರಿಸ್ಟಲ್, ಮಾದಕ ದ್ರವ್ಯ ತುಂಬಿದ 150 ಮಾತ್ರೆಗಳು, 15 ಕೆಜಿ ಗಾಂಜಾ ಜಪ್ತಿ ಮಾಡಿಕೊಳ್ಳಲಾಗಿದೆ.

ಮಾರತ್ತಹಳ್ಳಿ ಠಾಣೆ ವ್ಯಾಪ್ತಿಯಲ್ಲಿ ಆರೋಪಿಗಳಾದ ರಾಕೇಶ್ ಕುಮಾರ್ ಮತ್ತು ಲಕ್ಷ್ಮೀಧರ್ ಸುಮಾರು 6 ತಿಂಗಳ ಹಿಂದೆ ಬೆಂಗಳೂರಿಗೆ ಬಂದು ಪಾದಚಾರಿ ಮಾರ್ಗದಲ್ಲಿ ತಳ್ಳುವ ಗಾಡಿಯಲ್ಲಿ ತಿಂಡಿ-ತಿನಿಸುಗಳ ವ್ಯಾಪಾರ ಮಾಡಿಕೊಂಡಿದ್ದರು. ಬಳಿಕ ಸುಲಭವಾಗಿ ಹಣ ಸಂಪಾದನೆ ಮಾಡುವ ಸಲುವಾಗಿ ಒಡಿಶಾದಿಂದ ಕಡಿಮೆ ಬೆಲೆಗೆ ಗಾಂಜಾ ತಂದು ಸ್ಥಳೀಯ ಪರಿಚಯಸ್ಥ ಗ್ರಾಹಕರಿಗೆ ಹೆಚ್ಚಿನ ಬೆಲೆಗೆ ಮಾರಾಟ ಮಾಡಿ ಅಕ್ರಮ ಹಣ ಸಂಪಾದಿಸುತ್ತಿದ್ದರು. ಇವರಿಂದ 15 ಕೆ.ಜಿ ಗಾಂಜಾ ಜಪ್ತಿ ಮಾಡಿಕೊಳ್ಳಲಾಗಿದೆ ಎಂದು ಪೊಲೀಸರು ಹೇಳಿದರು.

ನೈಜಿರಿಯಾ ಮೂಲದ ಅಡಿಸೌಜಿ 2005ರಲ್ಲಿ ವ್ಯವಹಾರಿಕ ವೀಸಾ ಪಡೆದು ಭಾರತಕ್ಕೆ ಬಂದಿದ್ದು, ತನ್ನ ಪಾಸ್‌ಪೋರ್ಟ್ ಮತ್ತು ವೀಸಾ ಅವಧಿ ಮುಕ್ತಾಯವಾಗಿದ್ದರೂ ನಗರದಲ್ಲೇ ಅಕ್ರಮವಾಗಿ ನೆಲೆಸಿದ್ದ. ಬಳಿಕ ಮಾದಕ ವಸ್ತುಗಳ ಮಾರಾಟ ಪ್ರಕರಣದಲ್ಲಿ ಭಾಗಿಯಾಗಿದ್ದ. ಈತನಿಂದ ಮಾದಕ ವಸ್ತುಗಳನ್ನು ಜಪ್ತಿ ಮಾಡಿಕೊಳ್ಳಲಾಗಿದೆ ಎಂದು ತಿಳಿಸಿದರು.

6 ವರ್ಷದಲ್ಲಿ 250ಕ್ಕೂ ಹೆಚ್ಚು ಮಕ್ಕಳ ಮಾರಾಟ; ಜಾಲ ಸಕ್ರಿಯ

ಗಾರ್ಮೆಂಟ್ಸ್ ಕಾರ್ಮಿಕಳೀಗ ಸಿರಿವಂತೆ!

ಪ್ರಜಾವಾಣಿ ವಾರ್ತೆ


ಮಹಾಲಕ್ಷ್ಮೀ

ಬೆಂಗಳೂರು: ಮಕ್ಕಳ ಮಾರಾಟ ಪ್ರಕರಣದ ತನಿಖೆ ಚುರುಕುಗೊಳಿಸಿರುವ ಕೇಂದ್ರ ಅಪರಾಧ ವಿಭಾಗದ ಪೊಲೀಸರಿಗೆ ಮಹತ್ವದ ಮಾಹಿತಿ ಲಭಿಸಿದ್ದು, ಆರೋಪಿಗಳು ಆರು ವರ್ಷಗಳಲ್ಲಿ 250ಕ್ಕೂ ಹೆಚ್ಚು ಮಕ್ಕಳನ್ನು ಮಾರಾಟ ಮಾಡಿರುವುದು ಪತ್ತೆಯಾಗಿದೆ.

ಬೆಂಗಳೂರಿನ ಮಹಾಲಕ್ಷ್ಮಿ ಲೇಔಟ್ ನಿವಾಸಿ ಮಹಾಲಕ್ಷ್ಮಿ, ನಕಲಿ ವೈದ್ಯ ಕೆವಿನ್, ಆರ್.ಟಿ.ನಗರದ ನಿವಾಸಿ ರಮ್ಯಾ, ತಮಿಳುನಾಡಿನ ಈರೋಡ್ ಕಣ್ಣನ್ ರಾಮಸ್ವಾಮಿ, ಆತನ ಸಹಚರರಾದ ಗೋಮತಿ, ಹೇಮಲತಾ, ರಾಧಾ, ಸುಹಾಸಿನಿ, ಶರಣ್ಯ, ಮುರುಗೇಶ್ವರಿ ಅವರನ್ನು ಕಸ್ಟಡಿಗೆ ಪಡೆದುಕೊಂಡಿರುವ ಸಿಸಿಬಿ ಪೊಲೀಸರು ವಿಚಾರಣೆ ಮುಂದುವರಿಸಿದ್ದಾರೆ.

ವಿಚಾರಣೆ ವೇಳೆ ಆರೋಪಿಗಳು ಕರ್ನಾಟಕ, ತಮಿಳುನಾಡು ಸೇರಿದಂತೆ ಇತರೆ ರಾಜ್ಯಗಳಿಗೆ ಮಕ್ಕಳನ್ನು ಕಳ್ಳಸಾಗಣೆ ಮಾಡಿ ಮಾರಾಟ ನಡೆಸಿರುವುದು ಬಯಲಾಗಿದೆ.

'ಕರ್ನಾಟಕದಲ್ಲಿ ಆರು ವರ್ಷಗಳಲ್ಲಿ 60 ಮಕ್ಕಳನ್ನು ಮಾರಾಟ ಮಾಡಿದ್ದಾರೆ. ಅದರಲ್ಲಿ 10 ಮಕ್ಕಳನ್ನು ಖರೀದಿಸಿದ ದಂಪತಿಗಳ ವಿಳಾಸ ಪತ್ತೆಯಾಗಿದೆ. ಉಳಿದ ಮಕ್ಕಳನ್ನು ಯಾರಿಗೆ ಮಾರಾಟ ಮಾಡಿದ್ದಾರೆ ಎಂಬುದನ್ನು ಪತ್ತೆಹಚ್ಚಲಾಗುತ್ತಿದೆ. ತಮಿಳುನಾಡಿನ ನಾಲ್ಕು ಆಸ್ಪತ್ರೆಗಳ ವೈದ್ಯರ ಸಹಕಾರದಿಂದ ಅದೇ ರಾಜ್ಯದಲ್ಲಿ 190 ಮಕ್ಕಳನ್ನು ಮಾರಾಟ ಮಾಡಿದ್ದಾರೆ' ಎಂದು ಪೊಲೀಸರು ಹೇಳಿದರು.

ಮಹಾಲಕ್ಷ್ಮಿಯೇ ಸೂತ್ರಧಾರಿ: 'ಬೆಂಗಳೂರಿನ ಮಹಾಲಕ್ಷ್ಮಿಯೇ ಈ ಜಾಲದ ಪ್ರಮುಖ ಆರೋಪಿ. ಈಕೆಯೇ ಇಡೀ ಜಾಲವನ್ನು ನಿಯಂತ್ರಿಸುತ್ತಿದ್ದಳು. ಮಕ್ಕಳು ಬೇಕಾದ ದಂಪತಿಗಳನ್ನು ಪತ್ತೆಹಚ್ಚುವುದು, ಮಕ್ಕಳನ್ನು ಮಾರಾಟ ಮಾಡಿದ ಮೇಲೆ ಹಣ ಪಡೆಯುವುದು ಸೇರಿದಂತೆ ಹಲವು ಕೃತ್ಯಗಳನ್ನು ಮಹಾಲಕ್ಷ್ಮಿ ನಿಭಾಯಿಸುತ್ತಿದ್ದಳು. ಮಕ್ಕಳ ಮಾರಾಟದ ದರವನ್ನು ಈಕೆಯೇ ಅಂತಿಮಗೊಳಿಸುತ್ತಿದ್ದಳು. ವಾಟ್ಸ್‌ಆ್ಯಪ್ ಮೂಲಕ ಮಗುವಿನ ಫೋಟೊವನ್ನು ದಂಪತಿಗೆ ಕಳುಹಿಸುತ್ತಿದ್ದಳು. ಮಗುವಿನ ಬಣ್ಣ, ಲಿಂಗ ಆಧಾರದ ಮೇಲೆ ದರ ನಿಗದಿ ಮಾಡಲಾಗುತ್ತಿತ್ತು'

'ಗಂಡು ಮಗುವಿಗೆ ₹ 8 ಲಕ್ಷದಿಂದ ₹10 ಲಕ್ಷ, ಹೆಣ್ಣು ಮಗುವಿಗೆ ₹ 4 ಲಕ್ಷದಿಂದ ₹5 ಲಕ್ಷವನ್ನು ಪಡೆದು ಮಾರಾಟ ಮಾಡಿದ್ದಾರೆ. ಆರೋಪಿಗಳನ್ನು ಬ್ಯಾಂಕ್ ಖಾತೆಗಳನ್ನು ಪರಿಶೀಲನೆ ನಡೆಸಲಾಗುತ್ತಿದೆ. ದೊಡ್ಡ ಪ್ರಮಾಣದಲ್ಲಿ ಹಣದ ವ್ಯವಹಾರ ನಡೆದಿದೆ' ಎಂದು ಹೇಳಿದರು.

'ಮಕ್ಕಳ ಮಾರಾಟ ದಂಧೆಗೆ ಇಳಿಯುವುದಕ್ಕೂ ಮೊದಲು ತಮಿಳುನಾಡಿನ ಆರೋಪಿಗಳ ಜತೆಗೆ ಮಹಾಲಕ್ಷ್ಮಿ ಸಹ ಐವಿಎಫ್ ಕೇಂದ್ರವೊಂದರಲ್ಲಿ ಕೆಲಸ ಮಾಡುತ್ತಿದ್ದಳು. ಕೇಂದ್ರ ಬಂದ್ ಆದ ಮೇಲೆ ಗಾರ್ಮೆಂಟ್ಸ್‌ನಲ್ಲಿ ಕೆಲಸಕ್ಕೆ ಸೇರಿದ್ದ ಮಹಾಲಕ್ಷ್ಮಿ, 2015ರಿಂದ 2017ರ ವರೆಗೆ ಕೆಲಸ ಮಾಡಿದ್ದಳು. ಆರಂಭಿಕ ದಿನಗಳಲ್ಲಿ ಮಾಸಿಕವಾಗಿ ₹8 ಸಾವಿರ ಸಂಬಳ ಪಡೆಯುತ್ತಿದ್ದಳು. ನಂತರದ ತಿಂಗಳಲ್ಲಿ ₹ 10 ಸಾವಿರದ ವರೆಗೆ ಸಂಬಳ ಪಡೆಯುತ್ತಿದ್ದಳು. ಸ್ವಲ್ಪ ದಿನಗಳ ಕಾಲ ತರಕಾರಿ ವ್ಯಾಪಾರ ಸಹ ಮಾಡಿದ್ದಳು'

'ಗಾರ್ಮೆಂಟ್ಸ್‌ನಲ್ಲಿ ಕೆಲಸ ಮಾಡುತ್ತಿದ್ದಾಗ ಪರಿಚಯವಾದ ಮಹಿಳೆಯೊಬ್ಬಳು ಅಂಡಾಣು ಕೊಟ್ಟರೆ ಹಣ ಕೊಡುವುದಾಗಿ ಮಹಾಲಕ್ಷ್ಮಿಗೆ ತಿಳಿಸಿದ್ದಳು. ಆಗ ಅಂಡಾಣು ಮಾರಾಟ ನಡೆಸಿದ್ದಕ್ಕೆ ₹20 ಸಾವಿರ ಲಭಿಸಿತ್ತು. ನಂತರ ಅಂಡಾಣು ಕೊಡುವವರನ್ನು ಮಹಾಲಕ್ಷ್ಮಿಯೇ ಸಂಪರ್ಕಿಸಿ, ಕಮಿಷನ್ ಪಡೆಯುತ್ತಿದ್ದಳು. 2017ರ ನಂತರ ತಮಿಳುನಾಡಿನ ಆರೋಪಿಗಳ ಜತೆಗೆ ಸೇರಿಕೊಂಡು ಮಕ್ಕಳ ಮಾರಾಟ ದಂಧೆಗೆ ಇಳಿದಳು. ಈ ಜಾಲದಿಂದ ಲಕ್ಷ ಲಕ್ಷ ಹಣ ಸಂಪಾದಿಸಿದ್ದಾಳೆ' ಎಂದು ಮೂಲಗಳು ತಿಳಿಸಿವೆ

'ಬಾಡಿಗೆ ಮನೆಯಲ್ಲಿ ನೆಲೆಸಿದ್ದ ಮಹಾಲಕ್ಷ್ಮಿ ಬಳಿ 850 ಗ್ರಾಂಗೂ ಅಧಿಕ ಚಿನ್ನಾಭರಣ ಇದೆ. ಕಾರು ಖರೀದಿಸಿದ್ದಾಳೆ' ಎಂದು ಮೂಲಗಳು ತಿಳಿಸಿವೆ.

ಭ್ರೂಣಹತ್ಯೆ ಜಾಲ ದಾಖಲಾಗದ ದೂರು

ಮೈಸೂರು: ಹೆಣ್ಣು ಭ್ರೂಣಹತ್ಯೆ ಜಾಲ ಪ್ರಕರಣ ಬೆಳಕಿಗೆ ಬಂದ ಬಳಿಕ ನಗರದಲ್ಲಿ ಈ ಕುರಿತು ಈವರೆಗೆ ಯಾವುದೇ ದೂರು ದಾಖಲಾಗಿಲ್ಲ. 'ಸ್ಥಳೀಯ ಪೊಲೀಸರು ಸ್ವಯಂಪ್ರೇರಿತ ದೂರು ದಾಖಲಿಸಿಕೊಂಡು ತನಿಖೆ ನಡೆಸುವ ಅವಕಾಶವಿದೆ. ಆದರೆ ಪ್ರಯತ್ನ ಇನ್ನೂ ನಡೆದಿಲ್ಲ' ಎಂಬ ಅಸಮಾಧಾನ ಸಾರ್ವಜನಿಕರಲ್ಲಿ ಮೂಡಿದೆ.

'ಭ್ರೂಣಹತ್ಯೆ ಪ್ರಕರಣಗಳು ಆರೋಗ್ಯ ಇಲಾಖೆಯಲ್ಲಿರುವವರಿಗೆ ಗೊತ್ತಿಲ್ಲದ ವಿಚಾರವೇನಲ್ಲ. ಮೈಸೂರಿನ ಇನ್ನೂ ಕೆಲವು ಆಸ್ಪತ್ರೆಗಳಲ್ಲಿ ಭ್ರೂಣಹತ್ಯೆ ಪ್ರಕರಣಗಳು ನಡೆದಿವೆ. ಇದು ಗೊತ್ತಿದ್ದೂ ಇಲಾಖೆ ಸುಮ್ಮನಿದೆ' ಎಂಬ ಆರೋಪವೂ ಕೇಳಿಬಂದಿದೆ.

ಪ್ರಕರಣದಲ್ಲಿ ಭಾಗಿಯಾಗಿರುವ ಪ್ರಮುಖ ಆರೋಪಿಗಳನ್ನು ಬೆಂಗಳೂರು ಪೊಲೀಸರು ಬಂಧಿಸಿದ್ದು, ಅಲ್ಲಿನ ಅಧಿಕಾರಿಗಳೇ ತನಿಖೆ ನಡೆಸುತ್ತಿದ್ದಾರೆ. ಮೈಸೂರು, ಮಂಡ್ಯ ಸೇರಿದಂತೆ ವಿವಿಧ ಜಿಲ್ಲೆಗಳಲ್ಲಿ ಈ ಜಾಲ ಹಬ್ಬಿರುವ ಕಾರಣ ಏಕೀಕೃತ ವ್ಯವಸ್ಥೆ ಅಡಿ ತನಿಖೆಯನ್ನು ನಿರ್ವಹಿಸಲಾಗುತ್ತಿದೆ.


ಕರ್ನಾಟಕ ರಾಜ್ಯೋತ್ಸವದ ಅಂಗವಾಗಿ ನಾಗಸಂದ್ರದ ವಿನಾಯಕನಗರದಲ್ಲಿ ಇತ್ತೀಚೆಗೆ ನಡೆದ ವಿಪಿಎಲ್-3 ವಾಲಿಬಾಲ್ ಕ್ರೀಡಾಕೂಟದಲ್ಲಿ ವಿನ್ ವಿಕ್ ಸ್ಮ್ಯಾಶರ್ ತಂಡ ಪ್ರಥಮ ಸ್ಥಾನ ಪಡೆಯಿತು. ತಂಡದ ನಾಯಕ ಮನೋಜಿ ರಾವ್, ವಾಸು, ರುಕ್ಸಾನ್, ಜಗದೀಶ್, ದೀಪಕ್, ಶಿವಕುಮಾರ್ ಇದ್ದಾರೆ

ಬೆಂಗಳೂರು ರೇಸ್

ನಾಟಿ ಚಾರ್ಮರ್ ಗೆಲ್ಲುವ ನಿರೀಕ್ಷೆ

ಕೆಂಪೇಗೌಡ ಕಪ್ ಶುಕ್ರವಾರದ ಬೆಂಗಳೂರು ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು, ನಾಟಿ ಚಾರ್ಮರ್ ಈ ರೇಸ್‌ನಲ್ಲಿ ಗೆಲ್ಲುವ ನಿರೀಕ್ಷೆಯಿದೆ. ಮಧ್ಯಾಹ್ನ 1:30ಕ್ಕೆ ಪ್ರಾರಂಭವಾಗಲಿರುವ ದಿನದ ಏಳು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿವೆ:

1ನೇ ರೇಸ್: ಡೆಲ್ ಅವಿಜ್ 5, ಜರ್ಕಾವಿ 3, ಸ್ಟಾರ್ಮ್ ಶ್ಯಾಡೊ 2
2ನೇ ರೇಸ್: ನೆವರ್ ಗೀವ್ ಇನ್ 1, ಹನಿ ಕೇಕ್ 5, ಕ್ರಿಸ್ಟಾಲ್ಲೊ 3
3ನೇ ರೇಸ್: ಸಸ್ಸಿ 3, ಗ್ರ್ಯಾನ್‌ಪಾರ್ 1, ಪಲೊಮಿನೊ 6
4ನೇ ರೇಸ್: ನೈಟ್ ಇನ್ ಹೂವ್ಸ್ 1, ಅನಾಕಿನ್ 7, ಲಾಟರ್ಬ್ರನ್ನೆನ್ 8
5ನೇ ರೇಸ್: ನಾಟಿ ಚಾರ್ಮರ್ 3, ಕಲಾಮಿಟ್ಟ 2, ನಿಕೊಲಿನ 7
6ನೇ ರೇಸ್: ಕ್ಯಾಸ್ಟನೆಡ 3, ಬ್ರೇಥ್ ಬ್ಲಸ್ಟರ್ 4, ಅರ್ಮರಿ 2
7ನೇ ರೇಸ್: ಆರ್ಟ್ ಗ್ಯಾಲರಿ 3, ಪ್ರೊಫೆಸಿ 2, ಕ್ರಾಸ್ ವಾಟರ್ 7

ಉತ್ತಮ ಬೆಟ್: ತೆನಾಲಿ

ಜಾಕ್‌ಪಾಟ್	1ನೇ ಟ್ರಿಬಲ್	2ನೇ ಟ್ರಿಬಲ್
3,4,5,6,7	2,3,4	5,6,7

ಅಂತರ್ಜಾತಿ ಪ್ರೀತಿ ಆಟೊಗೆ ಬೆಂಕಿ

ಪ್ರಜಾವಾಣಿ ವಾರ್ತೆ

ಗುಡಿಬಂಡೆ: ಅನ್ಯಜಾತಿಯ ಯುವಕ ತಮ್ಮ ಮಗಳನ್ನು ಪ್ರೀತಿಸಿ ಕರೆದುಕೊಂಡು ಹೋಗಿದ್ದಕ್ಕೆ ಯುವತಿಯ ಪೋಷಕರು ಯುವಕನ ಸಹೋದರನ ಆಟೊಗೆ ಬೆಂಕಿ ಇಟ್ಟಿದ್ದಾರೆ ಎನ್ನುವ ಆರೋಪ ಗುಡಿಬಂಡೆ ತಾಲ್ಲೂಕಿನ ಅಪ್ಪಿರೆಡ್ಡಿಹಳ್ಳಿಯಲ್ಲಿ ಕೇಳಿ ಬಂದಿದೆ.

ನಾಯಕ ಸಮುದಾಯದ ಸುರೇಶ್ ಮತ್ತು ಅದೇ ಗ್ರಾಮದ ಒಕ್ಕಲಿಗ ಸಮುದಾಯದ ಮೋನಿಕಾ ಪ್ರೀತಿಸುತ್ತಿದ್ದರು. ಒಂದು ವಾರದ ಹಿಂದೆ ಇಬ್ಬರು ಮನೆ ತೊರೆದಿದ್ದಾರೆ. ಬುಧವಾರ ಈ ಸಂಬಂಧ ಎರಡೂ ಕುಟುಂಬಗಳ ನಡುವೆ ಜಗಳ ಸಹ ನಡೆದಿದೆ.

ಉತ್ತರ ಕರ್ನಾಟಕ: ಕೃತಿಗಳ ಆಹ್ವಾನ

ಬೆಂಗಳೂರು: ವೀರಲೋಕ ಪ್ರಕಾಶನದಿಂದ 'ಉತ್ತರ ಪರ್ವ-ಉತ್ತರ ಕರ್ನಾಟಕ ಸಾಹಿತ್ಯ ಸುಗ್ಗಿ' ಎಂಬ ಕಾರ್ಯಕ್ರಮದಡಿ ಉತ್ತರ ಕರ್ನಾಟಕದ ಜಿಲ್ಲೆಗಳ ಲೇಖಕರಿಂದ ಕೃತಿಗಳನ್ನು ಆಹ್ವಾನಿಸಲಾಗಿದೆ.

'ಕಥೆ, ಕಾದಂಬರಿ ಅಥವಾ ಇನ್ನಿತರ ಸೃಜನಶೀಲ ಕೃತಿಗಳು ಸ್ವಂತ ರಚನೆಯಾಗಿರಬೇಕು. ಕೃತಿಯ ಸಾರಾಂಶ ಅಥವಾ ಒಂದು ಭಾಗವನ್ನು (10 ಪುಟಗಳನ್ನು ಮೀರದಂತೆ) 2023ರ ಡಿ. 31ರೊಳಗೆ uttaraparva@gmail.com ಇ-ಮೇಲ್ ವಿಳಾಸಕ್ಕೆ ಕಳಿಸಬೇಕು. ಮೊದಲ ಸುತ್ತಿನಲ್ಲಿ ಆಯ್ಕೆಯಾಗುವ ಕೃತಿಯ ಬೆರಳಚ್ಚು ಪ್ರತಿಯನ್ನು 2024ರ ಫೆ.28ರೊಳಗೆ ಕಳಿಸಬೇಕು' ಎಂದು ವೀರಲೋಕ ಪ್ರಕಾಶನದ ವೀರಕಪುತ್ರ ಶ್ರೀನಿವಾಸ್, ರಾಜಶೇಖರ ಮಠಪತಿ (ರಾಗಂ) ತಿಳಿಸಿದ್ದಾರೆ.

ಮಾಹಿತಿಗೆ: 70221 22121, 88612 12172 ಸಂಪರ್ಕಿಸಿ.

ಅಡುಗೆ ಮನೆ ಉದ್ಘಾಟಿಸಿದ ಶಾಸಕ ಸೋಮಶೇಖರ್

ಅಭಿವೃದ್ಧಿ ಕಾಮಗಾರಿ; ನಿಗಾ ವಹಿಸಿ

ಪ್ರಜಾವಾಣಿ ವಾರ್ತೆ

ರಾಜರಾಜೇಶ್ವರಿನಗರ: 'ತಮ್ಮ ಗ್ರಾಮಗಳಲ್ಲಿ ನಡೆಯುವ ಅಭಿವೃದ್ಧಿ ಕಾಮಗಾರಿಗಳ ಬಗ್ಗೆ ಗ್ರಾಮಸ್ಥರು ನಿಗಾವಹಿಸಿದರೆ, ಗುಣಮಟ್ಟದ ಕೆಲಸಗಳಾಗುತ್ತವೆ, ದೀರ್ಘಕಾಲ ಬಾಳಿಕೆ ಬರುತ್ತವೆ' ಎಂದು ಶಾಸಕ ಎಸ್. ಟಿ. ಸೋಮಶೇಖರ್ ಹೇಳಿದರು.

ರಾಮಸಂದ್ರದಲ್ಲಿರುವ ಸರ್ಕಾರಿ ಪ್ರಾಥಮಿಕ ಶಾಲೆಯಲ್ಲಿ ಬಿಸಿಯೂಟ ತಯಾರಿಸುವ ಅಡುಗೆ ಮನೆಯನ್ನು ಉದ್ಘಾಟಿಸಿ ಅವರು ಮಾತನಾಡಿದರು.

ನನಗೆ ರಾಜಕೀಯ ಅಥವಾ ಪಕ್ಷ ಮುಖ್ಯವಲ್ಲ. ಕ್ಷೇತ್ರದ ಅಭಿವೃದ್ಧಿಯೇ ಮುಖ್ಯ ಎಂದ ಅವರು, ಗ್ರಾಮಸ್ಥರು ಸರ್ಕಾರದ ಸವಲತ್ತುಗಳನ್ನು ಜನರು ಸದುಪಯೋಗ ಪಡೆದುಕೊಂಡು ಶೈಕ್ಷಣಿಕ, ಆರ್ಥಿಕ, ಸಾಮಾಜಿಕವಾಗಿ ಅಭಿವೃದ್ಧಿಹೊಂದಬೇಕು ಎಂದು ಸಲಹೆ ನೀಡಿದರು.

ಇದೇ ವೇಳೆ, ರಾಮಸಂದ್ರದ ಗ್ರಾಮ ಪಂಚಾಯ್ತಿಯ ಮೊದಲ ಅಂತಸ್ತಿನ ಕಟ್ಟಡ, ಬಂಗಲೆ ಗ್ರಾಮದ ಬಳಿಯ ಸೇತುವೆ ಕಾಮಗಾರಿಗೆ ಚಲನೆ ನೀಡಿದರು. ಕೆಂಚನಪುರ ಅಂಗನವಾಡಿ ಕೇಂದ್ರ ಮತ್ತು ಧ್ವಜಸ್ಥಂಭ, ಹೈಮಾಸ್ಟ್ ದೀಪ, ಸೂಲಿಕೆರೆಯಲ್ಲಿ ಪ್ರಯಾಣಿಕರ ತಂಗುದಾಣ ಮತ್ತು ಸಮುದಾಯ ಭವನ ಲೋಕಾರ್ಪಣೆ ಮಾಡಿದರು. ಬಸವೇಶ್ವರ ನಗರದಲ್ಲಿ ಅಂಗನವಾಡಿ ಕಟ್ಟಡ, ಕೊಮ್ಮಘಟ್ಟದಲ್ಲಿ ಗ್ರಂಥಾಲಯ, ಸರ್ಕಾರಿ ಶಾಲಾ ಕಟ್ಟಡ ಉದ್ಘಾಟಿಸಿದರು.



ರಾಮಸಂದ್ರದಲ್ಲಿ ಬಿಸಿಯೂಟದ ಅಡುಗೆ ಕೇಂದ್ರದ ಕಟ್ಟಡವನ್ನು ಶಾಸಕ ಎಸ್‌.ಟಿ. ಸೋಮಶೇಖರ್ ಉದ್ಘಾಟಿಸಿದರು. ಗ್ರಾಮ ಪಂಚಾಯಿತಿ ಸದಸ್ಯ ಎಸ್‌.ಆರ್‌.ಮೋಹನ್, ಸೂಲಿಕೆರೆ ವಿಜಯಕುಮಾರ್, ಗ್ರಾಮ ಪಂಚಾಯಿತಿ ಅಧ್ಯಕ್ಷ ಶಾಂತಮ್ಮ ರಾಮೋಹಳ್ಳಿ ಚೇತನ್, ಶಿವು ಇದ್ದಾರೆ

₹15 ಕೋಟಿ ಮೊತ್ತದ ಕಾಮಗಾರಿಗೆ ಚಾಲನೆ

ಪ್ರಜಾವಾಣಿ ವಾರ್ತೆ

ದಾಬಸ್ ಪೇಟೆ: ಕಾಮಗಾರಿಗಳ ನಿರ್ವಹಣೆ ಮಾಡುವ ಗುತ್ತಿಗೆದಾರರು ಹಾಗೂ ಎಂಜಿನಿಯರ್ ಗಳು ಗುಣಮಟ್ಟಕ್ಕೆ ಆದ್ಯತೆ ನೀಡಬೇಕು ಎಂದು ಶಾಸಕ ಎನ್. ಶ್ರೀನಿವಾಸ್ ತಿಳಿಸಿದರು.

ಗುರುವಾರ ನರಸೀಪುರ ತೋಪಿನಿಂದ ರಾಮದೇವರ ಬೆಟ್ಟದವರೆಗೆ ಹೊಸ ರಸ್ತೆ ನಿರ್ಮಾಣ ಹಾಗೂ ಬುಗಡಿಹಳ್ಳಿ ರಸ್ತೆ ಕಾಮಗಾರಿಗೆ ಶಂಕುಸ್ಥಾಪನೆ ನೆರವೇರಿಸಿದ ಅವರು ಮಾತನಾಡಿದರು.

'ಕಾಮಗಾರಿಗಳ ಗುಣಮಟ್ಟದ ಕುರಿತು ಸ್ಥಳೀಯರು ಪರಿಶೀಲನೆ ಮಾಡಬಹುದು. ಏನಾದರೂ ಲೋಪದೋಷಗಳು ಕಂಡುಬಂದೊಡನೆ, ನನ್ನ ಗಮನಕ್ಕೆ ತಂದರೆ ನಾನೇ ಪರಿಶೀಲನೆ ಮಾಡುತ್ತೇನೆ' ಎಂದು ತಿಳಿಸಿದರು.

ಈ ಒಂದೇ ದಿನದಲ್ಲಿ ತಾಲ್ಲೂಕಿನಲ್ಲಿ ಸುಮಾರು 15 ಕೋಟಿ ರೂಪಾಯಿ ಮೊತ್ತದ ರಸ್ತೆ ಅಭಿವೃದ್ಧಿ ಕಾಮಗಾರಿಗಳಿಗೆ ಚಾಲನೆ ನೀಡಲಾಗಿದೆ. ಸೋಂಪುರ ಹೋಬಳಿಯಲ್ಲಿ ಎಡೇಹಳ್ಳಿ, ಅಗಳಕುಪ್ಪೆಯ ಅಂಚೇಪಾಳ್ಯ, ಹಳೇನಿಜಗಲ್, ನರಸೀಪುರ ಹಾಗೂ ಬುಗಡಿಹಳ್ಳಿ ರಸ್ತೆಗಳ ಕಾಮಗಾರಿಗೆ ಕೈಗೆತ್ತಿಕೊಳ್ಳಲಾಗಿದೆ. ಗುತ್ತಿಗೆದಾರರು ಶೀಘ್ರ ಕಾಮಗಾರಿ ಆರಂಭಿಸಿ, ಸಕಾಲಕ್ಕೆ ಮುಗಿಸಬೇಕು ಎಂದರು.

ಮುಖಂಡರಾದ ಗೋವಿಂದರಾಜು, ನರಸೀಪುರ ಗ್ರಾಮ ಪಂಚಾಯಿತಿ ಅಧ್ಯಕ್ಷ ರಾಮಾಂಜನೇಯ, ಪ್ರವೀಣ್, ಲೋಕೇಶ್, ಬಿ. ಮಂಜುನಾಥ್, ಮಹೇಶ್ ಇದ್ದರು.


ರಸ್ತೆ ಕಾಮಗಾರಿಗೆ ಶಾಸಕ ಎನ್. ಶ್ರೀನಿವಾಸ್ ಚಾಲನೆ ನೀಡಿದರು

ಮೂಲಸೌಲಭ್ಯ ಕೊರತೆ: ಆತಂಕದಲ್ಲೇ ವಿದ್ಯಾರ್ಥಿನಿಯರ ಕಲಿಕೆ

ಹಳೆಯ ಚಿತ್ರಮಂದಿರದಲ್ಲಿ ವಸತಿ ಶಾಲೆ!

● ವಾಗೀಶ ಎ. ಕುರುಗೋಡು

ಕುರುಗೋಡು (ಬಳ್ಳಾರಿ ಜಿಲ್ಲೆ): ಪ್ರತ್ಯೇಕ ತರಗತಿ ಕೊಠಡಿಗಳಿಲ್ಲ, ಕ್ರೀಡಾಂಗಣವಿಲ್ಲ, ಶೌಚಾಲಯಗಳು ಸಮರ್ಪಕವಾಗಿಲ್ಲ, ಪುಟ್ಟ ಜಾಗದಲ್ಲೇ ಆಟ-ಪಾಠ...

ಇದು ಹಳೆಯ ಚಿತ್ರಮಂದಿರದಲ್ಲಿ ನಡೆಯುತ್ತಿರುವ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಗಾಂಧಿ ತತ್ವಾಧಾರಿತ ಬಾಲಕಿಯರ ವಸತಿ ಶಾಲೆಯ ವಿದ್ಯಾರ್ಥಿನಿಯರ ಸ್ಥಿತಿ.

ಈ ಮೊದಲು ಶಾಲೆ ಮತ್ತು ವಸತಿನಿಲಯ ನಡೆಯುತ್ತಿದ್ದ ಕಟ್ಟಡ ಶಿಥಿಲಾವಸ್ಥೆ ತಲುಪಿದೆ. ಸ್ವಂತ ಕಟ್ಟಡವಿರದ ಕಾರಣ 40 ವರ್ಷ ಹಳೆಯದಾದ ಚಿತ್ರಮಂದಿರದ ಕಟ್ಟಡದಲ್ಲೇ ಮೂರು ವರ್ಷಗಳಿಂದ ವಸತಿ ಶಾಲೆ ನಡೆಯುತ್ತಿದೆ.

'ವಸತಿ ಶಾಲೆಯಲ್ಲಿ 6ರಿಂದ 10ನೇ ತರಗತಿಯವರೆಗೆ 226 ವಿದ್ಯಾರ್ಥಿನಿಯರಿದ್ದು, ಒಂದೇ ಸಭಾಂಗಣದಲ್ಲಿ 2ರಿಂದ 3 ತರಗತಿ ನಡೆಸಲಾಗುತ್ತಿದೆ. ಎಲ್ಲರಿಗೂ ಒಂದೆಡೆಯೇ ಪಾಠ ಮಾಡುವುದರಿಂದ ನಮಗೆ ಸರಿಯಾಗಿ ಅರ್ಥವಾಗುತ್ತಿಲ್ಲ' ಎಂಬುದು ವಿದ್ಯಾರ್ಥಿನಿಯರ ಅಳಲು.

ವಸತಿ ಶಾಲೆಗಿಲ್ಲ ಸ್ವಂತ ಕಟ್ಟಡ: ಜಿಲ್ಲಾ ಪರಿಷತ್ ಬಾಲಕಿಯರ ಪ್ರೌಢಶಾಲೆ ಹೆಸರಿನಲ್ಲಿ 1996ರಲ್ಲಿ ಪ್ರಾರಂಭವಾದ ಶಾಲೆ, ನಂತರ ಗಾಂಧಿತತ್ವ ಆಧಾರಿತ ಬಾಲಕಿಯರ ವಸತಿ ಶಾಲೆಯಾಗಿ 2011-12ರಲ್ಲಿ ಮೇಲ್ದರ್ಜೆಗೇರಿಸಿ ಸಮಾಜ ಕಲ್ಯಾಣ ಇಲಾಖೆಗೆ ಸೇರ್ಪಡೆ ಮಾಡಲಾಯಿತು. 2012-13ರಲ್ಲಿ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಅನುದಾನದೊಂದಿಗೆ ಕರ್ನಾಟಕ ವಸತಿ ಶಿಕ್ಷಣಗಳ ಸಂಘದ ಅಧೀನದಲ್ಲಿ ಕಾರ್ಯನಿರ್ವಹಿಸುತ್ತಿದೆ. ಇದೇ ಮಾದರಿಯಲ್ಲಿ ಜಿಲ್ಲೆಯ ಚೆಳ್ಳಗುರ್ಕಿ ಗ್ರಾಮದಲ್ಲೂ ಮತ್ತೊಂದು ಶಾಲೆ ಇದೆ. ಅಲ್ಲಿ ಎರ್ರಿತಾತ ಮಠದ ಕೊಠಡಿಗಳಲ್ಲಿ ಶಾಲೆ ನಡೆಯುತ್ತಿದೆ. ಕುರುಗೋಡು ಮತ್ತು ಚೆಳ್ಳಗುರ್ಕಿಯ ಎರಡೂ ಶಾಲೆಗಳಿಗೂ ಸ್ವಂತ ಕಟ್ಟಡಗಳಿಲ್ಲ.


ಕುರುಗೋಡಿನ ಹಳೆಯ ಚಿತ್ರಮಂದಿರದಲ್ಲಿ ನಡೆಯುತ್ತಿರುವ ವಸತಿ ಶಾಲೆಯಲ್ಲಿ ವಿದ್ಯಾರ್ಥಿನಿಯರು ನೆಲದ ಮೇಲೆ ಕೂತು ಪಾಠ ಆಲಿಸಿದರು

ಸೌಲಭ್ಯಗಳಿಲ್ಲದ ಹಳೆ ಕಟ್ಟಡದಲ್ಲಿ ವಸತಿ ಶಾಲೆ ನಡೆಯುತ್ತದೆ. ಏನಾದರೂ ಅಚಾತುರ್ಯ ಸಂಭವಿಸಿದರೆ ಯಾರು ಹೊಣೆ? ನಮ್ಮ ಮಕ್ಕಳಿಗೆ ಸೂಕ್ತ ಸೌಲಭ್ಯ, ರಕ್ಷಣೆ ಇಲ್ಲ
ವಿದ್ಯಾರ್ಥಿನಿಯರ ಪೋಷಕರು

ವಿವಿಧ ಬಡಾವಣೆಗಳಲ್ಲಿ ಪರಿಶೀಲಿಸಿದರೂ ಸೂಕ್ತ ಕಟ್ಟಡ ಸಿಗಲಿಲ್ಲ. ಆದ್ದರಿಂದ ತಿಂಗಳಿಗೆ ₹1.20 ಲಕ್ಷ ಬಾಡಿಗೆ ಕೊಟ್ಟು ಈ ಕಟ್ಟಡದಲ್ಲಿ ಶಾಲೆ ನಡೆಸಲಾಗುತ್ತಿದೆ
ವಿಶ್ವನಾಥ, ಪ್ರಾಚಾರ್ಯ, ಗಾಂಧಿ ತತ್ವಾಧಾರಿತ ಬಾಲಕಿಯರ ವಸತಿ ಶಾಲೆ, ಕುರುಗೋಡು

6 ಎಕರೆ ಭೂಮಿ ಕಾಯ್ದಿರಿಸಲಾಗಿದೆ. ಕಟ್ಟಡ ನಿರ್ಮಾಣ ಅನುದಾನಕ್ಕಾಗಿ ಕರ್ನಾಟಕ ವಸತಿ ಶಿಕ್ಷಣಗಳ ಸಂಘದೊಂದಿಗೆ ಪತ್ರ ವ್ಯವಹಾರ ನಡೆಸಲಾಗಿದೆ. ಅದು ಸಿಕ್ಕ ಬಳಿಕ ಕಟ್ಟಡ ನಿರ್ಮಿಸಲಾಗುವುದು
ಎ.ಕೆ.ಜಲಾಲಪ್ಪ
ಉಪನಿರ್ದೇಶಕ, ಜಿಲ್ಲಾ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ಬಳ್ಳಾರಿ

ಶೂನ್ಯಗೊಳಿಸಲು ಕರ್ನಾಟಕ ರಾಜ್ಯ ಏಡ್ಸ್ ನಿಯಂತ್ರಣ ಮಂಡಳಿ ಗುರಿ

ಎಚ್‌ಐವಿ ಸೋಂಕು ಇಳಿಕೆ

● ಕೃಷ್ಣಿ ಶಿರೂರ

ಹುಬ್ಬಳ್ಳಿ: ಕಳೆದ ಹತ್ತು ವರ್ಷಗಳಲ್ಲಿ ರಾಜ್ಯದಲ್ಲಿ ಎಚ್‌ಐವಿ ಸೋಂಕು ಪ್ರಕರಣಗಳ ಪ್ರಮಾಣ ಕಡಿಮೆ ಆಗಿದೆ. ತಾಯಿಯಿಂದ ಮಗುವಿಗೆ ಎಚ್‌ಐವಿ ಸೋಂಕು ವರ್ಗವಾಗುವ ಪ್ರಮಾಣ ಶೇ 0.02ಕ್ಕೆ ಇಳಿದಿದೆ. 2025ರ ವೇಳೆಗೆ ಇದನ್ನು ಶೂನ್ಯಕ್ಕೆ ತರುವ ಗುರಿ ಕರ್ನಾಟಕ ರಾಜ್ಯ ಏಡ್ಸ್ ನಿಯಂತ್ರಣ ಮಂಡಳಿ (ಕೆಎಸ್‌ಎಪಿಎಸ್) ಹೊಂದಿದೆ.

ಎಚ್‌ಐವಿ ನಿಯಂತ್ರಣಕ್ಕೆ ಹಲವು ಕ್ರಮಗಳನ್ನು ಕೈಗೊಂಡಿರುವ ಮಂಡಳಿಯು ಮುಂದಿನ ಹತ್ತು ವರ್ಷಗಳಲ್ಲಿ ಏಡ್ಸ್ ಮುಕ್ತ ರಾಜ್ಯ ಆಗಿಸಲು ಪಣತೊಟ್ಟಿದೆ. ಇದಕ್ಕೆ ಪೂರಕವಾಗಿ ಜಾಗೃತಿ ಕಾರ್ಯಗಳು ನಡೆದಿವೆ.

'ಎಚ್‌ಐವಿ/ಏಡ್ಸ್ ಹೊಸ ಪ್ರಕರಣಗಳನ್ನು ನಿಯಂತ್ರಿಸಿದರೆ, ಮುಂದಿನ ವರ್ಷಗಳಲ್ಲಿ ನಾವು ಗುರಿ ಸಾಧಿಸಬಹುದು. ಆ ದಿಸೆಯಲ್ಲಿ ರಾಜ್ಯದಲ್ಲಿ ವ್ಯವಸ್ಥಿತ ರೀತಿಯಲ್ಲಿ ಯೋಜನೆ ಸಿದ್ಧಪಡಿಸುವುದರ ಜೊತೆಗೆ ಅಷ್ಟೇ ಶಿಸ್ತುಬದ್ಧವಾಗಿ ಅನುಷ್ಠಾನಗೊಳಿಸಿದ್ದೇವೆ' ಎಂದು ಮಂಡಳಿಯ ಹೆಚ್ಚುವರಿ ಯೋಜನಾ ನಿರ್ದೇಶಕ ಡಾ.ರಮೇಶ ರೆಡ್ಡಿ 'ಪ್ರಜಾವಾಣಿ'ಗೆ ತಿಳಿಸಿದರು.

'ಸರ್ಕಾರೇತರ ಸ್ವಯಂ ಸೇವಾ ಸಂಸ್ಥೆಗಳು, ಸಂಯೋಜಿತ ಸಮಾಲೋಚನೆ ಮತ್ತು ಪರೀಕ್ಷಾ ಕೇಂದ್ರ (ಐಸಿಟಿಸಿ) ಸಿಬ್ಬಂದಿ ಮತ್ತು ಆಪ್ತಸಮಾಲೋಚಕರ ಶ್ರಮದಿಂದ ಎಚ್‌ಐವಿ/ಏಡ್ಸ್ ಹರಡುವಿಕೆಯನ್ನು ನಿಯಂತ್ರಿಸಲು ಸಾಧ್ಯವಾಗಿದೆ' ಎಂದು ಅವರು ವಿವರಿಸಿದರು.

1999ರಲ್ಲಿ ಆರಂಭವಾದ ಐಸಿಟಿಸಿ ಕೇಂದ್ರಗಳು ರಾಜ್ಯದ ಎಲ್ಲ ವೈದ್ಯಕೀಯ ಕಾಲೇಜು ಮತ್ತು 33 ಜಿಲ್ಲಾ ಆಸ್ಪತ್ರೆಗಳಲ್ಲಿ ಇವೆ. ಸೋಂಕಿತರಿಗೆ ಪ್ರತಿ ದಿನ ಸಮಾಲೋಚನೆ ಮಾಡುವುದರ ಜೊತೆ ಔಷಧಿ ನೀಡಿ ಜಾಗೃತಿ ಮೂಡಿಸಲಾಗುತ್ತಿದೆ' ಎಂದರು.

'ತಾಯಿಯಿಂದ ಮಗುವಿಗೆ ಎಚ್‌ಐವಿ ಸೋಂಕು ವರ್ಗಾವಣೆಯಾಗದಂತೆ ತಡೆಯಲು ಪ್ರಮುಖ ಪಾತ್ರ ವಹಿಸುವ ನೆವಿರಿಪೈನ್ ಸೇರಿ ಕೆಲ ಔಷಧಿಗಳನ್ನು ನೀಡುತ್ತೇವೆ. ಶಿಶು ಜನಿಸಿದ ಬಳಿಕ ಅದರ ತೂಕದ ಅನುಸಾರ ಔಷಧಿ ನೀಡಿ, ನಿಗಾ ವಹಿಸುತ್ತೇವೆ. ನಂತರ ಹಂತಹಂತವಾಗಿ ಪರೀಕ್ಷೆಯನ್ನೂ ಮಾಡುತ್ತೇವೆ' ಎಂದು ಕಿಮ್ಸ್‌ನ ಐಸಿಟಿಸಿ ಕೇಂದ್ರದ ಆಪ್ತಸಮಾಲೋಚಕಿ ಸವಿತಾ ಅಂಗಡಿ ಹೇಳಿದರು.

ರಾಜ್ಯದಲ್ಲಿ ಪತ್ತೆಯಾದ ಎಚ್‌ಐವಿ ಸೋಂಕಿತ ಗರ್ಭಿಣಿಯರು (ಪ್ರಸವಪೂರ್ವ ಆರೈಕೆ)

ವರ್ಷ	ಪರೀಕ್ಷಿತರು (ಲಕ್ಷಗಳಲ್ಲಿ)	ಪಾಸಿಟಿವ್	ಶೇಕಡವಾರು
2013-14	11.78	1,445	0.12
2014-15	12.32	1,295	0.11
2015-16	12.80	1,034	0.08
2016-17	13.21	856	0.06
2017-18	14.18	891	0.06
2018-19	14.23	776	0.05
2019-20	14.50	622	0.04
2020-21	12.13	575	0.05
2021-22	12.45	524	0.04
2022-23	11.96	528	0.04

(ಆಧಾರ: ಕರ್ನಾಟಕ ರಾಜ್ಯ ಏಡ್ಸ್ ನಿಯಂತ್ರಣ ಮಂಡಳಿ)

ರಾಜ್ಯದ ಐಸಿಟಿಸಿ ಕೇಂದ್ರದಲ್ಲಿ ಪತ್ತೆಯಾದ ಎಚ್‌ಐವಿ ಸೋಂಕಿತರ ಪ್ರಮಾಣ

ವರ್ಷ	ಪರೀಕ್ಷಿತರು (ಲಕ್ಷಗಳಲ್ಲಿ)	ಪಾಸಿಟಿವ್	ಶೇಕಡವಾರು
2013-14	16.64	29,473	1.77
2014-15	19.06	26,509	1.39
2015-16	19.45	21989	1.13
2016-17	19.40	20,004	1.03
2017-18	22.20	18,862	0.83
2018-19	24.73	18,143	0.73
2019-20	25.82	15,683	0.61
2020-21	16.34	9,520	0.58
2021-22	22.26	10,632	0.48
2022-23	30.27	11,713	0.39

(ಆಧಾರ: ಕರ್ನಾಟಕ ರಾಜ್ಯ ಏಡ್ಸ್ ನಿಯಂತ್ರಣ ಮಂಡಳಿ)

ಸೋಂಕಿತರ ಶಸ್ತ್ರಚಿಕಿತ್ಸೆಗೆ ಹಿಂದೇಟು

ಸರ್ಕಾರ ಬೆಂಬಲಕ್ಕೆ ನಿಂತರೂ ನೆರವಿಗೆ ಬಾರದ ವೈದ್ಯರು; ತೊಂದರೆ

● ಚಂದ್ರಕಾಂತ ಮಸಾನಿ



ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ಆಸ್ಪತ್ರೆ

ರಾಯಚೂರು: ಎಚ್‌ಐವಿ ಸೋಂಕಿತರ ಆರೋಗ್ಯ ರಕ್ಷಣೆಗೆ ಸರ್ಕಾರ ಪ್ರತಿವರ್ಷ ಕೋಟ್ಯಂತರ ರೂಪಾಯಿ ಖರ್ಚು ಮಾಡುತ್ತಿದೆ. ಸೋಂಕಿನಿಂದ ಬಳಲುತ್ತಿರುವವರು ಶಸ್ತ್ರಚಿಕಿತ್ಸೆ ಮಾಡಿಸಿಕೊಳ್ಳಲು ತುದಿಗಾಲ ಮೇಲೆ ನಿಂತರೂ ಸರ್ಕಾರಿ ಆಸ್ಪತ್ರೆಗಳಲ್ಲಿ ವೈದ್ಯರು ಶಸ್ತ್ರಚಿಕಿತ್ಸೆಗೆ ಹಿಂದೇಟು ಹಾಕುತ್ತಿದ್ದಾರೆ.

ವೈದ್ಯರು ನೆಪ ಹೇಳುತ್ತ ಶಸ್ತ್ರಚಿಕಿತ್ಸೆಯನ್ನು ಮುಂದೂಡುತ್ತ ದಿನ ಕಳೆಯುತ್ತಿದ್ದಾರೆ. ಕೊನೆಗೆ ಕಾಯಿಲೆ ಗಂಭೀರ ಸ್ವರೂಪ ಪಡೆಯುತ್ತಲೇ ಅವರನ್ನು ಹೆಚ್ಚಿನ ಚಿಕಿತ್ಸೆಗೆ ಬೆಂಗಳೂರಿಗೆ ಶಿಫಾರಸು ಮಾಡುತ್ತಿದ್ದಾರೆ. ಹೀಗಾಗಿ ಬಡವರು ತೊಂದರೆ ಅನುಭವಿಸುತ್ತಿದ್ದಾರೆ.

ಎಚ್‌ಐವಿ, ಏಡ್ಸ್ ತಡೆ ಮತ್ತು ನಿಯಂತ್ರಣ ಕಾಯ್ದೆ (2017) ಜಾರಿಯಾಗಿದೆ. ಎಚ್‌ಐವಿ ಸೋಂಕಿತರಿಗೆ ಮಾಡುವ ಯಾವುದೇ ರೀತಿಯ ಕಳಂಕ, ತಾರತಮ್ಯ ಶಿಕ್ಷಾರ್ಹವಾಗಿದೆ. ₹1 ಲಕ್ಷ ದಂಡ ಹಾಗೂ ಒಂದು ವರ್ಷ ಜೈಲು ಶಿಕ್ಷೆ ವಿಧಿಸಬಹುದಾಗಿದೆ. ಹೀಗಾಗಿ ವೈದ್ಯರು ನಿರಾಕರಣೆಯನ್ನೂ ಮಾಡದೇ ಶಸ್ತ್ರಚಿಕಿತ್ಸೆಯನ್ನೂ ಕೈಗೊಳ್ಳದೆ ತಾಂತ್ರಿಕ ಕಾರಣ ತೋರಿಸಿ ದಿನ ಕಳೆಯುತ್ತಿದ್ದಾರೆ.

'ಸಾಮಾನ್ಯ ಕುಟುಂಬದ ವ್ಯಕ್ತಿಗಳು ಸಾಲ ಮಾಡಿ ಹಣ ಹೊಂದಿಸಿಕೊಂಡು ಖಾಸಗಿ ಆಸ್ಪತ್ರೆಯಲ್ಲಿ ಶಸ್ತ್ರಚಿಕಿತ್ಸೆ ಮಾಡಿಕೊಳ್ಳುತ್ತಿದ್ದಾರೆ. ಆರ್ಥಿಕವಾಗಿ ದುರ್ಬಲವಾಗಿರುವ ಸೋಂಕಿತರು ನಿತ್ಯ ರಿಮ್ಸ್ ಆಸ್ಪತ್ರೆಗೆ ಅಲೆದಾಡಿ ಸುಸ್ತಾಗಿದ್ದಾರೆ' ಎಂದು ಎಚ್‌ಐವಿ ಸೋಂಕಿತ ವ್ಯಕ್ತಿಯೊಬ್ಬರು ಅಳಲು ತೋಡಿಕೊಂಡರು.

'ಕೆಲ ಸೋಂಕಿತರು ಮಾಂಸಗಡ್ಡೆ, ಗರ್ಭಚೀಲ ಇನ್ನಿತರ ತೊಂದರೆಯಿಂದ ಬಳಲುತ್ತಿದ್ದಾರೆ. ರಿಮ್ಸ್ ವೈದ್ಯರು ಶಸ್ತ್ರಚಿಕಿತ್ಸೆ ಮಾಡದೇ ದಿನ ಕಳೆಯುತ್ತ ಸಾಗಿದ್ದಾರೆ. ಎಚ್‌ಐವಿ ಸೋಂಕಿತರು ಹಲವು ಬಾರಿ ನಮ್ಮ ಸಂಸ್ಥೆಗೆ ಬಂದು ಅಳಲು ತೋಡಿಕೊಂಡಿದ್ದಾರೆ. ಚಿಕಿತ್ಸೆ ನೀಡಬೇಕಾದ ವೈದ್ಯರೇ ಜವಾಬ್ದಾರಿಯಿಂದ ತಪ್ಪಿಸಿಕೊಳ್ಳಲು ಪ್ರಯತ್ನಿರುವುದು ಬೇಸರ ಉಂಟು ಮಾಡಿದೆ' ಎಂದು ಹೊಸ ಬೆಳಕು ಸಂಸ್ಥೆಯ ಕಾರ್ಯಕ್ರಮ ಸಂಯೋಜಕ ದೇವರಾಜ ಹೇಳುತ್ತಾರೆ.

'ಸರ್ಕಾರಿ ಆಸ್ಪತ್ರೆಯಲ್ಲಿ ಶಸ್ತ್ರಚಿಕಿತ್ಸೆ ಮಾಡದ ಕಾರಣ ಸೋಂಕಿತರಿಂದಲೇ ₹5 ಸಾವಿರ ಬೆಲೆಯ ಕಿಟ್ ತರಿಸಿಕೊಂಡು ಖಾಸಗಿ ಆಸ್ಪತ್ರೆ ವೈದ್ಯರು ಶಸ್ತ್ರಚಿಕಿತ್ಸೆ ಮಾಡುತ್ತಿದ್ದಾರೆ. ಸರ್ಕಾರಿ ಆಸ್ಪತ್ರೆಯಲ್ಲಿ ತಾರತಮ್ಯ ನಿಲ್ಲಬೇಕು. ಸೋಂಕಿತರಿಗೆ ಮಾನವೀಯ ನೆಲೆಯಲ್ಲಿ ಶಸ್ತ್ರಚಿಕಿತ್ಸೆ ಮಾಡುವಂತೆ ಆಗಬೇಕು' ಎನ್ನುತ್ತಾರೆ ಅವರು.

'ಎಚ್‌ಐವಿ ಸೋಂಕಿತ ಮಹಿಳೆಯರಿಗೆ ಸರ್ಕಾರಿ ಆಸ್ಪತ್ರೆಗಳಲ್ಲಿ ಹೆರಿಗೆಗಳು ಆಗುತ್ತಿವೆ. ಕೆಲವು ಪ್ರಕರಣಗಳಲ್ಲಿ ಸಿಸೇರಿಯನ್ ಸಹ ಮಾಡಲಾಗಿದೆ. ಇತರ ಕಾಯಿಲೆಗಳ ಶಸ್ತಚಿಕಿತ್ಸೆ ಮಾಡಲು ವೈದ್ಯರು ನಿರಾಕರಿಸಿರುವುದು ಹಾಗೂ ಅನಗತ್ಯವಾಗಿ ಸಮಯ ಮುಂದೂಡಿದ್ದರ ಮಾಹಿತಿ ಇಲ್ಲ. ಲಿಖಿತ ದೂರು ಕೊಟ್ಟರೆ ಡಿಎಚ್‌ಒ ಅವರೊಂದಿಗೆ ಚರ್ಚಿಸಿ ಕ್ರಮ ಕೈಗೊಳ್ಳಲಾಗುವುದು' ಎಂದು ಜಿಲ್ಲಾ ಏಡ್ಸ್ ನಿಯಂತ್ರಣಾಧಿಕಾರಿ ಡಾ.ಮಹಮ್ಮದ್ ಶಾಕೀರ್ ಹೇಳುತ್ತಾರೆ.

'ಹೈಕೋರ್ಟ್ ರಿಲೀಫ್ ಕೊಟ್ಟಿಲ್ಲ'

ಡಿ.ಕೆ. ಶಿವಕುಮಾರ್ ವಿರುದ್ಧದ ಪ್ರಕರಣ ಕುರಿತು ಕುಮಾರಸ್ವಾಮಿ ವ್ಯಂಗ್ಯ

ಪ್ರಜಾವಾಣಿ ವಾರ್ತೆ

ಚನ್ನಪಟ್ಟಣ (ರಾಮನಗರ): 'ಹೈಕೋರ್ಟ್ ರಿಲೀಫ್ ಕೊಟ್ಟಿಲ್ಲ. ಇವರೇ ತೆಗೆದುಕೊಂಡಿದ್ದಾರೆ. ಇನ್ನೂ ಸ್ವಲ್ಪ ದಿನ ಇದನ್ನು ಮುಂದಕ್ಕೆ ಎಳೆಯಬೇಕಲ್ಲ...' ಎಂದು ಜೆಡಿಎಸ್ ಅಧ್ಯಕ್ಷ ಎಚ್.ಡಿ. ಕುಮಾರಸ್ವಾಮಿ ಅವರು ಉಪ ಮುಖ್ಯ ಮಂತ್ರಿ ಡಿ.ಕೆ. ಶಿವಕುಮಾರ್ ಅವರ ಅಕ್ರಮ ಆಸ್ತಿ ಪ್ರಕರಣ ಕುರಿತು ವ್ಯಂಗ್ಯವಾಡಿದರು.

ಪಟ್ಟಣದಲ್ಲಿ ಗುರುವಾರ ಸುದ್ದಿಗಾರರ ಜೊತೆ ಮಾತನಾಡಿದ ಅವರು, 'ಬಹುಶಃ ಗ್ಯಾರಂಟಿ ಕಾರ್ಯಕ್ರಮಗಳ ಮೂಲಕವೇ ದೇಶದಲ್ಲಿ ಅಧಿಕಾರಕ್ಕೆ ಬರುತ್ತೇವೆ. ಆಗ, ಎಲ್ಲಾ ಪ್ರಕರಣ ಮುಚ್ಚಿ ಹಾಕಬಹುದು ಎಂದು ಐದಾರು ತಿಂಗಳು ಮುಂದೂಡುತ್ತಿದ್ದಾರೆ. ಇದೆಲ್ಲಾ ತಂತ್ರಗಾರಿಕೆ ಅಷ್ಟೆ. ಮುಂದೆ ಏನೇನಾಗುತ್ತದೊ ಕಾದು ನೋಡೋಣ' ಎಂದರು.

'ನಾನು ವಕೀಲನಾಗಿರುವುದಕ್ಕೆ ಪ್ರಕರಣ ವಾಪಸ್ ತೆಗೆದುಕೊಂಡಿದ್ದು' ಎಂಬ ಸಿ.ಎಂ ಸಿದ್ದರಾಮಯ್ಯ ಹೇಳಿಕೆಗೆ ಪ್ರತಿಕ್ರಿಯಿಸಿದ ಅವರು, 'ಅವರು ದೊಡ್ಡ ವಕೀಲರು ಅಂತ ನನಗೆ ಗೊತ್ತು. ಇವರೊಬ್ಬರೇ ಕಾನೂನು ತಿಳಿದುಕೊಂಡಿದ್ದಾರೆ. ಅದಕ್ಕೆ ಅರ್ಕಾವತಿ ಡಿನೋಟಿಫಿಕೇಷನ್ ತೆಗೆದು ರೀಡೂ ಮಾಡಿದ್ರು. ಕೆಂಪಣ್ಣನ ಆಯೋಗ ಮಾಡಿ ಉಳಿದುಕೊಂಡ್ರಲ್ಲ. ಆ ರೀತಿಯ ವಕೀಲರು ಇವರು' ಎಂದು ವಾಗ್ದಾಳಿ ನಡೆಸಿದರು.

'ಜನಸಾಮಾನ್ಯರಿಗೆ ಒಂದು ನ್ಯಾಯ, ಇವರಿಗೊಂದು ನ್ಯಾಯ. ಅಂತಹ ವಕೀಲಿಕೆಯಲ್ಲಿ ಇವರು ಬುದ್ಧಿವಂತರಿದ್ದಾರೆ. ಲೋಕಾಯುಕ್ತವನ್ನು ನಿಷ್ಕ್ರಿಯಗೊಳಿಸಿ ಎಸಿಬಿ ರಚನೆ ಮಾಡಿ, ಇವರ ಮೇಲೆ ಬಂದ ಪ್ರಕರಣಗಳನ್ನು ಮುಚ್ಚಿ ಹಾಕಿಕೊಂಡರು. ನಾನು ಮುಖ್ಯಮಂತ್ರಿಯಾಗಿದ್ದಾಗ ಕಾನೂನುಬಾಹಿರ ಚಟುವಟಿಕೆ ವಿರುದ್ಧ ಹೋರಾಟ ಮಾಡಿದ್ದೆ. ನನ್ನ ವಿರುದ್ಧ ಇವರ ಸರ್ಕಾರದ 15 ಪ್ರಕರಣಗಳಿದ್ದವು. ಆಗ, ನಾನೂ ಹೀಗೇ‌ ನಡೆದುಕೊಂಡೆನಾ?' ಎಂದರು.

'ನಾನು ಎರಡನೇ ಬಾರಿ ಮುಖ್ಯಮಂತ್ರಿಯಾದಾಗಲೂ ಪ್ರಕರಣ ಮುಚ್ಚಿ ಹಾಕಿಕೊಳ್ಳುವ ಕೆಲಸ ಮಾಡಲಿಲ್ಲ. ಮೆರಿಟ್ ಇದ್ರೆ ಮಾಡಿಕೊಳ್ಳಲಿ ಅಂತ ಬಿಟ್ಟಿದ್ದೀನಿ. ಅವರಿಗೂ, ನಮಗೂ ಇರುವ ವ್ಯತ್ಯಾಸ ಇಷ್ಟೇ' ಎಂದರು.

ಕಳ್ಳರ ಕೈಗೆ ರಾಜ್ಯದ ಬೀಗ: ಶೋಭಾ ಕರಂದ್ಲಾಜೆ

ಉಡುಪಿ: 'ರಾಜ್ಯದಲ್ಲಿ ಕಳ್ಳರ ಕೈಗೆ ಬೀಗ ಕೊಟ್ಟಂತಾಗಿದ್ದು, ಕಳ್ಳರ ತಂಡ ಸಚಿವ ಸಂಪುಟದಲ್ಲಿದೆ' ಎಂದು ಕೇಂದ್ರ ಕೃಷಿ ಮತ್ತು ರೈತರ ಕಲ್ಯಾಣ ರಾಜ್ಯ ಸಚಿವೆ ಶೋಭಾ ಕರಂದ್ಲಾಜೆ ವಾಗ್ದಾಳಿ ನಡೆಸಿದರು.

ಗುರುವಾರ ಮಾಧ್ಯಮ ಪ್ರತಿನಿಧಿಗಳ ಜತೆ ಮಾತನಾಡಿ, ಸಿಬಿಐನಲ್ಲಿ ತನಿಖೆ ಹಂತದಲ್ಲಿರುವಾಗ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ವಿರುದ್ಧದ ಪ್ರಕರಣವನ್ನು ಸರ್ಕಾರ ಕೈಬಿಡುವುದು ಭ್ರಷ್ಟಾಚಾರಿಗಳ ರಕ್ಷಣೆ ಮಾಡಿದಂತೆ. ನ್ಯಾಯಾಲಯ, ಸಿಬಿಐ ಇದಕ್ಕೆ ಅವಕಾಶ ಕೊಡುವುದಿಲ್ಲ ಎಂಬ ವಿಶ್ವಾಸವಿದ್ದು, ಭ್ರಷ್ಟರಿಗೆ ಖಚಿತವಾಗಿ ಶಿಕ್ಷೆಯಾಗಲಿದೆ ಎಂದರು.

ವಿವಿಧ ರಾಜ್ಯಗಳ ಚುನಾವಣಾ ಫಲಿತಾಂಶ ಸದ್ಯದಲ್ಲೇ ಹೊರಬೀಳಲಿದ್ದು ಫಲಿತಾಂಶದ ಬಗ್ಗೆ ಹೆಚ್ಚು ನಿರೀಕ್ಷೆ ಇಲ್ಲ. ಕಾಂಗ್ರೆಸ್ ಪಕ್ಷ ಚುನಾವಣೆಯಲ್ಲಿ ಹಣ ಹಂಚಿದೆ. ಕೆಲವು ರಾಜ್ಯಗಳಲ್ಲಿ ಮತದಾರರು ಬಿಜೆಪಿ ಬೆಂಬಲಕ್ಕೆ ನಿಲ್ಲಬಹುದು ಎಂಬ ವಿಶ್ವಾಸವಿದೆ ಎಂದು ಶೋಭಾ ಹೇಳಿದರು.

ಬಿಜೆಪಿಯ ಗಮನವಿರುವುದು ಮುಂದಿನ ಲೋಕಸಭಾ ಚುನಾವಣೆಯ ಮೇಲೆ. ನರೇಂದ್ರ ಮೋದಿ ಮತ್ತೊಮ್ಮೆ ಪ್ರಧಾನಿಯಾಗಬೇಕು, 2024ರಲ್ಲೂ ಬಿಜೆಪಿ ನೇತೃತ್ವದ ಸರ್ಕಾರ ರಚನೆಯಾಗಬೇಕು ಎಂಬುದು ಆಶಯ ಎಂದರು.

ಡಿಕೆಶಿಗೆ ಜೈಲು ಖಚಿತ: ಈಶ್ವರಪ್ಪ

ಹಾವೇರಿ: 'ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಮೇಲೆ ಇರುವ ಸಿಬಿಐ ಪ್ರಕರಣವನ್ನು ಹಿಂಪಡೆಯಲು ರಾಜ್ಯ ಸರ್ಕಾರಕ್ಕೆ ಅಧಿಕಾರವಿಲ್ಲ. ಅವರು ಜೈಲಿಗೆ ಹೋಗುವುದು ನಿಶ್ಚಿತ' ಎಂದು ಬಿಜೆಪಿ ಮುಖಂಡ ಕೆ.ಎಸ್.ಈಶ್ವರಪ್ಪ ಹೇಳಿದರು.

'ಡಿ.ಕೆ.ಶಿವಕುಮಾರ್ ಅವರ ವಿರುದ್ಧ ಪ್ರಕರಣ ಮುಂದುವರಿಸಲು ಅಭ್ಯಂತರ ಇಲ್ಲ ಎಂದು ಕೋರ್ಟ್ ಹೇಳಿದೆ. ಅವರ ವಿರುದ್ಧ ತನಿಖೆ ಶೇ 90ರಷ್ಟು ಮುಗಿದಿದ್ದು, ಆರೋಪಪಟ್ಟಿ ಸಲ್ಲಿಕೆ ಮಾತ್ರ ಬಾಕಿ ಇದೆ' ಎಂದು ಅವರು ಗುರುವಾರ ಸುದ್ದಿಗಾರರಿಗೆ ತಿಳಿಸಿದರು.

'ಡಿ.ಕೆ.ಶಿವಕುಮಾರ್ ಅವರು ಅಕ್ರಮವಾಗಿ ಹಣ ಸಂಪಾದಿಸಿರುವುದು ಮೇಲ್ನೋಟಕ್ಕೆ ತುಂಬಾ ಸ್ಪಷ್ಟವಾಗಿ ಕಾಣುತ್ತದೆ. ನೂರಾರು ಕೋಟಿ ಹಣ ಸಿಕ್ಕಿರುವುದು ಇಡೀ ರಾಜ್ಯದ ಜನ ನೋಡಿದ್ದಾರೆ' ಎಂದರು.

ಜಾಗತಿಕ ಸಮಾವೇಶಕ್ಕೆ 9 ಮಂದಿ

ಪ್ರಜಾವಾಣಿ ವಾರ್ತೆ

ಕಿಕ್ಕೇರಿ: ಜಾಗತಿಕ ಕೃಷಿ ಕ್ಷೇತ್ರದ ಸವಾಲು ಕುರಿತ 8ನೇ ಜಾಗತಿಕ ಸಮಾವೇಶ ಕೊಲಂಬಿಯಾ ದೇಶದ ರಾಜಧಾನಿ ಬೊಗೋಟಾದಲ್ಲಿ ಡಿ. 1ರಿಂದ 8ರವರೆಗೆ ನಡೆಯಲಿದ್ದು, ರಾಜ್ಯದ ವಿವಿಧ ಜಿಲ್ಲೆಗಳ 9 ಮಂದಿ ಪ್ರತಿನಿಧಿಗಳಾಗಿ ಭಾಗವಹಿಸಲಿದ್ದಾರೆ.

ಮಂಡ್ಯದ ನಂದಿನಿ ಜಯರಾಂ, ಚಾಮರಾಜನಗರದ ಚುಕ್ಕಿ ನಂಜುಂಡಸ್ವಾಮಿ, ಬೆಂಗಳೂರಿನ ಪ್ರೊ. ರವಿವರ್ಮ ಕುಮಾರ್, ಕೋಲಾರದ ನಳಿನಿ ಗೌಡ, ಮೈಸೂರಿನ ಮಂಜು ಕಿರಣ್, ಹಾವೇರಿಯ ಮಲ್ಲಿಕಾರ್ಜುನ ಬಳ್ಳಾರಿ, ಬೆಳಗಾವಿಯ ಪಾರ್ವತಿ ಕಲ್ಲಣ್ಣವರ್, ಶಿವಮೊಗ್ಗದ ಅವಿನಾಶ್, ಅಮೃತಭೂಮಿಯಿಂದ ಅಂಬರೀಶ್ ಭಾಗವಹಿಸಲಿದ್ದಾರೆ. ತರ್ಜುಮೆದಾರರಾಗಿ ಬಸವರಾಜ್ ಜೊತೆಗಿರಲಿದ್ದಾರೆ.

'ಸಮಾವೇಶವನ್ನು ಜಾಗತಿಕ ರೈತ ಸಂಘಟನೆಗಳ ಒಕ್ಕೂಟ (ಎಲ್.ವಿ.ಸಿ.ಯು) ಸಂಘಟಿಸಿದ್ದು, ಜಗತ್ತಿನ 81 ದೇಶಗಳ 161 ರೈತ ಸಂಘಟನೆಗಳು ಭಾಗವಹಿಸಲಿವೆ. ಕಾರ್ಪೊರೇಟ್ ಕೃಷಿಗೆ ನಮ್ಮ ಸಾಂಪ್ರದಾಯಿಕ ಕೃಷಿಯು ಪರ್ಯಾಯವಾಗಿದೆ. ಕೃಷಿ ಹೆಜ್ಜೆ ಹೇಗಿರಬೇಕು ಎಂಬ ಕುರಿತು ಚರ್ಚಿಸಲಾಗುವುದು' ಎಂದು ನಂದಿನಿ ಜಯರಾಂ ತಿಳಿಸಿದ್ದಾರೆ.



ಬೃಹತ್ ಬಲೂನ್

ರಾಮನಾಥ ದೇವರ ಜಾತ್ರೆ ಪ್ರಯುಕ್ತ ಕಾರವಾರ ತಾಲ್ಲೂಕಿನ ಮಾಜಾಳಿ ಗ್ರಾಮದಲ್ಲಿ ಭಕ್ತರು 'ಬಲೂನ್' ಹಾರಿಬಿಟ್ಟರು. ಗ್ರಾಮಸ್ಥರೇ ಸಿದ್ಧಪಡಿಸಿರುವ ಬಲೂನ್ ಅನ್ನು 'ವಾಫರ್' ಅಂತಲೂ ಕರೆಯುತ್ತಾರೆ ಪ್ರಜಾವಾಣಿ ಚಿತ್ರ

ಪಂಚಮಸಾಲಿ ಶಾಸಕರ ಸಭೆ 5ಕ್ಕೆ: ಸ್ವಾಮೀಜಿ

ಬೆಳಗಾವಿ: 'ಲಿಂಗಾಯತ ಪಂಚಮಸಾಲಿ ಸಮುದಾಯಕ್ಕೆ ಪ್ರವರ್ಗ '2ಎ' ಮೀಸಲಾತಿ ಕಲ್ಪಿಸಲು ಕೋರಿ ಡಿ. 5ರಂದು ಬೆಳಗಾವಿಯಲ್ಲಿ ಸಮು ದಾಯದ ಶಾಸಕರು, ಮಾಜಿ ಶಾಸಕರ ಸಭೆ ನಡೆಸುತ್ತೇವೆ' ಎಂದು ಕೂಡಲಸಂಗಮದ ಪಂಚಮಸಾಲಿ ಪೀಠದ ಬಸವಜಯ ಮೃತ್ಯುಂಜಯ ಸ್ವಾಮೀಜಿ ಹೇಳಿದರು.

'ಹಿಂದಿನ ಬಿಜೆಪಿ ಸರ್ಕಾರ ನೀಡಿದ '2ಡಿ' ಮೀಸಲಾತಿ ತೃಪ್ತಿ ತಂದಿಲ್ಲ. ವಿವಿಧ ಜಿಲ್ಲೆಗಳಲ್ಲಿ ಇಷ್ಟಲಿಂಗ ಪೂಜೆ ಕೈಗೊಂಡು ಹೋರಾಟ ನಡೆಸಿದರೂ ಪ್ರಯೋಜನವಾಗಿಲ್ಲ. ಅದಕ್ಕೆಂದೇ ಡಿ.5ರಂದು ಸಭೆ ನಡೆಸಿ, ಸರ್ಕಾರದ ಮೇಲೆ ಒತ್ತಡ ಹೇರುತ್ತೇವೆ. ಸಭೆಗೆ ಮುಖ್ಯಮಂತ್ರಿಯವರನ್ನು ಕರೆ ತರುವ ಜವಾಬ್ದಾರಿಯನ್ನು ಐವರು ಶಾಸಕರಿಗೆ ವಹಿಸಿದ್ದೇವೆ' ಎಂದು ಅವರು ಗುರುವಾರ ಸುದ್ದಿಗಾರರಿಗೆ ತಿಳಿಸಿದರು.

'ಡಿ.4ರಿಂದ 15ರವರೆಗಿನ ಅಧಿವೇಶನದ ಅವಧಿಯಲ್ಲಿ ನಮ್ಮ ಬೇಡಿಕೆಗಳನ್ನು ಈಡೇರಿಸದಿದ್ದರೆ, ಸೌಧದ ಮುಂಭಾಗದಲ್ಲಿ ಪ್ರತಿಭಟನೆ ನಡೆಸಿ ಇಷ್ಟಲಿಂಗ ಪೂಜೆ ಮಾಡುತ್ತೇವೆ. ನ್ಯಾಯ ಸಿಗದಿದ್ದರೆ, ರಾಜ್ಯಮಟ್ಟದ ಸಮಾವೇಶ ಮಾಡುತ್ತೇವೆ' ಎಂದರು.

'ನಮಾಜ್‌ಗೆ ಎಷ್ಟು ಶುಲ್ಕ?'

ಪ್ರಜಾವಾಣಿ ವಾರ್ತೆ

ಹುಬ್ಬಳ್ಳಿ: 'ಈದ್ಗಾ ಮೈದಾನದಲ್ಲಿ ಮಹನೀಯರ ಜಯಂತಿ ಆಚರಣೆಗೆ ಶುಲ್ಕ ವಸೂಲಿ ಮಾಡುವ ಮಹಾನಗರ ಪಾಲಿಕೆ, ವರ್ಷದಲ್ಲಿ ಎರಡು ಸಲ ನಮಾಜ್ ಮಾಡುವ ಮುಸ್ಲಿಮರಿಗೆ ಎಷ್ಟು ಶುಲ್ಕ ವಿಧಿಸುತ್ತದೆ' ಎಂದು ಶ್ರೀರಾಮ ಸೇನೆ ಸಂಘಟನೆಯ ರಾಜ್ಯ ಘಟಕದ ಅಧ್ಯಕ್ಷ ಗಂಗಾಧರ ಕುಲಕರ್ಣಿ ಪ್ರಶ್ನಿಸಿದರು.

'ಸಾರ್ವಜನಿಕ ಕಾರ್ಯಕ್ರಮಕ್ಕೆ ಮೈದಾನದಲ್ಲಿ ಮುಕ್ತ ಅವಕಾಶವಿದ್ದರೂ ಪಾಲಿಕೆ ಎರಡು ಗಂಟೆಯ ಕನಕದಾಸ ಜಯಂತಿ ಆಚರಣೆಗೆ ₹10 ಸಾವಿರ ಶುಲ್ಕ ವಿಧಿಸಿದೆ. ಇದು ಅಕ್ಷಮ್ಯ. ಜಿಲ್ಲಾಡಳಿತ, ಮಹಾನಗರ ಪಾಲಿಕೆಗೆ ನಾಚಿಕೆಯಾಗಬೇಕು. ಮುಂಬರುವ ದಿನಗಳಲ್ಲಿ ಒಂದೇ ಒಂದು ರೂಪಾಯಿ ಸಹ ಪಡೆಯದೆ ಸಂಘಟನೆಗೆ ಮೈದಾನ ಬಿಟ್ಟುಕೊಡಬೇಕು' ಎಂದು ಅವರು ಆಗ್ರಹಿಸಿದರು.

'ಸಾವಿರಾರು ಹಿಂದೂ ಕಾರ್ಯಕರ್ತರ ಹೋರಾಟದ ಫಲವಾಗಿ ಈದ್ಗಾ ಮೈದಾನ ಮಹಾನಗರ ಪಾಲಿಕೆಯ ಸುಪರ್ದಿಗೆ ಬಂದಿದೆ. ಜೈಲುವಾಸ, ಲಾಠಿ ಏಟು ತಿಂದು ಮೈದಾನ ಪಡೆದಿದ್ದೇವೆ. ಅದಕ್ಕೆ ನಾವು ಇಲ್ಲಿ ಜಯಂತಿಗಳನ್ನು ಆಚರಿಸುತ್ತೇವೆ. ಅದನ್ನು ಪ್ರಶ್ನಿಸುವ ಹಕ್ಕು ಯಾರಿಗೂ ಇಲ್ಲ' ಎಂದರು.

'ಮೈದಾನದಲ್ಲಿ ಕನಕದಾಸ ಜಯಂತಿ ಆಚರಣೆಗೆ ಅನುಮತಿಗಾಗಿ ವಾರದ ಹಿಂದೆಯೇ ಪಾಲಿಕೆಗೆ ಅರ್ಜಿ ಸಲ್ಲಿಸಲಾಗಿತ್ತು. ಆದರೆ, ಬುಧವಾರ ರಾತ್ರಿ 9ಕ್ಕೆ ಅಧಿಕಾರಿಗಳು ಅನುಮತಿ ಕೊಟ್ಟು ಅವಮಾನಿಸಿದ್ದಾರೆ' ಎಂದು ಕಿಡಿಕಾರಿದರು.

ಕಳೆದ ಸಲದಂತೆ ಶುಲ್ಕ: 'ಕಳೆದ ಬಾರಿ ಶ್ರೀರಾಮ ಸೇನೆ ಸಂಘಟನೆ ಮೈದಾನದಲ್ಲಿ ಕನಕದಾಸ ಜಯಂತಿ ಆಚರಿಸಲು ₹10 ಸಾವಿರ ಶುಲ್ಕ ಪಾವತಿಸಿತ್ತು. ಈ ವರ್ಷವೂ ಅದನ್ನೇ ಮುಂದುವರಿಸಲಾಗಿದೆ. ಪಾಲಿಕೆಯ ಸಾಮಾನ್ಯ ಸಭೆಯಲ್ಲಿ ಠರಾವು ಅಂಗೀಕಾರ ಆದ ಕಾರಣ ಗಣೇಶ ಮೂರ್ತಿ ಪ್ರತಿಷ್ಠಾಪಿಸುವ ಸಂಘಟನೆಗೆ ಮೈದಾನವನ್ನು ಉಚಿತವಾಗಿ ನೀಡಲಾಗಿತ್ತು' ಎಂದು ಪಾಲಿಕೆ ಆಯುಕ್ತ ಈಶ್ವರ ಉಳ್ಳಾಗಡ್ಡಿ 'ಪ್ರಜಾವಾಣಿ'ಗೆ ತಿಳಿಸಿದರು.

'ಮುಸ್ಲಿಂ ಸಮುದಾಯಕ್ಕೆ ಈದ್ಗಾ ಮೈದಾನವನ್ನು 99 ವರ್ಷಕ್ಕೆ ಗುತ್ತಿಗೆ ರೂಪದಲ್ಲಿ ಕೊಡಲಾಗಿದೆ. ₹1 ಶುಲ್ಕ ಪಾವತಿಸಿಕೊಂಡು, ವರ್ಷದಲ್ಲಿ 2 ಬಾರಿ ಮೈದಾನದಲ್ಲಿ ನಮಾಜ್ ಮಾಡಲು ಅವಕಾಶ ಕೊಡುತ್ತೇವೆ. ಮೈದಾನವು ಯಾವುದಾದರೂ ಸಂಘಟನೆಗೆ ಉಚಿತವಾಗಿ ಬೇಕಿದ್ದರೆ, ಮುಂಚಿತವಾಗಿ ಅರ್ಜಿ ಸಲ್ಲಿಸಬೇಕು. ಅರ್ಜಿಯನ್ನು ಸಾಮಾನ್ಯ ಸಭೆಯಲ್ಲಿ ಚರ್ಚಿಸಿ, ನಿರ್ಧರಿಸಲಾಗುವುದು' ಎಂದರು.

'ಶಾಸಕರ, ಸಚಿವರ ಸಮಸ್ಯೆಗೆ ಕೊನೆ ಇಲ್ಲ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಶಾಸಕರು ಮತ್ತು ಸಚಿವರ ಸಮಸ್ಯೆಗಳಿಗೆ ಕೊನೆ ಇಲ್ಲ. ಒಮ್ಮೆಲೇ ಬಗೆಹರಿಯಲೂ ಸಾಧ್ಯವೂ ಇಲ್ಲ' ಎಂದು ಲೋಕೋಪಯೋಗಿ ಸಚಿವ ಸತೀಶ ಜಾರಕಿಹೊಳಿ ಹೇಳಿದರು.

ಸುದ್ದಿಗಾರರ ಜೊತೆ ಗುರುವಾರ ಮಾತನಾಡಿದ ಅವರು, 'ಶಾಸಕ ಬಿ.ಆರ್. ಪಾಟೀಲ ಅವರಿಗೆ ತಮ್ಮ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಸಮಸ್ಯೆ ಇರಬಹುದು. ಆ ಉದ್ದೇಶದಿಂದ ಸಿದ್ದರಾಮಯ್ಯ ಅವರನ್ನು ಭೇಟಿ ಮಾಡಿದ್ದಾರೆ' ಎಂದರು.

'ಸರ್ಕಾರ ಇದ್ದಾಗ ನಿತ್ಯ ಹೊಸ ಸಮಸ್ಯೆಗಳು ಸೃಷ್ಟಿ ಆಗಿಯೇ ಆಗುತ್ತವೆ. ಇವತ್ತು ಒಂದನ್ನು ಪರಿಹರಿಸಿದರೆ, ನಾಳೆ ಮತ್ತೊಂದು ಹುಟ್ಟಿಕೊಳ್ಳುತ್ತದೆ. ಅಧಿಕಾರದ ಕುರ್ಚಿ ಮೇಲೆ ಕುಳಿತಾಗ ಕೆಲವು ಸಮಸ್ಯೆಗಳನ್ನು ಪರಿಹರಿಸುತ್ತೇವೆ. ಕೆಲವು ಬಗೆಹರಿಯುವುದಿಲ್ಲ' ಎಂದರು.

ಗುತ್ತಿಗೆದಾರರಿಗೆ ಬಾಕಿ ಬಿಲ್ ಪಾವತಿ ವಿಷಯದಲ್ಲಿ ಹೈಕೋರ್ಟ್ ಚಾಟಿ ಬೀಸಿದ ಬಗ್ಗೆ ಕೇಳಿದ ಪ್ರಶ್ನೆಗೆ, 'ನಮ್ಮ ಇಲಾಖೆಗೆ ಸಂಬಂಧಿಸಿ ಹೈಕೋರ್ಟ್ ತನ್ನ ಅಭಿಪ್ರಾಯ ನೀಡಿಲ್ಲ. ಬಿಬಿಎಂಪಿಯವರು ಯಾರೋ ಕೋರ್ಟ್‌ಗೆ ಹೋಗಿದ್ದಾರೆ. ನಮ್ಮ ಇಲಾಖೆಯಲ್ಲಿ ಎಲ್ಲರಿಗೂ ಸರಿಯಾಗಿ ಬಿಲ್ ಪಾವತಿ ಮಾಡಲು ಪ್ರಯತ್ನಿಸುತ್ತಿದ್ದೇವೆ' ಎಂದರು.

ನಿಗಮ– ಮಂಡಳಿ ನೇಮಕ ವೇಳೆ ಹಿರಿಯ ನಾಯಕರ ಅಭಿಪ್ರಾಯ ಪಡೆಯದ ವಿಚಾರದಲ್ಲಿ ಸಚಿವ ಜಿ. ಪರಮೇಶ್ವರ ಮಾತಿಗೆ ದನಿಗೂಡಿಸಿದ ಸತೀಶ, 'ಪರಮೇಶ್ವರ ಅವರ ಅಭಿಪ್ರಾಯ ಕೇಳಬೇಕಿತ್ತು. ಎಂಟು ವರ್ಷ ಅವರು ಪಕ್ಷದ ಅಧ್ಯಕ್ಷರಾಗಿದ್ದವರು' ಎಂದರು.

'ನಿಗಮ– ಮಂಡಳಿಗಳಲ್ಲಿ ಹೊಸಬರಿಗೆ ಅವಕಾಶ ಇಲ್ಲವೆಂದು ಮೊದಲೇ ಹೇಳಿದ್ದಾರೆ. 3–4 ಬಾರಿ ಗೆದ್ದವರಿಗೆ ಅವಕಾಶ ನೀಡಲು ಪಕ್ಷ ಬದ್ಧವಾಗಿದೆ. ನಮ್ಮ ಜಿಲ್ಲೆಯಲ್ಲೂ (ಬೆಳಗಾವಿ) ಹಿರಿಯ ಶಾಸಕರು ಇದ್ದಾರೆ. ಅವರಿಗೂ ನಿಗಮ ಮಂಡಳಿಗಳಲ್ಲಿ ಸ್ಥಾನ ಕೊಟ್ಟೇ ಕೊಡ್ತಾರೆ. ಆದಷ್ಟು ಬೇಗ ನೇಮಕಾತಿಯಾದರೆ ಒಳ್ಳೆಯದು' ಎಂದರು.

'ಬೆಳಗಾವಿ ಅಧಿವೇಶನದಲ್ಲಿ ಎಂದೂ ಕೂಡ ಉತ್ತರ ಕರ್ನಾಟಕ ಭಾಗದ ಸಮಸ್ಯೆ ಚರ್ಚೆ ಆಗಿಲ್ಲ. ಈ ಬಾರಿಯಾದರೂ ಚರ್ಚೆ ಆಗುತ್ತದೆಯೇ ಎಂದು ನೋಡಬೇಕು' ಎಂದರು.

'ಶೆಟ್ಟರ್ ಶೀಘ್ರವೇ ಬಿಜೆಪಿಗೆ'

ಪ್ರಜಾವಾಣಿ ವಾರ್ತೆ



ಕೆ.ಎಸ್.ಈಶ್ವರಪ್ಪ

ಗದಗ: 'ನನಗಂತೂ ಜಗದೀಶ ಶೆಟ್ಟರ್ ಬಿಜೆಪಿಗೆ ಬರಬೇಕು ಎಂಬ ಅಪೇಕ್ಷೆ ಇದೆ. ಅವರು ಆತ್ಮೀಯ ಸ್ನೇಹಿತರು. ಅವರ ತಂದೆ ಜನಸಂಘದ ಕಾಲದಿಂದ ಬಂದವರು. ಅವರ ಮೈಯಲ್ಲಿ ಹಿಂದುತ್ವದ ರಕ್ತ ಹರಿಯುತ್ತಿದೆ' ಎಂದು ಬಿಜೆಪಿ ಮುಖಂಡ ಕೆ.ಎಸ್.ಈಶ್ವರಪ್ಪ ತಿಳಿಸಿದರು.

'ಶೆಟ್ಟರ್ ಕಾಂಗ್ರೆಸ್‌ಗೆ ಹೋದಾಗ ನನಗೆ ತುಂಬ ನೋವಾಗಿತ್ತು. ಬಹಿರಂಗವಾಗಿ ಪತ್ರವನ್ನೂ ಬರೆದಿದ್ದೆ. ಕಾಂಗ್ರೆಸ್ ಸೇರಿದ ಕಾರಣಕ್ಕೆ ಬಿಜೆಪಿ ವಿರುದ್ಧ ಪದೇ ಪದೇ ಹೇಳಿಕೆ ನೀಡುತ್ತಿದ್ದಾರೆ. ಆದರೆ, ಇನ್ನು ಸ್ವಲ್ಪ ದಿನದಲ್ಲೇ ನಮ್ಮ ಕಡೆಗೆ ಬರುತ್ತಾರೆ' ಎಂದು ಅವರು ಸುದ್ದಿಗಾರರಿಗೆ ಹೇಳಿದರು

'ದೇಶದಲ್ಲಿ ಕಾಂಗ್ರೆಸ್ ದುರಸ್ತಿ ಮಾಡಲು ಸಾಧ್ಯವಿಲ್ಲ. ಇದನ್ನು ಖಾಸಗಿಯಾಗಿ ಶೆಟ್ಟರ್ ಅವರನ್ನೇ ಕೇಳಿ. ಕರ್ನಾಟಕ ಬಿಟ್ಟರೆ ದೇಶದಲ್ಲಿ ಕಾಂಗ್ರೆಸ್ ಎಲ್ಲಿದೆ? ಅಲ್ಲೊಂದು, ಇಲ್ಲೊಂದು, ಮತ್ತೊಂದು ಅಂತ ಹುಡುಕಬೇಕಷ್ಟೆ' ಎಂದು ಲೇವಡಿ ಮಾಡಿದರು.

ವೆಂಕಟೇಶ್ ಕುಮಾರ್‌ಗೆ ಕದ್ರಿ ಗೋಪಾಲನಾಥ್ ಪ್ರಶಸ್ತಿ



ವೆಂಕಟೇಶ್

ಮಂಗಳೂರು: ಇಲ್ಲಿನ ಡಾ. ಕದ್ರಿ ಗೋಪಾಲನಾಥ್ ಅಕಾಡೆಮಿ ಫಾರ್ ಆರ್ಟ್ಸ್ ನೀಡುವ ಕದ್ರಿ ಗೋಪಾಲನಾಥ್ ಜೀವಮಾನ ಸಾಧನೆ ಪ್ರಶಸ್ತಿಗೆ ಹಿಂದೂಸ್ತಾನಿ ಗಾಯಕ ಪಂಡಿತ್ ವೆಂಕಟೇಶ್ ಕುಮಾರ್ ಅವರನ್ನು ಆಯ್ಕೆ ಮಾಡಲಾಗಿದೆ.

ಪ್ರಶಸ್ತಿಯು ₹50 ಸಾವಿರ ನಗದು, ಬೆಳ್ಳಿಯ ಫಲಕವನ್ನು ಹೊಂದಿದೆ. ಸ್ಯಾಕ್ಸೊ ಫೋನ್ ವಾದಕ ದಿವಂಗತ ಕದ್ರಿ ಗೋಪಾಲನಾಥ್ ಅವರ 74ನೇ ಜನ್ಮದಿನದ ಅಂಗವಾಗಿ ಡಿ. 23ರಂದು ಮಂಗಳೂರಿನಲ್ಲಿ ನಡೆಯುವ ಕದ್ರಿ ಸಂಗೀತ ಸೌರಭದಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಗುತ್ತದೆ ಎಂದು ಸಂಘಟಕರಾದ ಕದ್ರಿ ಮಣಿಕಾಂತ್ ತಿಳಿಸಿದ್ದಾರೆ.

ಅನುಪಮಾಗೆ ಶಿವರಾತ್ರೀಶ್ವರ ಪ್ರಶಸ್ತಿ



ಡಾ.ಎಚ್.ಎಸ್. ಅನುಪಮಾ

ಮೈಸೂರು: ಶಿವರಾತ್ರೀಶ್ವರ ಧಾರ್ಮಿಕ ದತ್ತಿ ನೀಡುವ, ಪ್ರಸಕ್ತ ಸಾಲಿನ ಶಿವರಾತ್ರೀಶ್ವರ ಪ್ರಶಸ್ತಿಗೆ ಡಾ. ಎಚ್.ಎಸ್. ಅನುಪಮಾ ಅವರ 'ಬೆಳಗಿನೊಳಗು ಮಹಾದೇವಿಯಕ್ಕ' ಕೃತಿ ಆಯ್ಕೆಯಾಗಿದೆ.

ಶಿವಮೊಗ್ಗ ಜಿಲ್ಲೆಯ ತೀರ್ಥಹಳ್ಳಿಯ ಅವರು ಹೊನ್ನಾವರ ತಾಲ್ಲೂಕು ಕವಲಕ್ಕಿ ಗ್ರಾಮದಲ್ಲಿ ಆಸ್ಪತ್ರೆ ತೆರೆದು ವೈದ್ಯರಾಗಿ ಕೆಲಸ ಮಾಡುತ್ತಿದ್ದಾರೆ. 50ಕ್ಕೂ ಹೆಚ್ಚು ಕೃತಿಗಳು ಪ್ರಕಟವಾಗಿವೆ. ಪ್ರಶಸ್ತಿಯು ಫಲಕ ಹಾಗೂ ₹25 ಸಾವಿರ ನಗದು ಪುರಸ್ಕಾರ ಹೊಂದಿದೆ ಎಂದು ಪ್ರಕಟಣೆ ತಿಳಿಸಿದೆ.

ಶಿಕ್ಷಕಿ ಅಪಹರಣ ಆರೋಪಿಗಳ ಬಂಧನ

ಪ್ರಜಾವಾಣಿ ವಾರ್ತೆ

ಹಾಸನ: ನಗರದ ಹೊರವಲಯದ ಬಿಟ್ಟಗೌಡನಹಳ್ಳಿಯ ಬಳಿ ಗುರುವಾರ ಬೆಳಿಗ್ಗೆ ಖಾಸಗಿ ಶಾಲೆಯ ಶಿಕ್ಷಕಿ ಅರ್ಪಿತಾ ಎಂಬವರನ್ನು ಅಪಹರಿಸಿದ್ದ ಆಕೆಯ ಸಂಬಂಧಿ ರಾಮು ಹಾಗೂ ತಂಡವನ್ನು ಪೊಲೀಸರು ಪತ್ತೆ ಮಾಡಿದ್ದು, ಆರೋಪಿಗಳನ್ನು ಬಂಧಿಸಿದ್ದಾರೆ.

ಸೋಮವಾರಪೇಟೆ ಕಡೆಗೆ ತೆರಳುತ್ತಿದ್ದ ಆರೋಪಿಗಳನ್ನು ದಕ್ಷಿಣ ಕನ್ನಡ ಜಿಲ್ಲೆಯ ನೆಲ್ಯಾಡಿ ಬಳಿ ಬಂಧಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಗುರುವಾರ ಬೆಳಿಗ್ಗೆ ಅರ್ಪಿತಾ ಶಾಲೆಗೆ ಹೋಗುತ್ತಿದ್ದ ಸಮಯದಲ್ಲಿ, ಒಬ್ಬ ರಸ್ತೆಯಲ್ಲಿ ನಿಂತಿದ್ದ. ಅರ್ಪಿತಾ ಬರುತ್ತಿದ್ದಂತೆಯೇ ಕಾರಿನ ಚಾಲಕನಿಗೆ ಬರುವಂತೆ ಸೂಚನೆ ನೀಡಿದ್ದ. ನಂತರ ಹಿಂದಿನಿಂದ ಮತ್ತೊಬ್ಬ ಬಂದಿದ್ದು, ಇಬ್ಬರೂ ಸೇರಿ, ಅರ್ಪಿತಾ ಅವರನ್ನು ಕಾರಿನಲ್ಲಿ ಎತ್ತಿ ಹಾಕಿದ್ದರು. ಈ ದೃಶ್ಯಗಳು ಸಿ.ಸಿ.ಟಿ.ವಿ ಕ್ಯಾಮೆರಾದಲ್ಲಿ ಸೆರೆಯಾಗಿದ್ದವು.

15 ದಿನದ ಹಿಂದೆ ರಾಮು ಮತ್ತು ಪೋಷಕರು ಮದುವೆ ಪ್ರಸ್ತಾಪದೊಂದಿಗೆ ಶಿಕ್ಷಕಿ ಮನೆಗೆ ಬಂದಿದ್ದರು. ಈ ವೇಳೆ ಮದುವೆಗೆ ಶಿಕ್ಷಕಿ ಅರ್ಪಿತಾ ವಿರೋಧ ವ್ಯಕ್ತಪಡಿಸಿದ್ದರು. ಶಿಕ್ಷಕಿ ಮದುವೆಗೆ ಒಪ್ಪಿಲ್ಲವೆಂದು ಆಕೆಯನ್ನು ಅಪಹರಣ ಮಾಡಲಾಗಿದೆ ಎಂದು ಕುಟುಂಬಸ್ಥರು ಆರೋಪಿಸಿದ್ದರು.

ಸ್ಥಳಕ್ಕೆ ಭೇಟಿ ನೀಡಿದ ಎಸ್‌ಪಿ ಮೊಹಮ್ಮದ್ ಸುಜೀತಾ, ಅಪಹರಣಕಾರರ ಪತ್ತೆಗೆ 3 ತಂಡ ರಚಿಸಲಾಗಿತ್ತು. ಮೊಬೈಲ್ ಲೊಕೇಶನ್ ಆಧಾರದಲ್ಲಿ ಆರೋಪಿಗಳನ್ನು ಬಂಧಿಸಲಾಗಿದೆ ಎಂದು ಮಾಹಿತಿ ನೀಡಿದ್ದಾರೆ.

ಡಿ.2ರಂದು ಬೆಂಗಳೂರಿನ ಸ್ವಾತಂತ್ರ್ಯ ಉದ್ಯಾನದಲ್ಲಿ ಸಭೆ

ಪ್ಯಾಲೆಸ್ಟೀನ್ ಪರ ಸಭೆಗೆ ತಡೆ: ಆಕ್ರೋಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪ್ಯಾಲೆಸ್ಟೀನ್ ನಾಗರಿಕರ ಪರವಾಗಿ ರಾಜ್ಯದಲ್ಲಿ ನಡೆಸುವ ಸಭೆಗಳಿಗೆ ಅನುಮತಿ ನೀಡಲು ಪೊಲೀಸರು ನಿರಾಕರಿಸುತ್ತಿರುವುದಕ್ಕೆ ಹೋರಾಟಗಾರರು ಆಕ್ರೋಶ ವ್ಯಕ್ತಪಡಿಸಿದ್ದು, 'ಅಭಿವ್ಯಕ್ತಿ ಸ್ವಾತಂತ್ರ್ಯ ಕಸಿದುಕೊಳ್ಳಲಾಗುತ್ತಿದೆ' ಎಂದು ಕಿಡಿಕಾರಿದ್ದಾರೆ.

ಗಾಯಕಿ ಎಂ.ಡಿ.ಪಲ್ಲವಿ ಸೇರಿದಂತೆ ಹಲವರ ನೇತೃತ್ವದಲ್ಲಿ ಬುಧವಾರ ರಂಗಶಂಕರದಲ್ಲಿ ಆಯೋಜಿಸಿದ್ದ ಪ್ಯಾಲೆಸ್ಟೀನ್ ಪರ ಕವಿತೆ ವಾಚನ, ಕಿರುನಾಟಕ ಪ್ರದರ್ಶನಕ್ಕೆ ಪೊಲೀಸರು ಅನುಮತಿ ನಿರಾಕರಿಸಿದ್ದರು. ಈ ಘಟನೆಯ ಮೇಲೆ ಸಾಮಾಜಿಕ ಮಾಧ್ಯಮದಲ್ಲಿ ಆಕ್ರೋಶ ಹೆಚ್ಚಾಗಿದೆ.

'ಹೈಕೋರ್ಟ್ ಸೂಚನೆಯಂತೆ ಸ್ವಾತಂತ್ರ್ಯ ಉದ್ಯಾನದಲ್ಲಿ ಪ್ರತಿಭಟನೆ ನಡೆಸಲು ಅವಕಾಶವಿದೆ. ಆದರೆ, ಪ್ಯಾಲೆಸ್ಟೀನ್ ನಾಗರಿಕರ ಪರ ಪ್ರತಿಭಟನೆ ನಡೆಸುತ್ತೇವೆ ಎಂದರೆ ಅಲ್ಲೂ ಪ್ರತಿಭಟನೆಗೆ ಅವಕಾಶ ನೀಡುತ್ತಿಲ್ಲ. ನಾವು ಯಾವ ಸಮಾಜದಲ್ಲಿ ಇದ್ದೇವೆ. ಇದು ಪ್ರಜಾಪ್ರಭುತ್ವ ವಿರೋಧಿ ನಡೆ ಅಲ್ಲವೇ' ಎಂದು ಹೋರಾಟಗಾರರು ಪ್ರಶ್ನಿಸಿದ್ದಾರೆ.

'ಅನುಮತಿ ನಿರಾಕರಣೆ ತಪ್ಪು, ಮುಂದೆ ಈ ರೀತಿ ಆಗಬಾರದು' ಎಂದು ಸಾಹಿತಿ ಪುರುಷೋತ್ತಮ ಬಿಳಿಮಲೆ ಪ್ರತಿಕ್ರಿಯಿಸಿದ್ದಾರೆ.

> **ಕಾನೂನು ಹಾಗೂ ಸುವ್ಯವಸ್ಥೆ ಕಾಪಾಡುವ ದೃಷ್ಟಿಯಿಂದ ಬೆಂಗಳೂರು ಮಾತ್ರವಲ್ಲ. ರಾಜ್ಯದ ಬೇರೆ ಎಲ್ಲೂ ಅನುಮತಿ ನೀಡುತ್ತಿಲ್ಲ**
> **ಬಿ.ದಯಾನಂದ್,** ನಗರ ಪೊಲೀಸ್ ಕಮಿಷನರ್

ಪೊಲೀಸರ ನಡೆ ಖಂಡಿಸಿ, ಡಿ.2ರಂದು ಸಂಜೆ 4.30ಕ್ಕೆ ಸ್ವಾತಂತ್ರ್ಯ ಉದ್ಯಾನದಲ್ಲಿ ಪ್ರತಿಭಟನಾ ಸಭೆ ಆಯೋಜಿಸಲಾಗಿದೆ. ಸಾಹಿತಿ ದೇವನೂರ ಮಹಾದೇವ, ಸಾಣೆಹಳ್ಳಿಯ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿ, ರಾಜ್ಯ ರೈತ ಸಂಘದ ಚುಕ್ಕಿ ನಂಜುಂಡಸ್ವಾಮಿ, ಸಾಹಿತಿ ರಹಮತ್ ತರೀಕೆರೆ, ರಂಗಕರ್ಮಿ ಬಿ.ಸುರೇಶ್, ಶಿಕ್ಷಣ ತಜ್ಞ ನಿರಂಜನಾರಾಧ್ಯ, ಚಿತ್ರನಟ ಪ್ರಕಾಶ್ ರೈ ಸೇರಿದಂತೆ 100ಕ್ಕೂ ಹೆಚ್ಚು ಹೋರಾಟಗಾರರು ಈ ಸಭೆಯಲ್ಲಿ ಪಾಲ್ಗೊಳ್ಳಲಿದ್ದಾರೆ ಎಂದು ಆಯೋಜಕರು ತಿಳಿಸಿದ್ದಾರೆ.

'ಪ್ಯಾಲೆಸ್ಟೀನ್ ನಾಗರಿಕರಿಗೆ ನ್ಯಾಯ ಸಿಕ್ಕಲಿ. ಇಸ್ರೇಲ್ ನಡೆಸುತ್ತಿರುವ ನರಮೇಧ ನಿಲ್ಲಲಿ. ಮನುಷ್ಯತ್ವದ ಪರವಾಗಿ ನಿಲ್ಲಬೇಕಾದ ಜರೂರಿರುವ ಈ ಹೊತ್ತಿನಲ್ಲಿ ಸಭೆ ಮುಂದೂಡುವ ಪ್ರಶ್ನೆಯೇ ಇಲ್ಲ' ಎಂದು ಹೇಳಿದ್ದಾರೆ.

'ಗಾಂಧಿಭವನ, ಅಂಬೇಡ್ಕರ್ ಭವನದ ಮುಖ್ಯಸ್ಥರನ್ನೇ ಪೊಲೀಸರು ಬೆದರಿಸುತ್ತಿದ್ದಾರೆ. ಅಲ್ಲಿ ಅಹಿತಕರ ಘಟನೆಗಳು ನಡೆದರೆ ಭವನಕ್ಕೆ ಸಂಬಂಧಪಟ್ಟವರ ವಿರುದ್ಧವೇ ಕ್ರಮ ಕೈಗೊಳ್ಳಲಾಗುವುದು ಎಂದು ಪೊಲೀಸರು ನೋಟಿಸ್ ಕಳುಹಿಸಿದ್ದಾರೆ. ಭವನಗಳಲ್ಲಿ ಪುಟ್ಟ ಸಭೆ ನಡೆಸುವುದಕ್ಕೂ ಪೊಲೀಸರ ಅನುಮತಿ ಬೇಕಾಗಿದೆ. ಅನುಮತಿ ಪಡೆಯಲು ತೆರಳಿದರೆ ದಿನಗಟ್ಟಲೇ ಕಾಯಿಸುತ್ತಿದ್ದಾರೆ. ಅಲ್ಲದೇ ಅನುಮಾನಿಸುತ್ತಿದ್ದಾರೆ' ಎಂದು ಬರಹಗಾರ ರಾಜಶೇಖರ್ ಅಕ್ಕಿ ಎಂಬವರು ಹೈಗ್ರೌಂಡ್ಸ್ ಠಾಣೆ ಪೊಲೀಸರು ನೀಡಿರುವ ನೋಟಿಸ್ ಅನ್ನು ಸಾಮಾಜಿಕ ಮಾಧ್ಯಮದಲ್ಲಿ ಹಾಕಿ ಆಕ್ರೋಶ ವ್ಯಕ್ತಪಡಿಸಿದ್ದಾರೆ.

ನ.5ರಂದು ನಗರದ ಸೇಂಟ್ ಮಾರ್ಕ್ಸ್ ರಸ್ತೆಯಲ್ಲಿ ಪ್ರತಿಭಟನೆ ನಡೆಸಿದ್ದವರ ವಿರುದ್ಧ ಕಬ್ಬನ್‌ಪಾರ್ಕ್ ಪೊಲೀಸರು ಸ್ವಯಂ ಪ್ರೇರಿತ ದೂರು ದಾಖಲಿಸಿಕೊಂಡಿದ್ದರು. ಬೈಶಾಲಿ ಡೇ, ಶಶಾಂಕ್, ಮೊಹಮ್ಮದ್ ಖಲೀಫ್ ಸೇರಿದಂತೆ 25 ಮಂದಿ ವಿರುದ್ಧ ಸಾರ್ವಜನಿಕ ಸಂಚಾರಕ್ಕೆ ಅಡಚಣೆ, ಅನುಮತಿ ಪಡೆಯದೆ ಪ್ರತಿಭಟನೆ ಮಾಡಿದ ಆರೋಪದ ಅಡಿ ಪ್ರಕರಣ ದಾಖಲಿಸಿಕೊಳ್ಳಲಾಗಿತ್ತು. ಅವರಿಗೆ ನೋಟಿಸ್ ನೀಡಿ ವಿಚಾರಣೆ ಸಹ ನಡೆಸಿದ್ದರು. ಈ ಕುರಿತು ರಾಜ್ಯ ಪೊಲೀಸ್ ಮಹಾನಿರ್ದೇಶಕ ಅಲೋಕ್ ಮೋಹನ್ ಅವರನ್ನು ಪ್ರತಿಕ್ರಿಯೆಗಾಗಿ ಸಂಪರ್ಕಿಸಲು ಪ್ರಯತ್ನಿಸಿದಾಗ ಅವರು ಲಭ್ಯವಾಗಲಿಲ್ಲ.

ಮುಖ್ಯಮಂತ್ರಿಗೆ ಸಾಹಿತಿಗಳ ಬಹಿರಂಗ ಪತ್ರ

ಬೆಂಗಳೂರಿನ ರಂಗಶಂಕರದಲ್ಲಿ ಸಾಂಸ್ಕೃತಿಕ ಅಭಿವ್ಯಕ್ತಿಗೆ ಅವಕಾಶ ನೀಡದ ಪೊಲೀಸರ ನಡೆ ಖಂಡಿಸಿ, ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಸಾಹಿತಿಗಳು ಹಾಗೂ ಹೋರಾಟಗಾರರು ಬಹಿರಂಗ ಪತ್ರ ಬರೆದಿದ್ದಾರೆ.

'ಪ್ಯಾಲೆಸ್ಟೀನ್ ನಾಗರಿಕರ ಪರವಾಗಿ ಸಾಮಾಜಿಕ ಕಾರ್ಯಕರ್ತರ ಶಾಂತಿಯುತ ಅಭಿವ್ಯಕ್ತಿಯನ್ನು ಕರ್ನಾಟಕದ ಪೊಲೀಸರು ಬಲವಂತವಾಗಿ ಹತ್ತಿಕ್ಕುತ್ತಿರುವ ರೀತಿಯು ಸಾರ್ವಜನಿಕರಲ್ಲಿ ಆತಂಕ ಹುಟ್ಟಿಸುತ್ತಿದೆ' ಎಂದು ಸಾಹಿತಿಗಳಾದ ಕೆ.ಮರುಳಸಿದ್ದಪ್ಪ, ಜಿ.ರಾಮಕೃಷ್ಣ, ವಿಜಯಾ, ಎಸ್.ಜಿ.ಸಿದ್ದರಾಮಯ್ಯ ಪತ್ರದಲ್ಲಿ ತಿಳಿಸಿದ್ದಾರೆ.

'ಪ್ಯಾಲೆಸ್ಟೀನ್ ಜನರು ಅನುಭವಿಸುತ್ತಿರುವ ಕಷ್ಟಗಳ ಬಗ್ಗೆ ಎಲ್ಲಾ ದೇಶಗಳ ನಾಗರಿಕರು ತಮ್ಮ ಸಹಾನುಭೂತಿ ಹಾಗೂ ಅನುಕಂಪ ವ್ಯಕ್ತಪಡಿಸುತ್ತಿದ್ದಾರೆ. ಅಲ್ಲಿ ಮಕ್ಕಳು ಮತ್ತು ಮಹಿಳೆಯರನ್ನು ಭೀಕರವಾಗಿ ಹತ್ಯೆ ಮಾಡುತ್ತಿರುವ ಕೃತ್ಯ ಯಾರೂ ಒಪ್ಪಲು ಸಾಧ್ಯವಿಲ್ಲ. ಆಕ್ರಮಣ ನಿಲ್ಲಿಸುವಂತೆ ಹಲವು ದೇಶಗಳಿಂದ ಒಕ್ಕೊರಲಿನ ಮನವಿ ಬರುತ್ತಿವೆ. ಕೇಂದ್ರ ಸರ್ಕಾರ ಸಹ ಪ್ಯಾಲೆಸ್ಟೀನ್ ಜನರ ಪರವಾಗಿ ತನ್ನ ಬೆಂಬಲ ಪುನರುಚ್ಚರಿಸುತ್ತಿದೆ. ನಿಜಸ್ಥಿತಿ ಹೀಗಿರುವಾಗ ಕರ್ನಾಟಕದ ಪೊಲೀಸರ ವರ್ತನೆ ಮಾತ್ರ ದಿಗ್ಭ್ರಮೆ ಹುಟ್ಟಿಸುತ್ತಿದೆ' ಎಂದು ಹೇಳಿದ್ದಾರೆ.

ಬೆಂಗಳೂರು, ಸಾಗರ, ತುಮಕೂರು ಪಟ್ಟಣಗಳಲ್ಲಿ ಹಲವಾರು ಸಂಘ–ಸಂಸ್ಥೆಗಳು ನಡೆಸಿದ ಶಾಂತಿಯುತ ಮತಪ್ರದರ್ಶನಗಳನ್ನು ಪೊಲೀಸರು ತಡೆದಿದ್ದಾರೆ ಹಾಗೂ ಬಂಧಿಸಿದ್ದಾರೆ. ಕರ್ನಾಟಕ ರಾಜ್ಯಕ್ಕೆ ಅದರದ್ದೇ ಆದ ವಿದೇಶಾಂಗ ನೀತಿ ಇದೆಯೇ ಎಂಬ ಅನುಮಾನ ಬರುತ್ತಿದೆ ಎಂದು ಪ್ರೊ.ರಾಜೇಂದ್ರ ಚೆನ್ನಿ, ಕೆ.ಎಸ್. ವಿಮಲಾ, ಬಿ.ಶ್ರೀಪಾದ ಭಟ್, ಟಿ.ಸುರೇಂದ್ರ ರಾವ್, ಬಂಜಗೆರೆ ಜಯಪ್ರಕಾಶ್, ಮೀನಾಕ್ಷಿ ಬಾಳಿ, ಎನ್.ಗಾಯತ್ರಿ, ವಸುಂಧರಾ ಭೂಪತಿ, ಕೆ.ಷರೀಫಾ, ಸಿ.ಕೆ.ಗುಂಡಣ್ಣ ಸೇರಿದಂತೆ ಹಲವರು ಪ್ರಶ್ನಿಸಿದ್ದಾರೆ.

ಪನ್ನೂ ಹತ್ಯೆಗೆ ಸಂಚು: ಭಾರತೀಯನ ವಿರುದ್ಧ ನ್ಯೂಯಾರ್ಕ್ ನ್ಯಾಯಾಲಯಕ್ಕೆ ಆರೋಪ ಪಟ್ಟಿ ಸಲ್ಲಿಕೆ

ಅಮೆರಿಕದ ಆರೋಪ ಕಳವಳಕಾರಿ: ಭಾರತ

ಮುಖ್ಯಾಂಶಗಳು
- ಇಬ್ಬರು ಉನ್ನತ ಅಧಿಕಾರಿಗಳನ್ನು ಭಾರತಕ್ಕೆ ಕಳುಹಿಸಿದ್ದ ಅಮೆರಿಕ
- ಜೆಕ್ ರಿಪಬ್ಲಿಕ್‌ನಲ್ಲಿ ನಿಖಿಲ್ ಗುಪ್ತಾ ಬಂಧನ
- ಸಮಿತಿಯ ವರದಿ ನಂತರ ಕ್ರಮದ ಭರವಸೆ

ನವದೆಹಲಿ (ಪಿಟಿಐ): ಸಿಖ್ ಪ್ರತ್ಯೇಕತಾವಾದಿ ನಾಯಕ ಗುರುಪತ್ವಂತ್ ಸಿಂಗ್ ಪನ್ನೂ ಹತ್ಯೆಗೆ ಸಂಚು ರೂಪಿಸಿದ್ದ ಭಾರತೀಯ ಪ್ರಜೆ ವಿರುದ್ಧ ಅಮೆರಿಕ ಆರೋಪ ಹೊರಿಸಿರುವುದು 'ಕಳವಳಕಾರಿ' ಎಂದು ಭಾರತ ಗುರುವಾರ ಪ್ರತಿಕ್ರಿಯಿಸಿದೆ.

'ಪನ್ನೂ ಹತ್ಯೆಗೆ ಯತ್ನಿಸಿದ್ದ ಎನ್ನಲಾದ ವ್ಯಕ್ತಿ ವಿರುದ್ಧ ಅಮೆರಿಕದ ನ್ಯಾಯಾಲಯದಲ್ಲಿ ಪ್ರಕರಣ ದಾಖಲಿಸಲಾಗಿದೆ. ಆದರೆ, ಭಾರತೀಯ ಅಧಿಕಾರಿ ಹಾಗೂ ಆ ವ್ಯಕ್ತಿಯ ನಂಟಿದೆ ಎಂದು ಆರೋಪಿಸಿರುವುದು ಕಳವಳಕಾರಿ. ಇಂಥ ಕ್ರಮ ಸರ್ಕಾರದ ನೀತಿಗೆ ವಿರುದ್ಧವಾದುದು. ಈ ಹಿಂದೆಯೂ ಭಾರತ ಈ ಮಾತನ್ನು ಹೇಳಿತ್ತು. ಈಗಲೂ ಪುನರುಚ್ಚರಿಸುತ್ತೇವೆ' ಎಂದು ವಿದೇಶಾಂಗ ಸಚಿವಾಲಯದ ವಕ್ತಾರ ಅರಿಂದಮ್ ಬಾಗ್ಚಿ ಹೇಳಿದ್ದಾರೆ.

ಸರ್ಕಾರ ರಚಿಸಿರುವ ಉನ್ನತ ಮಟ್ಟದ ಸಮಿತಿಯು ಈ ವಿಚಾರವಾಗಿ ಎಲ್ಲ ಆಯಾಮಗಳಲ್ಲಿ ತನಿಖೆ ನಡೆಸಲಿದೆ ಎಂದೂ ಹೇಳಿದ್ದಾರೆ.

ಪನ್ನೂ ಹತ್ಯೆಗೆ ಯತ್ನ ಪ್ರಕರಣಕ್ಕೆ ಸಂಬಂಧಿಸಿದಂತೆ ಭಾರತೀಯ ಪ್ರಜೆ ನಿಖಿಲ್ ಗುಪ್ತಾ (52) ವಿರುದ್ಧ ನ್ಯೂಯಾರ್ಕ್‌ನ ದಕ್ಷಿಣ ಜಿಲ್ಲೆಯ ನ್ಯಾಯಾಲಯದಲ್ಲಿ ಬುಧವಾರ ಆರೋಪ ಪಟ್ಟಿ ಸಲ್ಲಿಸಲಾಗಿದೆ.

ಪನ್ನೂ ಹತ್ಯೆಗೆ ಭಾರತೀಯ ಅಧಿಕಾರಿಯೊಬ್ಬರು ಸಂಚು ರೂಪಿಸಿದ್ದರು. ಈ ಅಧಿಕಾರಿ ಬಳಿ ನಿಖಿಲ್ ಗುಪ್ತಾ ಕೆಲಸ ಮಾಡುತ್ತಿದ್ದರು ಎಂದು ಆರೋಪಿಸಲಾಗಿದೆ.

ನಿಖಿಲ್ ಗುಪ್ತಾ ಅವರನ್ನು ಜೆಕ್ ರಿಪಬ್ಲಿಕ್‌ನಲ್ಲಿ ಬುಧವಾರ ಬಂಧಿಸಲಾಗಿದೆ. ಅವರ ಹಸ್ತಾಂತರ ಪ್ರಕ್ರಿಯೆ ನಡೆಯುತ್ತಿದೆ ಎಂದೂ ಅಮೆರಿಕ ಅಧಿಕಾರಿಗಳು ನ್ಯಾಯಾಲಯಕ್ಕೆ ತಿಳಿಸಿದ್ದಾರೆ.

ಗಂಭೀರ ವಿಷಯ: 'ಸಂಘಟಿತ ಅಪರಾಧ, ಕಳ್ಳಸಾಗಣೆ, ಶಸ್ತ್ರಾಸ್ತ್ರ ಮಾರಾಟ ಹಾಗೂ ಉಗ್ರರ ನಡುವೆ ಅಂತರರಾಷ್ಟ್ರೀಯ ಮಟ್ಟದಲ್ಲಿ ನಂಟಿದೆ. ಕಾನೂನು ಜಾರಿ ಸಂಸ್ಥೆಗಳ ಪಾಲಿಗೆ ಇದು ಗಂಭೀರವಾದ ವಿಷಯ. ಈ ಕಾರಣಕ್ಕಾಗಿಯೇ, ಅಮೆರಿಕ ನೀಡಿರುವ ಮಾಹಿತಿ ಕುರಿತು ತನಿಖೆ ನಡೆಸುವುದಕ್ಕಾಗಿ ಭಾರತ ಉನ್ನತ ಮಟ್ಟದ ತನಿಖಾ ಸಮಿತಿಯನ್ನು ರಚಿಸಿದೆ' ಎಂದು ಬಾಗ್ಚಿ ಹೇಳಿದ್ದಾರೆ.

'ಇದು ಭದ್ರತೆಗೆ ಸಂಬಂಧಪಟ್ಟ ವಿಷಯವಾಗಿರುವ ಕಾರಣ ಹೆಚ್ಚಿನ ಮಾಹಿತಿಯನ್ನು ನೀಡಲು ಸಾಧ್ಯವಿಲ್ಲ' ಎಂದೂ ಸ್ಪಷ್ಟಪಡಿಸಿದ್ದಾರೆ.

'ಸಿಖ್ ಫಾರ್ ಜಸ್ಟಿಸ್' ಎಂಬ ಸಂಘಟನೆ ನಾಯಕನಾಗಿರುವ ಪನ್ನೂ ವಿರುದ್ಧ ಭಯೋತ್ಪಾದಕ ಕೃತ್ಯಗಳಿಗೆ ಸಂಬಂಧಿಸಿ ಆರೋಪಗಳಿದ್ದು, ಭಾರತದ ತನಿಖಾ ಸಂಸ್ಥೆಗಳಿಗೆ ಬೇಕಾಗಿದ್ದಾನೆ.

ಭಾರತಕ್ಕೆ ಅಧಿಕಾರಿಗಳನ್ನು ಕಳುಹಿಸಿದ್ದ ಅಮೆರಿಕ: ಪನ್ನೂ ಹತ್ಯೆಗೆ ಯತ್ನಿಸಲಾಗಿದೆ ಎಂದು ಗೊತ್ತಾದ ನಂತರ ಅಮೆರಿಕ ಅಧ್ಯಕ್ಷ ಜೋ ಬೈಡನ್ ಆಡಳಿತವು ತನ್ನ ಇಬ್ಬರು ಉನ್ನತ ಅಧಿಕಾರಿಗಳನ್ನು ಭಾರತಕ್ಕೆ ಕಳುಹಿಸಿತ್ತು ಎಂದು ವಾಷಿಂಗ್ಟನ್ ಪೋಸ್ಟ್ ಬುಧವಾರ ವರದಿ ಪ್ರಕಟಿಸಿತ್ತು.

ಸಿಐಎ ನಿರ್ದೇಶಕ ವಿಲಿಯಮ್ ಜೆ.ಬರ್ನ್ಸ್ ಅವರನ್ನು ಆಗಸ್ಟ್‌ನಲ್ಲಿ ಹಾಗೂ ನ್ಯಾಷನಲ್ ಇಂಟೆಲಿಜೆನ್ಸ್ ನಿರ್ದೇಶಕ ಅವ್ರಿಲ್ ಹೇನ್ಸ್ ಅವರನ್ನು ಅಕ್ಟೋಬರ್‌ನಲ್ಲಿ ಕಳುಹಿಸಿತ್ತು. ಈ ಪ್ರಕರಣ ಕುರಿತು ತನಿಖೆ ನಡೆಸಬೇಕು ಹಾಗೂ ತಪ್ಪಿತಸ್ಥರ ವಿರುದ್ಧ ಕ್ರಮ ಜರುಗಿಸುವಂತೆ ಭಾರತವನ್ನು ಒತ್ತಾಯಿಸುವ ಉದ್ದೇಶದಿಂದ ಈ ಇಬ್ಬರು ಅಧಿಕಾರಿಗಳನ್ನು ಕಳುಹಿಸಲಾಗಿತ್ತು ಎಂದು ವರದಿ ಮಾಡಿದೆ.

ಖಾಲಿಸ್ತಾನ ಪ್ರತ್ಯೇಕತಾವಾದಿ ಹರ್‌ದೀಪ್ ಸಿಂಗ್ ನಿಜ್ಜರ್ ಹತ್ಯೆಯಲ್ಲಿ ಭಾರತದ ಕೈವಾಡ ಇದೆ ಎಂದು ಕೆನಡಾ ಪ್ರಧಾನಿ ಜಸ್ಟಿನ್ ಟ್ರೂಡೊ ಆರೋಪ ಮಾಡಿದ್ದರು. ಇದಾದ ಕೆಲವು ವಾರಗಳ ನಂತರ, ತನ್ನ ನೆಲದಲ್ಲಿ ಪನ್ನೂ ಹತ್ಯೆಗೆ ಭಾರತೀಯ ವ್ಯಕ್ತಿ ಯತ್ನಿಸಿದ್ದನ್ನು ವಿಫಲಗೊಳಿಸಲಾಗಿತ್ತು ಎಂದು ಅಮೆರಿಕ ಆರೋಪಿಸಿದೆ. ಕೆನಡಾ ಆರೋಪಗಳನ್ನು ಭಾರತ ಬಲವಾಗಿ ತಳ್ಳಿಹಾಕಿತ್ತು.

'ಹತ್ಯೆ ಆರೋಪಕ್ಕೆ ಪುಷ್ಟಿ'



ಜಸ್ಟಿನ್ ಟ್ರೂಡೊ

ಒಟ್ಟಾವ (ಕೆನಡಾ) (ಪಿಟಿಐ): ಹರ್‌ದೀಪ್ ಸಿಂಗ್ ನಿಜ್ಜರ್ ಹತ್ಯೆಯಲ್ಲಿ ಭಾರತದ ಕೈವಾಡ ಇದೆ ಎಂದು ಕೆನಡಾ ಆರೋಪಿಸುತ್ತಲೇ ಬಂದಿದೆ. ಈಗ, ಖಾಲಿಸ್ತಾನ ಪ್ರತ್ಯೇಕತಾವಾದಿ ನಾಯಕ ಗುರುಪತ್ವಂತ್ ಸಿಂಗ್ ಪನ್ನೂ ಹತ್ಯೆಗೆ ನಡೆದಿದ್ದ ಯತ್ನದಲ್ಲಿ ಭಾರತೀಯನ ವಿರುದ್ಧ ಅಮೆರಿಕ ಆರೋಪ ಹೊರಿಸಿದೆ. ಇದು, ಕೆನಡಾದ ಆರೋಪಗಳನ್ನು ಪುಷ್ಟೀಕರಿಸುತ್ತದೆ ಎಂದು ಪ್ರಧಾನಿ ಜಸ್ಟಿನ್ ಟ್ರೂಡೊ ಹೇಳಿದ್ದಾರೆ.

ಪನ್ನೂ ಹತ್ಯೆಗೆ ಸಂಚು ರೂಪಿಸಿದ ಪ್ರಕರಣದಲ್ಲಿ ಭಾರತೀಯ ಪ್ರಜೆ ನಿಖಿಲ್ ಗುಪ್ತಾ ವಿರುದ್ಧ ಅಮೆರಿಕದ ನ್ಯಾಯಾಲಯದಲ್ಲಿ ಆರೋಪಪಟ್ಟಿ ಸಲ್ಲಿಸಿರುವ ಬೆನ್ನಲ್ಲೇ, ಈ ಹೇಳಿಕೆ ನೀಡಿರುವ ಟ್ರೂಡೊ, 'ಈ ವಿಷಯವನ್ನು ಭಾರತ ಗಂಭೀರವಾಗಿ ಪರಿಗಣಿಸಬೇಕು' ಎಂದಿದ್ದಾರೆ.

'ಆಗಸ್ಟ್‌ನಲ್ಲಿ ನಿಜ್ಜರ್ ಹತ್ಯೆ ನಡೆಯಿತು. ಈ ಹತ್ಯೆಯಲ್ಲಿ ಭಾರತದ ಕೈವಾಡ ಇದೆ ಎಂಬ ಕುರಿತ ಆರೋಪಗಳಿಗೆ ಸಂಬಂಧಿಸಿ ಕೆನಡಾ ನಿರಂತರವಾಗಿ ಮಾತನಾಡುತ್ತಿದೆ. ಅಮೆರಿಕದ ಜೊತೆ ನಿರಂತರ ಸಂಪರ್ಕದಲ್ಲಿದ್ದೇವೆ' ಎಂದೂ ಟ್ರೂಡೊ ಹೇಳಿದ್ದಾರೆ.

'ಯಾರೂ ಲಘುವಾಗಿ ತೆಗೆದುಕೊಳ್ಳುವಂತಹ ವಿಷಯ ಇದಲ್ಲ. ಕೆನಡಾ ಪ್ರಜೆಗಳ ಸುರಕ್ಷತೆ ನಮ್ಮ ಜವಾಬ್ದಾರಿ. ಈ ಹೊಣೆಗಾರಿಕೆ ನಿಭಾಯಿಸುವುದನ್ನು ನಾವು ಮುಂದುವರಿಸುತ್ತೇವೆ' ಎಂದಿದ್ದಾರೆ. 'ಕೆನಡಾ ಮಾತ್ರ ಇಂತಹ ವಿಚಾರಗಳನ್ನು ಎತ್ತುತ್ತಿಲ್ಲ ಎಂಬುದನ್ನು ಅಮೆರಿಕದ ಆಪಾದನೆ ದೃಢಪಡಿಸುತ್ತದೆ' ಎಂದು ಕೆನಡಾ ಗೃಹ ಸಚಿವ ಡೊಮಿನಿಕ್ ಲೆಬ್ಲಾಂಕ್ ಹೇಳಿದ್ದಾರೆ.

ಪನ್ನೂ ಹತ್ಯೆ ಯತ್ನ ವಿಫಲಗೊಳಿಸಿದ್ದರ ಕುರಿತು ಅಮೆರಿಕದಲ್ಲಿ ಆಗಿರುವ ಬೆಳವಣಿಗೆ ಕುರಿತು ಪ್ರತಿಕ್ರಿಯಿಸಿರುವ ಕೆನಡಾ ವಿದೇಶಾಂಗ ಸಚಿವೆ ಮೆಲಾನಿ ಜೊಲಿ, 'ಅಮೆರಿಕದಲ್ಲಿ ಏನಾಗುತ್ತಿದೆ ಎಂಬ ಬಗ್ಗೆ ನಾನು ಪ್ರತಿಕ್ರಿಯಿಸುವುದಿಲ್ಲ. ತನ್ನ ನೆಲದಲ್ಲಿ ನಡೆದಿರುವ ಕೆನಡಾ ಪ್ರಜೆಯ ಹತ್ಯೆಗೆ ಭಾರತದ ಏಜೆಂಟರ ನಂಟಿದೆ ಎಂಬ ಆರೋಪಕ್ಕೆ ನಮ್ಮ ಸರ್ಕಾರ ಈಗಲೂ ಬದ್ಧ' ಎಂದರು.

ಬಾಗ್ಚಿ ತಿರುಗೇಟು: ಕೆನಡಾದಲ್ಲಿ ಭಾರತ ವಿರೋಧಿ ಶಕ್ತಿಗಳು ಸಕ್ರಿಯವಾಗಿವೆ. 'ಇದು ಉಭಯ ದೇಶಗಳ ನಡುವಿನ ಮುಖ್ಯ ವಿಷಯ' ಎಂದು ಭಾರತದ ವಿದೇಶಾಂಗ ಸಚಿವಾಲಯದ ವಕ್ತಾರ ಅರಿಂದಮ್ ಬಾಗ್ಚಿ ಹೇಳಿದ್ದಾರೆ.

'ಭಾರತ ವಿರೋಧಿ ತೀವ್ರಗಾಮಿಗಳಿಗೆ ಹಾಗೂ ಹಿಂಸಾಚಾರಕ್ಕೆ ಕೆನಡಾ ನಿರಂತರವಾಗಿ ಆಶ್ರಯ ನೀಡುತ್ತಾ ಬಂದಿದೆ ಎಂಬುದೇ ಈ ಸಮಸ್ಯೆಯ ಕೇಂದ್ರ ಬಿಂದು. ಕೆನಡಾದಲ್ಲಿರುವ ನಮ್ಮ ರಾಜತಾಂತ್ರಿಕರು ಸಂಕಷ್ಟ ಎದುರಿಸಿದ್ದಾರೆ' ಎಂದೂ ಹೇಳಿದ್ದಾರೆ.

2020ರಲ್ಲಿ ನಿಜ್ಜರ್‌ನನ್ನು ಉಗ್ರ ಎಂದು ಭಾರತ ಘೋಷಿಸಿತ್ತು. ಆತನ ಹತ್ಯೆಯಲ್ಲಿ ತನ್ನ ಕೈವಾಡ ಇದೆ ಎಂಬ ಕೆನಡಾ ಆರೋಪಗಳನ್ನು ತಳ್ಳಿ ಹಾಕಿದ್ದ ಭಾರತ, 'ಇವು ಅಸಂಬದ್ಧ ಹಾಗೂ ಪ್ರಚೋದಿತ ಆರೋಪಗಳು' ಎಂದು ತಿರುಗೇಟು ನೀಡಿತ್ತು.

'ಕ್ರಿಮಿನಲ್ ಪ್ರಕರಣ ವಜಾ ಭರವಸೆ: ಹತ್ಯೆ ಸಂಚಿಗೆ ಸಮ್ಮತಿ'

ನ್ಯೂಯಾರ್ಕ್ (ಪಿಟಿಐ): ಗುಜರಾತ್‌ನಲ್ಲಿ ತನ್ನ ವಿರುದ್ಧದ ಕ್ರಿಮಿನಲ್ ಪ್ರಕರಣವನ್ನು ವಜಾಗೊಳಿಸುವುದಾಗಿ ನೀಡಿದ್ದ ಭರವಸೆಯಿಂದಾಗಿ ಭಾರತೀಯ ಪ್ರಜೆ ನಿಖಿಲ್ ಗುಪ್ತಾ, ಸಿಖ್ ಪ್ರತ್ಯೇಕತಾವಾದಿ ನಾಯಕನನ್ನು ಹತ್ಯೆ ಮಾಡುವ ಸಂಚಿಗೆ ಒಪ್ಪಿದ್ದ ಎಂದು ಅಮೆರಿಕದ ಸರ್ಕಾರಿ ವಕೀಲರು ಆರೋಪಿಸಿದ್ದಾರೆ.

ನಿಖಿಲ್ ವಿರುದ್ಧ ಈ ಸಂಬಂಧ ನ್ಯೂಯಾರ್ಕ್‌ನ ದಕ್ಷಿಣ ಜಿಲ್ಲಾ ನ್ಯಾಯಾಲಯಕ್ಕೆ ಆರೋಪ ಪಟ್ಟಿಯನ್ನು ಸಲ್ಲಿಸಲಾಗಿದೆ. ತನ್ನ ವಿರುದ್ಧದ ಕ್ರಿಮಿನಲ್ ಪ್ರಕರಣ ವಜಾಗೊಳಿಸಿದ ನಂತರ ಸಿಖ್ ಪ್ರತ್ಯೇಕತಾವಾದಿ ನಾಯಕನ ಹತ್ಯೆಗೆ ನಿಖಿಲ್ ಒಪ್ಪಿಗೆ ನೀಡಿದ್ದರು ಎಂದು ಸರ್ಕಾರಿ ವಕೀಲರು ವಿವರಿಸಿದ್ದಾರೆ. 'ಹತ್ಯೆಯ ಸಂಚನ್ನು ಮೇ ತಿಂಗಳಲ್ಲಿ ಹೆಣೆಯಲಾಗಿತ್ತು. ಈ ಸಂಬಂಧ 'ಸಿಸಿ-1' ಮತ್ತು ನಿಖಿಲ್ ನಡುವೆ ಹಲವು ಬಾರಿ ಮಾತುಕತೆ ನಡೆದಿತ್ತು. ಹಲವು ಬಾರಿ ಸಂದೇಶಗಳ ವಿನಿಮಯವೂ ನಡೆದಿತ್ತು. 'ಇದಕ್ಕಾಗಿ ಎನ್‌ಕ್ರಿಪ್ಟೆಡ್ ಅಪ್ಲಿಕೇಷನ್ ಬಳಸಲಾಗಿತ್ತು' ಎಂದು ವಿವರಿಸಲಾಗಿದೆ.

'ಇಲ್ಲಿ 'ಸಿಸಿ-1' ಎಂಬುದು 'ಭಾರತದ ಸರ್ಕಾರಿ ಉದ್ಯೋಗಿ'ಯಾಗಿದ್ದಾನೆ. ನ್ಯೂಯಾರ್ಕ್‌ನಲ್ಲಿ ನೆಲೆಸಿರುವ ಭಾರತ ಮೂಲದ ರಾಜಕೀಯ ಕಾರ್ಯಕರ್ತನನ್ನು (ಆರೋಪ ಪಟ್ಟಿಯಲ್ಲಿ 'ಸಂತ್ರಸ್ತ' ಎಂದು ಉಲ್ಲೇಖಿಸಲಾಗಿದೆ) ಹತ್ಯೆ ಮಾಡಲು ಸಂಚು ರೂಪಿಸುವಂತೆ ಭಾರತದಲ್ಲಿದ್ದುಕೊಂಡೇ ನಿರ್ದೇಶನ ನೀಡಿದ್ದ. 'ಇದಕ್ಕೆ ಪ್ರತಿಯಾಗಿ, ನಿಖಿಲ್ ವಿರುದ್ಧ ಭಾರತದಲ್ಲಿ ಇರುವ ಪ್ರಕರಣವನ್ನು ವಜಾಗೊಳಿಸುವುದಕ್ಕೆ ಸಹಾಯ ಮಾಡುವುದಾಗಿ ಭರವಸೆ ನೀಡಿದ್ದ' ಎಂದು ವಿವರಿಸಲಾಗಿದೆ.

ಕೆಲ ದಿನಗಳ ನಂತರ, ನವದೆಹಲಿಯಲ್ಲಿ ಸಿಸಿ-1 ಭೇಟಿ ಮಾಡಿದ್ದ ನಿಖಿಲ್, ಸಂಚಿನ ಕುರಿತು ಚರ್ಚಿಸಿದ್ದ ಎಂದೂ ವಿವರಿಸಲಾಗಿದೆ.

'ಮೇ 6ರಂದು ಒಂದು ನಿರ್ದಿಷ್ಟ ಅಪ್ಲಿಕೇಷನ್ ಮೂಲಕ ಇಬ್ಬರ ನಡುವೆ ಸಂದೇಶಗಳ ವಿನಿಮಯ ನಡೆದಿತ್ತು. ನಾನು (ಸಿಸಿ-1)... ನನ್ನ ಹೆಸರನ್ನು .... ಎಂಬುದಾಗಿ 'ಸೇವ್ ಮಾಡು' ಎಂದು ಆ ಸರ್ಕಾರಿ ಉದ್ಯೋಗಿಯು ನಿಖಿಲ್‌ಗೆ ತಿಳಿಸಿದ್ದ' ಎಂದು ವಿವರಿಸಲಾಗಿದೆ. ಆ ವ್ಯಕ್ತಿ ಹೇಳಿದಂತೆಯೇ ಆತನ ಹೆಸರಿನಲ್ಲಿಯೇ ದೂರವಾಣಿ ಸಂಖ್ಯೆಯನ್ನು ನಿಖಿಲ್ 'ಸೇವ್ ಮಾಡಿದ್ದ'.

'ಕೆಲ ನಿಮಿಷಗಳ ನಂತರ ನಿಖಿಲ್‌ಗೆ ಮತ್ತೊಂದು ಮೆಸೇಜ್ ಕಳುಹಿಸಿದ್ದ ಸಿಸಿ-1, 'ಒಂದು ಟಾರ್ಗೆಟ್ ನ್ಯೂಯಾರ್ಕ್ ನಲ್ಲಿ, ಮತ್ತೊಂದು ಟಾರ್ಗೆಟ್ ಕ್ಯಾಲಿಫೋರ್ನಿಯಾದಲ್ಲಿ' ಎಂಬುದಾಗಿ ತಿಳಿಸಿದ್ದ. 'ನಿನ್ನ ವಿರುದ್ಧದ ಕ್ರಿಮಿನಲ್ ಪ್ರಕರಣ ವಜಾಗೊಳಿಸುವ ಕುರಿತು ಈಗಾಗಲೇ ಕ್ರಮ ತೆಗೆದುಕೊಳ್ಳಲಾಗಿದೆ. ಗುಜರಾತ್ ಪೊಲೀಸರು ನಿನಗೆ ಕರೆ ಮಾಡುವುದಿಲ್ಲ ಎಂದು ಸಿಸಿ-1 ಮೇ 12ರಂದು ನಿಖಿಲ್‌ಗೆ ಮೆಸೇಜ್ ಮಾಡಿದ್ದ' ಎಂದು ಹೇಳಲಾಗಿದೆ.



ಜನ ಜಾಗೃತಿ

ವಿಶ್ವ ಏಡ್ಸ್ ದಿನದ ಅಂಗವಾಗಿ ಅಮೃತಸರದಲ್ಲಿ ಶಾಲಾ ಮಕ್ಕಳು ರೆಡ್ ರಿಬ್ಬನ್ ಫಲಕ ಹಿಡಿದು ಅರಿವು ಮೂಡಿಸಿದರು

–ಪಿಟಿಐ ಚಿತ್ರ

ಕುಲಪತಿ ಮರುನೇಮಕ ಅಸಿಂಧು

ಸುಪ್ರೀಂ ಕೋರ್ಟ್ ಆದೇಶ ಪ್ರಕಟ: ಕೇರಳ ರಾಜ್ಯ ಸರ್ಕಾರಕ್ಕೆ ಹಿನ್ನಡೆ

ನವದೆಹಲಿ (ಪಿಟಿಐ): ಗೋಪಿನಾಥ್ ರವೀಂದ್ರನ್ ಅವರನ್ನು ಕಣ್ಣೂರು ವಿಶ್ವವಿದ್ಯಾಲಯದ ಕುಲಪತಿಯಾಗಿ ಮರುನೇಮಕ ಮಾಡಿದ ಕ್ರಮವನ್ನು ಸುಪ್ರೀಂ ಕೋರ್ಟ್ ಗುರುವಾರ ರದ್ದುಮಾಡಿದೆ. ಕೇರಳದ ಎಡರಂಗ ಸರ್ಕಾರವು ಕುಲಪತಿ ನೇಮಕದಲ್ಲಿ 'ಅನಗತ್ಯ ಹಸ್ತಕ್ಷೇಪ' ನಡೆಸಿದೆ ಎಂದು ಕೋರ್ಟ್ ಹೇಳಿದೆ. ಇದು ಕೇರಳ ಸರ್ಕಾರಕ್ಕೆ ಆಗಿರುವ ದೊಡ್ಡ ಹಿನ್ನಡೆ ಎನ್ನಲಾಗಿದೆ.

ರವೀಂದ್ರನ್ ಅವರನ್ನು ಮರುನೇಮಕ ಮಾಡಿ ರಾಜ್ಯಪಾಲ ಆರಿಫ್ ಮೊಹಮ್ಮದ್ ಖಾನ್ ಹೊರಡಿಸಿದ ಆದೇಶವು ತಪ್ಪು ಎಂದು ಮುಖ್ಯ ನ್ಯಾಯಮೂರ್ತಿ ಡಿ.ವೈ. ಚಂದ್ರಚೂಡ್ ನೇತೃತ್ವದ ಪೀಠವು ಹೇಳಿತು. ರಾಜ್ಯಪಾಲರು ಕುಲಪತಿ ಮರುನೇಮಕದಲ್ಲಿ ತಮಗಿರುವ ಶಾಸನಬದ್ಧ ಅಧಿಕಾರವನ್ನು 'ಬಿಟ್ಟುಕೊಟ್ಟರು ಅಥವಾ ಇನ್ನೊಬ್ಬರಿಗೆ ಅರ್ಪಿಸಿದರು' ಎಂದು ಕೋರ್ಟ್ ಹೇಳಿದೆ. ರಾಜ್ಯಪಾಲರು, ರಾಜ್ಯದ ವಿಶ್ವವಿದ್ಯಾಲಯಗಳ ಕುಲಾಧಿಪತಿಯೂ ಆಗಿರುತ್ತಾರೆ.

ರವೀಂದ್ರನ್ ನೇಮಕವನ್ನು ಎತ್ತಿಹಿಡಿದಿದ್ದ ಕೇರಳ ಹೈಕೋರ್ಟ್‌ನ ಏಕಸದಸ್ಯ ಪೀಠ ಹಾಗೂ ವಿಭಾಗೀಯ ಪೀಠದ ಆದೇಶಗಳನ್ನು ಸುಪ್ರೀಂ ಕೋರ್ಟ್ ರದ್ದುಮಾಡಿದೆ. ಸುಪ್ರೀಂ ಕೋರ್ಟ್ ತೀರ್ಪಿನ ನಂತರ ಪ್ರತಿಕ್ರಿಯೆ ನೀಡಿರುವ ರಾಜ್ಯಪಾಲ ಖಾನ್ ಅವರು, ರವೀಂದ್ರನ್ ಅವರನ್ನು ಮರುನೇಮಕ ಮಾಡುವಂತೆ ಮುಖ್ಯಮಂತ್ರಿ ಪಿಣರಾಯಿ ವಿಜಯನ್ ಅವರು ತಮ್ಮ ಮೇಲೆ ಒತ್ತಡ ತಂದಿದ್ದರು ಎಂದು ದೂರಿದ್ದಾರೆ.

'ರವೀಂದ್ರನ್ ಅವರ ಮರುನೇಮಕದ ಅಧಿಸೂಚನೆಯನ್ನು ಕುಲಾಧಿಪತಿ (ಖಾನ್) ಅವರು ಹೊರಡಿಸಿದ್ದರೂ, ಆ ತೀರ್ಮಾನದ ಮೇಲೆ ಬಾಹ್ಯ ಪರಿಗಣನೆಗಳ ಪ್ರಭಾವ ಇತ್ತು; ಇನ್ನೊಂದು ಮಾತಿನಲ್ಲಿ ಹೇಳಬೇಕು ಎಂದಾದರೆ, ರಾಜ್ಯ ಸರ್ಕಾರದ ಅನಗತ್ಯ ಹಸ್ತಕ್ಷೇಪ ಇತ್ತು ಎಂಬ ತೀರ್ಮಾನಕ್ಕೆ ನಾವು ಬಂದಿದ್ದೇವೆ' ಎಂದು ನ್ಯಾಯಮೂರ್ತಿಗಳಾದ ಜೆ.ಬಿ. ಪಾರ್ದಿವಾಲಾ ಮತ್ತು ಮನೋಜ್ ಮಿಶ್ರಾ ಅವರೂ ಇದ್ದ ನ್ಯಾಯಪೀಠವು ತೀರ್ಪಿನಲ್ಲಿ ಹೇಳಿದೆ.

ನ್ಯಾಯಪೀಠವು ತನ್ನ ತೀರ್ಪಿನಲ್ಲಿ ಕೇರಳ ರಾಜಭವನ ಹೊರಡಿಸಿದ್ದ ಪತ್ರಿಕಾ ಪ್ರಕಟಣೆಯೊಂದನ್ನು ಉಲ್ಲೇಖಿಸಿದೆ. ಮರು ನೇಮಕದ ಪ್ರಕ್ರಿಯೆಯನ್ನು ಮುಖ್ಯಮಂತ್ರಿ ಮತ್ತು ಉನ್ನತ ಶಿಕ್ಷಣ ಸಚಿವರು ಶುರು ಮಾಡಿದ್ದರು ಎಂದು ಅದರಲ್ಲಿ ನಮೂದಿಸಲಾಗಿದೆ.

ಕುಲಪತಿಯ ನೇಮಕ ಅಥವಾ ಮರು ನೇಮಕದ ಅಧಿಕಾರ ಇರುವುದು ಕುಲಾಧಿಪತಿಗೆ (ರಾಜ್ಯಪಾಲರಿಗೆ). ಈ ಶಾಸನಾತ್ಮಕ ಅಧಿಕಾರ ಚಲಾವಣೆಯಲ್ಲಿ ಯಾವುದೇ ವ್ಯಕ್ತಿ ಹಸ್ತಕ್ಷೇಪ ನಡೆಸುವಂತೆ ಇಲ್ಲ ಎಂದು ಪೀಠವು ಹೇಳಿದೆ.

ರವೀಂದ್ರನ್ ಅವರ ಮರುನೇಮಕವನ್ನು ಎತ್ತಿಹಿಡಿದ ಏಕಸದಸ್ಯ ಪೀಠದ ಆದೇಶವನ್ನು ಪ್ರಶ್ನಿಸಿ ಸಲ್ಲಿಸಿದ್ದ ಮನವಿಯನ್ನು ಕೇರಳ ಹೈಕೋರ್ಟ್‌ನ ವಿಭಾಗೀಯ ಪೀಠವು ಕಳೆದ ವರ್ಷ ಫೆಬ್ರುವರಿಯಲ್ಲಿ ವಜಾಗೊಳಿಸಿತ್ತು. ಅವರ ಮರುನೇಮಕ ಕಾನೂನಿಗೆ ಅನುಗುಣವಾಗಿಯೇ ಇದೆ ಎಂದು ಹೇಳಿತ್ತು.

ರವೀಂದ್ರನ್ ಅವರ ಮರುನೇಮಕವನ್ನು ಅಸಿಂಧುಗೊಳಿಸುವಂತೆ ಕೋರಿ ಅರ್ಜಿ ಸಲ್ಲಿಸಲಾಗಿತ್ತು. ಕುಲಪತಿ ಹುದ್ದೆಯಲ್ಲಿ 60 ವರ್ಷ ವಯಸ್ಸಿನವರೆಗೆ ಮಾತ್ರ ಇರಬಹುದು. ಆದರೆ 1960ರ ಡಿಸೆಂಬರ್ 19ರಂದು ಜನಿಸಿದ ರವೀಂದ್ರನ್ ಅವರು ಮರುನೇಮಕದ ಹೊತ್ತಿನಲ್ಲಿ ವಯೋಮಿತಿಯನ್ನು ದಾಟಿದ್ದಾರೆ ಎಂದು ಅರ್ಜಿಯಲ್ಲಿ ಹೇಳಲಾಗಿತ್ತು.

ಸರ್ವ ಪಕ್ಷಗಳ ಸಭೆ ನಾಳೆ

ನವದೆಹಲಿ (ಪಿಟಿಐ): ಡಿಸೆಂಬರ್ 4 ರಂದು ಆರಂಭವಾಗಲಿರುವ ಸಂಸತ್ತಿನ ಚಳಿಗಾಲದ ಅಧಿವೇಶನದ ಹಿನ್ನೆಲೆಯಲ್ಲಿ ಕೇಂದ್ರ ಸರ್ಕಾರವು ಶನಿವಾರ ಸರ್ವಪಕ್ಷಗಳ ನಾಯಕರ ಸಭೆ ಏರ್ಪಡಿಸಿದೆ.

ಕೇಂದ್ರ ಸಂಸದೀಯ ವ್ಯವಹಾರಗಳ ಸಚಿವ ಪ್ರಲ್ಹಾದ ಜೋಶಿ ಅವರು ಈ ಸಭೆ ನಡೆಸಲಿದ್ದು ರಕ್ಷಣಾ ಸಚಿವ ರಾಜನಾಥ್ ಸಿಂಗ್ ಹಾಗೂ ವಾಣಿಜ್ಯ ಮತ್ತು ಕೈಗಾರಿಕಾ ಸಚಿವ ಪೀಯೂಷ್ ಗೋಯಲ್ ಸೇರಿದಂತೆ ಪ್ರಮುಖ ನಾಯಕರು ಪಾಲ್ಗೊಳ್ಳುವ ನಿರೀಕ್ಷೆಯಿದೆ.

ಚಳಿಗಾಲದ ಅಧಿವೇಶನ ಡಿ.22ರ ವರೆಗೆ ನಡೆಯಲಿದೆ. ಸಂಸತ್ತಿನ ಮುಂದೆ ಒಟ್ಟು 37 ಮಸೂದೆಗಳು ಬಾಕಿಯಿದ್ದು, ಅವುಗಳಲ್ಲಿ 12 ಮಸೂದೆಗಳನ್ನು ಅಂಗೀಕಾರಕ್ಕೆ ಪಟ್ಟಿ ಮಾಡಲಾಗಿದೆ. ಏಳು ಹೊಸ ಮಸೂದೆಗಳ ಮಂಡನೆಗೆ ಸರ್ಕಾರ ಚಿಂತನೆ ನಡೆಸಿದೆ. ಮುಖ್ಯ ಚುನಾವಣಾ ಆಯುಕ್ತ ಮತ್ತು ಚುನಾವಣಾ ಆಯುಕ್ತರ (ನೇಮಕ, ಸೇವಾ ನಿಬಂಧನೆಗಳು ಮತ್ತು ಅಧಿಕಾರ ಅವಧಿ) ಮಸೂದೆಯೂ ಚರ್ಚೆಗೆ ಬರಲಿದೆ.

ನನ್ನ ಸರ್ಕಾರದ ಬಗ್ಗೆ ಜನರಿಗೆ ವಿಶ್ವಾಸ: ಮೋದಿ

ನವದೆಹಲಿ (ಪಿಟಿಐ): ಕಳೆದ ಹತ್ತು ವರ್ಷಗಳಲ್ಲಿ ತಾವು ಮಾಡಿರುವ ಕೆಲಸಗಳು, ತಮ್ಮ ನೇತೃತ್ವದ ಸರ್ಕಾರದಲ್ಲಿ ಜನರಿಗೆ ಅಪಾರ ವಿಶ್ವಾಸ ಮೂಡಲು ಕಾರಣವಾಗಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಹೇಳಿದರು. ಹಿಂದಿನ ಸರ್ಕಾರಗಳ ಅಭಿವೃದ್ಧಿ ಕಾರ್ಯಕ್ರಮಗಳಲ್ಲಿ ಮತಬ್ಯಾಂಕ್ ಲೆಕ್ಕಾಚಾರಗಳ ಪ್ರಭಾವ ಇರುತ್ತಿತ್ತು ಎಂದು ದೂರಿದರು.

ವಿಕಸಿತ ಭಾರತ ಸಂಕಲ್ಪ ಯಾತ್ರೆಯ ಭಾಗವಾಗಿ, ಸರ್ಕಾರದ ವಿವಿಧ ಯೋಜನೆಗಳ ಫಲಾನುಭವಿಗಳನ್ನು ಉದ್ದೇಶಿಸಿ ವಿಡಿಯೊ ಕಾನ್ಫರೆನ್ಸ್ ಮೂಲಕ ಅವರು ಮಾತನಾಡಿದರು.

ಬಡವರು, ಯುವಕರು, ಮಹಿಳೆಯರು ಮತ್ತು ರೈತರು ತಮ್ಮ ಪಾಲಿಗೆ ನಾಲ್ಕು ಅತಿದೊಡ್ಡ ಜಾತಿಗಳು, ಅವರನ್ನು ಮೇಲಕ್ಕೆ ತಂದರೆ ಭಾರತವು ಅಭಿವೃದ್ಧಿ ಹೊಂದುತ್ತದೆ ಎಂದು ಮೋದಿ ಹೇಳಿದರು.

ಹೆಚ್ಚಲಿವೆ ಜನೌಷಧಿ ಕೇಂದ್ರ: ದೇಶದಲ್ಲಿನ ಜನೌಷಧಿ ಕೇಂದ್ರಗಳನ್ನು ಈಗಿರುವ 10 ಸಾವಿರದಿಂದ 25 ಸಾವಿರಕ್ಕೆ ಹೆಚ್ಚಿಸುವ ಉಪಕ್ರಮಕ್ಕೆ ಪ್ರಧಾನಿ ಹಸಿರು ನಿಶಾನೆ ತೋರಿದ್ದಾರೆ.

ಡ್ರೋನ್ ದೀದಿ ಯೋಜನೆಗೆ ಚಾಲನೆ: 2024–25ರಿಂದ 2025–26ರವರೆಗಿನ ಅವಧಿಯಲ್ಲಿ 15 ಸಾವಿರ ಮಹಿಳಾ ಸ್ವಸಹಾಯ ಸಂಘಗಳಿಗೆ ಡ್ರೋನ್ ಒದಗಿಸುವ ಉದ್ದೇಶದ ಈ ಯೋಜನೆಗೂ ಚಾಲನೆ ನೀಡಿದ್ದಾರೆ.

ವಿದೇಶಗಳಲ್ಲಿ ಆತಿಥ್ಯ: ಸಂಸದರಿಗೆ ಅನುಮತಿ ಕಡ್ಡಾಯ

ನವದೆಹಲಿ (ಪಿಟಿಐ): ಸಂಸದರು ಖಾಸಗಿಯಾಗಿ ವಿದೇಶಗಳಿಗೆ ತೆರಳಿದ ಸಂದರ್ಭಗಳಲ್ಲಿ, ಅಲ್ಲಿನ ಆತಿಥ್ಯ ಸ್ವೀಕರಿಸುವಾಗ ಕಠಿಣ ಮಾರ್ಗಸೂಚಿಗಳನ್ನು ಪಾಲಿಸಬೇಕು. ಕೇಂದ್ರ ಸರ್ಕಾರದ ಪೂರ್ವಾನುಮತಿ ಪಡೆಯಬೇಕು ಎಂದು ರಾಜ್ಯಸಭಾ ಸಚಿವಾಲಯ ಗುರುವಾರ ಆದೇಶ ಹೊರಡಿಸಿದೆ.

ಸಂಸದರು ನೀತಿಸಂಹಿತೆ ಪಾಲಿಸಬೇಕು. ಸಂಸದರಾಗಿ ತಾವು ನಿರ್ವಹಿಸಬೇಕಿರುವ ಕರ್ತವ್ಯ ಗಳನ್ನು ನಿಷ್ಪಕ್ಷಪಾತವಾಗಿ ನಿರ್ವಹಿಸಲು ಅಡ್ಡಿ ಉಂಟು ಮಾಡಬಹುದಾದ ಉಡುಗೊರೆಗಳನ್ನು ಪಡೆಯಬಾರದು ಎಂದು ಆದೇಶದಲ್ಲಿ ಹೇಳಲಾಗಿದೆ. ವಿದೇಶಗಳಿಂದ ಬರುವ ಆಹ್ವಾನವನ್ನು ಸಂಸದರು ವಿದೇಶಾಂಗ ವ್ಯವಹಾರಗಳ ಸಚಿವಾಲಯದ ಗಮನಕ್ಕೆ ತರಬೇಕು ಎಂದು ಹೇಳಲಾಗಿದೆ.

97 ತೇಜಸ್ ಯುದ್ಧವಿಮಾನ, 156 'ಪ್ರಚಂಡ' ಹೆಲಿಕಾಪ್ಟರ್ ಖರೀದಿಗೆ ಒಪ್ಪಿಗೆ

ನವದೆಹಲಿ (ಪಿಟಿಐ): ಸಶಸ್ತ್ರ ಪಡೆಗಳ ಸಾಮರ್ಥ್ಯ ಹೆಚ್ಚಿಸುವ ನಿಟ್ಟಿನಲ್ಲಿ ಮಹತ್ವದ ಹೆಜ್ಜೆ ಇಟ್ಟಿರುವ ರಕ್ಷಣಾ ಖರೀದಿ ಪರಿಷತ್ತು (ಡಿಎಸಿ), ₹2.23 ಲಕ್ಷ ಕೋಟಿ ವೆಚ್ಚದಲ್ಲಿ ವಿವಿಧ ರಕ್ಷಣಾ ಪರಿಕರಗಳ ಖರೀದಿಗೆ ಗುರುವಾರ ಅನುಮೋದನೆ ನೀಡಿದೆ.

ರಕ್ಷಣಾ ಸಚಿವ ರಾಜನಾಥ್ ಸಿಂಗ್ ನೇತೃತ್ವದಲ್ಲಿ ನಡೆದ ಡಿಎಸಿ ಸಭೆಯು, 97 'ತೇಜಸ್' ಲಘು ಯುದ್ಧ ವಿಮಾನಗಳು ಹಾಗೂ 156 'ಪ್ರಚಂಡ' ಯುದ್ಧಹೆಲಿಕಾಪ್ಟರ್‌ಗಳನ್ನು ಖರೀದಿಸಲು ಒಪ್ಪಿಗೆ ನೀಡಿದೆ.

ಒಟ್ಟು ವೆಚ್ಚ ₹ 2.23 ಲಕ್ಷ ಕೋಟಿ ಪೈಕಿ ಶೇ 98ರಷ್ಟು ಮೊತ್ತದಷ್ಟು ರಕ್ಷಣಾ ಸಾಮಗ್ರಿಗಳನ್ನು ದೇಶೀಯ ಉದ್ದಿಮೆಗಳಿಂದ ಖರೀದಿ ಮಾಡಲಾಗುತ್ತದೆ. ಈ ಕ್ರಮವು, ದೇಶೀಯ ಉದ್ದಿಮೆಗಳಿಗೆ ಪ್ರೋತ್ಸಾಹ ನೀಡುವ ಮೂಲಕ ರಕ್ಷಣಾ ಕ್ಷೇತ್ರದಲ್ಲಿ ಸ್ವಾವಲಂಬಿ (ಆತ್ಮನಿರ್ಭರತೆ) ಆಗುವ ಗುರಿ ಸಾಧನೆಗೆ ಉತ್ತೇಜನ ನೀಡಲಿದೆ ಎಂದು ರಕ್ಷಣಾ ಸಚಿವಾಲಯ ಹೇಳಿದೆ.

ಸುಖೋಯ್–30 ಯುದ್ಧ ವಿಮಾನಗಳನ್ನು ಮೇಲ್ದರ್ಜೆಗೇರಿಸುವ ವಾಯುಪಡೆಯ ಪ್ರಸ್ತಾವನೆಗೂ ಡಿಎಸಿ ಅನುಮೋದನೆ ನೀಡಿದೆ. ಈ ಯುದ್ಧವಿಮಾನಗಳನ್ನು ಮೇಲ್ದರ್ಜೆಗೇರಿಸುವ ಕಾರ್ಯವನ್ನು ಎಚ್‌ಎಎಲ್ ಮಾಡಲಿದೆ.

ಎರಡು ಬಗೆಯ ಟ್ಯಾಂಕ್ ಪ್ರತಿಬಂಧಕ ವ್ಯವಸ್ಥೆಗಳ (ಎಡಿಎಂ ಟೈಪ್ 2 ಹಾಗೂ 3) ಖರೀದಿ, ಆಟೊಮ್ಯಾಟಿಕ್ ಟಾರ್ಗೆಟ್ ಟ್ರ್ಯಾಕರ್ (ಎಟಿಟಿ), ಟಿ–90 ಟ್ಯಾಂಕ್‌ಗಳಿಗೆ ಡಿಜಿಟಲ್ ಬಸಾಲ್ಟಿಕ್ ಕಂಪ್ಯೂಟರ್ (ಡಿಬಿಸಿ) ಹಾಗೂ ನೌಕಾಪಡೆಗಾಗಿ ಮಧ್ಯಮ ವ್ಯಾಪ್ತಿಯ ಯುದ್ಧನೌಕೆ ಪ್ರತಿಬಂಧಕ ಕ್ಷಿಪಣಿಗಳ (ಎಂಆರ್‌ಎಎಸ್‌ಎಚ್‌ಎಂ) ಖರೀದಿಗೂ ಡಿಎಸಿ ಅನುಮೋದನೆ ನೀಡಿದೆ.



ಬಿಂದು ಶಿವರಾಂ



ಮೇಘಾ ಶೆಟ್ಟಿ

ತಿರುವಿನ ನಿರೀಕ್ಷೆಯಲ್ಲಿ ಮೇಘಾ

ಅಭಿಲಾಷ್ ಪಿ.ಎಸ್.

ಕಿರುತೆರೆಯಿಂದ ಬೆಳ್ಳಿತೆರೆಗೆ ಹೆಜ್ಜೆ ಇಟ್ಟ ಮೇಘಾ ಶೆಟ್ಟಿ 'ತ್ರಿಬಲ್ ರೈಡಿಂಗ್', 'ದಿಲ್‌ಪಸಂದ್' ಸಿನಿಮಾಗಳ ಮೂಲಕ ಸದ್ದು ಮಾಡಿದವರು. ಇವರ ನಟನೆಯ 'ಕೈವ' ಡಿ.8ಕ್ಕೆ ಬಿಡುಗಡೆ ಆಗುತ್ತಿದೆ. ತಮ್ಮ ಸಿನಿ ಪಯಣ, ಹೊಸ ಪ್ರಾಜೆಕ್ಟ್ ಬಗ್ಗೆ ಅವರು 'ಸಿನಿಮಾ ಪುರವಣಿ' ಜೊತೆ ಮಾತಿಗಿಳಿದರು...

- **ಇಲ್ಲಿಯವರೆಗಿನ ಸಿನಿ ಪಯಣದ ಅನುಭವ ಹೇಗಿತ್ತು?**

ಸಿನಿಮಾ ಕ್ಷೇತ್ರಕ್ಕೆ ಕಾಲಿಟ್ಟು ಮೂರು ವರ್ಷವಾಯಿತು. ಬಣ್ಣದ ಬದುಕಿನಲ್ಲಿ ನನಗೆ ದೊಡ್ಡ ತಿರುವು ನೀಡಿದ್ದು 'ಜೊತೆ ಜೊತೆಯಲಿ' ಧಾರಾವಾಹಿ. ಇಲ್ಲಿ ದೊರಕಿದ ಯಶಸ್ಸೇ ನನ್ನನ್ನು ಬೆಳ್ಳಿತೆರೆಗೂ ಸೆಳೆಯಿತು. ನಾನು ಈ ಬಣ್ಣದ ಲೋಕ ಪ್ರವೇಶಿಸಿದ್ದೇ ಆಕಸ್ಮಿಕವಾಗಿ. ಅದರಲ್ಲೂ ಸಿನಿಮಾದಲ್ಲಿ ನಟಿಸುತ್ತೇನೆ ಎನ್ನುವ ಕನಸೂ ಕಂಡಿರಲಿಲ್ಲ. ಕಲೆ, ಅವಕಾಶ ಎಲ್ಲರಿಗೂ ಒಲಿದು ಬರುವುದಿಲ್ಲ. ಹೀಗಿರುವಾಗ ಸಿನಿಮಾಗಳಿಂದ ಬಂದ ಅವಕಾಶಗಳನ್ನು ನಾನು ಸಂತೋಷದಿಂದ ಸ್ವೀಕರಿಸಿದ್ದೆ. ನಾನು ಅದೃಷ್ಟವಂತೆ. ಮೊದಲ ಸಿನಿಮಾದಲ್ಲೇ ಗೋಲ್ಡನ್ ಸ್ಟಾರ್ ಗಣೇಶ್ ಅವರ ಜೊತೆಗೆ ತೆರೆ ಹಂಚಿಕೊಂಡಿದ್ದೆ. ಆಗ ನಾನು ಧಾರಾವಾಹಿ ಮಾಡುತ್ತಲೇ 'ತ್ರಿಬಲ್ ರೈಡಿಂಗ್' ಶೂಟಿಂಗ್ ಮಾಡಿದ್ದೆ. ನಂತರ ಪೂರ್ಣ ಪ್ರಮಾಣದಲ್ಲಿ ಸಿನಿಮಾ ಕ್ಷೇತ್ರದಲ್ಲೇ ತೊಡಗಿಸಿಕೊಂಡೆ. ಹೊಸ ಹೊಸ ಅವಕಾಶಗಳು ಬರುವಾಗ ಬಹಳ ಖುಷಿಯಾಗುತ್ತದೆ. ನನಗೆ ಸಿಗುತ್ತಿರುವ ಬೆಂಬಲ, ಸಹ ಕಲಾವಿದರಿಂದ ದೊರೆಯುತ್ತಿರುವ ಪ್ರೋತ್ಸಾಹ ಇನ್ನಷ್ಟು ಸ್ಫೂರ್ತಿ ತುಂಬಿದೆ. ನನ್ನ ಮೇಲೆ ಇಟ್ಟಿರುವ ನಂಬಿಕೆಯನ್ನು ಉಳಿಸಿಕೊಂಡು ಹೋಗುತ್ತೇನೆ. ನಾನು ದರ್ಶನ್ ಅವರ ಅಭಿಮಾನಿ. ಅವರು 'ಕೈವ' ಚಿತ್ರದ ಟ್ರೈಲರ್ ಬಿಡುಗಡೆ ಮಾಡಿದರು. ನಮ್ಮ ಬೆನ್ನೆಲುಬಾಗಿ ಅವರು ನಿಂತಿದ್ದಾರೆ. ಇಂತಹ ಅನಿರೀಕ್ಷಿತ ಅನುಭವಗಳು ಖುಷಿ ನೀಡುತ್ತವೆ.

- **'ಕೈವ' ನಿಮ್ಮ ಸಿನಿ ಪಯಣಕ್ಕೆ ತಿರುವು ನೀಡಬಲ್ಲದೇ?**

ಖಂಡಿತವಾಗಿ. ಈ ನಿರೀಕ್ಷೆ, ವಿಶ್ವಾಸ ನನಗೂ ಇದೆ. 'ಕೈವ' ನನ್ನ ಸಿನಿ ಪಯಣದಲ್ಲೊಂದು ವಿಶೇಷವಾದ ಸಿನಿಮಾ. ಅದರಲ್ಲಿರುವ ಪಾತ್ರವೂ ಭಿನ್ನವಾಗಿದೆ. ಇದರಲ್ಲಿ ನಾನು 'ಸಲ್ಮಾ' ಎಂಬ ಮುಸ್ಲಿಂ ಹುಡುಗಿಯ ಪಾತ್ರ ಮಾಡುತ್ತಿದ್ದೇನೆ. ಈ ಪಾತ್ರದ ಮೇಲೆ ನನಗೆ ಬಹಳ ನಂಬಿಕೆ ಇದೆ. ಹಿಂದೆ ಮಾಡಿದ ಸಿನಿಮಾಗಳಲ್ಲಿನ ಪಾತ್ರಗಳಿಗಿಂತ ಬೇರೆಯದೇ ರೀತಿಯ ಪಾತ್ರವಿದು. ಒಂದು ರೀತಿಯಲ್ಲಿ ಈ ಪಾತ್ರವನ್ನು ನಿಭಾಯಿಸುವುದೇ ಸವಾಲಿನಿಂದ ಕೂಡಿತ್ತು. ಸಿನಿಮಾಗೆ ಈ ಪಾತ್ರ ಒಂದು ರೀತಿ ಟರ್ನಿಂಗ್ ಪಾಯಿಂಟ್ ಇದ್ದಂತೆ. ಇದರಲ್ಲಿ ನನಗೆ ಹೆಚ್ಚಿನ ಸ್ಕ್ರೀನ್ ಸ್ಪೇಸ್ ದೊರಕಿದ್ದು, ನಟನೆಯ ಸಾಮರ್ಥ್ಯವನ್ನು ಪ್ರದರ್ಶಿಸಲು ಅವಕಾಶವಿತ್ತು. ಜೊತೆಗೆ ಅದ್ಭುತವಾದ ಚಿತ್ರತಂಡ ಈ ಸಿನಿಮಾದಲ್ಲಿ ನನಗೆ ದೊರಕಿತ್ತು.

- **'ಕೈವ' ಸಿನಿಮಾದ ಅನುಭವ ಹೇಗಿತ್ತು?**

2023ರಲ್ಲಿ 1980ರ ಕಾಲದ ಕಥೆಯನ್ನು ಸಿನಿಮಾದಲ್ಲಿ ಹೇಳಿದ್ದೇವೆ. ಆ ಕಾಲಕ್ಕೆ ತಕ್ಕಂತೆ ರೆಟ್ರೋ ಲುಕ್‌ನಲ್ಲಿ, ಆ ವಾತಾವರಣದಲ್ಲಿ ಶೂಟಿಂಗ್ ನಡೆಸಿದ್ದು ಒಂದು ವಿಭಿನ್ನ ಅನುಭವ. ಆ ಕಾಲಘಟ್ಟವನ್ನು ರಿಕ್ರಿಯೇಟ್ ಮಾಡಿದ ತಂಡದ ಪರಿಶ್ರಮ ಶ್ಲಾಘನೀಯ. ಹೆಚ್ಚಿನ ಭಾಗದ ಚಿತ್ರೀಕರಣ ಮೈಸೂರಿನಲ್ಲಿ ನಡೆದಿತ್ತು. ಆ ಪ್ರದೇಶ ಈಗಲೂ 80ರ ಕಾಲಘಟ್ಟದಲ್ಲಿರುವ ಬೆಂಗಳೂರಿನಂತಿದೆ. ಒಂದೇ ಹಂತದಲ್ಲಿ ಸುಮಾರು 60–65 ದಿನದೊಳಗೆ ಚಿತ್ರೀಕರಣ ಪೂರ್ಣಗೊಳಿಸಿದ್ದೆವು. ಕೆಲ ದೃಶ್ಯಗಳ ಚಿತ್ರೀಕರಣವಷ್ಟೇ ಬೆಂಗಳೂರಿನಲ್ಲಿ ನಡೆದಿದೆ. ಒಟ್ಟನಲ್ಲಿ ಜಯತೀರ್ಥ ಅವರು ಕಂಡಿದ್ದ ಕನಸನ್ನು ತಂಡವು ಅದೇ ರೀತಿ ಕಾರ್ಯಗತಗೊಳಿಸಿದೆ.

- **ಜಯತೀರ್ಥ ಅವರ ಜೊತೆ ಕೆಲಸ ಮಾಡಿದ ಅನುಭವ...**


ನಾನು ಅವರ ಪ್ರಾಜೆಕ್ಟ್‌ನಲ್ಲಿ ಕೆಲಸ ಮಾಡುತ್ತಿರುವುದು ಮೊದಲನೇ ಬಾರಿ. ಕಂಟೆಂಟ್ ಆಧಾರಿತ ಸಿನಿಮಾಗಳಿಗೆ ಹೆಚ್ಚಿನ ಒತ್ತು ನೀಡುವವರು ಜಯತೀರ್ಥ. ಅವರ ಸಿನಿಮಾಗಳೆಲ್ಲವೂ ಹಿಟ್. ನಮ್ಮಲ್ಲಿರುವ ನಟನೆಯನ್ನು ಬಹಳ ಸುಲಭವಾಗಿ ಹೊರ ತೆಗೆಯುವ ಸಾಮರ್ಥ್ಯ ಅವರಿಗಿದೆ. ಅವರು ಕಲಾವಿದರಿಗೆ ಬೆಂಬಲವಾಗಿ ನಿಲ್ಲುವ ನಿರ್ದೇಶಕ.

- **ಮೇಘಾ ಕೈಯಲ್ಲಿರುವ ಹೊಸ ಪ್ರಾಜೆಕ್ಟ್‌ಗಳು...**

ವಿನಯ್ ರಾಜ್‌ಕುಮಾರ್ ಅವರ ಜೊತೆಗಿನ 'ಗ್ರಾಮಾಯಣ' ಚಿತ್ರದ ಒಂದು ಹಂತದ ಚಿತ್ರೀಕರಣ ಪೂರ್ಣಗೊಂಡಿದೆ. 'ಕೈವ' ಸಿನಿಮಾ ಬಿಡುಗಡೆಯಾದ ನಂತರ ಇದರ ಚಿತ್ರೀಕರಣ ಮುಂದುವರಿಯಲಿದೆ. ಪ್ರಜ್ವಲ್ ದೇವರಾಜ್ ಅವರ ಹೊಸ ಪ್ರಾಜೆಕ್ಟ್ 'ಚೀತಾ' ಒಪ್ಪಿಕೊಂಡಿದ್ದೇನೆ. ಜೊತೆಗೆ ಎರಡು ಮೂರು ಸಿನಿಮಾಗಳ ಮಾತುಕತೆ ನಡೆಯುತ್ತಿದೆ. ಪ್ಯಾನ್ ಇಂಡಿಯಾ ಸಿನಿಮಾ 'After ಆಪರೇಷನ್ ಲಂಡನ್ CAFE' ಸಿನಿಮಾದ ಡಬ್ಬಿಂಗ್ ಶೀಘ್ರದಲ್ಲೇ ಆರಂಭವಾಗಲಿದೆ. ಈ ಸಿನಿಮಾ ಜೊತೆಗೆ 'ಗ್ರಾಮಾಯಣ' ಹಾಗೂ 'ಚೀತಾ' 2024ರಲ್ಲಿ ತೆರೆಕಾಣಲಿವೆ. ಸದ್ಯ ಧಾರಾವಾಹಿಯತ್ತ ಮರಳುವುದಿಲ್ಲ. ಸಿನಿಮಾ ಶೂಟಿಂಗ್‌ನಲ್ಲೇ ತೊಡಗಿಸಿಕೊಂಡಿದ್ದೇನೆ. ಎರಡನ್ನೂ ಒಪ್ಪಿಕೊಂಡರೆ ಚಿತ್ರೀಕರಣದ ದಿನಾಂಕಗಳ ಸಮಸ್ಯೆ ಎದುರಾಗುತ್ತದೆ. ಹೀಗಾಗಿ ಸಿನಿಮಾದತ್ತಲೇ ನನ್ನ ಚಿತ್ತವಿದೆ. ❖

'ಮಾರ್ಚರಿ'ಯಲ್ಲಿ ಸಿಕ್ಕ ಕಥೆ

''ಬೆಲ್ ಬಾಟಂ' ಸಿನಿಮಾದಲ್ಲಿ ಹುಳಗಳ(ಮ್ಯಾಗಟ್ಸ್) ಒಂದು ದೃಶ್ಯವಿತ್ತು. ಈ ಹುಳಗಳನ್ನು ಹುಡುಕಿಕೊಂಡು ಒಂದು ಶೈತ್ಯಾಗಾರಕ್ಕೆ(ಮಾರ್ಚರಿ) ಹೋಗಿದ್ದೆ. ಅಲ್ಲಿ ಪೋಸ್ಟ್ ಮಾರ್ಟಂ ಮಾಡುವವರಿಂದ ದೊರಕಿದ ಕಥೆ ಈ 'ಕೈವ'. ಭಯಾನಕವಾಗಿ ಕೊಲೆಯಾದ ವ್ಯಕ್ತಿಯೊಬ್ಬರ ಶವ ಸಾಕಷ್ಟು ಹಿಂದೆ ಶೈತ್ಯಾಗಾರಕ್ಕೆ ಬಂದಿತ್ತು. ಆ ಕೊಲೆಯಾದ ವ್ಯಕ್ತಿಯ ಹಿಂದಿನ ಕಥೆಯನ್ನು ಆಧರಿಸಿ ಈ ಚಿತ್ರದ ಕಥೆ ಹೆಣೆಯಲಾಗಿದೆ. 2017ರಲ್ಲಿ ಪ್ರಾರಂಭಿಸಿದ ಈ ಕಥೆ ಈಗ ತೆರೆಗೆ ಬರುತ್ತಿದೆ. 'ಕೈವ' ಓರ್ವ ವ್ಯಕ್ತಿಯ ಹೆಸರು. ಅದನ್ನೇ ಚಿತ್ರದ ಶೀರ್ಷಿಕೆ ಮಾಡಿದ್ದೇನೆ. 1983ರಲ್ಲಿ ಬೆಂಗಳೂರು ತಿಗಳರಪೇಟೆಯಲ್ಲಿ ನಡೆದ ನಿಜವಾದ ಘಟನೆಯನ್ನು ತೆರೆಗೆ ತಂದಿದ್ದೇನೆ. ಪ್ರೇಮಕಥೆ ಇದು. 1983ರ ಏಪ್ರಿಲ್‌ನಿಂದ 1984ರ ಜೂನ್‌ವರೆಗೆ ನಡೆಯುವ ಘಟನೆಗಳು ಈ ಸಿನಿಮಾದಲ್ಲಿವೆ. ಈ ಚಿತ್ರದ ಕಥೆಗಾಗಿ ಮೂರ್ನಾಲ್ಕು ವರ್ಷ ಸಂಶೋಧನೆಯನ್ನು ಮಾಡಿದ್ದೇನೆ. ಕಥೆ ಆರಂಭಿಸಿದ ಸಂದರ್ಭದಲ್ಲಿ ಧನ್ವೀರ್ ಬಗ್ಗೆ ಯಾವ ಮಾಹಿತಿಯೂ ನನಗೆ ಇರಲಿಲ್ಲ. ಒಮ್ಮೆ ಅವರನ್ನು ನೋಡಿದಾಗ ಆತನೇ ನನ್ನ 'ಕೈವ' ಎಂದೆನಿಸಿತು. ಧನ್ವೀರ್ ಹುಟ್ಟಿ ಬೆಳೆದಿದ್ದೇ ತಿಗಳರಪೇಟೆಯಲ್ಲಿ. ಚಿತ್ರದಲ್ಲಿ ಬ್ಲಡ್‌ಶೆಡ್, ಅಪರಾಧ ಹೆಚ್ಚಿದೆ. ಧರ್ಮದ ವಿಷಯವೂ ಇದೆ. ಇದರಿಂದ ಯಾವುದೇ ವಿವಾದಗಳು ಆಗುವುದಿಲ್ಲ ಎನ್ನುವ ನಂಬಿಕೆ ನನಗಿದೆ'' ಎಂದಿದ್ದಾರೆ ಚಿತ್ರದ ನಿರ್ದೇಶಕ ಜಯತೀರ್ಥ.



ಜಯತೀರ್ಥ

ಕನಸುಗಳ ಸಿಂಧು... ಬಿಂದು

ರೂಪಾ ಕೆ.ಎಂ.

ರಾಜ್ ಗುರು ನಿರ್ದೇಶನದ 'ಕೆರೆಬೇಟೆ' ಸಿನಿಮಾ ಮೂಲಕ ನಾಯಕಿಯಾಗಿ ಬಿಂದು ಶಿವರಾಂ ಚಂದನವನಕ್ಕೆ ಪದಾರ್ಪಣೆ ಮಾಡಿದ್ದಾರೆ. ಮೋಷನ್ ಪೋಸ್ಟರ್‌ನಿಂದಲೇ ಗಮನ ಸೆಳೆದಿರುವ ಬಿಂದು, ತಮ್ಮ ಮೊದಲ ಸಿನಿಮಾ ಅನುಭವಗಳನ್ನು ತೆರೆದಿಟ್ಟರು.

ಕ್ಯಾಮೆರಾ ಎದುರಿಸಿದ ಕ್ಷಣದಿಂದಲೇ ಮಾತು ಆರಂಭಿಸಿದ ಬಿಂದು, 'ಕ್ಯಾಮೆರಾ ಎದುರಿಗೆ ನಿಂತಾಗ ಭಯವೇನೂ ಆಗಲಿಲ್ಲ. ಮೊದಲಿನಿಂದಲೂ ನೃತ್ಯ, ನಾಟಕವೆಂದು ಕ್ರಿಯಾಶೀಲಳಾಗಿದ್ದೆ. ಮೌಂಟ್ ಕಾರ್ಮೆಲ್ ಕಾಲೇಜಿನಲ್ಲಿ ಕಲಿಯುವಾಗ ಹಲವು ನಾಟಕ ಸ್ಪರ್ಧೆಗಳಲ್ಲಿ ಭಾಗವಹಿಸಿದ್ದೆ. ಜತೆಗೆ ಸಿನಿಮಾದಲ್ಲಿ ಪ್ರವೇಶ ಪಡೆಯುವ ಸಲುವಾಗಿಯೇ 'ನವರಸ' ಸಂಸ್ಥೆಯ ಸದಾಶಿವ ನೀನಾಸಂ ಅವರ ಹತ್ತಿರ ಅಭಿನಯ ತರಬೇತಿ ಪಡೆದುಕೊಂಡಿದ್ದೆ. ಇದೀಗ ಸ್ವಲ್ಪ ಆತ್ಮವಿಶ್ವಾಸ ಬಂದಿದೆ' ಎಂದು ಕಣ್ಣರಳಿಸಿದರು.

ಸಿನಿಮಾದಲ್ಲಿನ ತಮ್ಮ ಪಾತ್ರದ ಬಗ್ಗೆ ವಿವರಣೆ ನೀಡುತ್ತಾ, 'ಇದೊಂದು ಮಣ್ಣಿನ ಕತೆ. ಮಣ್ಣು, ಕಾಡು ಇರುವ ಪಕ್ಕಾ ಮಲೆನಾಡಿನ ಕತೆ. 30 ದಿನಗಳ ಕಾಲ ಬೇರೆ ಸ್ಥಳದಲ್ಲಿ, ಕಾಡಿನಲ್ಲಿ ಚಿತ್ರೀಕರಣ ಇತ್ತು. ಮೊದಲ ಸಿನಿಮಾಗೆ ವಿಭಿನ್ನ ಪಾತ್ರ ಸಿಕ್ಕಿರುವುದಕ್ಕೆ ಬಹಳ ಖುಷಿ ಇದೆ. ಮೂರು ಶೇಡ್ಸ್ ಇರುವ, ಒಳ್ಳೆ ಗ್ರಾಫ್ ಇರುವ ಪಾತ್ರವಿದು. ಸಂಪೂರ್ಣ ಮಹಿಳಾ ಪ್ರಧಾನ ಅಲ್ಲದೇ ಇದ್ದರೂ ಮುಖ್ಯ ಎನಿಸುವ ನಾಯಕಿಯ ಪಾತ್ರ ಮಾಡಿದ್ದೇನೆ' ಎಂದು ಪಾತ್ರದ ಹೂರಣ ಬಿಚ್ಚಿಟ್ಟರು.

ನಟನೆಯ ಆಸಕ್ತಿ ಹುಟ್ಟಿಕೊಂಡಿದ್ದು ಹೇಗೆ? ಎನ್ನುವ ಪ್ರಶ್ನೆಗೆ, 'ಬೆಂಗಳೂರಿನ ಹುಡುಗಿಯಾದರೂ ಕುಟುಂಬದ ಬೇರು ತುಮಕೂರಿನಲ್ಲಿದೆ. ಮೌಂಟ್ ಕಾರ್ಮೆಲ್ ಕಾಲೇಜಿನಲ್ಲಿ ದ್ವಿತೀಯ ಪಿಯುಸಿ ಮುಗಿಸಿ ಈಗ ಬ್ಯುಸಿನೆಸ್ ಮ್ಯಾನೇಜ್‌ಮೆಂಟ್‌ನಲ್ಲಿ ಪದವಿ ಪಡೆಯುತ್ತಿದ್ದೇನೆ. ಜತೆಗೆ ಕಾರ್ಯಕ್ರಮಗಳ ಆಯೋಜಕಿಯಾಗಿಯೂ ಕೆಲಸ ಮಾಡುತ್ತಿದ್ದೇನೆ. ಕ್ರೀಡಾಪಟು ಆಗಿದ್ದೇನೆ. ಚಿಕ್ಕಂದಿನಿಂದಲೂ ಸಾಂಸ್ಕೃತಿಕ ಕಾರ್ಯಕ್ರಮಗಳ ಬಗ್ಗೆ ಒಲವಿತ್ತು. ಅದು ನನ್ನನ್ನು ಅಭಿನಯದ ಕಡೆಗೆ ವಾಲುವಂತೆ ಮಾಡಿತು' ಎನ್ನುತ್ತಾರೆ ಬಿಂದು.

'ದೊಡ್ಡ ನಟಿಯಾಗಿ ಬೆಳೆಯುವ ಕನಸಿದೆ. ಸವಾಲು ಎನಿಸುವ ಉತ್ತಮ ಪಾತ್ರಗಳನ್ನು ಮಾಡಬೇಕು. ಅಂಥದ್ದೇ ಪಾತ್ರಗಳು ಸಿಕ್ಕು ಸೈ ಎನಿಸಿಕೊಳ್ಳಬೇಕು. ನಟನೆಯಷ್ಟೇ ಅಲ್ಲ, ಎಲ್ಲ ವಿಭಾಗಗಳ ಬಗ್ಗೆಯೂ ಕುತೂಹಲವಿದೆ. ನಿರ್ದೇಶನ, ಸಿನಿಮಾಟೋಗ್ರಫಿ, ನೃತ್ಯ ನಿರ್ದೇಶನ, ಸಂಕಲನ ಹೀಗೆ ಎಲ್ಲದರ ಬಗ್ಗೆಯೂ ತಿಳಿದುಕೊಳ್ಳುವ ಹಂಬಲವಂತೂ ಇದ್ದೇ ಇದೆ' ಎಂದು ಚೊಕ್ಕ ಮಾತಿಗೆ ವಿರಾಮವಿತ್ತರು. ❖

'ನಾಯಕನೆಂಬ ಸಾಮಾನ್ಯರ ಪ್ರತಿನಿಧಿ'

ವಿನಾಯಕ ಕೆ.ಎಸ್

''**ಎಲ್ಲೆಡೆ** ಇಂದು ದಕ್ಷಿಣ ಭಾರತದ ಸಿನಿಮಾಗಳು ಹೆಚ್ಚು ಜನಪ್ರಿಯವಾಗುತ್ತಿವೆ. ಉತ್ತರ ಭಾರತದಲ್ಲಿ 'ಆರ್‌ಆರ್‌ಆರ್', 'ಪುಷ್ಪ' ಸಿನಿಮಾಗಳ ನಾಯಕರು ಬಂದರೆ ಬಾಲಿವುಡ್ ನಾಯಕರಿಗಿಂತ ಸಾಕಷ್ಟು ಹೆಚ್ಚು ಜನ ಸೇರುತ್ತಾರೆ. ಯಾಕೆಂದರೆ ಈ ಸಿನಿಮಾಗಳ ನಾಯಕರು ಸಾಮಾನ್ಯರ ಬದುಕಿನ ಪ್ರತಿನಿಧಿಗಳು. ಹೀಗಾಗಿ ಜನಸಾಮಾನ್ಯರಿಗೆ ಹೆಚ್ಚು ಆಪ್ತರಾಗುತ್ತಾರೆ'' ಎಂದರು ಬಾಲಿವುಡ್‌ನ ಜನಪ್ರಿಯ ನಟ ಮನೋಜ್ ಬಾಜಪೇಯಿ.

ಮುಂಬೈನಲ್ಲಿ ಜೀ5 ಗ್ಲೋಬಲ್ ಆಯೋಜಿಸಿದ್ದ 'ಭವಿಷ್ಯದ ದಿನಗಳಲ್ಲಿ ದಕ್ಷಿಣ ಏಷ್ಯಾದ ಮನರಂಜನೆ' ವಿಚಾರ ಸಂಕೀರಣದಲ್ಲಿ ಅವರು ಮಾತನಾಡಿದರು.

'ನೈಜ ಕಥೆಗಳು ಇಂದಿನ ಅಗತ್ಯವಾಗಿವೆ. ವೀಕ್ಷಕರ ಮನಸ್ಥಿತಿ ಬದಲಾಗಿದೆ. ಜನ ನಮ್ಮ ನಡುವಿನ ಕಥೆಗಳನ್ನು ಬಯಸುತ್ತಿದ್ದಾರೆ. ಸಿನಿಮಾದ ನಾಯಕ ಕೂಡ ಸಮಾಜದ ಪ್ರತಿನಿಧಿ. ಹೀಗಾಗಿ ಉತ್ತಮ ಕಂಟೆಂಟ್ ಹೊಂದಿದ ಸಿನಿಮಾ, ವೆಬ್ ಸೀರೀಸ್‌ಗಳಿಗೆ ಉತ್ತಮ ಭವಿಷ್ಯವಿದೆ' ಎಂದು ಅವರು ತಿಳಿಸಿದರು.

ನಟ ಪ್ರತೀಕ್ ಗಾಂಧಿ, ಸಿನಿಮಾ ಪತ್ರಕರ್ತೆ ಅನುಪಮಾ ಚೋಪ್ರಾ, ನಿರ್ಮಾಪಕಿ ಗುನೀತ್ ಮೊಂಗಾ, ನಿರ್ದೇಶಕ ವಿಶಾಲ್ ಭಾರದ್ವಾಜ್, ಜೀ5 ಗ್ಲೋಬಲ್ ವಹಿವಾಟು ಮುಖ್ಯಸ್ಥೆ ಅರ್ಚನಾ ಆನಂದ್ ವಿಚಾರ ಸಂಕಿರಣದಲ್ಲಿ ಭಾಗಿಯಾಗಿ ತಮ್ಮ ಅಭಿಪ್ರಾಯಗಳನ್ನು ಹಂಚಿಕೊಂಡರು.

'ಇಂದು ಪ್ರಾದೇಶಿಕ ಭಾಷೆಯ ಚಿತ್ರಗಳಿಗೆ ಜಾಗತಿಕ ಮನ್ನಣೆ ದೊರೆಯುತ್ತಿದೆ. ಭಾರತದಲ್ಲಿ ಸಂವಿಧಾನ ಅಂಗೀಕೃತ 21 ಭಾಷೆಗಳಿವೆ. ಆ ಭಾಷೆಗಳಿಗೆ ಉಪಭಾಷೆಗಳಿವೆ. ಇಂತಹ ಉಪಭಾಷೆಯ ಚಿತ್ರಗಳು ಕೂಡ ಗಮನ ಸೆಳೆಯುತ್ತಿವೆ. ನನ್ನ ಮಾತೃಭಾಷೆ ಗುಜರಾತ್. ಆ ಸಿನಿಮಾ ಉದ್ಯಮದಲ್ಲಿನ ಪ್ರಯೋಗಗಳು ಇದಕ್ಕೆ ಸಾಕ್ಷಿ. ಡಿಜಿಟಲ್ ವೇದಿಕೆಗಳಿಂದಾಗಿ ನಮ್ಮ ಸಿನಿಮಾಗಳು ಎಲ್ಲೆಡೆ ತಲುಪುತ್ತಿವೆ' ಎಂದರು ನಟ ಪ್ರತೀಕ್ ಗಾಂಧಿ.

ಜೀ5 ಆ್ಯಡ್ ಆನ್ ಬಿಡುಗಡೆ:

ಇದೇ ವೇಳೆ ಅಮೆರಿಕದ ವೀಕ್ಷಕರಿಗಾಗಿ 'ಜೀ5 ಗ್ಲೋಬಲ್ ಆ್ಯಡ್ ಆನ್' ಒಟಿಟಿ ವೇದಿಕೆಯನ್ನು ಬಿಡುಗಡೆಗೊಳಿಸಲಾಯಿತು. ''ಅಮೆರಿಕದಲ್ಲಿ ಭಾರತೀಯ ಕಂಟೆಂಟ್‌ಗಳಿಗೆ ಬಹು ಬೇಡಿಕೆ ಇದೆ. ಹೀಗಾಗಿ ಜೀ5 ಅಲ್ಪ ಅವಧಿಯಲ್ಲಿ ಅಮೆರಿಕದಲ್ಲಿ ದಕ್ಷಿಣ ಏಷ್ಯಾದ ನಂಬರ್ ಒನ್ ಮನರಂಜನೆ ವೇದಿಕೆಯಾಗಿ ಹೊರಹೊಮ್ಮಿದೆ. ಕನ್ನಡದ 'ನಮ್ಮ ಫ್ಲಿಕ್ಸ್'ನಿಂದ ಹಿಡಿದು ಅನೇಕ ಪ್ರಾದೇಶಿಕ ಭಾರತೀಯ ಭಾಷೆಗಳ ಮನರಂಜನೆ ಆ್ಯಪ್‌ಗಳೊಂದಿಗೆ ಕೈಜೋಡಿಸಿ ನಮ್ಮ ಕಂಟೆಂಟ್ ವ್ಯಾಪ್ತಿಯನ್ನು ಇನ್ನಷ್ಟು ಹೆಚ್ಚಿಸುತ್ತೇವೆ'' ಎಂದರು ಜೀ5 ಗ್ಲೋಬಲ್ ವಹಿವಾಟು ಮುಖ್ಯಸ್ಥೆ ಅರ್ಚನಾ ಆನಂದ್.

(ಜೀ5 ಗ್ಲೋಬಲ್ ಆಹ್ವಾನದ ಮೇರೆಗೆ ವರದಿಗಾರ ಮುಂಬೈಗೆ ಭೇಟಿ ನೀಡಿದ್ದರು)



ಕರಣ್ ವಾಹಿ, ಮನೋಜ್ ಬಾಜಪೇಯಿ

ಐದು ಸಿನಿಮಾಗಳು ತೆರೆಗೆ

ಇಂದು ತೆರೆಗೆ

ಅರ್ಧಂಬರ್ಧ ಪ್ರೇಮಕಥೆ: ಬಿಗ್‌ಬಾಸ್ ಖ್ಯಾತಿಯ ದಿವ್ಯಾ ಉರಡುಗ ಹಾಗೂ ಅರವಿಂದ್ ಕೆ.ಪಿ. ಜೋಡಿಯಾಗಿ ನಟಿಸಿರುವ 'ಅರ್ಧಂಬರ್ಧ ಪ್ರೇಮಕಥೆ' ಇಂದು (ಡಿ.1) ತೆರೆ ಕಾಣುತ್ತಿದೆ. 'ತುಘಲಕ್' ಖ್ಯಾತಿಯ ಅರವಿಂದ್ ಕೌಶಿಕ್ ನಿರ್ದೇಶನದ ಚಿತ್ರವಿದು. ರ‍್ಯಾಪರ್ ಅಲೋಕ್, ಶ್ರೇಯಾಬಾಬು, ಹಿರಿಯನಟ ದ್ವಾರಕೀಶ್ ಪುತ್ರ ಅಭಿಲಾಷ್ ಪ್ರಮುಖ ಪಾತ್ರಗಳಲ್ಲಿ ನಟಿಸಿದ್ದಾರೆ. ಅರ್ಜುನ್ ಜನ್ಯ ಸಂಗೀತ, ಸೂರ್ಯ ಅವರ ಛಾಯಾಗ್ರಹಣ, ಶಿವರಾಜ್ ಮೇಹು ಅವರ ಸಂಕಲನ ಈ ಚಿತ್ರಕ್ಕಿದೆ.

ಶೋಷಿತೆ: ಮಹಿಳೆಯರು ಎದುರಿಸುವ ಸವಾಲುಗಳೇ ಕಥೆಯಾಗಿರುವ 'ಶೋಷಿತೆ' ಚಿತ್ರ ಕೂಡ ಇಂದು ತೆರೆ ಕಾಣುತ್ತಿದೆ. ಬೆಂಗಳೂರು ಮೂಲದ ಎಂಜಿನಿಯರ್ ಶಶಿಧರ್ ಸಿನಿಮಾಕ್ಕೆ ಆ್ಯಕ್ಷನ್, ಕಟ್ ಹೇಳಿದ್ದಾರೆ. ಖಾಸಗಿ ವಾಹಿನಿಯಲ್ಲಿ ನಿರೂಪಕಿಯಾಗಿದ್ದ ಡಾ.ಜಾನ್ವಿರಾಯಲ ಮುಖ್ಯ ಪಾತ್ರದಲ್ಲಿ ಕಾಣಿಸಿಕೊಂಡಿದ್ದಾರೆ. 'ಕೆಜಿಎಫ್' ಖ್ಯಾತಿಯ ರೂಪಾ ರಾಯಪ್ಪ ಖಳನಾಯಕಿ ಪಾತ್ರದಲ್ಲಿದ್ದಾರೆ. ಕವಿನ್ ಎಂ. ಸಂಗೀತ, ರವಿವರ್ಮ ಕೆ. ಛಾಯಾಗ್ರಹಣ ಚಿತ್ರಕ್ಕಿದೆ. 'ಎ ನೇಚರ್ ವ್ಯೂ ಔಟ್‌ಡೋರ್ ಕಾರ್ನಿವಲ್ ಪ್ರೊಡಕ್ಷನ್' ಮೂಲಕ ಶಿರೀಷ ಅಲ್ಲಾ ನಿರ್ಮಾಣ ಮಾಡಿದ್ದಾರೆ.



ಡಾ.ಜಾನ್ವಿರಾಯಲ

ಅನಾವರಣ: ಪ್ರೀತಿ, ಭಾವುಕತೆಯ ಜೊತೆಗೆ ಸಸ್ಪೆನ್ಸ್ ಕಥೆಯುಳ್ಳ ಈ ಚಿತ್ರ ರಾಜ್ಯದಾದ್ಯಂತ ಬಿಡುಗಡೆಗೊಳ್ಳುತ್ತಿದೆ. ನಟ ಸುದೀಪ್ ಈ ಚಿತ್ರದ ಟ್ರೇಲರ್ ಬಿಡುಗಡೆಗೊಳಿಸಿ ಹೊಸಬರ ತಂಡಕ್ಕೆ ಬೆಂಬಲ ನೀಡಿದ್ದರು. ರಾಮಚಂದ್ರ, ಅದ್ವೈತ್ ಪ್ರಭಾಕರ್ ನಿರ್ಮಾಣ ಮಾಡಿರುವ ಚಿತ್ರವನ್ನು ಹರೀಶ್ ಕುಮಾರ್ ಹಾಗೂ ಮಂಜುನಾಥ್ ಪಿಳ್ಳಪ್ಪ ಜಂಟಿಯಾಗಿ ನಿರ್ದೇಶಿಸಿದ್ದಾರೆ. ಅರ್ಜುನ್ ಯೋಗಿ, ಸಾರಿಕಾ ರಾವ್ ನಾಯಕ ಹಾಗೂ ನಾಯಕಿಯಾಗಿ ನಟಿಸಿದ್ದಾರೆ. ಪತ್ರಕರ್ತ ಗೌರೀಶ್ ಅಕ್ಕಿ, ನಂದ ಗೋಪಾಲ್, ಹೊನ್ನವಳ್ಳಿ ಕೃಷ್ಣ ಮೊದಲಾದವರು ತಾರಾಗಣದಲ್ಲಿದ್ದಾರೆ.

ರಾಂಚಿ: ರುದ್ರಾನಂದ ಆರ್.ಎನ್. ಹಾಗೂ ಅರುಣ್ ಕುಮಾರ್ ಎನ್. ನಿರ್ಮಾಣದಲ್ಲಿ ಶಶಿಕಾಂತ್ ಗಟ್ಟಿ ನಿರ್ದೇಶನದ 'ರಾಂಚಿ' ಇಂದು ತೆರೆ ಕಾಣುತ್ತಿದೆ. ಪ್ರಭು ಮುಂಡ್ಕರ್, ದಿವ್ಯ ಉರುಡುಗ, ಸುರೇಶ್ ಹೆಬ್ಳೀಕರ್, ಉಷಾ ಭಂಡಾರಿ ಮುಂತಾದವರು ಚಿತ್ರದಲ್ಲಿದ್ದಾರೆ.

ಗಾರುಡಿಗ: ಹೊಸಬರ 'ಗಾರುಡಿಗ' ಚಿತ್ರ ಬಿಡುಗಡೆಗೊಳ್ಳುತ್ತಿದೆ. ಡಾ.ಎಂ.ವೆಂಕಟಸ್ವಾಮಿ ಅವರು ಎಂ.ವಿ.ಫಿಲ್ಮ್ಸ್ ಬ್ಯಾನರ್ ಅಡಿಯಲ್ಲಿ ನಿರ್ಮಿಸಿರುವ ಈ ಚಿತ್ರಕ್ಕೆ ವಿಧಾ.ಆರ್ ಆ್ಯಕ್ಷನ್ ಕಟ್ ಹೇಳಿದ್ದಾರೆ. ಮಾಗಡಿ ಮೂಲದ ರುದ್ವಿನ್ ನಾಯಕ. ನಾಯಕಿಯಾಗಿ ಮಾನಸ ಅಭಿನಯಿಸಿದ್ದಾರೆ. ಎಂ.ಸಂಜೀವ್‌ರಾವ್ ಸಂಗೀತ, ಅನಿರುದ್ಧ್-ಭರತ್ ಛಾಯಾಗ್ರಹಣ ಚಿತ್ರಕ್ಕಿದೆ. ಬೆಂಗಳೂರು, ಚಿಕ್ಕಬಳ್ಳಾಪುರ, ದೊಡ್ಡಬಳ್ಳಾಪುರ, ದೇವನಹಳ್ಳಿ, ಹೊಸಪೇಟೆ, ಆನೇಕಲ್, ಕನಕಪುರ, ಹಾರೋಹಳ್ಳಿಯಲ್ಲಿ ಚಿತ್ರೀಕರಣ ನಡೆಸಲಾಗಿದೆ. ❖



ಧ್ರುವ ಸರ್ಜಾ

'ನಾನು ಮತ್ತು ಗುಂಡ'ನಿಗೆ ಧ್ರುವ ಸರ್ಜಾ ಬೆಂಬಲ

ಸಿನಿ ಸಂಕ್ಷಿಪ್ತ

ನಾಯಿ ಹಾಗೂ ಅದರ ಮಾಲೀಕ ಗೋವಿಂದೇಗೌಡನ ನಡುವಿನ ಅವಿನಾಭಾವ ಸಂಬಂಧದ ಕಥೆಯನ್ನು ಹೇಳುವ 'ನಾನು ಮತ್ತು ಗುಂಡ' ಚಿತ್ರವು ಎರಡು ವರ್ಷಗಳ ಹಿಂದೆ ತೆರೆಕಂಡು ಯಶಸ್ವಿ ಪ್ರದರ್ಶನ ಕಂಡಿತ್ತು. ಶಿವರಾಜ್ ಕೆ.ಆರ್ ಪೇಟೆ ನಾಯಕನಾಗಿ ಅಭಿನಯಿಸಿದ್ದ ಆ ಚಿತ್ರಕ್ಕೆ ರಘುಹಾಸನ್ ಆ್ಯಕ್ಷನ್ ಕಟ್ ಹೇಳಿದ್ದರು. 'ನಾನು ಮತ್ತು ಗುಂಡ -2' ಚಿತ್ರ ಕೂಡ ಸೆಟ್ಟೇರಿದ್ದು, ಚಿತ್ರದ ಟೀಸರ್ ಇತ್ತೀಚೆಗಷ್ಟೇ ಬಿಡುಗಡೆಗೊಂಡಿದೆ.

ಟೀಸರ್ ಬಿಡುಗಡೆಗೊಳಿಸಿ ತಂಡಕ್ಕೆ ಸಾಥ್ ನೀಡಿದ ನಟ ಧ್ರುವ ಸರ್ಜಾ, ''ನಾನು ಮತ್ತು ಗುಂಡ' ನನಗೆ ಮತ್ತು ನನ್ನ ಪತ್ನಿಗೆ ತುಂಬಾ ಇಷ್ಟವಾಗಿತ್ತು. ಅದರ ಕ್ಲೈಮ್ಯಾಕ್ಸ್ ಅದ್ಭುತವಾಗಿತ್ತು. ಈ ಟೀಸರ್ ತುಂಬಾ ಚೆನ್ನಾಗಿದೆ. ಯುವ ಪ್ರತಿಭೆಗಳಿಗೆ ನಾವೆಲ್ಲ ಪ್ರೋತ್ಸಾಹ ನೀಡಬೇಕು'' ಎಂದರು.

'ಕನ್ನಡ, ತೆಲುಗು, ಹಿಂದಿ ಸೇರಿ ಐದು ಭಾಷೆಗಳಲ್ಲಿ ಈ ಚಿತ್ರ ತೆರೆಗೆ ಬರುತ್ತಿದೆ. ಗೋವಿಂದೇಗೌಡ ಹಾಗೂ ನಾಯಿಯ ಪಾತ್ರದ ಮೂಲಕ ಸಿನಿಮಾ ಮುಂದುವರೆಯಲಿದೆ. ಮೊದಲ ಭಾಗ ಮಾಡುವಾಗಲೇ ಈ ಕಥೆ ಸಿದ್ಧಪಡಿಸಿಕೊಂಡಿದ್ದೆ. ಈಗಾಗಲೇ ಶಿವಮೊಗ್ಗ, ತೀರ್ಥಹಳ್ಳಿ, ಬಾಳೆಹೊನ್ನೂರು ಸುತ್ತಮುತ್ತ 50 ದಿನಗಳ ಶೂಟಿಂಗ್ ನಡೆಸಲಾಗಿದ್ದು, ಊಟಿ ಭಾಗದ 20 ದಿನದ ಚಿತ್ರೀಕರಣವಷ್ಟೇ ಬಾಕಿಯಿದೆ' ಎಂದು ನಿರ್ದೇಶಕ ರಘುಹಾಸನ್ ತಿಳಿಸಿದರು.

ಋತ್ವಿಕ್ ಮುರಳೀಧರ್ ಹಿನ್ನೆಲೆ ಸಂಗೀತ, ಆರ್.ಪಿ.ಪಟ್ನಾಯಕ್ ಅವರ ಸಂಗೀತ ಸಂಯೋಜನೆ, ತನ್ವಿಕ್ ಛಾಯಾಗ್ರಹಣವಿರುವ ಚಿತ್ರವು ಪೋಯೆಮ್ ಪಿಕ್ಚರ್ಸ್ ಲಾಂಛನದಲ್ಲಿ ತಯಾರಾಗುತ್ತಿದೆ. ❖

ಪ್ರಜಾವಾಣಿ ನೋಡಿಯೊ
ಸಿನಿಮಾತು
ನೋಡಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಸೆಟ್ಟೇರಿದ 'ವಿಕ್ರಮಾರ್ಕ'

ಈಗಾಗಲೇ ಕೆಲ ಚಿತ್ರಗಳನ್ನು ನಿರ್ದೇಶನ ಮಾಡಿರುವ ಲೋಕೇಶ್.ಬಿ ನಿರ್ದೇಶಿಸಿರುವ 'ವಿಕ್ರಮಾರ್ಕ' ಚಿತ್ರ ಇತ್ತೀಚೆಗಷ್ಟೇ ಸೆಟ್ಟೇರಿದೆ. ಶ್ವೇತಶ್ರೀ ಪ್ರೊಡಕ್ಷನ್ಸ್ ಅಡಿಯಲ್ಲಿ ಉಮೇಶ್‌ಕುಮಾರ್ ಬಂಡವಾಳ ಹೂಡಿದ್ದಾರೆ.

'ಸಸ್ಪೆನ್ಸ್, ಥ್ರಿಲ್ಲರ್ ಅಂಶಗಳನ್ನು ಒಳಗೊಂಡ ಕಥೆ ಇದೆ. ಹಳ್ಳಿಯಿಂದ ಪಟ್ಟಣಕ್ಕೆ ಬರುವ ಹುಡುಗಿ ಸಾಫ್ಟ್‌ವೇರ್ ಕಂಪನಿಯಲ್ಲಿ ಕೆಲಸ ಗಿಟ್ಟಿಸಿಕೊಂಡು ಪ್ರೇಮದ ಬಲೆಯಲ್ಲಿ ಬೀಳುತ್ತಾಳೆ. ಮುಂದೇನಾಗುತ್ತದೆ ಎಂಬುದೇ ಕಥೆ' ಎಂದರು ನಿರ್ದೇಶಕ ಲೋಕೇಶ್.ಬಿ. ಭಾರ್ಗವ್ ಈ ಚಿತ್ರದ ನಾಯಕ. ನಾಯಕಿಗಾಗಿ ಶೋಧ ನಡೆಯುತ್ತಿದೆ. ನಾಲ್ಕು ಗೀತೆಗಳಿಗೆ ವಿವೇಕ್ ಜಂಗ್ಲಿ ಸಂಗೀತ ಸಂಯೋಜಿಸುತ್ತಿದ್ದಾರೆ. ದೀಪು ಛಾಯಾಗ್ರಹಣ, ಸಂತೋಷ್ ಸಂಕಲನ ಚಿತ್ರಕ್ಕಿದೆ. ಬೆಂಗಳೂರು, ಚಿಂತಾಮಣಿ, ಉಡುಪಿ, ಕೋಲಾರ ಹಾಗೂ ಮಲೇಷ್ಯಾ, ಶ್ರೀಲಂಕಾ, ನೇಪಾಳದಲ್ಲಿ ಚಿತ್ರೀಕರಣ ನಡೆಸುವ ಯೋಜನೆಯಲ್ಲಿ ತಂಡವಿದೆ. ❖



ಲೋಕೇಶ್.ಬಿ, ಉಮೇಶ್‌ಕುಮಾರ್, ಭಾರ್ಗವ್

ಕಾಂಗ್ರೆಸ್‌ನಿಂದ 'ಡೀಪ್‌ಫೇಕ್' ಬಳಕೆ: ದೂರು

ಹೈದರಾಬಾದ್ (ಪಿಟಿಐ): ತೆಲಂಗಾಣ ವಿಧಾನಸಭೆ ಚುನಾವಣಾ ಪ್ರಚಾರದ ವೇಳೆ ತಿರುಚಿದ ಮಾಹಿತಿಗಳನ್ನು ಪಸರಿಸಲು ಕಾಂಗ್ರೆಸ್ ಪಕ್ಷವು ಡೀಪ್‌ಫೇಕ್ ತಂತ್ರಜ್ಞಾನ ಬಳಸಿದೆ ಎಂದು ರಾಜ್ಯದ ಆಡಳಿತಾರೂಢ ಬಿಆರ್‌ಎಸ್ ಪಕ್ಷವು ಚುನಾವಣಾ ಆಯೋಗಕ್ಕೆ ಬುಧವಾರ ದೂರು ನೀಡಿದೆ.

ಮುಖ್ಯ ಚುನಾವಣಾ ಆಯುಕ್ತರು, ತೆಲಂಗಾಣ ಮುಖ್ಯ ಚುನಾವಣಾ ಅಧಿಕಾರಿ, ರಾಜ್ಯ ಡಿಜಿಪಿ ಅವರನ್ನು ಉದ್ದೇಶಿಸಿ ಪತ್ರ ಬರೆಯಲಾಗಿದೆ. 'ಡೀಪ್‌ಫೇಕ್ ಮತ್ತು ಕೃತಕ ಬುದ್ಧಿಮತ್ತೆ ತಂತ್ರಜ್ಞಾನ (ಎಐ) ಬಳಸಿ ಸೃಷ್ಟಿಸಲಾದ ನಕಲಿ ವಿಡಿಯೊ ಮತ್ತು ಧ್ವನಿಮುದ್ರಣಗಳನ್ನು ಕಾಂಗ್ರೆಸ್ ಪಕ್ಷವು ರಾಜ್ಯದಾದ್ಯಂತ ಪ್ರಸರಣ ಮಾಡಿದೆ ಎಂದು ನಮಗೆ ಖಚಿತ ಮೂಲಗಳು ತಿಳಿಸಿವೆ' ಎಂದು ದೂರಿನಲ್ಲಿ ಬಿಆರ್‌ಎಸ್ ಹೇಳಿದೆ.

ಬಿಆರ್‌ಎಸ್ ಮುಖ್ಯಸ್ಥ ಕೆ. ಚಂದ್ರಶೇಖರ ರಾವ್ ಮತ್ತು ಇತರ ಪ್ರಮುಖ ನಾಯಕರನ್ನು ನಕಲಿ ವಿಡಿಯೊಗಳಲ್ಲಿ ಚಿತ್ರಿಸಲಾಗಿದೆ. ಚುನಾವಣಾ ಲಾಭಕ್ಕಾಗಿ ತಂತ್ರಜ್ಞಾನವನ್ನು ದುರ್ಬಳಕೆ ಮಾಡಿಕೊಂಡ ಕಾಂಗ್ರೆಸ್ ವಿರುದ್ಧ ಕೂಡಲೇ ಕ್ರಮ ಕೈಗೊಳ್ಳಬೇಕು ಎಂದು ಬಿಆರ್‌ಎಸ್ ಆಗ್ರಹಿಸಿದೆ.

'ಈ ಕೃತ್ಯದಲ್ಲಿ ಭಾಗಿಯಾಗಿರುವ ಕಾಂಗ್ರೆಸ್ ಸದಸ್ಯರನ್ನು ಪತ್ತೆಮಾಡಲು ಮತ್ತು ಸುಳ್ಳು ಮಾಹಿತಿ ಹರಿದಾಡದಂತೆ ತಡೆಯಲು ಕ್ರಮ ಕೈಗೊಳ್ಳಬೇಕು' ಎಂದು ಬಿಆರ್‌ಎಸ್ ಮನವಿ ಮಾಡಿದೆ.

ವಿಧಾನಸಭೆಯ 119 ಸ್ಥಾನಗಳಿಗೆ ನಡೆದ ಚುನಾವಣೆ ಬಹುತೇಕ ಶಾಂತಿಯುತ

ತೆಲಂಗಾಣ: ಶೇ 64ರಷ್ಟು ಮತದಾನ

ಪ್ರಜಾವಾಣಿ ವಾರ್ತೆ

ಹೈದರಾಬಾದ್: ಕೆಲವೊಂದು ಸಣ್ಣಪುಟ್ಟ ಅಹಿತಕರ ಘಟನೆ ಹೊರತುಪಡಿಸಿದರೆ, ತೆಲಂಗಾಣ ವಿಧಾನಸಭೆಯ 119 ಸ್ಥಾನಗಳಿಗೆ ಗುರುವಾರ ನಡೆದ ಮತದಾನ ಶಾಂತಿಯುತವಾಗಿತ್ತು. ಸಂಜೆ 5ರ ವರೆಗೆ ಶೇ 63.94 ಮತದಾನ ನಡೆಯಿತು.

ಬಹುತೇಕ ಮತಗಟ್ಟೆಗಳಲ್ಲಿ ಬೆಳಿಗ್ಗೆ 7 ರಿಂದಲೇ ಮತದಾರರ ಉದ್ದನೆಯ ಸಾಲು ಕಂಡುಬಂತು. ಒಟ್ಟು 2,290 ಅಭ್ಯರ್ಥಿಗಳು ಕಣದಲ್ಲಿದ್ದಾರೆ. ಸಂಜೆ 5ರ ವೇಳೆಗೆ ಸರತಿಯಲ್ಲಿ ನಿಂತಿದ್ದ ಎಲ್ಲರಿಗೂ ಮತದಾನದ ಅವಕಾಶವಿರುವುದರಿಂದ ಮತದಾನದ ಪ್ರಮಾಣ ಹೆಚ್ಚುವ ಸಾಧ್ಯತೆಯಿದೆ. 2018ರ ಚುನಾವಣೆಯಲ್ಲಿ ಶೇ 73.7 ಮತದಾನ ನಡೆದಿತ್ತು.

ಕೇಂದ್ರ ಸಚಿವ ಕಿಶನ್ ರೆಡ್ಡಿ, ಬಿಆರ್‌ಎಸ್‌ನ ಎಂಎಲ್‌ಸಿ ಕವಿತಾ ಮತ್ತು ತೆಲುಗು ನಟ ಅಲ್ಲು ಅರ್ಜುನ್ ಅವರು ಮತದಾನ ಮಾಡಿದ ಪ್ರಮುಖರಲ್ಲಿ ಸೇರಿದ್ದಾರೆ. ಕಿಶನ್ ರೆಡ್ಡಿ ಅವರು ಕುಟುಂಬ ಸದಸ್ಯರೊಂದಿಗೆ ಕಾಚಿಗುಡದ ಮತಗಟ್ಟೆಯಲ್ಲಿ ತಮ್ಮ ಹಕ್ಕು ಚಲಾಯಿಸಿದರು.

ಕೆಲವು ಮತಗಟ್ಟೆಗಳ ಬಳಿ ವಿವಿಧ ಪಕ್ಷಗಳ ಕಾರ್ಯಕರ್ತರ ಮಧ್ಯೆ ಮಾತಿನ ಚಕಮಕಿ, ನೂಕಾಟ ನಡೆಯಿತು.

> ಪಕ್ಷದ ಹಿತೈಷಿಗಳಿಗೆ ಮತ್ತು ಕೆಸಿಆರ್ ಮತ್ತೆ ಅಧಿಕಾರಕ್ಕೆ ಬರಬೇಕೆಂದು ಬಯಸುವವರಿಗೆ ನಾನು ವಚನ ನೀಡುತ್ತೇನೆ. ಡಿ.3ರಂದು ನಾವು 70ಕ್ಕೂ ಹೆಚ್ಚು ಸ್ಥಾನಗಳೊಂದಿಗೆ ಮರಳಿ ಬರುತ್ತೇವೆ
>
> **ಕೆ.ಟಿ. ರಾಮರಾವ್**, ಬಿಆರ್‌ಎಸ್ ಕಾರ್ಯಾಧ್ಯಕ್ಷ

ಕಾಮಾರೆಡ್ಡಿಯ ಒಂದು ಮತಗಟ್ಟೆಯಲ್ಲಿ ತೆಲಂಗಾಣ ಪ್ರದೇಶ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಎ.ರೇವಂತ ರೆಡ್ಡಿ ಅವರ ಸಹೋದರ ಎ.ಕೊಂಡಲ ರೆಡ್ಡಿ ಅವರು ಕಾಣಿಸಿಕೊಂಡದ್ದು, ಬಿಆರ್‌ಎಸ್ ಮತ್ತು ಕಾಂಗ್ರೆಸ್ ಕಾರ್ಯಕರ್ತರ ನಡುವೆ ವಾಗ್ವಾದಕ್ಕೆ ಕಾರಣವಾಯಿತು. ನಿಯಮಗಳ ಪ್ರಕಾರ ಆ ಕ್ಷೇತ್ರದ ಮತದಾರರಲ್ಲದವರು ಮತದಾನದ ದಿನ ಕ್ಷೇತ್ರದಿಂದ ಹೊರ ಹೋಗಬೇಕು.

ಹುಸೈನಿ ಆಲಂ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಎಐಎಂಐಎಂ ಮತ್ತು ಕಾಂಗ್ರೆಸ್ ಕಾರ್ಯಕರ್ತರು ಪರಸ್ಪರ ಹೊಡೆದಾಡಿದ ಘಟನೆ ನಡೆಯಿತು.

ಮತ ಚಲಾಯಿಸಲು ತಮಗೆ ಹಣ ನೀಡದ್ದರಿಂದ ಪಿನಪಾಕ ಮತಗಟ್ಟೆಯಲ್ಲಿ ಮಹಿಳೆಯರು ರಾಜಕೀಯ ಪಕ್ಷಗಳ ವಿರುದ್ಧ ತಮ್ಮ ಅಸಮಾಧಾನ ಹೊರಹಾಕಿದರು.

ಮತ ಚಲಾಯಿಸಲು ಪಟ್ಟಣಗಳಿಂದ ಜನರು ತಮ್ಮ ಊರಿಗೆ ವಾಹನಗಳಲ್ಲಿ ತೆರಳಿದ್ದರಿಂದ ರಾಜ್ಯದ ಎಲ್ಲ ಹೆದ್ದಾರಿ ಮತ್ತು ಪ್ರಮುಖ ರಸ್ತೆಗಳಲ್ಲಿ ವಾಹನ ದಟ್ಟಣೆ ಕಂಡುಬಂತು.

ರಾಜ್ಯದಾದ್ಯಂತ 35,655 ಮತಗಟ್ಟೆಗಳನ್ನು ಸ್ಥಾಪಿಸಲಾಗಿತ್ತು. ಚುನಾವಣಾ ಕರ್ತವ್ಯಕ್ಕೆ 2.8 ಲಕ್ಷ ಸಿಬ್ಬಂದಿಯನ್ನು ನಿಯೋಜಿಸಲಾಗಿತ್ತು. ಸೂಕ್ಷ್ಮ ಮತಗಟ್ಟೆಗಳೆಂದು ಗುರುತಿಸಲಾಗಿದ್ದ 12,000 ಮತಗಟ್ಟೆಗಳಲ್ಲಿ ಬಿಗಿ ಬಂದೋಬಸ್ತ್ ಮಾಡಲಾಗಿತ್ತು. ಡಿಸೆಂಬರ್ 3ರಂದು ಮತ ಎಣಿಕೆ ನಡೆಯಲಿದೆ.

ಬಿಆರ್‌ಎಸ್ ಪಕ್ಷ ಸತತ ಮೂರನೇ ಬಾರಿ ಅಧಿಕಾರಕ್ಕೇರುವ ಪ್ರಯತ್ನ ನಡೆಸಿದ್ದರೆ, ಈ ಪಕ್ಷವನ್ನು ಅಧಿಕಾರದಿಂದ ಕೆಳಗಿಳಿಸಲು ಕಾಂಗ್ರೆಸ್ ಸತತ ಹೋರಾಟ ನಡೆಸಿದೆ. ಬಿಆರ್‌ಎಸ್ 2014 ರಿಂದಲೂ ಇಲ್ಲಿ ಅಧಿಕಾರದಲ್ಲಿದೆ.

ಬಿಜೆಪಿ ಕೂಡಾ ತನ್ನ ಬಲ ಹೆಚ್ಚಿಸಲು ಇನ್ನಿಲ್ಲದ ಕಸರತ್ತು ನಡೆಸಿದೆ. ಪ್ರಧಾನಿ ನರೇಂದ್ರ ಮೋದಿ, ಗೃಹ ಸಚಿವ ಅಮಿತ್ ಶಾ ಒಳಗೊಂಡಂತೆ ಎಲ್ಲ ಪ್ರಮುಖ ನಾಯಕರು ಇಲ್ಲಿ ಪ್ರಚಾರ ಕೈಗೊಂಡಿದ್ದರು.



ತೆಲಂಗಾಣದ ಗೋಶಮಹಲ್ ವಿಧಾನಸಭಾ ಕ್ಷೇತ್ರದ ಮತಗಟ್ಟೆಯೊಂದರ ಬಳಿ ಗುರುವಾರ ಸರತಿ ಸಾಲಿನಲ್ಲಿ ನಿಂತಿದ್ದ ಮತದಾರರು —ಪಿಟಿಐ ಚಿತ್ರ

'ಕೈ', ಕಮಲಕ್ಕೆ ತಲಾ 2, ಒಂದು ಅತಂತ್ರ

ಒಂದನೇ ಪುಟದಿಂದ

ಛತ್ತೀಸಗಡದಲ್ಲಿ ಕೈ ಪಾಳಯವು ಸರಳ ಬಹುಮತ ಗಳಿಸಲಿದೆ. ಆದರೆ, ಬಿಜೆಪಿ ಪ್ರಬಲ ಪೈಪೋಟಿ ನೀಡಲಿದೆ ಎಂಬುದು ಎಲ್ಲ ಸಮೀಕ್ಷೆಗಳ ಸಾರ.

'ತೆಲಂಗಾಣದಲ್ಲಿ 10 ವರ್ಷಗಳ ಬಿಆರ್‌ಎಸ್ ಆಡಳಿತ ಕೊನೆಗೊಳ್ಳಲಿದೆ. ಸರ್ಕಾರ ರಚನೆಗೆ ಬೇಕಿರುವ ಸ್ಥಾನಗಳನ್ನು ಕಾಂಗ್ರೆಸ್ ಗಳಿಸಲಿದೆ' ಎಂದು ಹೆಚ್ಚಿನ ಸಮೀಕ್ಷೆಗಳು ತಿಳಿಸಿವೆ.

ಈಶಾನ್ಯ ರಾಜ್ಯ ಮಿಜೋರಾಂನಲ್ಲಿ ಅತಂತ್ರ ಫಲಿತಾಂಶದ ಸುಳಿವು ಸಿಕ್ಕಿದೆ. ಜೋರಾಂ ಪೀಪಲ್ಸ್ ಮೂವ್‌ಮೆಂಟ್ (ಜೆಡ್‌ಪಿಎಂ) ಹಾಗೂ ಮಿಜೋ ನ್ಯಾಷನಲ್ ಫ್ರಂಟ್ (ಎಂಎನ್‌ಎಫ್) ನಿಕಟ ಸ್ಪರ್ಧೆ ಏರ್ಪಟ್ಟಿದೆ. ರಾಜ್ಯದಲ್ಲಿ 'ಕಿಚಡಿ' ಸರ್ಕಾರ ರಚನೆಯಾಗಬಹುದು ಎಂದು ಸಮೀಕ್ಷೆಗಳು ತಿಳಿಸಿವೆ.

ಮಧ್ಯಪ್ರದೇಶದಲ್ಲಿ ಪ್ರಸ್ತುತ ಬಿಜೆಪಿ ಅಧಿಕಾರದಲ್ಲಿದ್ದರೆ, ಕಾಂಗ್ರೆಸ್ ಪಕ್ಷವು ರಾಜಸ್ಥಾನ ಮತ್ತು ಛತ್ತೀಸ್‌ಗಢದಲ್ಲಿ ಆಡಳಿತ ನಡೆಸುತ್ತಿದೆ. ತೆಲಂಗಾಣದಲ್ಲಿ ಬಿಆರ್‌ಎಸ್ 10 ವರ್ಷಗಳಿಂದ ಅಧಿಕಾರದಲ್ಲಿದೆ ಮತ್ತು ಮಿಜೋರಾಂನಲ್ಲಿ ಎಂಎನ್‌ಎಫ್ ಸರ್ಕಾರ ಇದೆ.

• ಮಿಜೋರಾಂ — ಒಟ್ಟು ಕ್ಷೇತ್ರಗಳು 40 — ಬಹುಮತಕ್ಕೆ ಅಗತ್ಯ ಸಂಖ್ಯೆ 21

ಸಮೀಕ್ಷೆ	ಎಂಎನ್‌ಎಫ್	ಜೆಡ್‌ಪಿಎಂ	ಕಾಂಗ್ರೆಸ್	ಬಿಜೆಪಿ
ಎಬಿಪಿ ನ್ಯೂಸ್-ಸಿ ವೋಟರ್	15-21	12-18	2-8	0
ಇಂಡಿಯಾ ಟುಡೇ- ಆಕ್ಸಿಸ್ ಮೈ ಇಂಡಿಯಾ	3-7	28-35	2-4	0-2
ಇಂಡಿಯಾ ಟಿವಿ-ಸಿಎನ್‌ಎಕ್ಸ್	14-18	12-16	8-10	0-2
ಜನ್ ಕಿ ಬಾತ್	10-14	15-25	5-9	0-2
ರಿಪಬ್ಲಿಕ್ ಟಿವಿ- ಮ್ಯಾಟ್ರಿಜ್	17-22	7-12	7-10	1-2
ಟೈಮ್ಸ್ ನೌ-ಇಟಿಜಿ	14-18	10-14	9-13	0-2

₹2,000 ಕೋಟಿ ಮೌಲ್ಯದ ವಸ್ತುಗಳು ವಶಕ್ಕೆ

ನವದೆಹಲಿ (ಪಿಟಿಐ): ಐದು ರಾಜ್ಯಗಳ ವಿಧಾನಸಭೆ ಚುನಾವಣೆಯಲ್ಲಿ ಅಕ್ರಮಗಳನ್ನು ತಡೆಯುವ ನಿಟ್ಟಿನಲ್ಲಿ ಕಟ್ಟುನಿಟ್ಟಿನ ಕ್ರಮಗಳನ್ನು ತೆಗೆದುಕೊಂಡಿದ್ದ ಚುನಾವಣಾ ಆಯೋಗವು ಸುಮಾರು ₹2,000 ಕೋಟಿ ಮೌಲ್ಯದ ಉಡುಗೊರೆಗಳು, ಮಾದಕ ವಸ್ತು, ನಗದು ಮತ್ತು ಮದ್ಯವನ್ನು ವಶಕ್ಕೆ ತೆಗೆದುಕೊಂಡಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಗೊಂದಲದಲ್ಲಿ ಸಿಲ್ಕ್ಯಾರಾ ಸುರಂಗ ಕಾರ್ಮಿಕರು

ಉತ್ತರಕಾಶಿ (ಪಿಟಿಐ): ಸಿಲ್ಕ್ಯಾರಾ–ಬಡಕೋಟ್ ಸುರಂಗ ನಿರ್ಮಾಣ ಕಾಮಗಾರಿಯಲ್ಲಿ ಕೆಲಸ ಮಾಡುತ್ತಿದ್ದ ಕಾರ್ಮಿಕರು ಈಗ ಗೊಂದಲಕ್ಕೆ ಬಿದ್ದಿದ್ದಾರೆ. ವಾಪಸ್ ತಮ್ಮ ಊರುಗಳಿಗೆ ತೆರಳಬೇಕೋ, ಕಾಮಗಾರಿ ಸ್ಥಳದಲ್ಲಿಯೇ ಉಳಿಯಬೇಕೋ ಎಂಬುದು ಅವರಲ್ಲಿನ ಗೊಂದಲ.

ವಾಪಸ್ ಬರುವಂತೆ ಅವರ ಕುಟುಂಬಸ್ಥರು ಒತ್ತಾಯಿಸುತ್ತಿದ್ದಾರೆ. 'ವಾಪಸ್ ಮನೆಗೆ ಹೋಗಲು ನಾನು ರಜಾ ಅರ್ಜಿಯನ್ನು ಭರ್ತಿ ಮಾಡಿ ಇಟ್ಟಿದ್ದೇನೆ. ನಿರ್ಮಾಣ ಕಾಮಗಾರಿಗಳು ಇಲ್ಲಿ ಮತ್ತೆ ಯಾವಾಗ ಶುರುವಾಗುತ್ತವೆ ಎಂಬುದು ನಮಗೆ ಗೊತ್ತಿಲ್ಲ' ಎಂದು ಮೆಷಿನ್ ಆಪರೇಟರ್ ಕೆಲಸ ಮಾಡುತ್ತಿರುವ ಬಿಹಾರದ ಕಾರ್ಮಿಕರೊಬ್ಬರು ತಿಳಿಸಿದರು.

ಸುರಂಗ ಕೊರೆಯುವ ಕೆಲಸವನ್ನು ಬಿಟ್ಟುಬಿಡುವಂತೆ ತಾಯಿ ಹೇಳುತ್ತಿದ್ದಾರೆ ಎಂದು ಇನ್ನೊಬ್ಬರು ಹೇಳಿದರು. 'ನಾವು ಇಂತಹ ಪರಿಸ್ಥಿತಿಯಲ್ಲಿ ಕೆಲಸ ಮಾಡುತ್ತೇವೆ... ಇದು ಅಪಾಯಕಾರಿ' ಎಂದು ಅವರು ಹೇಳಿದರು.

ಸುರಂಗದ ಸುರಕ್ಷತೆಯ ಪರಿಶೀಲನೆ ನಡೆದ ನಂತರವೇ ನಿರ್ಮಾಣ ಕಾಮಗಾರಿಗಳನ್ನು ಮತ್ತೆ ಆರಂಭಿಸಬಹುದು ಎಂದು ಸರ್ಕಾರದ ಅಧಿಕಾರಿಯೊಬ್ಬರು ತಿಳಿಸಿದ್ದಾರೆ. ಒಳಗೆ ಸಿಲುಕಿದ್ದ ಕಾರ್ಮಿಕರನ್ನು ರಕ್ಷಿಸಲು ಸುರಂಗದ ಮೇಲ್ಭಾಗದಿಂದ 45 ಮೀಟರ್‌ವರೆಗೆ ಲಂಬವಾಗಿ ಕೊರೆಯಲಾಗಿತ್ತು ಮತ್ತು ತ್ಯಾಜ್ಯ ಇನ್ನೂ ಸುರಂಗದಲ್ಲಿಯೇ ಇವೆ ಎಂದು ಅವರು ಹೇಳಿದ್ದಾರೆ.

'ನಾವು ಇಲ್ಲಿ ಇರಬೇಕೋ ಅಥವಾ ಮನೆಗೆ ಹೋಗಬೇಕೋ ಎಂಬುದು ಗೊತ್ತಾಗುತ್ತಿಲ್ಲ' ಎಂದು ಒಡಿಶಾದ ಕಾರ್ಮಿಕರೊಬ್ಬರು ಹೇಳಿದರು. ಇವರು ಈ ಸುರಂಗ ನಿರ್ಮಾಣ ಕಾಮಗಾರಿಯಲ್ಲಿ ಕಳೆದ ಎರಡು ವರ್ಷಗಳಿಂದ ತೊಡಗಿಸಿಕೊಂಡಿದ್ದಾರೆ.

'ನಮ್ಮ ಗುತ್ತಿಗೆದಾರ ನಮಗೆ ಎರಡು ದಿನ ವಿಶ್ರಾಂತಿ ನೀಡಿದ್ದಾರೆ. ಆದರೆ ನಾವು ನಮ್ಮ ರಜೆಯನ್ನು ವಿಸ್ತರಿಸುವ ಆಲೋಚನೆ ಹೊಂದಿದ್ದೇವೆ' ಎಂದು ಉತ್ತರ ಪ್ರದೇಶದ ಇನ್ನೊಬ್ಬ ಕಾರ್ಮಿಕರು ತಿಳಿಸಿದರು.

ಆಸ್ಪತ್ರೆಯಿಂದ ಮನೆಗೆ ಬಂದ ಕಾರ್ಮಿಕರು

ಪ್ರಜಾವಾಣಿ ವಾರ್ತೆ

ಲಖನೌ: ಸಿಲ್ಕ್ಯಾರಾ ಸುರಂಗದಿಂದ ರಕ್ಷಿಸಲಾದ 41 ಕಾರ್ಮಿಕರೂ ಆರೋಗ್ಯವಾಗಿದ್ದು, ಋಷಿಕೇಶದಲ್ಲಿರುವ ಅಖಿಲ ಭಾರತ ವೈದ್ಯಕೀಯ ವಿಜ್ಞಾನ ಸಂಸ್ಥೆಯಲ್ಲಿ (ಏಮ್ಸ್) ವೈದ್ಯಕೀಯ ತಪಾಸಣೆಯ ಬಳಿಕ ಗುರುವಾರ ಅವರಿಗೆ ಮನೆಗೆ ತೆರಳಲು ಸೂಚಿಸಲಾಗಿದೆ.

ಮುನ್ನೆಚ್ಚರಿಕೆ ಕ್ರಮವಾಗಿ ಬುಧವಾರ ಅವರನ್ನು ಏಮ್ಸ್‌ಗೆ ದಾಖಲಿಸಿ, ವೈದ್ಯಕೀಯ ತಪಾಸಣೆಗೆ ಒಳಪಡಿಸಲಾಗಿತ್ತು. 'ಕಾರ್ಮಿಕರ ರಕ್ತ ಪರೀಕ್ಷೆ, ಎಕ್ಸ್ ರೇ ಮತ್ತು ಇಸಿಜಿ ವರದಿಗಳು ಸಹಜವಾಗಿವೆ. ಮನೆಗೆ ತೆರಳುವಂತೆ ಸೂಚಿಸಲಾಗಿದೆ' ಎಂದು ಏಮ್ಸ್ ಅಧಿಕಾರಿಯೊಬ್ಬರು ತಿಳಿಸಿದರು.

'ಎರಡು ವಾರಗಳ ಬಳಿಕ ಮನೆಯ ಸಮೀಪದಲ್ಲಿರುವ ಆಸ್ಪತ್ರೆಯಲ್ಲಿ ಆರೋಗ್ಯ ತಪಾಸಣೆಗೆ ಒಳಗಾಗುವಂತೆಯೂ ಅವರಿಗೆ ಸಲಹೆ ನೀಡಲಾಗಿದೆ' ಎಂದು ಹೇಳಿದರು.

ಪ್ರಯಾಣಕ್ಕೆ ನೆರವಾಗುವ ಉದ್ದೇಶದಿಂದ ಕಾರ್ಮಿಕರ ತವರು ರಾಜ್ಯಗಳಿಂದ ಕೆಲವು ಅಧಿಕಾರಿಗಳು ಋಷಿಕೇಶಕ್ಕೆ ಬಂದಿದ್ದಾರೆ. ಎಲ್ಲ 41 ಕಾರ್ಮಿಕರ ಪ್ರಯಾಣ ವೆಚ್ಚವನ್ನು ಭರಿಸುವುದಾಗಿ ಉತ್ತರಾಖಂಡ ಸರ್ಕಾರ ಹೇಳಿದೆ.



ಋಷಿಕೇಶದ ಏಮ್ಸ್‌ನಲ್ಲಿ ಆರೋಗ್ಯ ತಪಾಸಣೆಯ ಬಳಿಕ ತಮ್ಮೂರಿನತ್ತ ಗುರುವಾರ ಪ್ರಯಾಣ ಬೆಳೆಸಿದ ಆಂಧ್ರ ಪ್ರದೇಶದ ಕಾರ್ಮಿಕರು —ಪಿಟಿಐ ಚಿತ್ರ

ರಕ್ಷಣಾ ಕಾರ್ಯದಲ್ಲಿ ಪಾಲ್ಗೊಂಡ ರಾಜ್ಯ ತಂಡ

• ಕೆ.ಓಂಕಾರ ಮೂರ್ತಿ

ಕೋಲಾರ: ಉತ್ತರಕಾಶಿ ಜಿಲ್ಲೆಯ ಸಿಲ್ಕ್ಯಾರಾ-ಬಡಕೋಟ್ ಸುರಂಗ ಮಾರ್ಗದಲ್ಲಿ ಸಿಲುಕಿದ್ದ 41 ಕಾರ್ಮಿಕರು ಸುರಕ್ಷಿತವಾಗಿ ಹೊರ ಬರಲು ರಾಜ್ಯದ ತಂತ್ರಜ್ಞರ ಪಾತ್ರವೂ ಇದೆ.

ಕೋಲಾರ ಜಿಲ್ಲೆಯ ಮೈನಿಂಗ್ ಎಂಜಿನಿಯರ್ ಎಚ್.ಎಸ್. ವೆಂಕಟೇಶ್ ಪ್ರಸಾದ್ ಸೇರಿದಂತೆ ಬೆಂಗಳೂರಿನ ಬೆಳ್ಳಂದೂರು ಸ್ಕ್ವಾಡ್ರೋನ್ ಇನ್ಫ್ರಾ ಅಂಡ್ ಮೈನಿಂಗ್ ಕಂಪನಿಯ ಒಂಬತ್ತು ತಂತ್ರಜ್ಞರ ತಂಡ ಏಳು ದಿನ ಕಾರ್ಯಾಚರಣೆಯಲ್ಲಿ ಭಾಗಿಯಾಗಿತ್ತು.

ಸೇನಾಪಡೆಯ ಅಧಿಕಾರಿಗಳ ತುರ್ತು ಕರೆಯ ಮೇರೆಗೆ ಈ ತಂಡದವರು ನ.22ರಂದು ವಿಮಾನದಲ್ಲಿ ಬೆಂಗಳೂರಿನಿಂದ ಡೆಹ್ರಾಡೂನ್‌ಗೆ ಪ್ರಯಾಣ ಬೆಳೆಸಿದ್ದರು. ಸೇನಾಪಡೆ ನೇತೃತ್ವದಲ್ಲಿ ನಡೆದ ಕಾರ್ಯಾಚರಣೆ ವೇಳೆ ಇವರು ಡ್ರೋಣ್ ಹಾಗೂ ಸೆನ್ಸರ್ ತಂತ್ರಜ್ಞಾನದ ಸಹಾಯ ನೀಡಿದ್ದಾರೆ.

'ಸುರಂಗದೊಳಗೆ ಸಿಲುಕಿದ್ದ ಕಾರ್ಮಿಕರನ್ನು ಸುರಕ್ಷಿತವಾಗಿ ಹೊರಗೆ ಕರೆ ತರಲು ನೇತೃತ್ವ ವಹಿಸಿಕೊಂಡಿದ್ದ ಭಾರತೀಯ ಸೇನೆ ಹಾಗೂ ಇತರ ರಕ್ಷಣಾ ಸಿಬ್ಬಂದಿ ಮುಂದೆ ಐದು ಯೋಜನೆ ಇದ್ದವು. ಸುರಂಗ ಕೊರೆಯುವಾಗ ನಾವು ಡ್ರೋನ್ ಹಾಗೂ ಸೆನ್ಸರ್ ಮೂಲಕ ಸಲಹೆ ನೀಡುತ್ತಿದ್ದೆವು. ನೀರು, ಕಲ್ಲು ಇರುವ ಭಾಗ, ಭೂಮಿ ಅದುರುವ ಭಾಗವನ್ನು ಪತ್ತೆ ಹಚ್ಚಿ ಮುನ್ನೆಚ್ಚರಿಕೆ ಕ್ರಮದ ಬಗ್ಗೆ ಮಾಹಿತಿ ರವಾನಿಸುತ್ತಿದ್ದೆವು. ಆರು ಗಂಟೆಗೊಮ್ಮೆ ವರದಿ ಕೊಡುತ್ತಿದ್ದೆವು' ಎಂದು ವೆಂಕಟೇಶ್ ಪ್ರಸಾದ್ 'ಪ್ರಜಾವಾಣಿ'ಗೆ ತಿಳಿಸಿದರು.

'ಡ್ರೋಣ್ ಸೇರಿದಂತೆ ವಿವಿಧ ಉಪಕರಣಗಳನ್ನು ನಾವು ತೆಗೆದುಕೊಂಡು ಹೋಗಿದ್ದೆವು. ಸುಮಾರು 120 ಮೀಟರ್ ತನಕ ಭೂಮಿ ಒಳಗಡೆ ಏನಿದೆ ಎಂಬುದನ್ನು ಈ ಉಪಕರಣಗಳಿಂದ ಪತ್ತೆ ಹಚ್ಚಬಹುದು. 9 ಕಿ.ಮೀ ದೂರದಲ್ಲಿ ನಾವು ಉಳಿದುಕೊಂಡಿದ್ದೆವು. ಊಟದ ವ್ಯವಸ್ಥೆ ಸೇರಿದಂತೆ ಎಲ್ಲಾ ಸೌಲಭ್ಯವನ್ನು ನಮಗೆ ನೀಡಿದ್ದರು' ಎಂದರು.

ಬಂಗಾರಪೇಟೆಯ ವೆಂಕಟೇಶ್ ಪ್ರಸಾದ್ ಮೈನಿಂಗ್ ಎಂಜಿನಿಯರಿಂಗ್ ವ್ಯಾಸಂಗ ಮುಗಿಸಿ ರಾಜಸ್ಥಾನದಲ್ಲಿರುವ ಹಿಂದೂಸ್ತಾನ್ ಜಿಂಕ್ ಲಿಮಿಟೆಡ್‌ನಲ್ಲಿ ಗುತ್ತಿಗೆ ಆಧಾರದ ಮೇಲೆ ಕೆಲಸ ಮಾಡಿದ್ದಾರೆ. ಬಳಿಕ ಚಿತ್ರದುರ್ಗದಲ್ಲಿ ಕಾರ್ಯನಿರ್ವಹಿಸಿದ್ದಾರೆ. ಈಗ ಸ್ಕ್ವಾಡ್ರೋನ್ ಇನ್ಫ್ರಾ ಅಂಡ್ ಮೈನಿಂಗ್ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದಾರೆ.

ಈ ಕಾರ್ಯಾಚರಣೆಯಲ್ಲಿ ಪಾಲ್ಗೊಂಡಿದ್ದ ಬೆಂಗಳೂರಿನ ತಂಡದಲ್ಲಿ ಕಂಪನಿಯ ಸಿಇಒ ಸೈರಿಕ್ ಜೋಸೆಫ್, ಮೈನಿಂಗ್ ಎಂಜಿನಿಯರ್‌ಗಳಾದ ಆಸಿಫ್ ಮುಲ್ಲಾ, ವೆಂಕಟೇಶ್ ಪ್ರಸಾದ್, ಅಮೋಘ್, ಏರೋನಾಟಿಕಲ್ ಎಂಜಿನಿಯರ್‌ಗಳಾದ ಗಜಾನನ, ಎನ್‌ವಿಡಿ ಸಾಯಿ, ಎಲೆಕ್ಟ್ರಿಕ್ ಎಂಜಿನಿಯರ್ ಶ್ರೀಕಾಂತ್, ಪ್ರೊಸೆಸರ್ ರೇಜು, ಜಿಯೋಫಿಜಿಸ್ಟ್ ಸತ್ಯ ಇದ್ದರು.



ಸುರಂಗದಲ್ಲಿ ಕೋಲಾರದ ಎಚ್.ಎಸ್.ವೆಂಕಟೇಶ್ ಪ್ರಸಾದ್

ಮಗು ಸಾವು: ಪೋಷಕರ ಪ್ರತಿಭಟನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ತ್ವರಿತವಾಗಿ ಚಿಕಿತ್ಸೆ ನೀಡುವಲ್ಲಿ ನಿಮ್ಹಾನ್ಸ್ ವೈದ್ಯರು ನಿರ್ಲಕ್ಷ್ಯ ವಹಿಸಿದ್ದೇ ಮಗುವಿನ ಸಾವಿಗೆ ಕಾರಣ ಎಂದು ಆರೋಪಿಸಿ ಮಗುವಿನ ಪೋಷಕರು ನಿಮ್ಹಾನ್ಸ್ ವಿರುದ್ಧ ಗುರುವಾರ ಪ್ರತಿಭಟನೆ ನಡೆಸಿದರು.

ಚಿಕಿತ್ಸೆಯಲ್ಲಿ ಯಾವುದೇ ನಿರ್ಲಕ್ಷ್ಯವಾಗಿಲ್ಲ ಎಂದು ವೈದ್ಯರು ಸ್ಪಷ್ಟನೆ ನೀಡಿದ್ದಾರೆ.

ಚಿಕ್ಕಮಗಳೂರು ತಾಲ್ಲೂಕಿನ ಬಸವನಗುಡಿ ನಿವಾಸಿಗಳಾದ ವೆಂಕಟೇಶ್ –ಜ್ಯೋತಿ ದಂಪತಿಯ ಒಂದೂವರೆ ವರ್ಷದ ಮಗು ವಿಜಯ್ ಮನೆಯಲ್ಲಿ ಮಂಗಳವಾರ ಆಟವಾಡುವ ಸಂದರ್ಭದಲ್ಲಿ ಮೆಟ್ಟಿಲಿನಿಂದ ಬಿದ್ದು ತೀವ್ರ ಗಾಯಗೊಂಡಿತ್ತು. ಮಗುವನ್ನು ಹಾಸನದ ಸರ್ಕಾರಿ ಆಸ್ಪತ್ರೆಗೆ ಕರೆತರಲಾಗಿತ್ತು. ಹೆಚ್ಚಿನ ಚಿಕಿತ್ಸೆಗಾಗಿ ನಿಮ್ಹಾನ್ಸ್‌ಗೆ ಕರೆದುಕೊಂಡು ಹೋಗುವಂತೆ ಅಲ್ಲಿನ ವೈದ್ಯರು ತಿಳಿಸಿದ್ದರು.

ಅದರಂತೆ ಬುಧವಾರ ಮಧ್ಯಾಹ್ನ ಮಗುವನ್ನು ಹಾಸನದಿಂದ 'ಝೀರೊ ಟ್ರಾಫಿಕ್'ನಲ್ಲಿ ನಿಮ್ಹಾನ್ಸ್‌ಗೆ ಕರೆತರಲಾಗಿತ್ತು. ಆದರೆ, ಆಸ್ಪತ್ರೆಯಲ್ಲಿ ಬೆಡ್ ಇಲ್ಲ ಎಂದು ಹೇಳಿ ಚಿಕಿತ್ಸೆಯನ್ನು ತಕ್ಷಣ ನೀಡಲಿಲ್ಲ. ಇದರಿಂದ ಮಗು ಮೃತಪಟ್ಟಿದೆ ಎಂದು ಪೋಷಕರು ಆರೋಪಿಸಿದ್ದಾರೆ.

'ಹಾಸನ ಜಿಲ್ಲಾ ಆಸ್ಪತ್ರೆಯ ವೈದ್ಯರ ಸಲಹೆಯಂತೆ ಬುಧವಾರ ನಿಮ್ಹಾನ್ಸ್‌ಗೆ ಮಗುವನ್ನು ದಾಖಲಿಸುವುದಕ್ಕೆ ಹೊರಡುವ ಮೊದಲೇ ನಿಮ್ಹಾನ್ಸ್ ಆಸ್ಪತ್ರೆಗೆ ಮಾಹಿತಿ ನೀಡಿದ್ದೆವು. ಆಸ್ಪತ್ರೆಗೆ ಬಂದ ಮೇಲೆ ವೆಂಟಿಲೇಟರ್, ಬೆಡ್ ಇಲ್ಲ ಎಂದು ಬೇರೆ ಆಸ್ಪತ್ರೆಗೆ ಚೀಟಿ ಬರೆದುಕೊಟ್ಟರು. ಮಗುವಿನ ತಂದೆ ಮುಗ್ಧರಾದ್ದರಿಂದ, ನಾನೇ ಆಸ್ಪತ್ರೆಯವರ ಬಳಿ ಮಾತನಾಡಬೇಕಾಯಿತು. ಇದರಿಂದ ಒಂದು ತಾಸು ಮಗು ಆಂಬುಲೆನ್ಸ್‌ನಲ್ಲೇ ಇರಬೇಕಾಯಿತು. ನಾವೆಲ್ಲ ಗಲಾಟೆ ಮಾಡಿದ ಮೇಲೆ ಪರೀಕ್ಷೆ ಮಾಡಲು ಮುಂದಾದರು. ತಕ್ಷಣ ಚಿಕಿತ್ಸೆ ದೊರೆತಿದ್ದರೆ ಮಗು ಬದುಕುತ್ತಿತ್ತು' ಎಂದು ಆಂಬುಲೆನ್ಸ್ ಚಾಲಕ ಮಧು ಅವರು ಪ್ರತಿಕ್ರಿಯೆ ನೀಡಿದರು.

'ಮಗುವನ್ನು ದಾಖಲಿಸಿಕೊಳ್ಳಿ, ಬೇಗ ಚಿಕಿತ್ಸೆ ಆರಂಭಿಸಿ ಎಂದು ಎಷ್ಟೇ ಗಲಾಟೆ ಮಾಡಿದರೂ, ಅವಕಾಶ ಸಿಗಲಿಲ್ಲ' ಎಂದು ಪೋಷಕರು ರೋದಿಸಿದರು.

ನಿರಂತರ ಪ್ರತಿಭಟನೆ: ಮಗುವಿಗೆ ಸರಿಯಾದ ಸಮಯಕ್ಕೆ ಚಿಕಿತ್ಸೆ ನೀಡಿಲ್ಲ ಎಂದು ಪೋಷಕರು ಬುಧವಾರವೂ ಪ್ರತಿಭಟನೆ ನಡೆಸಿದ್ದರು. ಗುರುವಾರವೂ ಪ್ರತಿಭಟನೆ ಮುಂದುವರೆಸಿದರು. ಮಗುವಿನ ಸಾವಿಗೆ ನ್ಯಾಯಕೊಡಿ ಎಂದು ಆಗ್ರಹಿಸಿದರು.

'ಮಗುವಿನ ಮೃತದೇಹ ನೀಡುತ್ತಿಲ್ಲ' ಎಂದು ಆರೋಪಿಸಿದರು. ಆರೋಗ್ಯ ಸಚಿವರು ಸ್ಥಳಕ್ಕೆ ಬರಬೇಕು ಎಂದು ಒತ್ತಾಯಿಸಿದರು. ಇಷ್ಟೆಲ್ಲ ಬೆಳವಣಿಗೆಗಳ ನಂತರ ಮರಣೋತ್ತರ ಪರೀಕ್ಷೆ ಮುಗಿಸಿ ಬುಧವಾರ ಸಂಜೆ ಮೃತದೇಹವನ್ನು ಪೋಷಕರಿಗೆ ಹಸ್ತಾಂತರಿಸಲಾಗಿದೆ.

ನಂತರವೂ ಪೋಷಕರು ಸಿದ್ದಾಪುರ ಠಾಣೆಯ ಎದುರು ಮಗುವಿನ ಮೃತದೇಹವನ್ನು ಇಟ್ಟು, 'ಮಗುವಿನ ಸಾವಿಗೆ ಕಾರಣರಾದ ವೈದ್ಯರನ್ನು ಬಂಧಿಸಬೇಕು. ಕಾನೂನು ಕ್ರಮ ಕೈಗೊಳ್ಳಬೇಕು' ಎಂದು ಆಗ್ರಹಿಸಿ, ಪ್ರತಿಭಟನೆ ಮುಂದುವರಿಸಿದರು.

'ರೈತರಿಗೆ ₹ 2 ಸಾವಿರ ತುರ್ತು ಪರಿಹಾರ'

ಒಂದನೇ ಪುಟದಿಂದ

'ಕೇಂದ್ರದ ತಂಡ ಅಕ್ಟೋಬರ್‌ನಲ್ಲಿ ಬರ ಅಧ್ಯಯನ ನಡೆಸಿ ಕೇಂದ್ರ ಸರ್ಕಾರಕ್ಕೆ ವರದಿ ನೀಡಿದೆ' ಎಂದು ಹೇಳಿದರು. 'ಕಂದಾಯ ಸಚಿವರು, ಕೃಷಿ ಸಚಿವರು ದೆಹಲಿಗೆ ಹೋಗಿದ್ದರೂ ಕೇಂದ್ರ ಗೃಹ, ಹಣಕಾಸು ಮತ್ತು ಕೃಷಿ ಸಚಿವರು ಭೇಟಿಗೆ ಸಿಕ್ಕಿರಲಿಲ್ಲ. ಹೀಗಾಗಿ, ಅಧಿಕಾರಿಗಳನ್ನು ಭೇಟಿ ಮಾಡಿ ಬರ ಪರಿಸ್ಥಿತಿ ವಿವರಿಸಿದ್ದಾರೆ. ಆ ಬಳಿಕ, ಹಣಕಾಸು ಸಚಿವರನ್ನು ಕಂದಾಯ ಮತ್ತು ಕೃಷಿ ಸಚಿವರು ಭೇಟಿ ಮಾಡಿ ಮನವಿ ಸಲ್ಲಿಸಿದ್ದಾರೆ' ಎಂದರು.

'ಕೇಂದ್ರ ಸರ್ಕಾರ ಪ್ರತಿ ಹೆಕ್ಟೇರ್ ಮಳೆ ಆಶ್ರಿತ ಬೆಳೆಗೆ ₹ 8,500, ನೀರಾವರಿ ಬೆಳೆಗೆ ₹ 17 ಸಾವಿರ, ಬಹು ವಾರ್ಷಿಕ ಬೆಳೆಗೆ ₹ 22,500 ಪರಿಹಾರ ನಿಗದಿ ಮಾಡಿದೆ. ಮಾರ್ಗಸೂಚಿ ಅನ್ವಯ ಎರಡು ಹೆಕ್ಟೇರ್‌ವರೆಗೆ ಮಾತ್ರ ಬೆಳೆ ಪರಿಹಾರ ನೀಡಲಾಗುತ್ತದೆ. ರಾಷ್ಟ್ರೀಯ ವಿಪತ್ತು ಪರಿಹಾರ ನಿಧಿಯಡಿ (ಎನ್‌ಡಿಆರ್‌ಎಫ್) ₹ 4,663 ಕೋಟಿ ಬೆಳೆ ನಷ್ಟ ಪರಿಹಾರ ನೀಡುವಂತೆ ಕೇಂದ್ರಕ್ಕೆ ಮನವಿ ಸಲ್ಲಿಸಲಾಗಿದೆ. ನಾನು ಕೇಂದ್ರ ಗೃಹ ಸಚಿವರಿಗೆ ಪತ್ರ ಬರೆದು ಭೇಟಿಗೆ ಅವಕಾಶ ನೀಡುವಂತೆ ಕೋರಿದ್ದೇನೆ. ಆದರೆ, ಈವರೆಗೂ ಅವಕಾಶ ನೀಡಿಲ್ಲ' ಎಂದರು.



> ಕೇಂದ್ರದಿಂದ ಬರ ಪರಿಹಾರ ಬಿಡುಗಡೆ ವಿಳಂಬ ಆಗುತ್ತಿರುವ ಹಿನ್ನೆಲೆಯಲ್ಲಿ, ರೈತರಿಗೆ ತುರ್ತು ಕ್ರಮವಾಗಿ ನಾಲ್ಕೈದು ದಿನಗಳಲ್ಲಿ ರಾಜ್ಯ ಸರ್ಕಾರದಿಂದ ಪರಿಹಾರ ಹಣ ಬಿಡುಗಡೆ ಮಾಡಲಾಗುವುದು
>
> **ಸಿದ್ದರಾಮಯ್ಯ**, ಮುಖ್ಯಮಂತ್ರಿ

'ಬಿತ್ತನೆ ವೈಫಲ್ಯ ಮತ್ತು ಮಧ್ಯಂತರ ಬೆಳೆ ವಿಮೆ ಪರಿಹಾರವಾಗಿ ರಾಜ್ಯ ಸರ್ಕಾರ 6.5 ಲಕ್ಷ ರೈತರಿಗೆ ₹ 440 ಕೋಟಿ ಬಿಡುಗಡೆ ಮಾಡಿದೆ. ಕುಡಿಯುವ ನೀರಿಗೆ, ಮೇವಿಗೆ, ಉದ್ಯೋಗ ಒದಗಿಸಲು ₹ 327 ಕೋಟಿ ಬಿಡುಗಡೆ ಮಾಡಿದ್ದೇವೆ. ಜಿಲ್ಲಾಧಿಕಾರಿಗಳ ಖಾತೆಯಲ್ಲಿ ₹780 ಕೋಟಿ ಇದೆ. ಯಾವುದೇ ಕಾರಣಕ್ಕೂ ಕುಡಿಯುವ ನೀರಿಗೆ ಸಮಸ್ಯೆ ಆಗಬಾರದು ಎಂದು ಕಂದಾಯ ಸಚಿವರಿಗೆ ಸೂಚನೆ ನೀಡಿದ್ದೇನೆ. 60 ಹಳ್ಳಿಗಳಲ್ಲಿ ಟ್ಯಾಂಕರ್‌ಗಳಲ್ಲಿ ನೀರು ಪೂರೈಸಲಾಗುತ್ತದೆ. ಮೇವಿನ ಸಮಸ್ಯೆ ಈವರೆಗೆ ತಲೆದೋರಿಲ್ಲ. 7 ಲಕ್ಷ ಮೇವಿನ ಬೀಜ ವಿತರಣೆ ಮಾಡಲಾಗಿದೆ' ಎಂದರು.

'ಸಿದ್ದರಾಮಯ್ಯ ಮುಖ್ಯಮಂತ್ರಿಯಾದರೆ ರಾಜ್ಯಕ್ಕೆ ಬರ ಬರುತ್ತದೆ' ಎಂಬ ವಿರೋಧ ಪಕ್ಷಗಳ ಆರೋಪಕ್ಕೆ ಪ್ರತಿಕ್ರಿಯಿಸಿದ ಸಿದ್ದರಾಮಯ್ಯ, 'ಯಡಿಯೂರಪ್ಪ ಮುಖ್ಯಮಂತ್ರಿಯಾದಾಗ ಬರವೂ ಇತ್ತು, ನೆರೆಯೂ ಇತ್ತು. ದೇಶದ 12 ರಾಜ್ಯಗಳಲ್ಲಿ ಬರ ಇದೆ. ಅಲ್ಲೆಲ್ಲಾ ನಾನು ಮುಖ್ಯಮಂತ್ರಿಯಾ? ಸಾಮಾನ್ಯವಾಗಿ ನಾಲ್ಕು ವರ್ಷಕ್ಕೊಮ್ಮೆ ರಾಜ್ಯದಲ್ಲಿ ಬರ ಬರುತ್ತದೆ' ಎಂದರು.

ಕಂದಾಯ ಸಚಿವ ಕೃಷ್ಣ ಬೈರೇಗೌಡ ಮಾತನಾಡಿ, 'ಜಮೀನಿನ ವಿಸ್ತೀರ್ಣ ಮತ್ತು ಬೆಳೆ ನಷ್ಟವನ್ನು ಪರಿಗಣಿಸಿ ಮೊದಲ ಕಂತಿನಲ್ಲಿ ಕನಿಷ್ಠ ₹ 1 ಸಾವಿರದಿಂದ ಗರಿಷ್ಠ ₹ 2 ಸಾವಿರವರೆಗೆ ನಷ್ಟ ಪರಿಹಾರ ನೀಡಲಾಗುವುದು. ಕೇಂದ್ರ ಸರ್ಕಾರದ ಬೆಳೆ ನಷ್ಟ ಪರಿಹಾರ ಹಣ ನೀಡುವ ಸಂದರ್ಭ, ರಾಜ್ಯ ಸರ್ಕಾರ ಪಾವತಿಸಿದ ಈ ಮಧ್ಯಂತರ ಬೆಳೆ ಪರಿಹಾರವನ್ನು ಕಡಿತಗೊಳಿಸಿ, ಬಾಕಿ ಉಳಿದ ಮೊತ್ತವನ್ನು ಪಾವತಿಸಲಾಗುವುದು. ಬರ ಪೀಡಿತ 223 ತಾಲ್ಲೂಕುಗಳ ಜಿಲ್ಲಾಧಿಕಾರಿಗಳಿಂದ ಮಾಹಿತಿ ಪಡೆದು ಬೆಳೆ ನಷ್ಟ ಪರಿಹಾರ ನೀಡಲಾಗುವುದು' ಎಂದರು.

262 ಆರೋಗ್ಯ ಕವಚ '108' ಆಂಬುಲೆನ್ಸ್ ಸಿಎಂ ಲೋಕಾರ್ಪಣೆ

'ಗುಣಮಟ್ಟದ ಆರೋಗ್ಯ ಸೇವೆ ಗುರಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಜನರಿಗೆ ಗುಣಮಟ್ಟದ ಆರೋಗ್ಯ ಸೇವೆ ನೀಡಲು ಸರ್ಕಾರ ಬದ್ಧವಾಗಿದ್ದು, ಜಯದೇವ ಆಸ್ಪತ್ರೆಯಲ್ಲಿರುವಂತಹ ಮಟ್ಟದ ಆರೋಗ್ಯ ಸೇವೆ ಎಲ್ಲ ಸರ್ಕಾರಿ ಆಸ್ಪತ್ರೆಗಳಲ್ಲೂ ಸಿಗಬೇಕು ಎನ್ನುವುದು ಗುರಿ' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ವಿಧಾನಸೌಧದ ಮೆಟ್ಟಿಲುಗಳ ಮೇಲೆ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಗುರುವಾರ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ 262 ಆಧುನಿಕ ಜೀವ ರಕ್ಷಕ ಆಂಬುಲೆನ್ಸ್‌ಗಳನ್ನು ಲೋಕಾರ್ಪಣೆ ಮಾಡಿ ಅವರು ಮಾತನಾಡಿದರು.

'ಹಳೆ ಬಟ್ಟೆ-ಕೊಳಕು ಬಟ್ಟೆ ಹಾಕಿಕೊಂಡು ಬರುವ ಬಡವರನ್ನೂ ಮಾನವೀಯವಾಗಿ ನಡೆಸಿಕೊಂಡು, ತಾರತಮ್ಯ ಇಲ್ಲದ ಉತ್ತಮ ಆರೋಗ್ಯ ಸೇವೆ ನೀಡಬೇಕು' ಎಂದು ವೈದ್ಯ ಸಮೂಹಕ್ಕೆ ಮನವಿ ಮಾಡಿದರು.

'ಚಿಕಿತ್ಸೆ ಸಿಗದೆ ಯಾರೂ ಪ್ರಾಣ ಕಳೆದುಕೊಳ್ಳುವಂತೆ ಆಗಬಾರದು ಎನ್ನುವ ಕಾರಣಕ್ಕೇ ತುರ್ತು 108 ಆಂಬುಲೆನ್ಸ್‌ಗಳನ್ನು ಆರೋಗ್ಯ ಸೇವೆಗೆ ಒದಗಿಸಲಾಗಿದೆ. ರಾಜ್ಯದಲ್ಲಿ 840ಕ್ಕೂ ಹೆಚ್ಚು ಆಂಬುಲೆನ್ಸ್‌ಗಳ ಅಗತ್ಯವಿದೆ. ಪ್ರತಿ ತಾಲ್ಲೂಕಿನಲ್ಲಿ ನಾಲ್ಕು ಆಂಬುಲೆನ್ಸ್‌ಗಳು ಕಾರ್ಯನಿರ್ವಹಿಸುತ್ತಿದ್ದು, ಪ್ರತಿ ದಿನ ನೂರಾರು ಜನರಿಗೆ ತುರ್ತು ಆರೋಗ್ಯ ಸೇವೆ ಒದಗಿಸುತ್ತಿವೆ' ಎಂದು ವಿವರಿಸಿದರು.

'ಪ್ರತಿ ಜಿಲ್ಲೆಯಲ್ಲಿ ಎಂಆರ್‌ಐ ಸ್ಕ್ಯಾನಿಂಗ್ ಸೌಲಭ್ಯ ಇರಬೇಕು. ಖಾಸಗಿ ಡಯಾಗ್ನಸ್ಟಿಕ್ ಸೆಂಟರ್‌ಗಳಲ್ಲಿ ಸೇವಾ ವೆಚ್ಚ ದುಬಾರಿ ಆಗಿರುವುದರಿಂದ ಬಡವರಿಗೆ ಬಹಳ ಕಷ್ಟ ಆಗುತ್ತಿದೆ. ಈ ಕಾರಣಕ್ಕೆ ಮುಖ್ಯಮಂತ್ರಿ ಪರಿಹಾರ ನಿಧಿಗೆ ಸಾವಿರಾರು ಮಂದಿ ಬೇಡಿಕೆ ಅರ್ಜಿ ಕೊಡುತ್ತಿದ್ದಾರೆ. ಆ ಕಾರಣಕ್ಕೆ ಸರ್ಕಾರಿ ಆಸ್ಪತ್ರೆಗಳಲ್ಲೇ ಉತ್ತಮ ಗುಣಮಟ್ಟದ ಚಿಕಿತ್ಸೆ ಸಿಗುವಂತಹ ವಾತಾವರಣವನ್ನು ಸೃಷ್ಟಿಸಲಾಗುತ್ತಿದೆ' ಎಂದರು.

ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, '108 ಆಂಬುಲೆನ್ಸ್‌ಗಳ ಚಾಲಕರು ಒಳ ಒಪ್ಪಂದ ಮಾಡಿಕೊಂಡು ರೋಗಿಗಳನ್ನು ಖಾಸಗಿ ಆಸ್ಪತ್ರೆಗೆ ಕರೆದುಕೊಂಡು ಹೋಗುತ್ತಾರೆ. ಇದನ್ನು ತಪ್ಪಿಸಲು ಗುತ್ತಿಗೆ ನೀಡಿದವರಿಗೆ ತರಬೇತಿ ನೀಡಬೇಕು. ಚಾಲಕರುಗಳಿಗೆ ಹೊಣೆಗಾರಿಕೆ ನೀಡಬೇಕು. ಆಂಬುಲೆನ್ಸ್‌ಗಳಿಗೆ ಜಿಪಿಎಸ್ ಅಳವಡಿಸಬೇಕು. ಅಪಘಾತಗೊಂಡಾಗ ಗಾಯಾಳುಗಳ ಸಂಬಂಧಿಕರು ಗಾಬರಿಯಲ್ಲಿ ಖಾಸಗಿ ಆಸ್ಪತ್ರೆಗೆ ಹೋಗುತ್ತಾರೆ. ಈ ವಿಚಾರದಲ್ಲಿ ಅಧಿಕಾರಿಗಳು ಗಮನಹರಿಸಬೇಕು'. ಎಂದರು.



ಆಧುನಿಕ ಜೀವ ರಕ್ಷಕ ಆಂಬುಲೆನ್ಸ್‌ಗಳು —ಪ್ರಜಾವಾಣಿ ಚಿತ್ರ

'ಹೆಚ್ಚುವರಿಯಾಗಿ 188 ಇಂದಿರಾ ಕ್ಯಾಂಟೀನ್'

'ಜನರ ಅನುಕೂಲಕ್ಕಾಗಿ ಈ ವರ್ಷ ಹೆಚ್ಚುವರಿಯಾಗಿ 188 ಇಂದಿರಾ ಕ್ಯಾಂಟೀನ್‌ಗಳನ್ನು ಸ್ಥಾಪಿಸಲಾಗುವುದು. ಇಂದಿರಾ ಕ್ಯಾಂಟೀನ್‌ಗೆ ಸ್ಥಳದ ಅಭಾವ ಇರುವ ಕಡೆ ಮೊಬೈಲ್ ಕ್ಯಾಂಟೀನ್‌ಗಳನ್ನು ಸ್ಥಾಪಿಸಲಾಗುವುದು' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದರು.

ಶಾಸಕರ ಭವನ ಆವರಣದಲ್ಲಿ ಸಂತ ಕನಕದಾಸರ ಪ್ರತಿಮೆಗೆ ಗುರುವಾರ ಮಾಲಾರ್ಪಣೆ ಮಾಡಿದ ಬಳಿಕ ಸುದ್ದಿಗಾರರ ಜೊತೆವವರು ಮಾತನಾಡಿದರು.

'ಬೆಂಗಳೂರಿನ 225 ವಾರ್ಡ್‌ಗಳಲ್ಲಿಯೂ ಇಂದಿರಾ ಕ್ಯಾಂಟೀನ್ ಪ್ರಾರಂಭಿಸಲಾಗುವುದು. ಅಲ್ಲದೆ. ಅಗತ್ಯ ಇರುವ ಕಡೆಗಳಲ್ಲಿಯೂ ಕ್ಯಾಂಟೀನ್ ಆರಂಭಿಸಲಾಗುವುದು' ಎಂದರು.

ಏಕಾಂಗಿಯಾಗಿ ಬಿಎಸ್‌ಪಿ ಸ್ಪರ್ಧೆ: ಮಾಯಾವತಿ

ಪ್ರಜಾವಾಣಿ ವಾರ್ತೆ

ಲಖನೌ: ಮುಂದಿನ ವರ್ಷ ನಡೆಯಲಿರುವ ಲೋಕಸಭೆ ಚುನಾವಣೆಯಲ್ಲಿ ತಮ್ಮ ಪಕ್ಷ ಏಕಾಂಗಿಯಾಗಿ ಸ್ಪರ್ಧಿಸುವ ಧೃಢ ನಿರ್ಧಾರ ತೆಗೆದುಕೊಂಡಿರುವುದಾಗಿ ಬಿಎಸ್‌ಪಿ ಮುಖ್ಯಸ್ಥರಾದ ಮಾಯಾವತಿ ಹೇಳಿದ್ದಾರೆ.

'ಕೆಲವು ರಾಜ್ಯಗಳಲ್ಲಿ ಪ್ರಾದೇಶಿಕ ಪಕ್ಷಗಳ ಜತೆ ಮೈತ್ರಿ ಮಾಡಿಕೊಳ್ಳುತ್ತೇವೆ. ಆದರೆ 'ಎನ್‌ಡಿಎ' ಅಥವಾ 'ಇಂಡಿಯಾ' ಮೈತ್ರಿಕೂಟದಲ್ಲಿ ಸೇರಿಕೊಳ್ಳುವುದಿಲ್ಲ' ಎಂದು ಉತ್ತರ ಪ್ರದೇಶ ಮತ್ತು ಉತ್ತರಾಖಂಡ ರಾಜ್ಯಗಳ ಬಿಎಸ್‌ಪಿ ಪದಾಧಿಕಾರಿಗಳಿಗಾಗಿ ಗುರುವಾರ ಆಯೋಜಿಸಿದ್ದ ಸಭೆಯಲ್ಲಿ ಅವರು ಸ್ಪಷ್ಟಪಡಿಸಿದರು.

'ಇಂಡಿಯಾ' ಮೈತ್ರಿಕೂಟಕ್ಕೆ ಬಿಎಸ್‌ಪಿಯನ್ನು ಕರೆತರಲು ಕಾಂಗ್ರೆಸ್ ಪ್ರಯತ್ನಿಸುತ್ತಿದೆ ಎಂಬ ವರದಿಗಳ ಬೆನ್ನಲ್ಲೇ ಮಾಯಾವತಿ ಈ ಹೇಳಿಕೆ ನೀಡಿದ್ದಾರೆ.

'ಬಿಜೆಪಿ ಮತ್ತು ಕಾಂಗ್ರೆಸ್‌ನ ಜನವಿರೋಧಿ ನೀತಿಗಳಿಂದಾಗಿ ದೇಶದ ರಾಜಕೀಯ ಚಿತ್ರಣದಲ್ಲಿ ಬದಲಾವಣೆ ಕಂಡುಬರುತ್ತಿದೆ. ಆದ್ದರಿಂದ ಮುಂಬರುವ ಚುನಾವಣೆಯಲ್ಲಿ ಬಿಎಸ್‌ಪಿ ನಿರ್ಣಾಯಕ ಪಾತ್ರ ವಹಿಸಲಿದೆ' ಎಂದು ಮಾಯಾವತಿ ತಿಳಿಸಿದ್ದಾರೆ.

ಹೆಣ್ಣುಭ್ರೂಣ ಹತ್ಯೆ ಪ್ರಕರಣ: ಸಿಐಡಿ ತನಿಖೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ನಡೆದಿದ್ದ ಭ್ರೂಣಲಿಂಗ ಪತ್ತೆ ಪರೀಕ್ಷೆ ಹಾಗೂ ಹೆಣ್ಣುಭ್ರೂಣ ಹತ್ಯೆ ಪ್ರಕರಣವನ್ನು ರಾಜ್ಯ ಸರ್ಕಾರ ಸಿಐಡಿ ತನಿಖೆಗೆ ಒಪ್ಪಿಸಿದೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಗೃಹ ಸಚಿವ ಡಾ.ಜಿ.ಪರಮೇಶ್ವರ ಅವರ ಜತೆಗೆ ಗುರುವಾರ ರಾತ್ರಿ ದೂರವಾಣಿ ಮೂಲಕ ಚರ್ಚಿಸಿ, ಸಿಐಡಿ ತನಿಖೆ ನಡೆಸುವಂತೆ ಸೂಚಿಸಿದ್ದಾರೆ.

ರಾಮನಗರ, ಮಂಡ್ಯ, ಮೈಸೂರು ಸೇರಿದಂತೆ ರಾಜ್ಯದ ಹಲವು ಕಡೆ ಹೆಣ್ಣುಭ್ರೂಣ ಹತ್ಯೆ ಪ್ರಕರಣಗಳು ಅವ್ಯಾಹತವಾಗಿ ನಡೆಯುತ್ತಿರುವುದು ಬಹಿರಂಗವಾಗಿದ್ದು ಸಿಐಡಿ ತನಿಖೆಗೆ ಸರ್ಕಾರ ಮುಂದಾಗಿದೆ.

ಮಂಡ್ಯ ಜಿಲ್ಲೆಯ ಪ್ರಕರಣದಲ್ಲಿ ನಗರದ ಬೈಯಪ್ಪನಹಳ್ಳಿ ಠಾಣೆ ಪೊಲೀಸರು ಇದುವರೆಗೂ 9 ಮಂದಿಯನ್ನು ಬಂಧಿಸಿದ್ದಾರೆ.

ಆರೋಪಿಗಳು, ಮೂರು ವರ್ಷಗಳ ಅವಧಿಯಲ್ಲಿ 900 ಕ್ಕೂ ಹೆಚ್ಚು ಹೆಣ್ಣುಭ್ರೂಣ ಹತ್ಯೆ ನಡೆಸಿರುವುದು ಪೊಲೀಸ್ ತನಿಖೆಯಿಂದ ಬಯಲಾಗಿದೆ.

'ಮಂಡ್ಯದ ಆಲೆಮನೆಯಲ್ಲಿ ಗರ್ಭಿಣಿಯರಿಗೆ ಸ್ಕ್ಯಾನಿಂಗ್ ನಡೆಸಿ, ಮೈಸೂರಿನ ಮಾತಾ ಆಸ್ಪತ್ರೆಗೆ ಕರೆದೊಯ್ದು ಅಲ್ಲಿ ಹೆಣ್ಣುಭ್ರೂಣ ಹತ್ಯೆ ನಡೆಸಲಾಗುತ್ತಿತ್ತು. ಚೆನ್ನೈನ ಡಾ.ತುಳಸಿರಾಮ್, ಮೈಸೂರಿನ ಮಾತಾ ಆಸ್ಪತ್ರೆಯ ಚಂದನ್ ಬಲ್ಲಾಳ್, ಆತನ ಪತ್ನಿ ಮೀನಾ ಸೇರಿದಂತೆ 9 ಮಂದಿ ಈ ಕೃತ್ಯದಲ್ಲಿ ಭಾಗಿಯಾಗಿದ್ದು, ಇನ್ನೂ ಹಲವರ ಕೈವಾಡವಿರುವ ಶಂಕೆ ವ್ಯಕ್ತವಾಗಿದೆ. ಆರೋಪಿಗಳು ಅಂದಾಜು ₹5 ಕೋಟಿ ವ್ಯವಹಾರ ನಡೆಸಿದ್ದಾರೆ' ಎಂದು ಪೊಲೀಸರು ಹೇಳಿದ್ದಾರೆ.

ಇಬ್ಬರು ಅಧಿಕಾರಿಗಳ ಅಮಾನತು

ಮೈಸೂರು: 'ಭ್ರೂಣಹತ್ಯೆ ಪ್ರಕರಣದಲ್ಲಿ ಆರೋಗ್ಯ ಇಲಾಖೆ ಅಧಿಕಾರಿಗಳ ಲೋಪ ಕಾಣುತ್ತಿದ್ದು, ಮೈಸೂರು ತಾಲ್ಲೂಕು ವೈದ್ಯಾಧಿಕಾರಿ ರಾಜೇಶ್ವರಿ ಹಾಗೂ ಈ ಹಿಂದೆ ಇಲ್ಲಿ ಕುಟುಂಬ ಕಲ್ಯಾಣ ಅಧಿಕಾರಿಯಾಗಿದ್ದ ರವಿ ಅವರನ್ನು ಸೇವೆಯಿಂದ ಅಮಾನತು ಮಾಡುವಂತೆ ಆಯುಕ್ತರಿಗೆ ಸೂಚಿಸಿರುವೆ' ಎಂದು ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ತಿಳಿಸಿದರು.

ಸುದ್ದಿಗಾರರಿಗೆ ಪ್ರತಿಕ್ರಿಯಿಸಿ, 'ಇದು ರಾಜ್ಯದಾದ್ಯಂತ ಇರುವ ಜಾಲ. ನಮ್ಮ ಇಲಾಖೆಯಲ್ಲಿ ಆಗಿರುವ ಲೋಪದ ಬಗ್ಗೆ ಮುಚ್ಚುಮರೆ ಇಲ್ಲ' ಎಂದರು.



ದಿನೇಶ್



ಬೈಲಹೊಂಗಲದಲ್ಲಿ ಗುರುವಾರ ಸಂಜೆ ಧಾರಾಕಾರ ಮಳೆಯಾಯಿತು


ಬೈಲಹೊಂಗಲದಲ್ಲಿ ಧಾರಾಕಾರ ಮಳೆ

ಬೆಳಗಾವಿ: ಬೈಲಹೊಂಗಲ ಸೇರಿ ತಾಲ್ಲೂಕಿನ ಕೆಲ ಗ್ರಾಮಗಳಲ್ಲಿ ಗುರುವಾರ ಸಂಜೆ ಧಾರಾಕಾರ ಮಳೆಯಾಯಿತು. ರಭಸ ಗಾಳಿ–ಮಳೆಯಿಂದ ವಿವಿಧೆಡೆ ಮರಗಳು ಉರುಳಿಬಿದ್ದು, ವಾಹನಗಳ ಸುಗಮ ಸಂಚಾರಕ್ಕೆ ಅಡ್ಡಿಯಾಯತು. ಕೆಲವು ಬಡಾವಣೆಗಳ ಮನೆಗಳಿಗೆ ಮಳೆನೀರು ನುಗ್ಗಿತು.

ಈಟಿ ಬಸವೇಶ್ವರ ದೇವಸ್ಥಾನ ಎದುರಿನ ರಸ್ತೆ ಕಾಮಗಾರಿ ಸ್ಥಗಿತಗೊಂಡಿದ್ದು, ಮಳೆಯಿಂದ ಜಾಗ ಕೆಸರುಮಯವಾಯಿತು. ಜನರಿಗೆ ತೊಂದರೆಯಾಯಿತು. ಇಲ್ಲಿ ನಡೆಯುತ್ತಿರುವ ಮರಡಿ ಬಸವೇಶ್ವರ ಜಾತ್ರೆ ವ್ಯಾಪಾರಸ್ಥರಿಗೆ ಕಷ್ಟವಾಯಿತು.

ಬೆಳಗಾವಿ ನಗರದಲ್ಲಿ ಸಂಜೆ ಕೆಲಕಾಲ ಉತ್ತಮ ಮಳೆಯಾಗಿದ್ದರೆ, ಚನ್ನಮ್ಮನ ಕಿತ್ತೂರು ತಾಲ್ಲೂಕಿನ ಎಂ.ಕೆ.ಹುಬ್ಬಳ್ಳಿಯಲ್ಲಿ ಸಾಧಾರಣ ಮಳೆಯಾಗಿದೆ.

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in



ಸುಭಾಷಿತ

ಸರಿಯಾದ ಕೆಲಸ ಮಾಡಿ. ಅದು ಕೆಲವರನ್ನು ತೃಪ್ತಿಪಡಿಸುತ್ತದೆ ಮತ್ತು ಇನ್ನು ಕೆಲವರನ್ನು ಬೆರಗುಗೊಳಿಸುತ್ತದೆ.

-ಮಾರ್ಕ್ ಟ್ವೆಯ್ನ್

ಚೀನಾದಲ್ಲಿ ವ್ಯಾಪಕವಾಗಿ ಹರಡಿದ ಜ್ವರ ಭಾರತದಲ್ಲಿಯೂ ನಿಕಟ ನಿಗಾ ಬೇಕಿದೆ

ಚೀನಾದ ಉತ್ತರ ಭಾಗದಲ್ಲಿ ಮುಖ್ಯವಾಗಿ ಮಕ್ಕಳಲ್ಲಿ ಕಾಣಿಸಿಕೊಂಡಿರುವ ಜ್ವರದ ರೀತಿಯ ಅನಾರೋಗ್ಯವು ಜಗತ್ತಿನ ಇತರ ಭಾಗಗಳಲ್ಲಿ ಕೂಡ ಕಳವಳಕ್ಕೆ ಕಾರಣವಾಗಿದೆ. ಅಕ್ಟೋಬರ್ ತಿಂಗಳಲ್ಲಿಯೇ ಆರಂಭವಾಗಿರುವ ಈ ಅನಾರೋಗ್ಯವು ಅಪಾಯಕಾರಿ ಅಲ್ಲ ಎಂದು ಚೀನಾ ಹೇಳಿದ್ದರೂ ಕಳವಳವನ್ನು ಅದು ಕಡಿಮೆ ಮಾಡಿಲ್ಲ. ಚೀನಾದಲ್ಲಿ ಹೊಸ ರೋಗಾಣು ಅಥವಾ ಅಸಹಜವಾದ ರೋಗಾಣುವೇನೂ ಪತ್ತೆ ಆಗಿಲ್ಲ ಎಂದು ವಿಶ್ವ ಆರೋಗ್ಯ ಸಂಸ್ಥೆ (ಡಬ್ಲ್ಯುಎಚ್‌ಒ) ಹೇಳಿದೆ. ಉಸಿರಾಟಕ್ಕೆ ಸಂಬಂಧಿಸಿದ ಸಮಸ್ಯೆಗಳು ಈಗಾಗಲೇ ತಿಳಿದಿರುವ ರೋಗಾಣುಗಳಿಂದಲೇ ಕಾಣಿಸಿಕೊಂಡಿದೆ ಎಂದಿದೆ. ಮಕ್ಕಳಲ್ಲಿ ಕಾಣಿಸಿಕೊಂಡಿರುವ ಜ್ವರ ಸಂಬಂಧಿ ಸಮಸ್ಯೆಗಳ ಬಗ್ಗೆ ಹೆಚ್ಚಿನ ಮಾಹಿತಿ ಕೊಡುವಂತೆ ಚೀನಾವನ್ನು ಡಬ್ಲ್ಯುಎಚ್‌ಒ ಕೇಳಿದೆ. 'ಕೋವಿಡ್–19ಕ್ಕೆ ಸಂಬಂಧಿಸಿದ ನಿರ್ಬಂಧಗಳನ್ನು ಕೈಬಿಟ್ಟಿರುವುದು ಕಾರಣ ಈ ರೋಗ ಕಾಣಿಸಿಕೊಂಡಿದೆ. ಇದು ಅನಿರೀಕ್ಷಿತವೇನೂ ಅಲ್ಲ. ಬೇರೆ ದೇಶಗಳಲ್ಲಿಯೂ ಇಂತಹ ಪರಿಸ್ಥಿತಿ ತಲೆದೋರಿತ್ತು. ಸಾಮಾನ್ಯವಾಗಿ ವೈರಾಣು ಜ್ವರ ಕಾಣಿಸಿಕೊಳ್ಳುವ ಅವಧಿಗಿಂತ ಮುಂಚಿತವಾಗಿಯೇ ಕೆಲವೆಡೆ ಜ್ವರ ಬಂದಿತ್ತು, ಉಸಿರಾಟಕ್ಕೆ ಸಂಬಂಧಿಸಿದ ಅನಾರೋಗ್ಯವು ಹಲವೆಡೆ ಕಾಣಿಸಿಕೊಂಡಿದೆ; ಜ್ವರ ಸ್ವರೂಪದ ಈ ರೋಗವು ಸಣ್ಣ ಮಕ್ಕಳನ್ನು ಹೆಚ್ಚಾಗಿ ಕಾಡುತ್ತಿದೆ' ಎಂದು ಚೀನಾದ ಆರೋಗ್ಯ ಆಯೋಗವು ಹೇಳಿದೆ. ಅದರ ಬಳಿಕ ಇತರ ದೇಶಗಳಲ್ಲಿಯೂ ಕಳವಳ ವ್ಯಕ್ತವಾಗಿದೆ.



ಸಾಂಕ್ರಾಮಿಕವು ನಮಗೆ ಕಲಿಸಿರುವ, 'ದಿಗಿಲುಗೊಳ್ಳುವ ಅಗತ್ಯ ಇಲ್ಲ, ಆದರೆ ಜಾಗರೂಕತೆ ಬೇಕಿದೆ' ಎಂಬ ಮಹತ್ವದ ಪಾಠವನ್ನು ನಾವು ಅನುಸರಿಸಬೇಕಾಗಿದೆ

ಕೋವಿಡ್ ಸಾಂಕ್ರಾಮಿಕದ ಕರಾಳ ಅನುಭವವು ಇನ್ನೂ ಹಸಿಯಾಗಿರುವಾಗಲೇ ಮತ್ತೊಂದು ಜ್ವರದ ಸುದ್ದಿಯು ಚೀನಾದಿಂದ ಬಂದಾಗ ಜಗತ್ತು ಬೆಚ್ಚಿತು. ನೂರು ವರ್ಷಗಳಲ್ಲಿಯೇ ಅತಿ ಹೆಚ್ಚು ಜನರನ್ನು ಕೋವಿಡ್ ಸಾಂಕ್ರಾಮಿಕವು ಬಲಿ ಪಡೆದಿತ್ತು. ರೋಗದ ಕುರಿತು ಚೀನಾದಲ್ಲಿ ಪಾರದರ್ಶಕತೆ ಇಲ್ಲದಿದ್ದುದೇ ಕೋವಿಡ್ ಹರಡುವಿಕೆಗೆ ಮುಖ್ಯ ಕಾರಣ ಎಂದು ಹೇಳಲಾಗಿದೆ. ಪಾರದರ್ಶಕತೆಯ ಪ್ರಶ್ನೆಯನ್ನು ಈಗಲೂ ಎತ್ತಲಾಗಿದೆ. ಅನಾರೋಗ್ಯವು ಪಸರಿಸುತ್ತಿದೆ ಎಂಬ ವಿಚಾರವನ್ನು ಚೀನಾದ ಆರೋಗ್ಯ ಅಧಿಕಾರಿಗಳು ಡಬ್ಲ್ಯುಎಚ್‌ಒಗೆ ತಿಳಿಸಿಲ್ಲ. ಮಾಧ್ಯಮ ವರದಿಗಳ ಮೂಲಕವಷ್ಟೇ ಹೊಸ ಸೋಂಕಿನ ಕುರಿತು ಡಬ್ಲ್ಯುಎಚ್‌ಒ ತಿಳಿದುಕೊಂಡಿತು. ಸೋಂಕಿನ ಹೆಚ್ಚಳಕ್ಕೆ ಈಗಾಗಲೇ ತಿಳಿದಿರುವ ರೋಗಕಾರಕಗಳು ಕಾರಣ ಎಂಬುದು ದೃಢಪಟ್ಟಿದ್ದರೂ ಈ ಕುರಿತು ಡಬ್ಲ್ಯುಎಚ್‌ಒಗೆ ತಿಳಿಸುವುದು ಚೀನಾದ ಕರ್ತವ್ಯವಾಗಿತ್ತು.

ಬ್ರಿಟನ್ ಮತ್ತು ಅಮೆರಿಕ ಸೇರಿದಂತೆ ಇತರ ಕೆಲವು ದೇಶಗಳಲ್ಲಿಯೂ ಕೋವಿಡ್ ನಿರ್ಬಂಧಗಳನ್ನು ತೆಗೆದುಹಾಕಿದ ಬಳಿಕ ಜ್ವರದ ರೀತಿಯ ಅನಾರೋಗ್ಯ ವ್ಯಾಪಕವಾಗಿ ಕಾಣಿಸಿಕೊಂಡಿತ್ತು. ಚೀನಾದಲ್ಲಿ ಲಾಕ್‌ಡೌನ್ ನಿರ್ಬಂಧವು ಹೆಚ್ಚಿನ ಅವಧಿಗೆ ಜಾರಿಯಲ್ಲಿತ್ತು. ಈಗ ಅಲ್ಲಿ ಕೋವಿಡ್ ಲಾಕ್‌ಡೌನ್ ಬಳಿಕದ ಮೊದಲ ಚಳಿಗಾಲ ಶುರುವಾಗಿದೆ. ಜ್ವರ ವ್ಯಾಪಿಸಲು ಇದು ಕಾರಣ ಎಂದು ಹೇಳಲಾಗಿದೆ. ಸುದೀರ್ಘವಾದ ಲಾಕ್‌ಡೌನ್‌ನಿಂದ ಜನರಲ್ಲಿ ರೋಗನಿರೋಧಕ ಶಕ್ತಿ ಕುಗ್ಗಿರುವುದು ಮತ್ತೊಂದು ಕಾರಣ ಎಂಬ ವಾದ ಇದೆ. ಸಮರ್ಪಕ ಮಾಹಿತಿ ಈಗಲೂ ಲಭ್ಯ ಇಲ್ಲದೇ ಇರುವುದು ರೋಗ ಪತ್ತೆಗೆ ತೊಡಕಾಗಿದೆ ಎಂದು ಹೇಳಲಾಗಿದೆ. ವಿಶೇಷವಾಗಿ, ಕೋವಿಡ್‌ನಿಂದ ಅತಿ ಹೆಚ್ಚು ತೊಂದರೆ ಅನುಭವಿಸಿದ ದೇಶಗಳು ಪರಿಸ್ಥಿತಿಯ ಮೇಲೆ ನಿಕಟ ನಿಗಾ ಇರಿಸಿವೆ. ಚೀನಾದ ಅಧಿಕಾರಿಗಳ ಜೊತೆಗೆ ಸಂಪರ್ಕದಲ್ಲಿದ್ದು, ಪರಿಸ್ಥಿತಿಯ ಮೇಲೆ ನಿಕಟ ನಿಗಾ ಇರಿಸಿರುವುದಾಗಿ ಡಬ್ಲ್ಯುಎಚ್‌ಒ ಕೂಡ ಹೇಳಿದೆ. ಭಾರತದಲ್ಲಿಯೂ ಕಟ್ಟೆಚ್ಚರ ವಹಿಸುವಂತೆ ಸೂಚಿಸಲಾಗಿದೆ. ಸಾರ್ವಜನಿಕ ಆರೋಗ್ಯ ವ್ಯವಸ್ಥೆಯನ್ನು ಪರಿಶೀಲನೆಗೆ ಒಳಪಡಿಸಿ, ಸನ್ನದ್ಧ ಸ್ಥಿತಿಯಲ್ಲಿ ಇರಿಸುವಂತೆ ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳಿಗೆ ಸೂಚನೆ ನೀಡಲಾಗಿದೆ. ರೋಗದ ಮೇಲೆ ನಿಗಾ ಇರಿಸುವುದಕ್ಕಾಗಿ ಈಗಾಗಲೇ ಇರುವ ಮಾರ್ಗಸೂಚಿಗಳು ಮತ್ತು ಶಿಷ್ಟಾಚಾರಗಳನ್ನು ಪಾಲಿಸಲು ಹೇಳಲಾಗಿದೆ. ದಿಗಿಲುಗೊಳ್ಳುವ ಅಗತ್ಯ ಇಲ್ಲ, ಆದರೆ, ಜಾಗರೂಕತೆ ಬೇಕಿದೆ. ಎಲ್ಲ ದೇಶಗಳಿಗೂ ಸಾಂಕ್ರಾಮಿಕವು ಕಲಿಸಿದ ಮಹತ್ವದ ಪಾಠ ಇದು.

ದಿನದ ಟ್ವೀಟ್

ಉದ್ವೇಗ ಹೆಚ್ಚಿಸಿದ ಸಮೀಕ್ಷೆ



ಮತಗಟ್ಟೆ ಸಮೀಕ್ಷೆಗಳ ಹುಚ್ಚಾಟ. ಎಲ್ಲೆಡೆ ಬೇರೆ ಬೇರೆ ಬಗೆಯ ಅಂದಾಜು. ಹಲವಾರು ನಿಕಟ ಸ್ಪರ್ಧೆಗಳು. ಇವೆಲ್ಲ, ಮತಎಣಿಕೆಯ ದಿನವಾದ ಡಿಸೆಂಬರ್ 3ರ ಭಾನುವಾರವನ್ನು ಇನ್ನಷ್ಟು ಉದ್ವೇಗದಿಂದ ಕಾಯುವಂತೆ ಮಾಡಿವೆ.

ಚೇತನ್ ಭಗತ್, ಲೇಖಕ

ಕಿಡಿನುಡಿ



ಗುತ್ತಿಗೆದಾರ ಅಂಬಿಕಾಪತಿ ಸಾವು ಸಹಜವಲ್ಲ ಎಂದಿರುವ ಕೆಂಪಣ್ಣನವರ ಹೇಳಿಕೆಯನ್ನು ಸರ್ಕಾರ ಹಾಗೂ ಮಾಧ್ಯಮಗಳು ಗಂಭೀರವಾಗಿ ಪರಿಗಣಿಸಬೇಕು. ಅಂಬಿಕಾಪತಿ ಮನೆಯಲ್ಲಿ ನಡೆದ ಆದಾಯ ತೆರಿಗೆ ದಾಳಿಯ ವೇಳೆ ಕೋಟಿಗಟ್ಟಲೆ ಹಣ ಸಿಕ್ಕಿತ್ತು. ಈ ಹಣ ಸರ್ಕಾರದ ಪ್ರಭಾವಿ ಮಂತ್ರಿ ಹಾಗೂ ಒಬ್ಬ ಪ್ರಭಾವಿ ರಾಜಕಾರಣಿಯ ಮಗನಿಗೆ ಸೇರಿದ್ದು ಎಂಬ ಸುದ್ದಿಯೂ ಇದೆ. ಇದಕ್ಕೆ ಸಾಕ್ಷಿಯಾಗಿ ಆ ಪ್ರಭಾವಿ ರಾಜಕಾರಣಿಯ ಮಗನ ಆಪ್ತ ಸಹಾಯಕನನ್ನು ಆದಾಯ ತೆರಿಗೆ ಇಲಾಖೆ ವಿಚಾರಣೆಗೆ ಒಳಪಡಿಸಿತ್ತು.

ಬಸನಗೌಡ ಪಾಟೀಲ ಯತ್ನಾಳ, ಬಿಜೆಪಿ ಶಾಸಕ

25 ವರ್ಷಗಳ ಹಿಂದೆ

ಮಂಗಳವಾರ, 1-12-1998

- **ಪ್ರಧಾನಿ ರಾಜೀನಾಮೆಗೆ ಒತ್ತಾಯಿಸಿ ಸಂಸತ್ ಉಭಯ ಸದನಗಳಲ್ಲಿ ಗದ್ದಲ**

ನವದೆಹಲಿ ನ. 30– ಸಂಸತ್ತಿನ ಕಲಾಪ ಆರಂಭದ ದಿನವೇ ಗದ್ದಲ, ಕೂಗಾಟ, ಪ್ರತಿಭಟನೆ. ಪ್ರಧಾನಿ ಅಟಲ್ ಬಿಹಾರಿ ವಾಜಪೇಯಿ ನೇತೃತ್ವದ ಸರ್ಕಾರದ ರಾಜೀನಾಮೆಗೆ ಒತ್ತಾಯ. ಸದನ ನಡೆಯದಂತೆ ಕೆಲವು ಪ್ರತಿಪಕ್ಷಗಳಿಂದ ಪೂರ್ಣ ಅಡ್ಡಿ. ಎರಡು ಬಾರಿ ಮುಂದೂಡಿದ ಲೋಕಸಭೆಯ ಅಧಿವೇಶನ, ಕೊನೆಗೆ ಯಾವುದೇ ಚರ್ಚೆಯಿಲ್ಲದೆ ಕಲಾಪವನ್ನು ಮುಂದೂಡಲಾಯಿತು.

ರಾಜ್ಯಸಭೆಯಲ್ಲಿ ಬೆಲೆ ಏರಿಕೆಯನ್ನು ಪ್ರತಿಭಟಿಸಿ ಪ್ರತಿಪಕ್ಷಗಳ ಗದ್ದಲ. ವಾಣಿಜ್ಯ ಸಚಿವ ರಾಮಕೃಷ್ಣ ಹೆಗಡೆ ಅವರು ಕಾಂಗ್ರೆಸ್ ಬಗೆಗೆ ಮಾಡಿದ ಟೀಕೆಯೊಂದನ್ನು ಖಂಡಿಸಿ ಕಾಂಗ್ರೆಸ್ ಸದಸ್ಯರಿಂದ ಸಭಾತ್ಯಾಗ. ಕೊನೆಗೆ ವಿಶೇಷ ಪ್ರಸ್ತಾಪದ ಮೂಲಕ ಬೆಲೆ ಏರಿಕೆ ಕುರಿತು ಚರ್ಚೆ. ಬೆಲೆ ಏರಿಕೆಯನ್ನು ನಿಯಂತ್ರಿಸಲು ವಿಫಲಗೊಂಡಿದೆ ಎಂದು ಆರೋಪಿಸಿ ಬಿಜೆಪಿ ನೇತೃತ್ವದ ಸರ್ಕಾರದ ರಾಜೀನಾಮೆಗೆ ಒತ್ತಾಯ.

ಚಳಿಗಾಲದ ಆರಂಭದ ಅಧಿವೇಶನದ ಮೊದಲ ದಿನವೇ ಸಂಸತ್ತಿನ ಉಭಯ ಸದನಗಳಲ್ಲಿ ಇಂದು ನಡೆದ ಕಲಾಪದ ವೈಖರಿ ಇದು.

- **ಮೈಸೂರು ಅರಮನೆ ಸ್ವಾಧೀನ ಕಾಯ್ದೆ ಜಾರಿಗೆ**

ಬೆಂಗಳೂರು, ನ. 30– ವಿಶ್ವವಿಖ್ಯಾತ ಮೈಸೂರು ಅರಮನೆಯನ್ನು ರಾಜ್ಯ ಸರ್ಕಾರ ತನ್ನ ಸ್ವಾಧೀನಕ್ಕೆ ತೆಗೆದುಕೊಳ್ಳಲು ತಂದಿರುವ ಮಸೂದೆಯನ್ನು ಇಂದು ಗೆಜೆಟ್‌ನಲ್ಲಿ ಪ್ರಕಟಿಸಲಾಗಿದ್ದು, ಅದು ಕಾಯ್ದೆಯಾಗಿ ಇಂದಿನಿಂದ ಜಾರಿಗೆ ಬಂದಿದೆ.

ಗೆಜೆಟ್‌ನಲ್ಲಿ ಪ್ರಕಟಿಸಿದ ತಕ್ಷಣದಿಂದ ಅರಮನೆ ಹಾಗೂ ಸಿಂಹಾಸನ ಸೇರಿದಂತೆ ಎಲ್ಲ ವಸ್ತುಗಳೂ ಸರ್ಕಾರದ ಅಧಿಕೃತ ಸ್ವತ್ತಾಗುತ್ತವೆ ಎಂದು ಕಾನೂನು ಸಚಿವ ಎಂ.ಸಿ. ನಾಣಯ್ಯ ಅವರು ಗೆಜೆಟ್ ಪ್ರಕಟಣೆಗೆ ಮೊದಲು ತಮ್ಮನ್ನು ಭೇಟಿಯಾಗಿದ್ದ ವರದಿಗಾರರಿಗೆ ತಿಳಿಸಿದರು.

50 ವರ್ಷಗಳ ಹಿಂದೆ

ಶನಿವಾರ, 1-12-1973

- **ಮಾಡದಿರುವ ಕೆಲಸಕ್ಕೆ ಹಣ– ಎರಡು ಬಾರಿ ಬಿಲ್ ಪಾವತಿ ಆಗಿಲ್ಲ: ಜಾಗೃತ ಆಯೋಗದ ವರದಿ**

ಬೆಂಗಳೂರು, ನ. 30– ಹಾಸನ ಜಿಲ್ಲೆಯ ಲೋಕೋಪಯೋಗಿ ಇಲಾಖೆಯಲ್ಲಿ ನಡೆದಿರುವ ಕಾಮಗಾರಿಗಳಲ್ಲಿ, ಮಾಡದಿರುವ ಕೆಲಸಕ್ಕೆ ಹಣ ಪಾವತಿ ಮಾಡಿರುವ ಅಥವಾ ಮಾಡಿರುವ ಒಂದು ಕೆಲಸಕ್ಕೆ ಎರಡು ಬಾರಿ ಹಣ ಪಾವತಿ ಮಾಡಿರುವ ಯಾವ ಸಂದರ್ಭಗಳೂ ಇಲ್ಲವೆಂದು ತಿಳಿದುಬಂದಿದೆ.

ವಿರೋಧ ಪಕ್ಷದ ನಾಯಕ ಎಚ್.ಡಿ. ದೇವೇಗೌಡ ಅವರು, ಹಾಸನ ಜಿಲ್ಲೆ ಎಕ್ಸಿಕ್ಯುಟಿವ್ ಎಂಜಿನಿಯರ್ ಕಚೇರಿಯಲ್ಲಿ 25–30 ಲಕ್ಷ ರೂಪಾಯಿವರೆಗೆ ಅಕ್ರಮ ಹಣ ಪಾವತಿಯಾಗಿದೆ. ಅಲ್ಲದೆ, ಇನ್ನಿತರ ಆರೋಪಗಳ ಬಗ್ಗೆಯೂ ಸರ್ಕಾರ ತನಿಖೆ ನಡೆಸಬೇಕು ಎಂದು ರಾಜ್ಯದ ಜಾಗೃತ ಆಯೋಗವನ್ನು ಕೋರಿದ್ದರು.

- **ಆರ್ಥಿಕ ನೆರವು, ವಾಣಿಜ್ಯ ದ್ವಿಗುಣ: ಭಾರತ–ರಷ್ಯಾ ರಾಷ್ಟ್ರಗಳಿಂದ ಕ್ರಮ**

ನವದೆಹಲಿ, ನ. 30– ಭಾರತ ಮತ್ತು ಸೋವಿಯತ್ ಸರ್ಕಾರಗಳು ಇಂದು 15 ವರ್ಷಗಳಷ್ಟು ಸುದೀರ್ಘ ಅವಧಿಯ ಹಣಕಾಸು ಮತ್ತು ವಾಣಿಜ್ಯ ಒಪ್ಪಂದ ಒಂದನ್ನು ಮಾಡಿಕೊಂಡವು.

ಪ್ರಧಾನಮಂತ್ರಿ ಇಂದಿರಾ ಗಾಂಧಿ ಮತ್ತು ಸೋವಿಯತ್ ಕಮ್ಯುನಿಸ್ಟ್ ನಾಯಕ ಬ್ರೆಜ್ನೇವ್ ಅವರ ಐದು ದಿನಗಳ ಭೇಟಿಯ ನಂತರ ಇಂದು ಹೊರಡಿಸಿದ ಜಂಟಿ ಘೋಷಣೆಯಲ್ಲಿ ಉಭಯತ್ರರಿಗೂ ಲಾಭದಾಯಕವಾದ ಅನೇಕ ಕಾರ್ಯಕ್ರಮಗಳನ್ನು ಪಟ್ಟಿ ಮಾಡಲಾಯಿತು.

ರಕ್ತಹೀನತೆ ನಿವಾರಣಾ ಅಭಿಯಾನವು ಸಾಮಾಜಿಕ ಸಮಸ್ಯೆಯತ್ತಲೂ ಲಕ್ಷ್ಯ ಹರಿಸುವುದೇ?

ರಕ್ತಹೀನತೆ ಮತ್ತು ಲಿಂಗತಾರತಮ್ಯ



ವಿಶ್ಲೇಷಣೆ

ಡಾ. ಗೋಪಾಲ ದಾಬಡೆ

ಕರ್ನಾಟಕದಲ್ಲಿ ಪೌಷ್ಟಿಕಾಂಶದ ಕೊರತೆಯ ಕಾರಣದಿಂದ ಉಂಟಾದ ರಕ್ತಹೀನತೆಯನ್ನು ನಿವಾರಣೆ ಮಾಡಲು ಸರ್ಕಾರ ಆರಂಭಿಸಿರುವ ಅಭಿಯಾನ ಬಹಳಷ್ಟು ಪ್ರಚಾರವನ್ನು ಪಡೆದುಕೊಂಡಿದೆ. ಈ ಅಭಿಯಾನದಲ್ಲಿ ಎಲ್ಲವೂ ಸರಿ ಇವೆಯೇ ಅಥವಾ ಏನಾದರೂ ಕೊರತೆ ಇದೆಯೇ? ಕೊರತೆಯಿದ್ದರೆ ಸರಿಪಡಿಸಬಹುದೇ?

ನಮ್ಮ ಶೇಕಡ 45ರಷ್ಟು ಮಹಿಳೆಯರಲ್ಲಿ ರಕ್ತಹೀನತೆ ಇದೆ ಎಂದು ಸರ್ಕಾರದ ಅಂಕಿ ಅಂಶಗಳೇ ಹೇಳುತ್ತವೆ ಎಂದಾದರೆ, ಈ ನ್ಯೂನತೆ ಅದೆಷ್ಟು ವ್ಯಾಪಕವಾಗಿದೆ ಎಂದು ತಿಳಿದುಕೊಳ್ಳಬಹುದು. ಇದು ಒಂದೆಡೆ ಕಾಳಜಿ ವಹಿಸಬೇಕಾದ ವಿಷಯವೂ ಹೌದು, ಇನ್ನೊಂದೆಡೆ ನಾಚಿಕೆಯ ವಿಚಾರವೂ ಹೌದು. ಪೌಷ್ಟಿಕಾಂಶದ ಕೊರತೆ ತಂದೊಡ್ಡುವ ರಕ್ತಹೀನತೆಯಲ್ಲದೆ ಇನ್ನೆರಡು ಬಗೆಯ ಸಾಮಾನ್ಯ ರಕ್ತಹೀನತೆಯನ್ನು ನಾವು ನೋಡುತ್ತೇವೆ. ಒಂದು, ಸಿಕ್ಕಲ್ ಸೆಲ್ ಅನೀಮಿಯ ಮತ್ತು ಇನ್ನೊಂದು, ಥಲಸ್ಸೇಮಿಯ. ಇವೆರಡಕ್ಕೂ ವಿಭಿನ್ನ ರೀತಿಯ ಚಿಕಿತ್ಸೆಯ ಅಗತ್ಯವಿದೆ.

ರಕ್ತಹೀನತೆ ಇದ್ದರೆ ದಣಿವು, ಉಸಿರಾಟದ ತೊಂದರೆ, ಕೈ, ಪಾದಗಳು ತಣ್ಣಗಾಗುವಂತಹ ಲಕ್ಷಣಗಳು ಕಾಣಿಸಿಕೊಳ್ಳುತ್ತವೆ. ಶೈಶವಾವಸ್ಥೆಯಲ್ಲಿ ಕಾಣಿಸಿಕೊಳ್ಳುವ ರಕ್ತಹೀನತೆಯ ಪರಿಣಾಮಗಳು ಬಾಲ್ಯದ ದಿನಗಳಲ್ಲಿ ಹೆಚ್ಚು ತೀವ್ರವಾಗಿರುತ್ತವೆ.

ತಾಯಿ ಗರ್ಭಿಣಿಯಾಗಿರುವಾಗ ರಕ್ತಹೀನತೆ ಉಂಟಾದರೆ ಭ್ರೂಣ ಅಥವಾ ನಂತರ ನವಜಾತ ಶಿಶುವಿನ ಸಾವು ಸಂಭವಿಸಬಹುದು, ಕಡಿಮೆ ತೂಕದ ಮಗು ಅವಧಿಪೂರ್ವವೇ ಜನಿಸಬಹುದು, ಅತೀವ ರಕ್ತಸ್ರಾವದಿಂದ ತಾಯಿಯ ಸಾವು ಕೂಡಾ ಸಂಭವಿಸಬಹುದು. ವಿಶ್ವ ಆರೋಗ್ಯ ಸಂಸ್ಥೆಯ ಪ್ರಕಾರ, ರಕ್ತಹೀನತೆಯಿಂದಾಗಿ ತಾಯಂದಿರ ಮರಣದ ಸಂಖ್ಯೆ ವಾರ್ಷಿಕ ಜಾಗತಿಕವಾಗಿ 11.50 ಲಕ್ಷ ಇದೆ. ನೀತಿ ಆಯೋಗ ಹೇಳುವಂತೆ, 'ಕಬ್ಬಿಣಾಂಶದ ಕೊರತೆಯ ಕಾರಣದಿಂದ ಉಂಟಾಗುವ ರಕ್ತಹೀನತೆಯಿಂದ ದೈಹಿಕ ಆರೋಗ್ಯದ ಮೇಲೆ ಆಗುವ ನಷ್ಟದಷ್ಟೇ ಸಾಮಾಜಿಕ, ಆರ್ಥಿಕ ಅಭಿವೃದ್ಧಿಯ ಮೇಲೆ ಕೂಡ ವಿನಾಶಕಾರಿ ಪರಿಣಾಮ ಆಗುತ್ತಿದೆ. ಅಭಿವೃದ್ಧಿಶೀಲ ದೇಶಗಳಿಗೆ ವಾರ್ಷಿಕ ಜಿಡಿಪಿಯಲ್ಲಿ ಶೇ 4.5ರಷ್ಟು ನಷ್ಟವನ್ನು ಅದು ಉಂಟುಮಾಡುತ್ತಿದೆ'.

ಈ ಕಾರಣಕ್ಕೆ, ಪೌಷ್ಟಿಕಾಂಶದ ಕೊರತೆಯಿಂದ ಬರುವ ರಕ್ತಹೀನತೆಯನ್ನು ನಿರ್ಮೂಲ ಮಾಡುವ ಪಣ ತೊಟ್ಟಿದೆ ಸರ್ಕಾರ. ಆದರೆ ಸರ್ಕಾರದ ಈ ಅಭಿಯಾನವು ರಕ್ತಹೀನತೆಯನ್ನು ಕಡಿಮೆ ಮಾಡಬಹುದೇ? ನೋಡಿ:

ಮೊದಲನೆಯದಾಗಿ, ರಕ್ತಹೀನತೆಯಿಂದ ಬಳಲುತ್ತಿರುವ ಮಹಿಳೆಗೆ ಮೂರು ತಿಂಗಳವರೆಗೆ ಪ್ರತಿದಿನ ತೆಗೆದುಕೊಳ್ಳಬೇಕಾದ ಕಬ್ಬಿಣಾಂಶ + ಫೋಲಿಕ್ ಆ್ಯಸಿಡ್ ಮಾತ್ರೆಗಳ ಸರಳ ಚಿಕಿತ್ಸೆಯ ಅಗತ್ಯವಿದೆ. ಈ ಔಷಧಿಯನ್ನು ಎಲ್ಲಿ ಪಡೆಯಬಹುದು? ನಮ್ಮ ದೇಶದಲ್ಲಿ ಶೇ 80ರಷ್ಟು ಜನರು ಖಾಸಗಿ ಆರೋಗ್ಯ ಸೇವಾ ಕೇಂದ್ರಗಳಲ್ಲಿ ಚಿಕಿತ್ಸೆ ಪಡೆಯುತ್ತಾರೆ. ದುರದೃಷ್ಟವಶಾತ್, ಈ ಸರಳ ಔಷಧಿಯು ಖಾಸಗಿ ಆರೋಗ್ಯ ವ್ಯವಸ್ಥೆಯಲ್ಲಿ ಲಭ್ಯವಿಲ್ಲ. ಇದು ಒಪ್ಪಿಕೊಳ್ಳಲು ಕಷ್ಟವಾಗುವ ಆಘಾತಕಾರಿ ವಾಸ್ತವ.

ಸರಳ ಔಷಧದಲ್ಲಿ ಹೆಚ್ಚು ಲಾಭ ಇಲ್ಲವಾದ್ದರಿಂದ ಬಹುತೇಕ ಔಷಧಿ ತಯಾರಕರಿಗೆ ಅದನ್ನು ತಯಾರಿಸಲು ಆಸಕ್ತಿ ಇಲ್ಲ. ಆದರೆ ಕಂಪನಿಗಳು ಈ ಐರನ್ + ಫೋಲಿಕ್ ಆ್ಯಸಿಡ್ ಮಾತ್ರೆಯನ್ನು ವಿಟಮಿನ್ ಸಿ ಅಥವಾ ವಿಟಮಿನ್ ಬಿ-12ನೊಂದಿಗಿನ ಸಂಯೋಜನೆಯಲ್ಲಿ ತಯಾರಿಸುತ್ತವೆ. ಆಲ್ಕೊಹಾಲನ್ನು ಸೇರಿಸಿ ಟಾನಿಕ್ ಆಗಿಯೂ ಕೊಡುತ್ತವೆ! ಅಥವಾ ಐರನ್ + ಫೋಲಿಕ್ ಆ್ಯಸಿಡ್ ಕ್ಯಾಪ್ಸೂಲ್ ರೂಪದಲ್ಲಿ ಲಭ್ಯವಾಗುವಂತೆ ಮಾಡುತ್ತವೆ.

ಯಾವುದೇ ವೈದ್ಯಕೀಯ ಪುಸ್ತಕದಲ್ಲಿ ಬರೆದಿರದ ವಿಷಯಗಳಿವು. ಆದರೆ ಔಷಧ ಕಂಪನಿಗಳು ಇಂತಹ ಅಸಂಬದ್ಧ ಸಂಯುಕ್ತಗಳನ್ನು ತಯಾರಿಸುವುದಲ್ಲದೆ, ವಿಪರೀತ ಜಾಹೀರಾತುಗಳೊಂದಿಗೆ, ಆ ಔಷಧ ಮಾರಾಟವಾಗಲು ಒತ್ತಡ ಹಾಕುತ್ತವೆ. ಅನವಶ್ಯಕ ವಸ್ತುಗಳ ಅಸಂಬದ್ಧ ಜೋಡಣೆಯು ರಕ್ತಹೀನತೆಯ ಚಿಕಿತ್ಸೆಯನ್ನೇ ದುರ್ಬಲಗೊಳಿಸಬಹುದು. ಉದಾಹರಣೆಗೆ, ವಿಟಮಿನ್ ಸಿ ಸೇರಿಸುವುದರಿಂದ ಅದು ಹೆಚ್ಚು ಹೀರಿಕೊಳ್ಳುವಿಕೆಗೆ ಕಾರಣವಾಗಬಹುದು. ಇದರಿಂದ ಅಡ್ಡಪರಿಣಾಮಗಳು ಹೆಚ್ಚಾಗುತ್ತವೆ. ಕ್ಯಾಪ್ಸೂಲ್ ರೂಪವು ಹೀರಲ್ಪಡುವುದಿಲ್ಲ. ಔಷಧ ಉದ್ಯಮದ ದುಷ್ಕೃತ್ಯಗಳ ಬಗ್ಗೆ ತಿಳಿದುಕೊಳ್ಳಬೇಕಿದ್ದರೆ ರಕ್ತಹೀನತೆಗೆ ಸಂಬಂಧಿಸಿದ ಔಷಧಗಳ ಅಭ್ಯಾಸವೊಂದೇ ಸಾಕು ಎನ್ನುವುದರಲ್ಲಿ ಅತಿಶಯೋಕ್ತಿಯಿಲ್ಲ.

ಅದೃಷ್ಟವಶಾತ್, ಸರ್ಕಾರಿ ಆರೋಗ್ಯ ವ್ಯವಸ್ಥೆಯಲ್ಲಿ ರಕ್ತಹೀನತೆಗೆ ಸರಿಯಾದ ಚಿಕಿತ್ಸೆ ಲಭ್ಯವಿದೆ. ಆದರೆ ಇಲ್ಲಿಯೂ ಒಂದು ಅಡಚಣೆಯಿದೆ. ಅದೆಂದರೆ, ಹೆಚ್ಚಿನ ಗರ್ಭಿಣಿಯರು ಜೀವ ಉಳಿಸುವ ಈ ಔಷಧಗಳನ್ನು ತೆಗೆದುಕೊಳ್ಳುವುದಿಲ್ಲ! ನೆರೆಹೊರೆಯವರೋ ಮನೆಯ ಹಿರಿಯರೋ 'ಬುದ್ಧಿ ಹೇಳಿ', ಮಗುವಿನ ತೂಕ ಹೆಚ್ಚಾಗುವುದೆಂದು, ಹೆರಿಗೆಯ ಸಮಯದಲ್ಲಿ ತೊಂದರೆ ಆಗುವುದೆಂದು ಹೆದರಿಸಿ ಆಕೆ ಈ ಔಷಧ ತೆಗೆದುಕೊಳ್ಳದಂತೆ ಮಾಡುತ್ತಾರೆ. ಹೀಗಾಗಿ, ತಾಯಂದಿರಿಗಷ್ಟೇ ಅಲ್ಲ, ಎಲ್ಲ ಹಿರಿಯರಿಗೂ ಈ ಔಷಧದ ಬಗ್ಗೆ ಸರಿಯಾದ ಮಾಹಿತಿ, ಆರೋಗ್ಯ ಶಿಕ್ಷಣದ ಅಗತ್ಯವಿದೆ.

ಈ ಔಷಧಿಯನ್ನು ಸೇವಿಸುವಾಗ ಮಹಿಳೆಯರು ಮಲಬದ್ಧತೆ, ಅತಿಸಾರ ಅಥವಾ ಉರಿಯೂತಕ್ಕೆ ಗುರಿಯಾಗಬಹುದು. ಹೀಗಾಗಿ, ಊಟದ ನಂತರವೇ ಮಾತ್ರೆ ಸೇವಿಸಬೇಕು. ದಿನ ಬಿಟ್ಟು ದಿನ ಮಾತ್ರೆಗಳನ್ನು ತೆಗೆದುಕೊಳ್ಳುವ ಮತ್ತು ಆಹಾರ ಕ್ರಮದಲ್ಲಿ ಬದಲಾವಣೆ ಮಾಡಿಕೊಂಡು, ಹಸಿರೆಲೆಯ ತರಕಾರಿಗಳನ್ನು ಸೇವಿಸುವ ಮೂಲಕ ತೊಂದರೆಗಳನ್ನು ನಿವಾರಿಸಿಕೊಳ್ಳಬಹುದು ಎಂಬುದನ್ನು ಆ ಶಿಕ್ಷಣವು ಒಳಗೊಂಡಿರಬೇಕು.



ತಾವು ಸೇವಿಸುವ ಔಷಧಗಳ ಬಗ್ಗೆ ಗ್ರಾಹಕರಿಗೆ ಸರಿಯಾದ ವೈಜ್ಞಾನಿಕ ಮಾಹಿತಿ ಇರಬೇಕು. ದಾರಿ ತಪ್ಪಿಸುವ ಮಾಹಿತಿಯು ವಿನಾಶಕಾರಿಯೂ ಆಗಬಹುದು.

ಕಬ್ಬಿಣ + ಫೋಲಿಕ್ ಆ್ಯಸಿಡ್ ಮಾತ್ರೆಗಳನ್ನು ಸೇವಿಸಿದ ಮೂರು ತಿಂಗಳ ನಂತರವೂ ಹಸಿರೆಲೆಯ ತರಕಾರಿಗಳನ್ನು ಸೇವಿಸುವಂತಹ ಸೂಕ್ತ ಕ್ರಮ ಅನುಸರಿಸಿದಿದ್ದರೆ ಗರ್ಭಿಣಿಯರು ಮತ್ತು ಬಾಣಂತಿಯರಲ್ಲಿ ರಕ್ತಹೀನತೆ ಮತ್ತೆ ಕಾಣಿಸಿಕೊಳ್ಳುತ್ತದೆ ಎಂಬುದರಲ್ಲಿ ಸಂದೇಹವಿಲ್ಲ. ಸೊಪ್ಪು, ಹಸಿರು ತರಕಾರಿಗಳು ಅಥವಾ ಮೀನು, ಯಕೃತ್ತಿನಂತಹ ನಮ್ಮ ಆಹಾರ ಪದಾರ್ಥಗಳಲ್ಲಿ ಕಬ್ಬಿಣಾಂಶ ಲಭ್ಯವಿದೆ.

ಇವು ಕೆಲವು ವೈದ್ಯಕೀಯ ಸಮಸ್ಯೆಗಳಾದರೆ, ದೊಡ್ಡ ಸಾಮಾಜಿಕ ಸಮಸ್ಯೆಗಳು ಚಾಪೆ ಅಥವಾ ರಂಗೋಲಿ ಕೆಳಗೆ ಹೋಗಿವೆ. ಮೂಲಭೂತ ಪ್ರಶ್ನೆಯೆಂದರೆ, ರಕ್ತಹೀನತೆಯು ಮಹಿಳೆಯರ ಮೇಲೇ ಏಕೆ ಹೆಚ್ಚು ಪರಿಣಾಮ ಬೀರುತ್ತದೆ? ತಿಂಗಳ ರಕ್ತಸ್ರಾವದ ಕಾರಣವನ್ನು ಸಾಮಾನ್ಯವಾಗಿ ಕೊಡಲಾಗುತ್ತದೆ. ಆದರೆ ಕೆಲವು ಕುಟುಂಬಗಳಲ್ಲಿ ಪುರುಷ ಸದಸ್ಯರು ಊಟ ಮಾಡಿದ ನಂತರವೇ ಮಹಿಳೆಯರು ಊಟ ಮಾಡಬೇಕು. ಇದೊಂದು ಸಾಮಾಜಿಕ ನಿಯಮವಾಗಿದೆ. ಗಂಡ ಉಂಡ ನಂತರ ಉಳಿದದ್ದು, ತಂಗಳು ತಿಂದೇಳುವ ಅಥವಾ ಖಾಲಿ ಹೊಟ್ಟೆಯಲ್ಲಿ ಮಲಗುವ ಹೆಣ್ಣುಮಕ್ಕಳು ನಮ್ಮ ನಡುವೆ ಇದ್ದಾರೆ. ಮಹಿಳೆಯರು ಸಾಮಾಜಿಕವಾಗಿ ವಂಚನೆಗೆ ಒಳಗಾದ ಅನೇಕ ವಿಚಾರಗಳಲ್ಲಿ ಇದೂ ಒಂದು. ಲಿಂಗ ಸಮಾನತೆಯೆಡೆ ಕಿಂಚಿತ್ತೂ ಗೌರವವಿಲ್ಲದ ಪುರುಷಾಭಿಮಾನದ ಸಮಾಜ ನಮ್ಮದು. ಪೌಷ್ಟಿಕಾಂಶದ ಕೊರತೆಯ ರಕ್ತಹೀನತೆ ಇದರ ಒಂದು ಅಭಿವ್ಯಕ್ತಿ ಮಾತ್ರ.

ಹಾರ್ವರ್ಡ್ ಸ್ಕೂಲ್ ಆಫ್ ಪಬ್ಲಿಕ್ ಹೆಲ್ತ್ ನಡೆಸಿದ ಒಂದು ಅಧ್ಯಯನದ ಪ್ರಕಾರ, 'ಭಾರತದಲ್ಲಿ ಕೌಟುಂಬಿಕ ದೈಹಿಕ ಹಿಂಸೆ ಮತ್ತು ರಕ್ತಹೀನತೆಗೆ ಕಾರಣವಾಗುವ ಪೋಷಕಾಂಶಗಳ ಕೊರತೆಯ ನಡುವೆ ನೇರ ಸಂಬಂಧವಿದೆ. ಕೌಟುಂಬಿಕ ಹಿಂಸಾಚಾರವು ಮಹಿಳೆಗೆ ತಾನು ಸಿದ್ಧಪಡಿಸುವ ಆಹಾರದ ವಿಧ ಮತ್ತು ಪ್ರಮಾಣದ ಆಯ್ಕೆ ಸೇರಿದಂತೆ ತನ್ನ ಕುಟುಂಬಕ್ಕಾಗಿ ನಿರ್ಧಾರಗಳನ್ನು ತೆಗೆದುಕೊಳ್ಳಲು ಅಸಮರ್ಥಳನ್ನಾಗಿಸುತ್ತದೆ'.

ಹೀಗಿರುವಾಗ, ಪೌಷ್ಟಿಕಾಂಶ ಕೊರತೆಯ ಕಾರಣದಿಂದ ಬರುವ ರಕ್ತಹೀನತೆಯು ಬರೀ ವೈದ್ಯಕೀಯ ಸಮಸ್ಯೆಯಲ್ಲ, ಅದೊಂದು ದೊಡ್ಡ ಸಾಮಾಜಿಕ ಸಮಸ್ಯೆಯಾಗಿದೆ. ರಾಜ್ಯ ಸರ್ಕಾರದ ಈ ಅಭಿಯಾನವು ನಮ್ಮ ಈ ಸಾಮಾಜಿಕ ಸಮಸ್ಯೆಯತ್ತಲೂ ಲಕ್ಷ್ಯ ಹರಿಸಬಲ್ಲದೇ?

ಯಾವುದೇ ಸರ್ಕಾರದ ಸುತ್ತೋಲೆಯು ಲಿಂಗ ತಾರತಮ್ಯವನ್ನು ಕೊನೆಗೊಳಿಸಲಾರದು. ಬದಲಿಗೆ, ಅದು ಲಿಂಗಸೂಕ್ಷ್ಮವಾಗಿದ್ದರೆ ತನ್ನನ್ನು ತಾನೇ ಪ್ರಶ್ನಿಸಿಕೊಳ್ಳುವ ಮೂಲಕ ಅಭಿಯಾನವನ್ನು ಆರಂಭಿಸಬಹುದು. ರಕ್ತಹೀನತೆ ಎಂಬುದು ಒಂದು ರೋಗಲಕ್ಷಣ. ಸಾಮಾಜಿಕ ರೋಗದ ದೈಹಿಕ ಲಕ್ಷಣವದು. ರಕ್ತಹೀನತೆಯಿಂದ ಬಳಲುತ್ತಿರುವ ಮಹಿಳೆಯರು ಕೆಲವು ಮಾತ್ರೆಗಳನ್ನು ಕೊಡುವಂತೆ ಕೇಳುತ್ತಿಲ್ಲ. ಬದಲಿಗೆ, ಲಿಂಗತಾರತಮ್ಯವಿಲ್ಲದ ಸಮಾಜಕ್ಕಾಗಿ ಒತ್ತಡ ಹೇರುತ್ತಿದ್ದಾರೆ.

ಲೇಖಕ: ಅಧ್ಯಕ್ಷ, ಡ್ರಗ್ ಆ್ಯಕ್ಷನ್ ಫೋರಂ- ಕರ್ನಾಟಕ

ಚುರುಮುರಿ



ಪತ್ರ ಪ್ರಹಸನ

• ಬಿ.ಎನ್. ಮಲ್ಲೇಶ್

ತೆಪರೇಸಿಯನ್ನು ಪರೀಕ್ಷಿಸಿದ ಡಾಕ್ಟರು, 'ಏನು ಪ್ರಾಬ್ಲಂ?' ಎಂದು ಕೇಳಿದರು.

'ಗೊತ್ತಿಲ್ಲ ಸಾ, ಇತ್ತೀಚೆಗೆ ಸುಂಸುಮ್ನೆ ಏನೇನೋ ಬಡಬಡಿಸ್ತಾರೆ. 'ಓಯ್, ಕೆಳಗೆ ಬಾ' ಅಂತಾರೆ, ಕೆಳಗೇ ಇದೀನಲ್ಲ ಅಂದ್ರೆ ಅದೇನೋ 'ಬಾಯಲ್ಲಿ ಹೇಳಿ...' ಅಂತಾರೆ' ಹೆಂಡ್ತಿ ಪಮ್ಮಿ ವರದಿ ಒಪ್ಪಿಸಿದಳು.

'ಯಾಕ್ರಿ ತೆಪರೇಸಿ, ಏನಾಗಿದೆ ನಿಮ್ಗೆ?' ಡಾಕ್ಟರು ಬೆನ್ನು ತಟ್ಟಿ ಕೇಳಿದರು.

'ನಾನು ನಿಮ್ ಜೊತೆ ಕ್ರಿಕೆಟ್ ನೋಡಬೋದಾ?' ಎಂದ ತೆಪರೇಸಿ. ಡಾಕ್ಟರು ಕಕ್ಕಾಬಿಕ್ಕಿಯಾದರು. ಮತ್ತೆ ಮರುಕ್ಷಣ 'ಇವನಿಗೆ ಏನ್ ತಿನ್ನಿಸ್ತೀರಾ?' ಎಂದ.

ಪಮ್ಮಿಗೆ ಗಾಬರಿಯಾಯಿತು. 'ರೀ... ಸರಿಯಾಗಿ ಮಾತಾಡ್ರಿ, ಇವರು ಡಾಕ್ಟ್ರು...' ಎಂದಳು.

'ಅಂಟಿ, ಸ್ವಲ್ಪ ಶುಂಠಿ ಕೊಡ್ತೀರಾ?' ಎಂದ ತೆಪರೇಸಿ. ಇದನ್ನ ಎಲ್ಲೋ ಕೇಳಿದೀನಲ್ಲ ಅನ್ನಿಸಿತು ಡಾಕ್ಟರಿಗೆ.

'ನಿಮ್ಮ ಪೇಸ್ಟಿನಲ್ಲಿ ಉಪ್ಪಿನಕಾಯಿ ಇದೆಯಾ?' ಎಂದ. ಡಾಕ್ಟರಿಗೆ ಅರ್ಥವಾಗಿ ಹೋಯಿತು. 'ಇವರ ಕಾಯಿಲೆ ಏನೂಂತ ಗೊತ್ತಾಯ್ತು. ಟೀವಿ ಜಾಸ್ತಿ ನೋಡ್ತಾರಾ?' ಎಂದು ಕೇಳಿದರು.

'ಅಯ್ಯೋ ವಿಪರೀತ ಸಾ, ನ್ಯೂಸು, ಧಾರಾವಾಹಿ, ಸಿನಿಮಾ ಯಾವುದ್ನೂ ಬಿಡಲ್ಲ. ಜಾಹೀರಾತು ಬರ್ತಿದ್ದಂಗೆ ಇವರೇ ಮೊದ್ಲೇ ಎಲ್ಲ ಹೇಳಿಬಿಡ್ತಾರೆ'.

'ಕರೆಕ್ಟ್, ಇವೆಲ್ಲ ಟೀವಿ ಜಾಹೀರಾತು ಡೈಲಾಗ್‌ಗಳು'.

'ಮೊನ್ನೆ ಅದೇನೋ ಪತ್ರ, ಪತ್ರ ಅಂತಿದ್ರು ಸಾ, ಆಸ್ತಿಪತ್ರನೋ ಪ್ರೇಮಪತ್ರನೋ ಗೊತ್ತಾಗ್ಲಿಲ್ಲ...'

ಪಮ್ಮಿ ಮಾತಿಗೆ ನಕ್ಕ ಡಾಕ್ಟರು, 'ಅದು ರಾಜಕೀಯ ಪತ್ರ, ಎಮ್ಮೆಲ್ಲೆ ಒಬ್ರು ಸೀಎಂಗೆ ಬರೆದಿದ್ದು, ಅದು ಸುಖಾಂತ್ಯ ಆಯ್ತಲ್ಲ, ಇವ್ರು ಮತ್ತೆ ಪತ್ರದ ವಿಷ್ಯ ಮಾತಾಡಲ್ಲ ಬಿಡಿ' ಎಂದರು.

'ಸರಿ, ಇದಕ್ಕೆಲ್ಲ ಟ್ರೀಟ್‌ಮೆಂಟು?'

'ಒಂದಾರು ತಿಂಗಳು ನಿಮ್ಮನೆ ಟೀವಿ ಕನೆಕ್ಷನ್ ತೆಗೆಸಿಬಿಡಿ, ಎಲ್ಲ ಸರಿಹೋಗುತ್ತೆ'.

'ಅಯ್ಯೋ... ಮತ್ತೆ ನಾನು 'ಮನೆಯೊಂದು ಆರು ಬಾಗಿಲು' ಸೀರಿಯಲ್ ನೋಡ್ಬೇಕಲ್ಲ ಸಾ...'

ಪಮ್ಮಿ ಮಾತು ಕೇಳಿ ಡಾಕ್ಟರು ತಲೆ ಮೇಲೆ ಕೈ ಹೊತ್ತು ಕೂತರು.

ಸಂಗತ

ಹೆತ್ತವರ ಒಂಟಿತನ: ಯಾರು ಕಾರಣ?

ಹೆತ್ತವರು ಅನಾಥರಂತೆ ಬದುಕುವುದಕ್ಕೆ ಮಕ್ಕಳು ಆಸ್ಪದ ನೀಡುವುದು ಎಂದೂ ಕ್ಷಮೆ ಇರದ ಅಪರಾಧ

• ಸದಾಶಿವ್ ಸೊರಟೂರು

ಬಹುಶಃ ನಿಮಗೆ ಈ ಕಥೆ ಗೊತ್ತಿರಬಹುದು. ಒಬ್ಬ ವ್ಯಕ್ತಿಯು ಸತ್ತುಹೋದ ತನ್ನ ತಂದೆಯ ದೇಹವನ್ನು ಪೆಟ್ಟಿಗೆಯಲ್ಲಿ ತುಂಬಿಸಿಕೊಂಡು, ಎಸೆಯಲು ಹೋಗುತ್ತಿರುತ್ತಾನೆ. ಅದನ್ನು ನೋಡಿದ ಆತನ ಪುಟ್ಟ ಮಗ ತಂದೆಗೆ 'ಅಪ್ಪಾ, ವಾಪಸ್ ಬರುವಾಗ ಆ ಪೆಟ್ಟಿಗೆಯನ್ನು ತಪ್ಪದೇ ಕಾಳಜಿಯಿಂದ ತನ್ನಿ' ಎಂದು ತಣ್ಣಗೆ ಉಸುರುತ್ತಾನೆ. ಯಾಕೆ ಎಂಬಂತೆ ಆ ವ್ಯಕ್ತಿ ಆಶ್ಚರ್ಯಕರವಾಗಿ ಮಗನತ್ತ ನೋಡುತ್ತಾನೆ. ಮಗ ಮುಗ್ಧವಾಗಿ ಉತ್ತರಿಸುತ್ತಾನೆ, 'ನಾಳೆ ನೀವು ಸತ್ತಾಗ ನಿಮ್ಮ ದೇಹವನ್ನು ತುಂಬಿ ಎಸೆಯಲು ನನಗೆ ಆ ಪೆಟ್ಟಿಗೆ ಬೇಡವೇ?'

ಶಾಲೆಯೊಂದರಲ್ಲಿ ಚೆನ್ನಾಗಿ ಓದುವ ಒಬ್ಬ ಬುದ್ಧಿವಂತ ಹುಡುಗನಿದ್ದಾನೆ. ಆದರೆ ಅವನ ವರ್ತನೆ ಮಾತ್ರ ಸರಿಯಿಲ್ಲ. ಅವನ ಬಗ್ಗೆ ಸಹಪಾಠಿಗಳಿಂದ ಪದೇ ಪದೇ ದೂರುಗಳು ಕೇಳಿಬರುತ್ತವೆ. ನೂರಕ್ಕೆ 98 ಅಂಕ ತೆಗೆಯುವವರೆಲ್ಲ ಒಳ್ಳೆಯವರಾಗಿ ಇರಬೇಕೆಂದೇನೂ ಇಲ್ಲ. ಶಿಕ್ಷಕ ವೃಂದ ಅವನ ಪೋಷಕರನ್ನು ಕರೆದು ಮಾತನಾಡಿದಾಗ, ಅವರು ತಮ್ಮ ಮಗುವಿನ ವರ್ತನೆಯನ್ನು ಸಮರ್ಥಿಸಿಕೊಂಡರು. ಒಳ್ಳೆಯ ಅಂಕಗಳು ಉತ್ತಮ ನಡತೆಯ ಮಾನದಂಡ ಅಂದುಕೊಂಡರೋ ಏನೊ. ಎಷ್ಟೋ ಪೋಷಕರಿಗೆ ಮಕ್ಕಳು ತೆಗೆಯುವ ಒಳ್ಳೆಯ ಅಂಕಗಳ ಮುಂದೆ ಅವರ ಸಲ್ಲದ ವರ್ತನೆ ಕಾಣಿಸುವುದೇ ಇಲ್ಲ. ಹಾಗೆಯೇ ನಾಳೆ ಹಣದ ಮುಂದೆ ಮಗನಿಗೆ ಹೆತ್ತವರು ಕಾಣಿಸುವುದಿಲ್ಲ. ಪೋಷಕರು ಮಾಡಿದ್ದನ್ನು ಮಕ್ಕಳು ಮುಂದುವರಿಸಲಾರರೇ?

ಅನಾಥಾಶ್ರಮಗಳ ಸಂಖ್ಯೆ ಹೆಚ್ಚಾಗುತ್ತಿದೆ, ಹಳ್ಳಿಗಳು ಒಬ್ಬಂಟಿ ವೃದ್ಧರ ವಸತಿಕೇಂದ್ರಗಳಾಗಿವೆ, ಈಗಿನ ಯುವಕರು ಹೆತ್ತವರನ್ನು ಸರಿಯಾಗಿ ನೋಡಿಕೊಳ್ಳುತ್ತಿಲ್ಲ ಎಂಬೆಲ್ಲ ದೂರುಗಳು ಕೇಳಿಬರುತ್ತವೆ. ಅವು ಬರೀ ದೂರುಗಳಲ್ಲ, ಸತ್ಯಸಂಗತಿಗಳು. ಹೆತ್ತವರನ್ನು ನೋಡಿಕೊಳ್ಳಬೇಕಾದದ್ದು ಮಕ್ಕಳ ಕರ್ತವ್ಯ ಎಂದು ನ್ಯಾಯಾಲಯ ಕೂಡ ಆದೇಶ ನೀಡುತ್ತದೆಯೆಂದರೆ, ಈ ವಿಷಯ ಎಷ್ಟೊಂದು ಗಂಭೀರ ಸ್ವರೂಪಕ್ಕೆ ಹೋಗಿರಬಹುದು? ಹೆತ್ತವರನ್ನು ಪೋಷಿಸುವುದು ಕರ್ತವ್ಯವೊ, ಪ್ರೀತಿಯೊ? ಅವರನ್ನು ಪೋಷಿಸುವಂತೆ ನ್ಯಾಯಾಲಯ ಗದರುವ ಹಂತಕ್ಕೆ ಇದು ಬಂದುಹೋಯಿತೇ?

ಮಕ್ಕಳು ನಿರ್ಭಾವುಕರಾಗುತ್ತಿದ್ದಾರೆ. ಅವರಲ್ಲಿ ಸಂವೇದನೆ ಕಡಿಮೆಯಾಗುತ್ತಿದೆ. 'ಇವರು ನನ್ನ ಹೆತ್ತವರು, ಇವರಿಗೆ ನಾನಲ್ಲದೆ ಇನ್ನಾರು' ಎನ್ನುವ ಅಂತಃಕರಣವೊಂದು ಮಿಡಿಯುತ್ತಿಲ್ಲ. ಮಕ್ಕಳೇನು ಹುಟ್ಟಿನಿಂದ ಇಂತಹ ಲಕ್ಷಣ ಪಡೆದು ಬಂದವರಲ್ಲ. ಅವರನ್ನು ಸಮಾಜ ಹಾಗೆ ತಯಾರು ಮಾಡುತ್ತಿದೆ. ಪ್ರತಿ ಪೋಷಕರೂ ಅದರಲ್ಲಿ ಪಾಲುದಾರರು. ಮಕ್ಕಳನ್ನು ಬೆಳೆಸುವಲ್ಲಿ ನಾವು ಎಲ್ಲೋ ಆಯ ತಪ್ಪುತ್ತಿದ್ದೇವೆ.

'ಕೆರೆಯಂ ಕಟ್ಟಿಸು, ಬಾವಿಯಂ ಸವೆಸು, ದೇವಾಗಾರಮಂ ಮಾಡಿಸ/ ಜ್ಜರೆಯೊಳ್ ಸಿಲ್ಕಿದನಾಥರಂ ಬಿಡಿಸು...' ಎಂದು ಒಬ್ಬ ತಾಯಿ ತನ್ನ ಮಗುವಿಗೆ ಹಾಲೂಡಿಸುವಾಗ ಹೇಳುತ್ತಿದ್ದಳು ಎಂದು ವಿಜಯನಗರ ಕಾಲದ ಲಕ್ಷ್ಮೀಧರಮಾತ್ಯನ ಶಾಸನ ಹೇಳುತ್ತದೆ. 'ಆಚಾರಕ್ಕೆ ಅರಸನಾಗು, ನೀತಿಗೆ ಪ್ರಭುವಾಗು, ಮಾತಿಗೆ ಚೂಡಾಮಣಿಯಾಗು, ಜಗಕ್ಕೆ ಜ್ಯೋತಿಯೇ ಆಗು' ಎನ್ನುತ್ತದೆ ನಮ್ಮ ಜನಪದ. ನಾವು ನಮ್ಮ ಮಕ್ಕಳಿಗೆ ಏನು ಹೇಳುತ್ತಿದ್ದೇವೆ? ಇಂಗ್ಲಿಷ್ ಮಾಧ್ಯಮದಲ್ಲಿ ಓದು, ನೂರಕ್ಕೆ ನೂರು ಅಂಕ ಪಡಿ, ಕೆಲಸ ಹಿಡಿ, ದುಡ್ಡು ಮಾಡು... ಇಂತಹ ನೂರೆಂಟು ಉದ್ದೇಶಗಳನ್ನು ಮಕ್ಕಳ ಮುಂದೆ ಇಡುತ್ತಿದ್ದೇವೆ. ಹಣ ಮುಖ್ಯವೆಂದು ತಿಳಿಸುತ್ತಾ ಹೋಗುತ್ತಿದ್ದೇವೆ. ಹಣ ಬೇಕಾದರೆ ಹೆಚ್ಚು ಅಂಕ ಪಡೆಯಬೇಕು ಅನ್ನುತ್ತಿದ್ದೇವೆ. ಹಣವೇ ಒಂದು ಗೆಲುವು, ಅಧಿಕಾರ ಹಿಡಿಯುವುದೇ ಯಶಸ್ಸು ಅಂದಮೇಲೆ ನಾಳೆ ಮಕ್ಕಳು ದೊಡ್ಡವರಾದ ನಂತರ ಅವರಿಗೆ ಹಣವೇ ಮುಖ್ಯವಾಗುತ್ತದೆ ವಿನಾ ಸಂಬಂಧಗಳಲ್ಲ, ಹೆತ್ತವರೂ ಅಲ್ಲ. ಅದನ್ನು ಅವರಿಗೆ ನಾವೇ ಹೇಳಿಕೊಟ್ಟದ್ದು. ಬೇವು ಬಿತ್ತಿ ಮಾವು ಬಯಸಿದರೆ ಹೇಗೆ?



ನಾವು ನಮ್ಮ ಮಕ್ಕಳ ಪಕ್ಕ ಕೂತು ಎಂದು ಆತ್ಮೀಯವಾಗಿ ಮಾತನಾಡಿದ್ದೇವೆ? ನಮ್ಮ ಎಷ್ಟು ಸಮಯವನ್ನು ಅವರಿಗಾಗಿ ಕೊಟ್ಟಿದ್ದೇವೆ? ಅವರಿಗೆ ಎಂತಹ ಕಥೆಗಳನ್ನು ಹೇಳಿದ್ದೇವೆ? ಎಷ್ಟು ಬುದ್ಧಿವಾದ ಹೇಳಿದ್ದೇವೆ? ಹೇಗೆ ತಿದ್ದಿದ್ದೇವೆ? ಅವರಿಗೆ ನಾವೇ ಒಂದು ಮಾದರಿಯಾಗಿ ಯಾವಾಗ ನಿಂತಿದ್ದೇವೆ? ಉತ್ತರ ಹುಡುಕಿಕೊಂಡು ಹೊರಟರೆ ಈಗಿನ ಸ್ಥಿತಿಗೆ ಬಂದು ತಲುಪುತ್ತೇವೆ. ಅದೇ ಉತ್ತರ. ಬಾಲ್ಯದಲ್ಲಿ ಕಲಿಸಿದ್ದು ಬದುಕಿನುದ್ದಕ್ಕೂ ಇರುವುದರಿಂದ, ಮಕ್ಕಳಿಗೆ ಈ ಮಣ್ಣಿನ ಸಂಸ್ಕಾರ ಕಲಿಸಬೇಕಾಗುತ್ತದೆ.

ಈಗಿನ ಪೀಳಿಗೆಯ ಈ ನಡೆಗೆ ಹೆತ್ತವರೇ ಪೂರ್ಣ ಕಾರಣರಲ್ಲದಿದ್ದರೂ ಹೆತ್ತವರ ಕಾರಣವೂ ಹೆಚ್ಚಿದೆ. ನೂರಾರು ಭಾವನೆಗಳನ್ನು ಭಾಷೆಯಲ್ಲಿ ಬಂಧಿಸಿ, ಯಶಸ್ಸನ್ನು ದುಡ್ಡು ಎಂದು ವ್ಯಾಖ್ಯಾನಿಸಿ, ಪ್ರಸಿದ್ಧಿಯನ್ನು ಗೆಲುವು ಎಂದು ಬಣ್ಣಿಸಿ, ತೋರೆದು ಬದುಕುವುದೇ ನೆಮ್ಮದಿಯೆಂದು ವರ್ಣಿಸಿ, ಬಂಧವನ್ನು ಬರೀ ಮೊಬೈಲ್ ನಂಬರ್‌ನಲ್ಲಿ ಬಂಧಿಸಿ ಕುಳಿತಿರುವ ನಮಗೆ, ಕರುಳಬಂಧದ ಅಸಲಿ ಭಾವ ಹೇಗೆ ಮೂಡೀತು? ಜೀವಿಸುವುದೆಂದರೆ ತಿನ್ನುವುದು, ಉಸಿರಾಡುವುದು ಅಷ್ಟೇ ಅಲ್ಲ, ನಾವು ನಮ್ಮವರೊಂದಿಗೆ ಹೆಣೆದುಕೊಂಡು, ಬಂಧಿಸಿಕೊಂಡು ನಗುವುದು.

ಹೆತ್ತವರು ಅನಾಥರಂತೆ ಬದುಕುವುದನ್ನು ಯಾವ ಸಮಾಜವೂ ಯಾವ ಸಂಸ್ಕೃತಿಯೂ ಮನ್ನಿಸುವುದಿಲ್ಲ. ಅದೆಂದೂ ಕ್ಷಮೆ ಇರದ ಅಪರಾಧ. ಇದು ಕಾನೂನಿನ ಮಾತಲ್ಲ, ಮಾನವೀಯತೆಯ ಮಾತು. ಹೆತ್ತವರೂ ಬದಲಾಗಬೇಕು, ಮಕ್ಕಳೂ ಬದಲಾಗಬೇಕು.

ವಾಚಕರ ವಾಣಿ

ಭಾಷಾಪ್ರೇಮ: ಅಭಿಯಾನಗಳ ವೈರುಧ್ಯ

'ತಂತ್ರಜ್ಞಾನ ಲಭ್ಯತೆಗೆ ಇಂಗ್ಲಿಷ್ ಮಾಧ್ಯಮ ಶಾಲೆ ಕಡ್ಡಾಯವಾಗಲಿ' ಎಂದು ಇನ್ಫೊಸಿಸ್ ಸಹಸಂಸ್ಥಾಪಕ, ಕನ್ನಡಿಗ ನಾರಾಯಣ ಮೂರ್ತಿ ಅವರು ಹೇಳಿರುವುದಾಗಿ ಮಾಧ್ಯಮಗಳಲ್ಲಿ ವರದಿಯಾಗಿದೆ. ಒಂದು ಕಡೆ 'ಹೆಸರಾಯಿತು ಕರ್ನಾಟಕ, ಉಸಿರಾಗಲಿ ಕನ್ನಡ' ಎಂಬ ಅಭಿಯಾನ ನಡೆಯುತ್ತಿದ್ದರೆ, ಮತ್ತೊಂದು ಕಡೆ, 'ಇಂಗ್ಲಿಷ್ ನಮ್ಮ ಉಸಿರಾಗಲಿ' ಎಂಬ ಅಭಿಯಾನ ನಡೆಯುತ್ತಲೇ ಇದೆ. ಜಗತ್ತಿನ ಶಿಕ್ಷಣ ತಜ್ಞರೆಲ್ಲಾ ಮಾತೃಭಾಷೆ ಅಥವಾ ಪರಿಸರದ ಭಾಷೆಯಲ್ಲಿ ಮಗುವಿನ ಆರಂಭಿಕ ಕಲಿಕೆ ಆಗಬೇಕಾದುದು ಎಲ್ಲ ದೃಷ್ಟಿಯಿಂದಲೂ ಉತ್ತಮ ಎಂದು ಹೇಳುತ್ತಾ ಬಂದಿದ್ದಾರೆ. ಅದು ಮಗುವಿನ ಬೌದ್ಧಿಕ ಮತ್ತು ಭಾವನಾತ್ಮಕ ಬೆಳವಣಿಗೆಗೆ ಬಹಳಷ್ಟು ಅಗತ್ಯ ಎಂಬುದು ಮನಗಂಡ ಅಂಶ. ಇಂದು ಜಗತ್ತಿನ ಅನೇಕ ಮುಂದುವರಿದ ರಾಷ್ಟ್ರಗಳು ಅದೇ ನೀತಿಯನ್ನು ಅನುಸರಿಸಿ ಎಲ್ಲ ರಂಗಗಳಲ್ಲಿ ಬಹಳಷ್ಟು ಅಭಿವೃದ್ಧಿ ಸಾಧಿಸಿವೆ.

ನಮ್ಮ ಗ್ರಾಮಾಂತರ ಪ್ರದೇಶಗಳಲ್ಲಿ ಮಕ್ಕಳಿಗೆ ಕಲಿಕೆಯಲ್ಲಿ ಇರುವ ಕಷ್ಟದ ಅರಿವು ನಾರಾಯಣ ಮೂರ್ತಿಯವರಿಗೆ ಇದ್ದಂತಿಲ್ಲ. ಈಗ ಇಂಗ್ಲಿಷ್ ಭಾಷೆಯನ್ನು ಪ್ರಾಥಮಿಕ ಹಂತದಿಂದಲೇ ಒಂದು ಭಾಷೆಯಾಗಿ ಕಲಿಸುವ ಕ್ರಮ ಜಾರಿಯಲ್ಲಿದೆ. ಅದರಲ್ಲಿ ಇನ್ನಷ್ಟು ಸುಧಾರಣೆ ಆಗಬೇಕಾದ ಅಗತ್ಯ ಇದೆ. ರಾಷ್ಟ್ರೀಯ ಶಿಕ್ಷಣ ನೀತಿ ಕೂಡ ಪ್ರಾಥಮಿಕ ಹಂತದಲ್ಲಿ ಮಾತೃಭಾಷೆಯ ಕಲಿಕೆಗೆ ಒತ್ತು ನೀಡುತ್ತದೆ. ನಂತರದ ಹಂತದಲ್ಲಿ ಇಂಗ್ಲಿಷ್ ಮಾಧ್ಯಮದಲ್ಲಿನ ಕಲಿಕೆಗೆ ಅವಕಾಶ ಇದ್ದೇ ಇದೆ. ಈಗ ತಾಂತ್ರಿಕ ಶಿಕ್ಷಣವೆಲ್ಲ ಇಂಗ್ಲಿಷ್ ಮಾಧ್ಯಮದಲ್ಲಿಯೇ ನಡೆಯುತ್ತಿದೆ. ಆದ್ದರಿಂದ ಪ್ರಾಥಮಿಕ ಹಂತದಲ್ಲಿಯೇ ಇಂಗ್ಲಿಷ್ ಮಾಧ್ಯಮದ ಕಲಿಕೆ ಯಾವ ರೀತಿಯಿಂದಲೂ ನಮ್ಮ ದೇಶಕ್ಕೆ ಅಥವಾ ನಮ್ಮ ನಾಡಿಗೆ ಉಚಿತವಲ್ಲ. ದೇಶದ ಅಭಿವೃದ್ಧಿ, ಬೆಳವಣಿಗೆ ಅಂದರೆ ಬರೀ ತಾಂತ್ರಿಕ, ವ್ಯಾಪಾರ, ಉದ್ಯಮಗಳ ಬೆಳವಣಿಗೆ ಅಲ್ಲ. ಅದು ದೇಶದ ಸೃಜನಶೀಲ, ಸಾಂಸ್ಕೃತಿಕ, ಸಾಹಿತ್ಯಿಕ, ಆಧ್ಯಾತ್ಮಿಕ ಸರ್ವತೋಮುಖ ಬೆಳವಣಿಗೆ ಕೂಡ ಆಗಿದೆ. ಅದು ಸಾಧ್ಯವಾಗುವುದು ದೇಸಿ ಭಾಷೆಗಳ ಕಲಿಕೆಯಿಂದ ಮಾತ್ರ. ದೇಸಿ ಭಾಷೆ ಅಥವಾ ಸಂಸ್ಕೃತಿಗೆ ಎರವಾದ ಯಾಂತ್ರಿಕ ಬೆಳವಣಿಗೆ ನಮ್ಮನ್ನು ಮಾನಸಿಕವಾಗಿ ಇನ್ನಷ್ಟು ಕುಗ್ಗಿಸಬಹುದಾಗಿದೆ.

ವೆಂಕಟೇಶ ಮಾಚಕನೂರ, ಧಾರವಾಡ

ಮತ್ತೆ ಕಾಯಬೇಕೇ?!

ಮೊಳಗಿತು ಕನ್ನಡದ ಕಹಳೆ
ಎಲ್ಲೆಡೆ, ಕನ್ನಡ ಕನ್ನಡ...
ಕೇಳಿ ನಿಮಿರಿದವು ಕಿವಿಗಳು
ಕುಣಿದಾಡಿದವು ಎದೆಗಳು
ಕರತಾಡನಗೈದವು ಕೈಗಳು
ನಾಡಿನೆಲ್ಲೆಡೆ ಸಂಭ್ರಮ, ಸಡಗರ,
ತಿಂಗಳು ಪೂರ್ತಿ ಸಾಲಲಿಲ್ಲ
ನೋಡಲೆರಡು ಕಂಗಳು,
ಮತ್ತೆ ಕಾಯಬೇಕಾ ನಾ...
ನವೆಂಬರ್ ತಿಂಗಳು!

ಮ.ಗು.ಬಸವಣ್ಣ
ನಂಜನಗೂಡು

ಪಿಎಸ್‌ಐ ಪರೀಕ್ಷೆ: ಕಾಲಾವಕಾಶ ಅಗತ್ಯ

ಪಿಎಸ್‌ಐ ನೇಮಕಾತಿ ಮರುಪರೀಕ್ಷೆಗೆ ಬರೀ 30 ದಿನಗಳನ್ನು ನೀಡಿ ತರಾತುರಿಯಲ್ಲಿ ಪರೀಕ್ಷೆ ನಡೆಸಲಾಗುತ್ತಿದೆ. ವಿದ್ಯಾರ್ಥಿಗಳಿಗೆ ಸಿದ್ಧರಾಗುವುದಕ್ಕೆ ಒಂದೆರಡು ತಿಂಗಳಾದರೂ ಅವಕಾಶ ನೀಡಿ ಪರೀಕ್ಷೆ ನಡೆಸಬೇಕೆಂಬುದು ಪರೀಕ್ಷೆ ಆಕಾಂಕ್ಷಿಗಳ ಬೇಡಿಕೆಯಾಗಿದೆ. ಪರೀಕ್ಷೆ ನಿಗದಿಯಾಗಿರುವ ಡಿ. 23ರಂದು ಕೇಂದ್ರ ಸರ್ಕಾರಿ ಹುದ್ದೆಯ ನೇಮಕಾತಿಗಾಗಿ ಮತ್ತೊಂದು ಪರೀಕ್ಷೆ ಇದೆ. ಹೀಗಾಗಿ, ಬಹುತೇಕರು ಒಂದು ಪರೀಕ್ಷೆ ಎದುರಿಸುವ ಅವಕಾಶವನ್ನು ಕಳೆದುಕೊಂಡಂತೆ ಆಗುತ್ತದೆ. ಜೊತೆಗೆ ಬೇರೆ ರಾಜ್ಯಗಳ ವಿಧಾನಸಭಾ ಚುನಾವಣೆಯ ಕರ್ತವ್ಯದಲ್ಲಿರುವ ಇಲ್ಲಿನ ಪೊಲೀಸ್ ಕಾನ್‌ಸ್ಟೆಬಲ್‌ಗಳಲ್ಲಿ ಪಿಎಸ್‌ಐ ಆಗುವ ಕನಸು ಹೊತ್ತವರಿದ್ದಾರೆ. ಅವರು ಕರ್ತವ್ಯ ಮುಗಿಸಿ ಮರಳಿದ ನಂತರ, ಪರೀಕ್ಷೆ ಎದುರಿಸಲು ಸ್ವಲ್ಪವಾದರೂ ಕಾಲಾವಕಾಶ ಬೇಕಾಗುತ್ತದೆ. ಸುಮಾರು ದಿನಗಳಿಂದ ಈ ಪ್ರಕರಣ ನ್ಯಾಯಾಲಯದಲ್ಲಿದ್ದ ಕಾರಣ, ಎಷ್ಟೋ ತರುಣರು ಆರ್ಥಿಕ ಕಾರಣದಿಂದ ಓದುವುದನ್ನು ನಿಲ್ಲಿಸಿ ದುಡಿಯುತ್ತಿದ್ದಾರೆ. ಈಗ ಅವರಿಗೆ ಒಮ್ಮೆಲೇ ಪರೀಕ್ಷೆ ಎದುರಿಸುವುದು ಕಷ್ಟ. ಹಾಗಾಗಿ, ಈ ಎಲ್ಲ ಕಾರಣಗಳಿಂದಲೂ ಪರೀಕ್ಷೆಯನ್ನು ಜನವರಿಯಲ್ಲಿ ನಡೆಸುವುದು ಒಳಿತು.

ಗೌತಮ್ ಗೌಡಪ್ಪಗೌಡ್ರು, ಮನ್ನಿಕಟ್ಟಿ, ಬಾಗಲಕೋಟೆ

ಸಾರ್ವಜನಿಕ ರಜೆ: ಯಾರಿಗೆಲ್ಲಾ ಅಗತ್ಯ?

ಕನಕದಾಸ ಜಯಂತಿ ಪ್ರಯುಕ್ತ ಗುರುವಾರ (ನ. 30) ಶಾಲೆಗೆ ರಜೆ ಇದ್ದುದರಿಂದ, ಮೊಮ್ಮಗನನ್ನು ಬೆಂಗಳೂರಿನ ಕಬ್ಬನ್ ಪಾರ್ಕ್‌ನ ಬಾಲಭವನಕ್ಕೆ ಕರೆದುಕೊಂಡು ಹೋಗಿದ್ದೆ. ಆದರೆ ಅದು ಕೂಡ ಸರ್ಕಾರಿ ಕಚೇರಿಗಳಂತೆ ಮುಚ್ಚಿತ್ತು. ರಜಾ ದಿನಗಳಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಮಕ್ಕಳು, ಹಿರಿಯ ನಾಗರಿಕರು ಇಂತಹ ಸ್ಥಳಗಳಿಗೆ ಭೇಟಿ ನೀಡುತ್ತಾರೆ. ಹಾಗಾಗಿ, ಸಾರ್ವಜನಿಕ ರಜಾ ದಿನಗಳಲ್ಲಿ ಇಂತಹ ಸೌಲಭ್ಯಗಳನ್ನು ಇನ್ನಷ್ಟು ಒದಗಿಸುವ ದಿಸೆಯಲ್ಲಿ ಕ್ರಮ ಕೈಗೊಳ್ಳಬೇಕು. ಇಲ್ಲದಿದ್ದರೆ ಎಳೆಯ ಮಕ್ಕಳನ್ನು ನಾವೇ ಮಾಲ್ ಸಂಸ್ಕೃತಿಗೆ ದೂಡುವಂತೆ ಆಗುತ್ತದೆ.

ಟಿ.ವಿ.ಬಿ.ರಾಜನ್, ಬೆಂಗಳೂರು

'ಮಾಲಿನಿಯ' ನಿಯಂತ್ರಣ ಮಂಡಳಿ!

ಕನ್ನಡ ಭಾಷೆಯ ಅಳಿವು ಉಳಿವು ಕನ್ನಡಿಗರ ಕೈಯಲ್ಲಿಯೇ ಇದೆ. ಅಂಗಡಿ, ಕಚೇರಿ, ಇಲಾಖೆ ಕಟ್ಟಡಗಳ ಮೇಲೆ ಹಾಕಿರುವ ನಾಮಫಲಕಗಳು ಕನ್ನಡ ಭಾಷೆಯಲ್ಲಿದ್ದರೂ ಅವು ತಪ್ಪಿಲ್ಲದೆ ಅಚ್ಚುಕಟ್ಟಾಗಿ ಇರುವಂತೆ ಆದ್ಯ ಗಮನ ಹರಿಸಬೇಕಾಗಿದೆ. ಬೆಂಗಳೂರಿನ ಸಂಪಂಗಿರಾಮ ನಗರದಲ್ಲಿರುವ ಕೇಂದ್ರ ಪರಿಸರ ಮಾಲಿನ್ಯ ನಿಯಂತ್ರಣ ಮಂಡಳಿ ಕಚೇರಿಯ ಫಲಕದಲ್ಲಿ 'ಮಾಲಿನಿಯ ನಿಯಂತ್ರಣ ಮಂಡಳಿ' ಎಂಬ ಪದಗಳು ರಾರಾಜಿಸುತ್ತಿವೆ. ಇದು ಕನ್ನಡಿಗರಿಗೆ ತೀವ್ರ ಮುಜುಗರ ತರಿಸುವಂತಹ ವಿಚಾರ.

ನವೆಂಬರ್ ತಿಂಗಳಲ್ಲಿ ಮಾತ್ರ ಕನ್ನಡ ಕನ್ನಡ ಎಂದು ಜಪಿಸಿದರೆ ಸಾಲದು. ತನು ಮನ ಭಾವ ಶುದ್ಧಿಯಿಂದ ಕನ್ನಡದ ಶುದ್ಧೀಕರಣಕ್ಕೆ ನಾವೆಲ್ಲರೂ ಪ್ರಾಮಾಣಿಕವಾಗಿ ಪ್ರಯತ್ನ ಮಾಡಬೇಕಾಗಿದೆ. ಅನ್ಯ ಭಾಷೆಯ ಫಲಕಗಳು ಬಹುತೇಕ ಸರಿಯಾಗಿಯೇ ಇರುತ್ತವೆ. ಆದರೆ ಕನ್ನಡ ಭಾಷೆಯ ಫಲಕದಲ್ಲಿ ಮಾತ್ರ ಪದಗಳು, ಕಾಗುಣಿತ ದೋಷಗಳು ಹೀಗೆ ಮರುಕಳಿಸುತ್ತಲೇ ಇರುತ್ತವೆ. ಸಂಬಂಧಿಸಿದವರು ಎಚ್ಚರಿಕೆ ವಹಿಸುವುದು ಸೂಕ್ತ.

ಜಯವೀರ ಎ.ಕೆ., ಖೇಮಲಾಪುರ, ರಾಯಬಾಗ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Sudesha Doddapalya. Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete.



ವಿದೇಶದಲ್ಲಿ ಡೆಸ್ಟಿನೇಷನ್ ವೆಡ್ಡಿಂಗ್ ಭಾರತೀಯರ ಸಂಖ್ಯೆ ಕಡಿಮೆ

'ದೇಶದ ಕೆಲವು ದೊಡ್ಡ ಕುಟುಂಬಗಳು ವಿದೇಶಗಳಲ್ಲಿ ಮದುವೆಯಾಗುತ್ತವೆ ಎಂಬುದು ಬೇಸರದ ಸಂಗತಿ. ಅಂತಹ ಮದುವೆಯ ಅಗತ್ಯವಿದೆಯೇ' ಎಂದು ಪ್ರಧಾನಿ ನರೇಂದ್ರ ಮೋದಿ ಅವರು ಪ್ರಶ್ನಿಸಿದ್ದು ದೊಡ್ಡ ಚರ್ಚೆ ಹುಟ್ಟುಹಾಕಿದೆ. ಇಂತಹ ಮದುವೆಗಳ ಪರ–ವಿರೋಧದ ಚರ್ಚೆ ನಡೆಯುತ್ತಿರುವ ಹೊತ್ತಿನಲ್ಲೇ, ವಿದೇಶಗಳಲ್ಲಿ ಮದುವೆಯಾಗುವ ಭಾರತೀಯ ಜೋಡಿಗಳ ಸಂಖ್ಯೆ ಕಡಿಮೆ ಎಂದು ಮದುವೆ ಉದ್ಯಮ ವಲಯವು ಹೇಳಿದೆ

ಪ್ರಜಾವಾಣಿ ವಾರ್ತೆ

ಮದುವೆಯ ಪರಿಕಲ್ಪನೆಗಳು ಕಾಲಕಾಲಕ್ಕೆ ಬದಲಾಗಿವೆ. ಈ ಹಿಂದೆ ಮದುವೆ ಎನ್ನುವುದು ಎಷ್ಟು ಕೌಟುಂಬಿಕವೊ, ಅಷ್ಟೇ ಸಾಮಾಜಿಕ ಕೂಡ ಆಗಿತ್ತು. ಒಂದು ಊರಿನಲ್ಲಿ ಒಂದು ಮದುವೆ ಇದೆ ಎಂದಾದರೆ, ಊರಿಗೆ ಊರೇ ಸೇರಿಕೊಂಡು ಮದುವೆಯ ತಯಾರಿಯಲ್ಲಿ ತೊಡಗಿಕೊಳ್ಳುತ್ತಿತ್ತು. ಕಾಲಾಂತರದಲ್ಲಿ, ಮದುವೆಯು ಊರಿನ ಮನೆಯಿಂದ ಕಲ್ಯಾಣಮಂಟಪದ ಕಡೆಗೆ ಹೊರಳಿತು. ಈಗ ಅದು ಡೆಸ್ಟಿನೇಷನ್ ವೆಡ್ಡಿಂಗ್ ರೂಪ ಪಡೆದಿದೆ. ಮನೆಯಿಂದ ಹೊರಗೆ, ಅಲ್ಲಿಂದ ಕಲ್ಯಾಣ ಮಂಟಪಕ್ಕೆ, ಈಗ ರಾಜ್ಯದಿಂದ ಮತ್ತು ದೇಶದಿಂದ ಹೊರಗೆ ಮದುವೆಯಾಗುವ ಪ್ರವೃತ್ತಿ ಆರಂಭವಾಗಿದೆ.

ವಿದೇಶಗಳಲ್ಲಿ ಮದುವೆಯಾಗುವ ಭಾರತೀಯ ಜೋಡಿಗಳ ಸಂಖ್ಯೆ ಭಾರಿ ಸುದ್ದಿಯಾಗುತ್ತದೆ. ಆದರೆ ಭಾರತದಲ್ಲೇ 'ಡೆಸ್ಟಿನೇಷನ್ ವೆಡ್ಡಿಂಗ್' ಮಾಡಿಕೊಳ್ಳಬಯಸುವವರ ಸಂಖ್ಯೆ ದೊಡ್ಡದಿದೇ ಇದೆ. ಇದು ದೇಶದಲ್ಲಿ ದೊಡ್ಡ ಉದ್ಯಮವಾಗಿ ಬೆಳೆದಿದೆ.

ಇತ್ತೀಚೆಗೆ, ತಮ್ಮ ಮನದ ಮಾತು ಕಾರ್ಯಕ್ರಮದಲ್ಲಿ ಡೆಸ್ಟಿನೇಷನ್ ವೆಡ್ಡಿಂಗ್ ಕುರಿತು ಪ್ರಧಾನಿ ನರೇಂದ್ರ ಮೋದಿ ಮಾತನ್ನಾಡಿದ್ದರು. ಆ ಬಳಿಕ ಸಾಮಾಜಿಕ ಜಾಲತಾಣಗಳಲ್ಲೂ ಪರ ವಿರೋಧದ ಚರ್ಚೆ ನಡೆಯಿತು. ದೇಶದಲ್ಲಿಯೇ ಮದುವೆ ಆಗುವುದರಿಂದ ದೇಶದ ಆರ್ಥಿಕತೆಯನ್ನು ಕಟ್ಟಿದಂತಾಗುತ್ತದೆ ಎಂಬಂತೆಲ್ಲಾ ಅಭಿಪ್ರಾಯಗಳು, ಸಲಹೆಗಳು, ದೇಶದ ಕುರಿತ ಒಲವುಗಳು ವ್ಯಕ್ತವಾದವು. ಆದರೆ, ಮದುವೆ ಉದ್ಯಮದಲ್ಲಿಯೇ ತೊಡಗಿಸಿಕೊಂಡಿರುವ ಕೆಲವು ಉದ್ಯಮಿಗಳು ಈ ಎಲ್ಲದಕ್ಕಿಂತ ಭಿನ್ನ ಅಭಿಪ್ರಾಯವನ್ನು ಹಂಚಿಕೊಂಡಿದ್ದಾರೆ.

'ದೇಶದ ಜನರು ಡೆಸ್ಟಿನೇಷನ್ ವೆಡ್ಡಿಂಗ್ ಕಡೆಗೆ ಒಲವು ಹೆಚ್ಚಿಸಿಕೊಂಡಿದ್ದಾರೆ ನಿಜ. ಆದರೆ, ದೇಶದ ಜನರ ಡೆಸ್ಟಿನೇಷನ್ ದೇಶವೇ ಆಗಿದೆ ಹೊರತು ವಿದೇಶವಲ್ಲ. ಎಲ್ಲೋ ಬೆರಳೆಣಿಕೆಯಷ್ಟು ಶ್ರೀಮಂತರು ಮಾತ್ರವೇ ವಿದೇಶಗಳಲ್ಲಿ ಮದುವೆ ಆಯೋಜಿಸಲು ಬಯಸುತ್ತಿದ್ದಾರೆ' ಎನ್ನುವುದು ಇವೆಂಟ್ ಮ್ಯಾನೇಜ್‌ಮೆಂಟ್ ಕಂಪನಿಗಳ ವಾದ. 'ಭಾರತದಲ್ಲಿಯೇ ಇರುವ ರಮಣೀಯ ಸ್ಥಳಗಳಲ್ಲಿ, ಐತಿಹಾಸಿಕ ಮಹತ್ವವಿರುವ ಜಾಗಗಳಲ್ಲಿ ತಮ್ಮ ಮದುವೆಯ ಸಂಭ್ರಮವನ್ನು ಆಚರಿಸಿಕೊಳ್ಳಲು ಜನರು ಹೆಚ್ಚು ಒಲವು ತೋರಿಸುತ್ತಿದ್ದಾರೆ' ಎನ್ನುತ್ತಿವೆ ಕಂಪನಿಗಳು.

ಸಿನಿ ತಾರೆಯರ ಅದ್ದೂರಿ ಮದುವೆಗಳು ಡೆಸ್ಟಿನೇಷನ್ ವೆಡ್ಡಿಂಗ್ ಪರಿಕಲ್ಪನೆಯನ್ನು ವಿಸ್ತರಿಸಿತು. ಬಾಲಿವುಡ್ ತಾರೆಯರಾದ ದೀಪಿಕಾ ಪಡುಕೋಣೆ–ರಣವೀರ್ ಸಿಂಗ್ ಅವರ ಮದುವೆ, ಬಾಲಿವುಡ್ ನಟಿ ಅನುಷ್ಕಾ ಶರ್ಮಾ ಹಾಗೂ ಕ್ರಿಕೆಟಿಗ ವಿರಾಟ್ ಕೊಹ್ಲಿ ಅವರ ಮದುವೆಯು ವಿದೇಶದ ಡೆಸ್ಟಿನೇಷನ್ ವೆಡ್ಡಿಂಗ್‌ಗೆ ಪ್ರೇರಣೆ ನೀಡಿದವು. ಹೀಗಿದ್ದೂ ಭಾರತೀಯ ಸಿರಿವಂತರು ಈ ರೀತಿಯ ವಿದೇಶಿ ಮದುವೆಯ ಮೊರೆ ಹೋಗಿದ್ದು ಕಡಿಮೆ ಎನ್ನುತ್ತವೆ ಇವೆಂಟ್ ಮ್ಯಾನೇಜ್‌ಮೆಂಟ್ ಕಂಪನಿಗಳು.

ದೇಶದೊಳಗೇ ಡೆಸ್ಟಿನೇಷನ್ ವೆಡ್ಡಿಂಗ್ ಜನಪ್ರಿಯತೆ ಪಡೆಯುತ್ತಿದೆ. ಬಾಲಿವುಡ್ ನಟಿ ಪ್ರಿಯಾಂಕಾ ಚೋಪ್ರಾ ಹಾಗೂ ಅಮೆರಿಕದ ಗಾಯಕ ನಿಕ್ ಜೋನಸ್ ಅವರ ವಿವಾಹ, ಬಾಲಿವುಡ್ ನಟಿ ಕತ್ರಿಕಾ ಕೈಫ್ ಹಾಗೂ ನಟ ವಿಕಿ ಕೌಶಲ್, ನಟಿ ಕಿಯಾರಾ ಅಡ್ವಾಣಿ ಹಾಗೂ ನಟ ಸಿದ್ಧಾರ್ಥ್ ಮಲ್ಹೋತ್ರಾ ಅವರ ವಿವಾಹಗಳು ದೇಶೀಯ ಡೆಸ್ಟಿನೇಷನ್ ವೆಡ್ಡಿಂಗ್ ಟ್ರೆಂಡ್ ಅನ್ನು ಉತ್ತೇಜಿಸಿದವು ಎಂಬುದನ್ನು ಈ ಕ್ಷೇತ್ರದಲ್ಲಿ ದುಡಿಯುತ್ತಿರುವ ಉದ್ಯಮಿಗಳು ಹೇಳದೇ ಇರುವುದಿಲ್ಲ.

'ರಾಜಸ್ಥಾನ, ಗೋವಾ, ಮಹಾಬಲಿಪುರ, ಕೇರಳ, ಮುಂಬೈನ ಸುತ್ತಮುತ್ತಲ ಜಾಗಗಳು, ದೆಹಲಿ –ಇವು ದೇಶದ ಜನರ ನೆಚ್ಚಿನ ತಾಣಗಳು. ಇಲ್ಲಿಯೇ ಹೆಚ್ಚಿನ ಸಂಖ್ಯೆಯ ಮದುವೆಗಳು ನಡೆಯುತ್ತವೆ. ಭಾರತದ ಅತೀ ಶ್ರೀಮಂತದಲ್ಲಿ ಶೇ 10ರಷ್ಟು ಮಂದಿ ಮಾತ್ರವೇ ಡೆಸ್ಟಿನೇಷನ್ ವೆಡ್ಡಿಂಗ್ ಬಗ್ಗೆ ಒಲವು ಹೊಂದಿದ್ದಾರೆ. ಇವರಲ್ಲಿ ಶೇ 10–15ರಷ್ಟು ಮಂದಿ ಮಾತ್ರವೇ ಅಂತರರಾಷ್ಟ್ರೀಯ ಮಟ್ಟದ ಡೆಸ್ಟಿನೇಷನ್ ವೆಡ್ಡಿಂಗ್‌ಗೆ ಆಸಕ್ತಿ ತೋರುತ್ತಾರೆ' ಎನ್ನುವುದು 'ವೆಡ್ಡಿಂಗ್ ಸೂತ್ರ.ಕಾಮ್'ನ ಸಿಇಒ ಪಾರ್ಥಿಬ್ ತ್ಯಾಗರಾಜನ್ ಅವರ ಅಂಕಿತ.

'ವಿದೇಶಗಳಲ್ಲಿ ವರ್ಷಕ್ಕೆ ಸುಮಾರು 5 ಸಾವಿರ ಡೆಸ್ಟಿನೇಷನ್ ವೆಡ್ಡಿಂಗ್‌ಗಳು ನಡೆಯಬಹುದು ಎಂಬುದು ನನ್ನ ಅಂದಾಜು. ಇವುಗಳ ಖರ್ಚು ಸುಮಾರು ₹50,000 ಕೋಟಿಯಷ್ಟು. ಆದರೆ, ದೇಶದಲ್ಲಿಯೇ ನಡೆಯುವ ವಿವಾಹಗಳ ಖರ್ಚನ್ನು ಲೆಕ್ಕ ಹಾಕಿದರೆ, ವಿದೇಶಗಳಲ್ಲಿ ನಡೆಯುವ ವಿವಾಹದ ಖರ್ಚು ತೀರಾ ಕಡಿಮೆ' ಎನ್ನುವುದು ಕಾನ್‌ಫಿಡರೇಷನ್ ಆಫ್ ಆಲ್ ಇಂಡಿಯಾ ಟ್ರೇಡರ್ಸ್‌ನ (ಸಿಎಐಟಿ) ಪ್ರಧಾನ ಕಾರ್ಯದರ್ಶಿ ಪ್ರವೀಣ್ ಖಡೇವಾಲಾ ಅವರ ನೇರ ಮಾತು.

ಆಧಾರ: ಪಿಟಿಐ, ಸಿಎಐಟಿ, ಮನದ ಮಾತು ಕಾರ್ಯಕ್ರಮ

ಮೋದಿ ಹೇಳಿದ್ದು...

'ಈ ಋತುವಿನಲ್ಲಿ ಮದುವೆಗಳಿಂದಲೇ ₹5 ಲಕ್ಷ ಕೋಟಿಯಷ್ಟು ವಹಿವಾಟು ನಡೆಯುತ್ತದೆ ಎಂದು ಮಾರುಕಟ್ಟೆ ತಜ್ಞರು ಅಂದಾಜಿಸಿದ್ದಾರೆ. ಮದುವೆಗಳಲ್ಲಿ ದೇಶಿಯ ವಸ್ತುಗಳನ್ನೇ ಬಳಸಿದರೆ, ಅದು ದೇಶದ ಆರ್ಥಿಕತೆಗೆ ಉತ್ತೇಜನ ನೀಡುತ್ತದೆ. ಈ ಸಂದರ್ಭದಲ್ಲಿ ಇನ್ನೊಂದು ಮಾತು ಹೇಳಲು ಬಯಸುತ್ತೇನೆ. ದೇಶದ ಕೆಲವು ಅತ್ಯಂತ ದೊಡ್ಡ ಕುಟುಂಬಗಳು ವಿದೇಶಗಳಲ್ಲಿ ಮದುವೆ ಮಾಡುತ್ತಿವೆ. ನಿಜಕ್ಕೂ ವಿದೇಶಗಳಲ್ಲಿ ಮದುವೆ ಮಾಡಿಕೊಳ್ಳುವ ಅಗತ್ಯವಿದೆಯೇ?' ಎಂದು ಪ್ರಧಾನಿ ನರೇಂದ್ರ ಮೋದಿ ಅವರು ಮನದ ಮಾತು ಕಾರ್ಯಕ್ರಮದಲ್ಲಿ ಬೇಸರ ವ್ಯಕ್ತಪಡಿಸಿದ್ದರು.

'ನನ್ನ ಈ ಬೇಸರ ಆ ಕೆಲವೇ ಕೆಲವು ದೊಡ್ಡ ಕುಟುಂಬಗಳಿಗೂ ಗೊತ್ತಾಗಲಿ' ಎಂದು ಮೋದಿ ಅವರು ಹೇಳಿದ್ದರು.

ಡೆಸ್ಟಿನೇಷನ್ ವೆಡ್ಡಿಂಗ್ ಅಂದರೇನು?




ಮಧುಮಗಳಿಗೂ ಮಧುಮಗನಿಗೂ ಸಂಬಂಧಿಸದ, ಬೇರೆಯದೇ ಊರಿನಲ್ಲಿ ಅಥವಾ ಸ್ಥಳದಲ್ಲಿ ಮಾಡಿಕೊಳ್ಳುವ ಮದುವೆಯನ್ನು ಡೆಸ್ಟಿನೇಷನ್ ವೆಡ್ಡಿಂಗ್ ಎನ್ನಲಾಗುತ್ತದೆ. ಐತಿಹಾಸಿಕ ಮಹತ್ವ ಇರುವ, ರಮ್ಯವಾದ ತಾಣಗಳಲ್ಲಿ, ಕಡಲ ಕಿನಾರೆಯಲ್ಲಿ, ಐಷಾರಾಮಿ ಹೋಟೆಲ್‌ಗಳನ್ನು ಮದುವೆಯ ಡೆಸ್ಟಿನೇಷನ್‌ಗಳನ್ನಾಗಿ ಮಾಡಿಕೊಳ್ಳಲಾಗುತ್ತದೆ. ಇವು ದೇಶದ ಒಳಗಿನ ಸ್ಥಳಗಳೂ ಆಗಿರಬಹುದು, ವಿದೇಶದ ಸ್ಥಳಗಳೂ ಆಗಿರಬಹುದು.

ದೇಶದಲ್ಲಿ ನಡೆಯುವ ಮದುವೆಗಳದ್ದು ಬಹುದೊಡ್ಡ ಆರ್ಥಿಕತೆ

ನವೆಂಬರ್ 4ರಿಂದ ಡಿಸೆಂಬರ್ 15ರವರೆಗೆ ದೇಶದಲ್ಲಿ 38 ಲಕ್ಷಕ್ಕೂ ಹೆಚ್ಚು ಮದುವೆಗಳು ನಡೆಯುತ್ತವೆ ಎಂದು ಸಿಎಐಟಿ ಅಂದಾಜಿಸಿದೆ. 8 ಕೋಟಿಗೂ ಹೆಚ್ಚು ವರ್ತಕರ ಸದಸ್ಯತ್ವ ಹೊಂದಿರುವ 40 ಸಂಘಟನೆಗಳ ಒಕ್ಕೂಟವಾದ ಸಿಎಐಟಿ ಪ್ರತಿ ವರ್ಷ ಇಂತಹ ಅಂದಾಜು ವರದಿಯನ್ನು ಬಿಡುಗಡೆ ಮಾಡುತ್ತದೆ. ಇದೇ ಅಕ್ಟೋಬರ್ 17ರಂದು ಸಿಎಐಟಿ ಅಂತಹ ವರದಿ ಬಿಡುಗಡೆ ಮಾಡಿತ್ತು. ಈ ಮದುವೆ ಋತುವಿನಲ್ಲಿ ₹4.75 ಲಕ್ಷ ಕೋಟಿಯಷ್ಟು ವಹಿವಾಟು ನಡೆಯಬಹುದು ಎಂದು ವರದಿಯಲ್ಲಿ ಉಲ್ಲೇಖಿಸಲಾಗಿತ್ತು. ಪ್ರಧಾನಿ ನರೇಂದ್ರ ಮೋದಿ ಅವರು ತಮ್ಮ ಮನದ ಮಾತು ಕಾರ್ಯಕ್ರಮದಲ್ಲಿ ಉಲ್ಲೇಖಿಸಿದ್ದು ಇದನ್ನೇ.

2022ರಲ್ಲಿ ಈ ಋತುವಿನಲ್ಲಿ ದೇಶದಾದ್ಯಂತ 32 ಲಕ್ಷದಷ್ಟು ಮದುವೆಗಳು ನಡೆದಿದ್ದವು. ಆಗ ಒಟ್ಟು ₹3.75 ಲಕ್ಷ ಕೋಟಿಯಷ್ಟು ವಹಿವಾಟು ನಡೆದಿತ್ತು. ಈ ಭಾರಿ ಮದುವೆಗಳ ಸಂಖ್ಯೆ ಮತ್ತು ವಹಿವಾಟಿನ ಗಾತ್ರ ಭಾರಿ ಪ್ರಮಾಣದಲ್ಲಿ ಏರಿಕೆಯಾಗಲಿದೆ ಎಂದು ಸಿಎಐಟಿ ಅಂದಾಜಿಸಿದೆ. ಇಷ್ಟು ದೊಡ್ಡ ಮೊತ್ತದ ವಹಿವಾಟು ನಡೆಯುವುದರಿಂದ, ಆರ್ಥಿಕತೆಗೂ ಉತ್ತೇಜನ ದೊರೆಯುತ್ತದೆ. ಆದರೆ, ಈ ಮದುವೆಗಳಲ್ಲಿ ಜನರು ದೇಶೀಯ ಉತ್ಪನ್ನಗಳು ಮತ್ತು ಸರಕುಗಳನ್ನು ಬಳಸಬೇಕು ಎಂದು ಸಿಎಐಟಿ ಕರೆ ನೀಡಿತ್ತು.

ಈ ಮದುವೆ ಋತುವಿನ ಅಂದಾಜು ವಹಿವಾಟಿನಲ್ಲಿ ವಿವಿಧ ಕ್ಷೇತ್ರಗಳ ಪಾಲು



ಸಿನಿ ಬಿಟ್ಸ್



ದರ್ಶನ್ ಹಾಗೂ ಆರಾಧನಾ

ತರುಣ್ ಸುಧೀರ್ ನಿರ್ದೇಶನದ, ನಟ ದರ್ಶನ್ ಅಭಿನಯದ 'ಕಾಟೇರ' ಸಿನಿಮಾ ಡಿ.29ರಂದು ಬಿಡುಗಡೆಯಾಗಲಿದೆ ಎಂದು ಚಿತ್ರ ನಿರ್ಮಾಣ ಸಂಸ್ಥೆ ರಾಕ್‌ಲೈನ್ ಎಂಟರ್‌ಟೈನ್ಮೆಂಟ್ಸ್ ತಿಳಿಸಿದೆ.

2023ರಲ್ಲಿ ಬಿಡುಗಡೆಯಾಗುತ್ತಿರುವ ದರ್ಶನ್ ಅವರ ನಟನೆಯ ಎರಡನೇ ಸಿನಿಮಾ ಇದಾಗಿದೆ. ಈ ವರ್ಷದ ಆರಂಭದಲ್ಲಿ 'ಕ್ರಾಂತಿ' ಬಿಡುಗಡೆಯಾಗಿತ್ತು. ಬಹುನಿರೀಕ್ಷಿತ ಎರಡು ಪ್ಯಾನ್ ಇಂಡಿಯಾ ಸಿನಿಮಾಗಳ ಜೊತೆಗೇ 'ಕಾಟೇರ' ಬಿಡುಗಡೆಯಾಗುತ್ತಿದೆ. ಡಿ.21ರಂದು ಶಾರುಕ್ ಖಾನ್ ನಟನೆಯ, ರಾಜ್‌ಕುಮಾರ್ ಹಿರಾನಿ ನಿರ್ದೇಶನದ 'ಡಂಕಿ' ಸಿನಿಮಾ ಹಾಗೂ ಡಿ.22ರಂದು ಪ್ರಭಾಸ್ ನಟನೆಯ, ಪ್ರಶಾಂತ್ ನೀಲ್ ನಿರ್ದೇಶನದ 'ಸಲಾರ್' ರಿಲೀಸ್ ಆಗಲಿವೆ. ಇದಾದ ಒಂದೇ ವಾರದಲ್ಲಿ 'ಕಾಟೇರ' ತೆರೆಗೆ ಬರುತ್ತಿದೆ.

'ಗುರು ಶಿಷ್ಯರು' ಚಿತ್ರದ ನಂತರ ನಿರ್ದೇಶಕರಾದ ತರುಣ್ ಹಾಗೂ ಜಡೇಶ್ ಸೇರಿ 'ಕಾಟೇರ' ಕಥೆ ಬರೆದಿದ್ದರು. ದರ್ಶನ್ ಅವರಿಗಾಗಿಯೇ ಈ ಸಿನಿಮಾ ಮಾಡಬೇಕು ಎಂದು ಕಥೆ ಹೆಣೆದಿದ್ದರು. ಮಾಲಾಶ್ರೀ ಪುತ್ರಿ ಆರಾಧನಾ ಚಿತ್ರದ ನಾಯಕಿ. ಇದು ತರುಣ್ ಅವರ ನಿರ್ದೇಶನದ ಮೂರನೇ ಚಿತ್ರವಾಗಿದ್ದು, 1970ರ ಕಾಲಘಟ್ಟದಲ್ಲಿ ನಡೆಯುವ ಕಥೆ ಹೊಂದಿದೆ. ನಿರ್ಮಾಪಕ ರಾಕ್‌ಲೈನ್ ವೆಂಕಟೇಶ್ ಅವರು ಈ ಚಿತ್ರವನ್ನು ನಿರ್ಮಾಣ ಮಾಡಿದ್ದು, ನಟರಾದ ಅವಿನಾಶ್, ಜಗಪತಿ ಬಾಬು ಚಿತ್ರದ ತಾರಾಬಳಗದಲ್ಲಿದ್ದಾರೆ.

ಪ್ರೇಮಕಥೆ ಹೊತ್ತು ಬಂದ ಪೃಥ್ವಿ

'ದಿಯಾ' ಸಿನಿಮಾ ಮೂಲಕ ಚಂದನವನದಲ್ಲಿ ಛಾಪು ಮೂಡಿಸಿದ ನಟ ಪೃಥ್ವಿ ಅಂಬಾರ್ ಅಭಿನಯದ ಹೊಸ ಸಿನಿಮಾವೊಂದು 2024ರ ಜನವರಿಗೆ ತೆರೆಗೆ ಬರಲಿದೆ. ವೈಭವ್ ಮಹಾದೇವ್ ಸಾರಥ್ಯದ 'ಜೂನಿ' ಶೀರ್ಷಿಕೆಯ ಈ ಸಿನಿಮಾ ಮೂಲಕ ಮತ್ತೊಂದು ಪ್ರೇಮಕಥೆ ಹೊತ್ತು ಬಂದಿದ್ದಾರೆ.

'ಜನ್ನಿ' ಎಂಬ ಕಿರುಚಿತ್ರ ನಿರ್ದೇಶಿಸಿದ್ದ ವೈಭವ್ ಮಹಾದೇವ್ 'ಜೂನಿ' ಸಿನಿಮಾ ಮೂಲಕ ನಿರ್ದೇಶಕರಾಗಿ ಮೊದಲ ಹೆಜ್ಜೆ ಇಡುತ್ತಿದ್ದಾರೆ. ಈ ಚಿತ್ರಕ್ಕೆ ಕಥೆ, ಚಿತ್ರಕಥೆಯೂ ಅವರದ್ದೇ. ಚಿತ್ರದಲ್ಲಿ ಪೃಥ್ವಿ ಅಂಬಾರ್ ಜೊತೆಗೆ ನಾಯಕಿ ರಿಷಿಕಾ ನಾಯಕ್ ಬಣ್ಣಹಚ್ಚಿದ್ದಾರೆ. 'ಜೂನಿ' ರೊಮ್ಯಾಂಟಿಕ್ ಕಥಾಹಂದರದ ಸಿನಿಮಾ. ತ್ರಿಶೂಲ ಕ್ರಿಯೇಷನ್ಸ್‌ನಡಿ ಮೋಹನ್ ಕುಮಾರ್ ಎಸ್. ಈ ಚಿತ್ರಕ್ಕೆ ಬಂಡವಾಳ ಹೂಡಿದ್ದಾರೆ. ಬೆಂಗಳೂರು ಸುತ್ತಮುತ್ತ ಚಿತ್ರದ ಶೂಟಿಂಗ್ ನಡೆದಿದೆ. ನಕುಲ್ ಅಭ್ಯಂಕರ್ ಸಂಗೀತ, ಶಶಾಂಕ್ ನಾರಾಯಣ ಸಂಕಲನ, ಅಜಿನ್ ಬಿ., ಜಿತಿನ್ ದಾಸ್ ಛಾಯಾಚಿತ್ರಗ್ರಹಣ, ನವೀನ್ ಕಲಾ ನಿರ್ದೇಶನ ಚಿತ್ರಕ್ಕಿದೆ. ಸದ್ಯ ಚಿತ್ರದ ಫಸ್ಟ್‌ಲುಕ್ ಬಿಡುಗಡೆ ಮಾಡಿರುವ ಚಿತ್ರತಂಡ ಹಂತಹಂತವಾಗಿ ಟೀಸರ್, ಟ್ರೇಲರ್ ಬಿಡುಗಡೆಗೆ ನಿರ್ಧರಿಸಿದೆ.



ಪೃಥ್ವಿ ಅಂಬಾರ್ ಹಾಗೂ ರಿಷಿಕಾ ನಾಯಕ್

ಮತ್ತಷ್ಟು ಸಿನಿಮಾ ಸುದ್ದಿಗಳಿಗೆ ನೋಡಿ https://www.prajavani.net

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256




ಸಿಲ್ಕ್ಯಾರಾ ಸುರಂಗದಲ್ಲಿ ಸಿಲುಕಿದ್ದವರನ್ನು ಸುರಕ್ಷಿತವಾಗಿ ಹೊರತಂದ ರಕ್ಷಣಾ ಕಾರ್ಯಕರ್ತರು ಭಾರತದ ಧ್ವಜ ಹಿಡಿದು ಸಂಭ್ರಮಿಸಿದ ಚಿತ್ರವೊಂದು ದೇಶದ ಬಹುತೇಕ ಪತ್ರಿಕೆಗಳಲ್ಲಿ ಮತ್ತು ಸುದ್ದಿ ಜಾಲತಾಣಗಳಲ್ಲಿ ಪ್ರಕಟವಾಗಿದೆ. ಆದರೆ ಇದು ಕೃತಕ ಬುದ್ಧಿಮತ್ತೆ (ಎಐ) ತಂತ್ರಜ್ಞಾನ ಬಳಸಿಕೊಂಡು ಸೃಷ್ಟಿಸಿದ ಚಿತ್ರವಾಗಿದೆ.

ಸಿಲ್ಕ್ಯಾರಾ ಸುರಂಗ ರಕ್ಷಣಾ ಕಾರ್ಯಾಚರಣೆ ಯಶಸ್ವಿಯಾದ ನಂತರ ಪಿಟಿಐ ಈ ಚಿತ್ರವನ್ನು ಪ್ರಕಟಿಸಿತ್ತು. ಪಿಟಿಐ ತನ್ನ ವಿವರಣೆಯಲ್ಲಿ '@Ra_THORe' ಮೂಲಕ ಬಂದ ಚಿತ್ರ ಎಂದು ಹೇಳಿತ್ತು. ಅದನ್ನು ಎಲ್ಲಾ ಪತ್ರಿಕೆಗಳು ಮತ್ತು ಸುದ್ದಿ ಜಾಲತಾಣಗಳು ಬಳಸಿಕೊಂಡಿದ್ದವು. ಆದರೆ ನವೆಂಬರ್ 29ರಂದು ಈ ಬಗ್ಗೆ ಫ್ಯಾಕ್ಟ್‌ಚೆಕ್ ಪ್ರಕಟಿಸಿದ್ದ ಬೂಮ್‌ಲೈವ್, 'ಇದು ಎಐ ಮೂಲಕ ಸೃಷ್ಟಿಸಿದ ಚಿತ್ರ. ಇದನ್ನು ನಿಜ ಎಂಬಂತೆಯೇ ಪತ್ರಿಕೆಗಳಲ್ಲಿ ಬಳಸಿಕೊಳ್ಳಲಾಗಿದೆ. ಬಿಜೆಪಿ ಸಂಸದ ರಾಜ್ಯವರ್ಧನ್ ಸಿಂಗ್ ರಾಥೋಡ್ ಅವರು ಈ ಚಿತ್ರವನ್ನು ಟ್ವೀಟ್ ಮಾಡಿದ್ದರು. ಅದನ್ನೇ ಪಿಟಿಐ ಬಳಸಿಕೊಂಡಿದೆ' ಎಂದು ವಿವರಣೆ ನೀಡಿತ್ತು. ರಾಜ್ಯವರ್ಧನ್ ಸಿಂಗ್ ರಾಥೋಡ್ ಅವರ ಎಕ್ಸ್‌ಪೋಸ್ಟ್ ಹ್ಯಾಂಡಲ್ ಅನ್ನು ಪರಿಶೀಲಿಸಿದಾಗ, ಅವರು ನವೆಂಬರ್ 28ರ ರಾತ್ರಿ 9.51ಕ್ಕೆ ಈ ಚಿತ್ರವನ್ನು ಪೋಸ್ಟ್ ಮಾಡಿರುವುದು ಗೊತ್ತಾಯಿತು. ಶುಕ್ರವಾರ ಈ ಬಗ್ಗೆ ಸೂಚನೆ ನೀಡಿರುವ ಪಿಟಿಐ, 'ಇದು ಸುಳ್ಳು ಚಿತ್ರ. ಇದನ್ನು ಅಳಿಸಿಹಾಕಿ' ಎಂದು ಕೋರಿದೆ.

ನುಡಿ ಬೆಳಗು





ಪ್ರೊ.ಎಂ. ಕೃಷ್ಣೇಗೌಡ

ಹುಟ್ಟಾ ಸತ್ಯವಂತನೇನಲ್ಲ ಹರಿಶ್ಚಂದ್ರ

ಚಂದ್ರಮತಿಯನ್ನು ಮದುವೆಯಾದ ಮೇಲೆ ಬಹುಕಾಲ ಹರಿಶ್ಚಂದ್ರನಿಗೆ ಮಕ್ಕಳಿರಲಿಲ್ಲ. ನಾರದರ ಸಲಹೆಯಂತೆ ವರುಣನನ್ನು ಪ್ರಾರ್ಥಿಸಿದ. ವರುಣ ಸಂತಾನವನ್ನೇನೋ ಕೊಟ್ಟ. ಆದರೆ ಒಂದು ಕರಾರು- ಹುಟ್ಟಿದ ಮಗುವನ್ನು ತನಗೇ ಕೊಡಬೇಕು. ಸದ್ಯಕ್ಕೆ ಸಂತಾನ ಬೇಕಿತ್ತು ಹರಿಶ್ಚಂದ್ರನಿಗೆ. ಕರಾರಿಗೆ ಒಪ್ಪಿಕೊಂಡ.

ಕೆಲದಿನಗಳಲ್ಲೇ ಲೋಹಿತಾಶ್ವ ಹುಟ್ಟಿದ. ಮಗನ ಬಾಲಲೀಲೆಗಳಲ್ಲಿ ಮೈಮರೆತಿದ್ದ ರಾಜ. ಅದೊಂದು ದಿನ ವರುಣ ಬಂದು ಅರಮನೆ ಬಾಗಿಲು ತಟ್ಟಿದ. ಕರಾರಿನಂತೆ ಮಗನನ್ನು ಕೊಡು ಅಂದ. ಹರಿಶ್ಚಂದ್ರ, ಮಗುವಿಗೆ ಹಲ್ಲು ಮೊಳೆತ ಮೇಲೆ ಕೊಡುವೆ ಅಂದ. ಮತ್ತೆ ಬಂದ ವರುಣ. ನಡೆಗಲಿತ ಮೇಲೆ ಕೊಡುವೆ ಅಂದ ರಾಜ. ವರುಣ ಮತ್ತೊಮ್ಮೆ ಬರುವ ಹೊತ್ತಿಗೆ ಲೋಹಿತಾಶ್ವ ದೊಡ್ಡ ಹುಡುಗನಾಗಿದ್ದ. ತನ್ನನ್ನು ವರುಣ ಕೇಳುತ್ತಿದ್ದಾನೆ ಎಂಬುದು ಅರ್ಥವಾಗಿ ಎಲ್ಲಿಗೋ ಹೋಗಿ ಅವಿತುಕೊಂಡು ಬಿಟ್ಟ. ಹರಿಶ್ಚಂದ್ರನಿಗೆ ವರುಣ ಜಲೋದರ ರೋಗ ಕೊಟ್ಟ.

ಆಗ ಹರಿಶ್ಚಂದ್ರ ಬೇರೊಂದು ಉಪಾಯ ಮಾಡಿದ. ಸಾವಿರಾರು ವರಹ ಮತ್ತು ಕೆಲವು ಹಸುಗಳನ್ನು ಕೊಟ್ಟು ಶುನಶ್ಯೇಪ ಎಂಬ ಬಡಬ್ರಾಹ್ಮಣನ ಮಗನನ್ನು ಖರೀದಿ ಮಾಡಿ ಅವನನ್ನು ವರುಣನಿಗೆ ಬಲಿಕೊಡಲು ಏರ್ಪಾಡು ಮಾಡಿದ. ಹುಡುಗನನ್ನು ಬಲಿಕೊಡಲು ಕರೆದೊಯ್ಯುತ್ತಿದ್ದಾಗ ದಾರಿಯಲ್ಲಿ ವಿಶ್ವಾಮಿತ್ರ ಎದುರಾದ. ಹುಡುಗ ತನ್ನ ಕತೆಯನ್ನೆಲ್ಲಾ ವಿಶ್ವಾಮಿತ್ರ ಋಷಿಯೊಂದಿಗೆ ಹೇಳಿಕೊಂಡ...

ಮುಂದಿನ ಕತೆ ಹಾಗಿರಲಿ. ಹರಿಶ್ಚಂದ್ರನ ಕತೆ ಕೇಳಿ ಬಲ್ಲ ನಾವು ಒಪ್ಪುವ ಮಾತಾ ಇದು... ಒಪ್ಪಬೇಕು ನೀವು. ಯಾಕೆಂದರೆ ಈ ಕತೆ ಹರಿಶ್ಚಂದ್ರನ ಕತೆಯೊಳಗೇ ಇದೆ.

ಇಂಥ ಪೂರ್ವ ಚರಿತ್ರೆಯುಳ್ಳ ಹರಿಶ್ಚಂದ್ರ ಸತ್ಯಕ್ಕಾಗಿ ಕಾಡಿಗೆ ಹೋದ. ಪಡಬಾರದ ಕಷ್ಟ ಪಟ್ಟ. ತನ್ನ ಹೆಂಡತಿ ಮಗನನ್ನು ಮಾರಿದ. ಕಡೆಗೆ ತನ್ನನ್ನೇ ಮಾರಿಕೊಂಡು ಸ್ಮಶಾನ ಕಾದ.

ಹರಿಶ್ಚಂದ್ರನ ಕತೆ ಹೇಳುವ ಮುಖ್ಯ ವಿಷಯವೇ ಅದು. ಮಹಾತ್ಮರೆಲ್ಲರೂ ಹುಟ್ಟಿನಿಂದಲೇ ಮಹಾತ್ಮರಾಗಿರಬೇಕಿಲ್ಲ. ಯಾವ ಸಾಮಾನ್ಯ ಮನುಷ್ಯನೂ ಮಹಾತ್ಮನಾಗಬಹುದು. ಆ ಚೇತನಕ್ಕೆ ಅಂಥದೊಂದು ಕಿಡಿ ತಾಕಬೇಕು, ಅದೊಂದು ರಸ ಸೋಕಬೇಕು. ಸೃಷ್ಟಿಯ ಮಹಾವ್ಯೂಹ ರಚನೆಯಲ್ಲಿ ಪಾಪಿಗೂ ಉದ್ಧಾರ ಸಾಧ್ಯವಿದೆ- ಎಂಬುದು ಕುವೆಂಪು ಅವರ ಶ್ರೀರಾಮಾಯಣ ದರ್ಶನ. ❖

ಗುಂಡಣ್ಣ



ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ — ಶುಕ್ರವಾರ ಡಿಸೆಂಬರ್ 1, 2023

ಶ್ರೀ ಶೋಭಕೃತ್ ನಾಮ ಸಂವತ್ಸರ ದಕ್ಷಿಣಾಯನ ಶರತ್ ಋತು ತಿಥಿ: ಕಾರ್ತಿಕ ಕೃಷ್ಣ ಚತುರ್ಥಿ ಗಂ. 15-32 ನಕ್ಷತ್ರ: ಪುನರ್ವಸು ಗಂ. 16-41 ಯೋಗ: ಶುಕ್ಲ(ಶುಕ್ರ) ಗಂ 20-03 ಕರಣ: ಬಾಲವ ಗಂ 15-32, ವೃಶ್ಚಿಕ ಮಾಸದ 15 ನೇ ದಿನ, ಮಳೆನಕ್ಷತ್ರ: ಅನುರಾಧ 4.
ರಾಹುಕಾಲ : ಬೆಳಿಗ್ಗೆ 10-30 - 12-00
ಸೂರ್ಯೋದಯ : 06-41 ಸೂರ್ಯಾಸ್ತ : 05-58
ಮುಸ್ಲಿಂ ದಿನಾಂಕ : 16 ಜುಮಾದುಲ್ಲಾವಲ್
ಅದೃಷ್ಟ ಸಂಖ್ಯೆ : 6, 11

ಮೇಷ: ನಿಮ್ಮ ಈ ವರ್ಷದ ದಾಸ್ತಾನನ್ನು ಅಚ್ಚುಕಟ್ಟುಗೊಳಿಸಲು ರಿಯಾಯಿತಿ ದರದ ಮಾರಾಟ ಮಾಡುವ ಯೋಚನೆ ಮಾಡುವಿರಿ. ಮಕ್ಕಳ ಸಂತೋಷದ ಸಂದರ್ಭದಲ್ಲಿ ನಿಮ್ಮ ಉಪಸ್ಥಿತಿ ಖುಷಿ ತರುವುದು.

ವೃಷಭ: ಈ ದಿನದ ಒಳಗೆ ಮಾಡಬೇಕಾದ ಆದರೆ ಮಾಡದೇ ಇರುವ ಕೆಲಸಗಳನ್ನು ಮುಗಿಸುವತ್ತ ಗಮನಹರಿಸಿ. ರಕ್ತ ಸಂಬಂಧಿ ಕಾಯಿಲೆಯಿಂದ ಬಳಲುತ್ತಿರುವವರು ಕ್ರಮೇಣ ಚೇತರಿಕೆ ಹೊಂದುವಿರಿ.

ಮಿಥುನ: ಮುಗ್ಧ ಜನರಿಗೆ ಸಹಾಯ ಮಾಡಿದ ಸಂತೋಷ ಇಂದು ನಿಮ್ಮದಾಗಲಿದೆ. ಪುಸ್ತಕ ವ್ಯಾಪಾರಿಗಳಿಗೆ ಅಥವಾ ಪ್ರಕಾಶಕರಿಗೆ ನಿರೀಕ್ಷಿತ ಲಾಭ ದೊರೆಯುವುದು. ತಪ್ಪು ಸರಿಪಡಿಸಿಕೊಳ್ಳಲು ಆತ್ಮಾವಲೋಕನ ಮಾಡುವಿರಿ.

ಕರ್ಕಾಟಕ: ವಾದ ಪ್ರತಿವಾದಗಳಿಂದ ನಿಕಟ ಸ್ನೇಹ ಕಳೆದುಕೊಳ್ಳುವಂತಾ-ಗಬಹುದು, ಎಚ್ಚರವಿರಲಿ. ನಿಮ್ಮನ್ನು ಅಲ್ಲಗಳೆಯುವವರ ಜೊತೆ ಕಾರ್ಯ ನಿರ್ವಹಿಸುವುದರಿಂದ ಆದಷ್ಟು ತಪ್ಪಿಸಿಕೊಳ್ಳುವ ಪ್ರಯತ್ನ ನಡೆಸುವಿರಿ.

ಸಿಂಹ: ಧಾರ್ಮಿಕ ಮುಖಂಡರ ಸಾಮಾಜಿಕ ಕಳಕಳಿಯ ಮಾತುಗಳು ನಿಮ್ಮನ್ನು ಆಕರ್ಷಿಸುವುದು. ಅದರಿಂದಾಗಿ ಇಂದಿನಿಂದ ಸಾಮಾಜಿಕ ಸೇವೆ ಮಾಡುವ ನಿರ್ಧಾರ ಕೈಗೊಳ್ಳುವಿರಿ. ನೀರಿನಿಂದ ಸಣ್ಣ ಅಪಾಯದ ಸಾಧ್ಯತೆ ಇದೆ.

ಕನ್ಯಾ: ಹಿರಿಯರ ಕೋರಿಕೆಯಂತೆ ಮನೆಯಲ್ಲಿ ದೇವತಾ ಕಾರ್ಯಗಳನ್ನು ನಡೆಸಲು ಮುಂದಾಗುವಿರಿ. ರಿಯಲ್ ಎಸ್ಟೇಟುದಾರರಿಗೆ ವ್ಯವಹಾರಗಳು ವೃದ್ಧಿಯಾಗಲಿವೆ. ಸಾಕು ಪ್ರಾಣಿಗಳಿಂದ ಸಣ್ಣ-ಪುಟ್ಟ ತೊಂದರೆ ಆಗಲಿದೆ.

ತುಲಾ: ಸರಿಯಾದ ಪರಿಶೀಲನೆ ಇಲ್ಲದೆ ಯಾವ ಕೆಲಸಗಳಲ್ಲೂ ಹೂಡಿಕೆ ಮಾಡುವುದು ಸಮಂಜಸವಲ್ಲ. ಇದನ್ನು ಪಾಲಿಸಿದರೆ ಯಶಸ್ಸು ನಿಮ್ಮದೇ ಆಗಿರುತ್ತದೆ. ವಿದೇಶ ಪ್ರಯಾಣದ ಅವಕಾಶ ದೊರೆಯುವುದು.

ವೃಶ್ಚಿಕ: ಯಾವುದೇ ಅಡೆತಡೆಗಳು ನಿಮ್ಮ ಮನಸ್ಸನ್ನು ಚಂಚಲಗೊಳಿಸದಂತೆ ಜಾಗೃತೆ ವಹಿಸಿ. ಮಕ್ಕಳ ವಿದ್ಯಾಭ್ಯಾಸದಲ್ಲಿ ಪ್ರಗತಿ ಕಂಡುಬರಲಿದೆ. ನಿಮ್ಮ ಕನಸುಗಳು ನನಸಾಗುವ ಎಲ್ಲ ಲಕ್ಷಣಗಳೂ ಇವೆ.

ಧನು: ನಾಟಕ ಹಾಗೂ ಸಿನಿಮಾ ರಂಗದಲ್ಲಿ ಕೆಲಸ ನಿರ್ವಹಿಸುವವರಿಗೆ ಇಂದು ಯಶಸ್ಸು ಸಿಗಲಿದೆ. ಹೆಚ್ಚಿನ ಪ್ರೋತ್ಸಾಹಗಳು ದೊರೆತು ಸಮಾಜದಲ್ಲಿನ ಉತ್ತಮ ಸ್ಥಾನಮಾನಗಳಿಂದ ಉನ್ನತ ಸ್ಥಿತಿಗೆ ತಲುಪುವಂತಾಗಲಿದೆ.

ಮಕರ: ತಪ್ಪಿ ಹೋದ ಸ್ವಂತ ಆಸ್ತಿ ಪುನಃ ನಿಮ್ಮ ಕೈ ಸೇರಲು ನಿಮ್ಮ ತಂತ್ರಗಾರಿಕೆ ಮುಖ್ಯವಾಗುತ್ತದೆ. ವ್ಯವಹಾರದ ಒತ್ತಡವಿದ್ದರೂ ರೀತಿ-ನೀತಿ ಅನುಸರಿಸಿದರೆ ಸಫಲರಾಗುವಿರಿ. ನಿಮ್ಮಲ್ಲಿರುವ ಪ್ರತಿಭೆ ಹೊರತನ್ನಿರಿ.

ಕುಂಭ: ತಾಂತ್ರಿಕ ವಿದ್ಯಾರ್ಥಿಗಳು ಉದ್ಯೋಗಕ್ಕಾಗಿ ಹೆಚ್ಚಿನ ಪರಿಶ್ರಮ ಮತ್ತು ದೇವರ ಕೃಪಾ ಕಟಾಕ್ಷ ಪಡೆಯಬೇಕಾಗುವುದು. ನಿಮ್ಮ ಮನಸ್ಸಿನ ಭಾವನೆಗಳಿಗೆ ಕಿವಿಗೊಡುವುದು ಇಂದಿನ ಪಾಲಿಗೆ ಬುದ್ಧಿವಂತಿಕೆಯ ನಡೆಯಾಗಲಿದೆ.

ಮೀನ: ವೃತ್ತಿರಂಗದಲ್ಲಿ ನಕರಾತ್ಮಕ ಬೆಳವಣಿಗೆ ಮನಸ್ಸಿಗೆ ಕಳವಳ ಉಂಟುಮಾಡಲಿದೆ. ಕಂಪನಿ ಕೆಲಸಕ್ಕಾಗಿ ತುರ್ತು ಪ್ರಯಾಣ ಮಾಡಬೇಕಾದ ಅಗತ್ಯವಿರಲಿದೆ. ಉಳಿದ ಕೆಲಸ ಇಂದು ಪೂರ್ಣಗೊಳಿಸುವ ಸಂಕಲ್ಪವಿರಲಿ.

ಪದಬಂಧ 5516 – ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1. ಅವನ ಕೆಟ್ಟ ಗುಣ (4)
3. ಇಹಲೋಕಕ್ಕೆ ಸಂಬಂಧಿಸಿದ್ದು (4)
5. ಒಂದು ಬಗೆಯ ಚರ್ಮ ವಾದ್ಯ (3)
6. ಎಳ್ಳು ನೀರು ಬಿಡುವಿಕೆ (4)
7. ನಿಷೇಧಿಸಿರುವ ಸ್ಥಳಕ್ಕೆ ಪ್ರವೇಶ ಮಾಡುವುದು (7)
10. ಪಣದಲ್ಲಿನ ಅಳತೆ (4)
11. ಒಳ್ಳೆಯ ಸ್ವಭಾವ (2)
14. ತಿದ್ದಿ ತಿಳಿಹೇಳಿದರೂ ಈತ ಬುದ್ಧಿಗೇಡಿ! (4)
15. ಇದು ನಿಶ್ಚಿತವಲ್ಲದುದು (4)

ಮೇಲಿಂದ ಕೆಳಕ್ಕೆ
1. ಹಿರಿಯ ಸಹೋದರಿ (2)
2. ಗುಲಾಬಿ ಹಿಡಿದಿರುವ ದಾಸ (3)
4. ಪ್ರಾಣಿಗಳನ್ನು ಕಡಿಯುವವನು (3)
5. ಆಶ್ಚರ್ಯಕರವಾದ ಸಂಗತಿಯು ತಿರುವು ಮುರುವಾಗಿದೆ (3)
6. ಏಳಿಗೆಯು ಉಲ್ಟಾ ಕಾಣುತ್ತಿದೆ (3)
8. ಹಂತಹಂತವಾಗಿ ಎಂದು ಈ ರೀತಿ ಹೇಳಿ (3)
9. ಬಾಣ ಹಿಡಿದು ಬಂದಿರುವ ಶೈವ ಭಕ್ತ (3)
10. ಪತಿ ಹತ್ತಿರವಿರುವ ಕಾಲಾಳು (3)
12. ಮಾನಿನಿಗೆ ಬಂದಿರುವ ಸಂಶಯ (3)
13. ಮೂರು ಮಾತ್ರೆಗಳ ಕಾಲವನ್ನು ಹೊಂದಿರುವ ಅಕ್ಷರ (2)

1		2		■	3			4
	■		■	■	■	■	■	
■	5			■	6			
■		■	■	■		■	■	■
■	7		8				9	■
■	■	■		■	■	■		■
10				■	11	12		■
	■	■	■	■	■		■	13
14				■	15			

5515 ಪದಬಂಧದ ಉತ್ತರ

ಎಡದಿಂದ ಬಲಕ್ಕೆ
1.ಅನುಮತಿ 3.ನಾಮಧೇಯ
5.ಪ್ರಸಾದ 7.ಸಕ 9.ನಾಳ
10.ಶಕಟ 11.ಬರ
12.ಣಪ 14.ಮಹಡಿ
16.ವಧಕಾರ 17.ಕನ್ನಡಕ

ಮೇಲಿಂದ ಕೆಳಕ್ಕೆ
1.ಅರಸ 2.ತಿಪ್ರ
3.ನಾದ 4.ಯಮಳ
6.ಸಾಮೂಹಿಕವಿವಾಹ
8.ಕನಸುಗಾರ 9.ನಾಮಕರಣ
11.ಬಡವ 13.ಪದಕ
14.ಮರ 15.ಡಿಕ

ಸುಡೊಕು 5902

				5				1
3		5	2		1	7		
	1	6		9			3	5
5		7	8			1		
	6						8	
9		8			4	5		2
1		2		8			6	
			5		6	2		3
6		3		4			5	

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು,

5901 ಸುಡೊಕು

6	3	4	2	9	7	1	5	8
9	1	2	5	3	8	4	6	7
8	5	7	4	6	1	3	2	9
2	9	3	7	8	4	6	1	5
1	4	8	9	5	6	7	3	2
5	7	6	1	2	3	8	9	4
3	6	9	8	4	5	2	7	1
7	8	5	6	1	2	9	4	3
4	2	1	3	7	9	5	8	6

ಜ. 10 ರಂದು ಇಂಡಿಯಾ 'ಎಐ ಶೃಂಗಸಭೆ': ಸಚಿವ ರಾಜೀವ್ ಚಂದ್ರಶೇಖರ್

'ಸುರಕ್ಷಿತ ಎ.ಐ: ದೇಶದತ್ತ ಜಗದ ಚಿತ್ತ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕೃತಕ ಬುದ್ಧಿಮತ್ತೆ ಸರ್ವತೋಮುಖ ಬೆಳವಣಿಗೆಗೆ ಸಹಕಾರಿಯಾಗಿದ್ದು, ಸುರಕ್ಷಿತ ಹಾಗೂ ನಂಬಲರ್ಹ ತಂತ್ರಾಂಶಕ್ಕಾಗಿ ಇಡೀ ಜಗತ್ತು ಭಾರತದತ್ತ ತನ್ನ ನಿರೀಕ್ಷೆಯ ನೋಟ ನೆಟ್ಟಿದೆ. ಇದು ಪರಿಣತ ತಂತ್ರಜ್ಞರ ಬೇಡಿಕೆಯನ್ನು ಹೆಚ್ಚಿಸಿದೆ' ಎಂದು ಕೇಂದ್ರ ಮಾಹಿತಿ ತಂತ್ರಜ್ಞಾನ ಹಾಗೂ ಕೌಶಲಾಭಿವೃದ್ಧಿ ಇಲಾಖೆಯ ರಾಜ್ಯ ಸಚಿವ ರಾಜೀವ್ ಚಂದ್ರಶೇಖರ್ ಹೇಳಿದರು.

ಬೆಂಗಳೂರು ತಂತ್ರಜ್ಞಾನ ಶೃಂಗದ 2ನೇ ದಿನವಾದ ಗುರುವಾರದಂದು ನಡೆದ ಫೈರ್‌ಸೈಡ್ ಚಾಟ್‌ನಲ್ಲಿ ಎಂಐಡಿ ಇಂಡಿಯಾ ಕಂಪನಿಯ ರಾಷ್ಟ್ರೀಯ ಮುಖ್ಯಸ್ಥೆ ಜಯಾ ಜಗದೀಶ್ ಅವರೊಂದಿಗೆ ನಡೆಸಿದ ಸಂವಾದದಲ್ಲಿ ಈ ವಿಷಯ ಹಂಚಿಕೊಂಡರು.

'ಪ್ರಧಾನಮಂತ್ರಿ ಅವರ ಯೋಜನೆಯಂತೆ ಮುಂದಿನ ಕಲವೇ ವರ್ಷಗಳಲ್ಲಿ ಸ್ನಾತಕೋತ್ತರ, ಪಿಎಚ್‌ಡಿ ಹಾಗೂ ಹೆಚ್ಚಿನ ಪದವಿ ಪಡೆದ 2 ಲಕ್ಷ ಪರಿಣತರನ್ನು ಸಜ್ಜುಗೊಳಿಸುವ ಅಗತ್ಯವಿದೆ. ಇದರೊಂದಿಗೆ ಸೆಮಿಕಂಡಕ್ಟರ್ ಕ್ಷೇತ್ರದಲ್ಲಿ ದೊಡ್ಡ ಹೆಜ್ಜೆಯನ್ನೇ ಇಟ್ಟಿರುವ ಭಾರತ, ಚಿಪ್ ತಯಾರಿಕೆಯಲ್ಲೂ ಪ್ರಮುಖ ಪಾತ್ರ ವಹಿಸಲಿದೆ. ಹೀಗಾಗಿ ಎಲೆಕ್ಟ್ರಾನಿಕ್ಸ್ ಹಾಗೂ ಸೆಮಿಕಂಡಕ್ಟರ್ ಕ್ಷೇತ್ರದಲ್ಲಿ ವಿಫುಲ ಅವಕಾಶಗಳು ಸೃಷ್ಟಿಯಾಗಲಿವೆ' ಎಂದರು.

'ಬೆಳೆಯುತ್ತಿರುವ ಈ ಕ್ಷೇತ್ರವನ್ನು ಗುರಿಯಾಗಿಟ್ಟುಕೊಂಡು ಜ. 10 ರಂದು ಇಂಡಿಯಾ 'ಎಐ ಸಮ್ಮಿಟ್' ಅನ್ನು ಆಯೋಜಿಸಲಾಗುತ್ತಿದೆ. ಐಟಿ ಹಾಗೂ ಐಟಿಇಎಸ್ ಕ್ಷೇತ್ರದಲ್ಲಿ ಮಾತ್ರ ಸಾಧನೆ ಮೆರೆದಿದ್ದ ಭಾರತ, ಭವಿಷ್ಯದಲ್ಲಿ ಎಐ, ಸೆಮಿಕಂಡಕ್ಟರ್, ವೆಬ್3, ಸೂಪರ್ ಕಂಪ್ಯೂಟರ್, ಎಲೆಕ್ಟ್ರಾನಿಕ್ಸ್, ಮೈಕ್ರೊ ಎಲೆಕ್ಟ್ರಾನಿಕ್ಸ್ ಕ್ಷೇತ್ರದಲ್ಲಿ ಪ್ರಗತಿ ಸಾಧಿಸಲು ಅನುಕೂಲವಾಗಲಿದೆ. ಇದು ಈ ಕ್ಷೇತ್ರವನ್ನು ನಿರೀಕ್ಷಿತ 1.3 ಟ್ರಿಲಿಯನ್ ಡಾಲರ್ ಆರ್ಥಿಕತೆಯತ್ತ ದೇಶವನ್ನು ಕೊಂಡೊಯ್ಯುವ ವಿಶ್ವಾಸವಿದೆ' ಎಂದರು.

'ಭಾರತದ ಇಂದಿನ ಸಾಧನೆಯು ಯುವ ತಂತ್ರಜ್ಞರಲ್ಲಿನ ಆತ್ಮವಿಶ್ವಾಸ ಹಾಗೂ ಕಠಿಣ ಪರಿಶ್ರಮದಿಂದಾಗಿದೆ. ಹಿಂದೆ ಕೇವಲ 9 ದೊಡ್ಡ ಉದ್ಯಮಿಗಳ ಬಳಿ ಶೇ 97ರಷ್ಟು ಆರ್ಥಿಕತೆ ಇತ್ತು. ಆದರೆ ಹೊಸ ನೀತಿಯ ಪರಿಣಾಮವಾಗಿ ದೇಶದ ಆರ್ಥಿಕತೆಯಲ್ಲಿ ನವೋದ್ಯಮಗಳ ಪಾಲು ಪಡೆಯುವಂತಾಗಿದೆ. 1960 ರಲ್ಲೇ ಜಗತ್ತಿನ ಅತಿ ದೊಡ್ಡ ಸೆಮಿಕಂಡಕ್ಟರ್ ಕಂಪನಿ ಭಾರತವನ್ನು ಆಯ್ಕೆ ಮಾಡಿತ್ತು. ಆದರೆ ಆಗಿನ ಸಮಾಜವಾದಿಗಳು ಅದನ್ನು ವಿರೋಧಿಸಿದ್ದರು. ಆದರೆ ಈಗ ಒಂದು ತಲೆಮಾರನ್ನೇ ದಾಟಿ ಸರ್ಕಾರ ಮುಂದೆ ಹೋಗಿರುವ ಪರಿಣಾಮ ಜಗತ್ತು ಭಾರತದಲ್ಲಿ ತನ್ನ ಕಂಪನಿ ಸ್ಥಾಪಿಸಲು ಉತ್ಸುಕತೆ ತೋರುತ್ತಿವೆ' ಎಂದು ರಾಜೀವ್ ಚಂದ್ರಶೇಖರ್ ಹೇಳಿದರು.

ಬೆಂಗಳೂರು ಈಗ ನಿವೃತ್ತರ ಸ್ವರ್ಗವಲ್ಲ, ಸಂಶೋಧನಾ ಕೇಂದ್ರ: 'ಒಂದು ಕಾಲದಲ್ಲಿ ಬೆಂಗಳೂರು ನಿವೃತ್ತರ ಸ್ವರ್ಗ ಎನ್ನಲಾಗುತ್ತಿತ್ತು. ಆದರೆ, ಕ್ಷಿಪ್ರಗತಿಯಲ್ಲಿ ಆದ ಬದಲಾವಣೆಯಿಂದ ಇಡೀ ಜಗತ್ತೇ ಬೆಂಗಳೂರನ್ನು ಬಯಸುವಂತಾಗಿದೆ. ಇಲ್ಲಿರುವ ಅತ್ಯುದ್ಭುತ ಪ್ರತಿಭೆಗಳು ಇಡೀ ತಂತ್ರಜ್ಞಾನ ಕ್ಷೇತ್ರದ ದಿಕ್ಕನ್ನೇ ಬದಲಿಸಿದ್ದಾರೆ. ಜಗತ್ತಿನ ಮುಂಚೂಣಿ ಎಲೆಕ್ಟ್ರಾನಿಕ್ಸ್ ಕಂಪನಿಗಳು ಈಗ ಬೆಂಗಳೂರಿನಲ್ಲಿ ತಮ್ಮ ಸಂಶೋಧನಾ ಕೇಂದ್ರ ತೆರೆಯುತ್ತಿವೆ. ಇದೂ ಈ ನಗರದ ಮುಂದಿನ ಬೆಳವಣಿಗೆಗೆ 'ಸಹಕಾರ' ಎಂದು ಸಚಿವ ರಾಜೀವ್ ಚಂದ್ರಶೇಖರ್ ಬಣ್ಣಿಸಿದರು.



ಬೆಂಗಳೂರು ತಂತ್ರಜ್ಞಾನ ಶೃಂಗಸಭೆಯಲ್ಲಿ ಗುರುವಾರದಂದು ನಡೆದ ಫೈರ್‌ಸೈಡ್ ಚಾಟ್‌ನಲ್ಲಿ ಕೇಂದ್ರ ಸಚಿವ ರಾಜೀವ್ ಚಂದ್ರಶೇಖರ್ ಸಂವಾದ ನಡೆಸಿದರು

ಕೃತಕ ಬುದ್ಧಿಮತ್ತೆ ತಂತ್ರಜ್ಞಾನದ ಚಮತ್ಕಾರ

ಮುಖ ನೋಡಿ ದೇಹಾರೋಗ್ಯ ತಪಾಸಣೆ ಮಾಡುವ ತಂತ್ರಾಂಶ

• ಇ.ಎಸ್.ಸುಧೀಂದ್ರ ಪ್ರಸಾದ್


ಬೆಂಗಳೂರು: ಮುಖ ಮನಸ್ಸಿನ ಕನ್ನಡಿ ಎಂಬಂತೆ, ಮುಖ ದೇಹದ ಆರೋಗ್ಯದ ಕನ್ನಡಿಯೂ ಹೌದು ಎಂಬುದನ್ನು ಪುಣೆ ಮೂಲದ ನುವರ್ಸ್ ಹೆಲ್ತ್ ಸೊಲ್ಯೂಷನ್ಸ್ ಕಂಪನಿಯ ತಂತ್ರಾಂಶ ಸಾಬೀತು ಮಾಡಿದೆ.

ಇಲ್ಲಿನ ಅರಮನೆ ಆವರಣದಲ್ಲಿ ನಡೆದ ಬೆಂಗಳೂರು ತಂತ್ರಜ್ಞಾನ ಶೃಂಗಸಭೆಯಲ್ಲಿರುವ ನವೋದಯ ಆವರಣದಲ್ಲಿ ಈ ತಂತ್ರಾಂಶವನ್ನು ಕಂಪನಿ ಪ್ರದರ್ಶನಕ್ಕಿಟ್ಟಿದೆ. ಮೇಳಕ್ಕೆ ಬಂದವರು ಮಳಿಗೆಯಲ್ಲಿರುವ ಮೊಬೈಲ್‌ಗಳಿಗೆ ಮುಖ ತೋರಿಸಿ ತಮ್ಮ ದೇಹದ ಸಾಮರ್ಥ್ಯವನ್ನು ಅರಿತು ಬೆರಗಾಗುತ್ತಿದ್ದಾರೆ.

ಆರೋಗ್ಯ ಕ್ಷೇತ್ರದ ತಂತ್ರಾಂಶ ಅಭಿವೃದ್ಧಿಪಡಿಸುತ್ತಿರುವ ನುವರ್ಸ್ ಕಂಪನಿಯು ನುಎಐ ಎಂಬ ತಂತ್ರಾಂಶ ಅಭಿವೃದ್ಧಿ ಕಿಟ್ ಪರಿಚಯಿಸಿದೆ. ಮೊಬೈಲ್‌ನ ಫ್ರಂಟ್ ಕ್ಯಾಮೆರಾ ಮೂಲಕ ಮುಖವನ್ನು ಒಂದು ನಿಮಿಷ ತದೇಕಚಿತ್ತದಿಂದ ನೋಡುವ ಈ ತಂತ್ರಾಂಶ, ವ್ಯಕ್ತಿಯ ರಕ್ತದೊತ್ತಡ, ಆಮ್ಲಜನಕ ಹೀರುವಿಕೆ ಪ್ರಮಾಣ, ರಕ್ತದಲ್ಲಿನ ಸಕ್ಕರೆ ಅಂಶ, ಹಿಮೊಗ್ಲೋಬಿನ್ ಪ್ರಮಾಣ, ಹೃದಯ ಬಡಿತ, ಶ್ವಾಸಕೋಶದ ಸಾಮರ್ಥ್ಯ, ಉಸಿರಾಟ ಕ್ರಿಯೆಯನ್ನು ಗ್ರಹಿಸಿ ಅದರ ಮೌಲ್ಯವನ್ನು ಪರದೆ ಮೇಲೆ ಮೂಡಿಸುವ ಸಾಮರ್ಥ್ಯ ಹೊಂದಿದೆ.

ಈ ತಂತ್ರಾಂಶ ಕುರಿತು ಮಾಹಿತಿ ನೀಡಿದ ಪೀಯೂಷ್ ಪಾಟೀಲ್, 'ಕೋವಿಡ್ ಸಂದರ್ಭದಲ್ಲಿ ಬೆರಳಿನ ತುದಿಗಿಡುತ್ತಿದ್ದ ಆಕ್ಸಿಮೀಟರ್‌ನಂತೆ ಅಥವಾ ಕೈಗೆ ಕಟ್ಟುವ ಸ್ಮಾರ್ಟ್ ವಾಚ್‌ನಂತೆಯೇ ಈ ತಂತ್ರಾಂಶವು ಕ್ಯಾಮೆರಾ ಮೂಲಕ ಕೆನ್ನೆ ಮೇಲೆ ರಕ್ತ ಪರಿಚಲನೆಯನ್ನು ಗಮನಿಸಿ ಮಾಹಿತಿ ನೀಡುತ್ತದೆ. ಕಂಪನಿಯ ಸಂಶೋಧಕರ ತಂಡದ ಸತತ ಪ್ರಯತ್ನದ ಫಲವಾಗಿ 'ನೂಎಐ' ಅಭಿವೃದ್ಧಿಪಡಿಸಲಾಗಿದೆ. ಇದರ ನಿಖರತೆ ಶೇ 95ರಷ್ಟು ಎಂಬುದು ಸಾಬೀತಾಗಿದೆ' ಎಂದರು.

'ಕಂಪನಿಗಳು, ಆಸ್ಪತ್ರೆಗಳು ತಮ್ಮ ನೌಕರರ ಸರಳ ಹಾಗೂ ಪ್ರಾಥಮಿಕ ಆರೋಗ್ಯ ತಪಾಸಣೆ ನಡೆಸಲು ಇದನ್ನು ಬಳಸಬಹುದು. ನುವರ್ಸ್ ಅಭಿವೃದ್ಧಿಪಡಿಸಿರುವ ಸಾಫ್ಟ್‌ವೇರ್ ಕಿಟ್ ಅನ್ನು ಬಳಸಿಕೊಂಡು ಯಾವುದೇ ಕಂಪನಿ ತಮ್ಮದೇ ಆದ ತಂತ್ರಾಂಶ ಅಭಿವೃದ್ಧಿಪಡಿಸಬಹುದು. ತಪಾಸಣೆಯಿಂದ ಲಭ್ಯವಾಗುವ ಆರೋಗ್ಯ ಮಾಹಿತಿ ಗಂಭೀರ ಸ್ವರೂಪದ್ದಾಗಿದ್ದರೆ, ಮುಂದಿನ ಹೆಚ್ಚಿನ ಪರೀಕ್ಷೆಗೆ ಒಳಗಾಗಬಹುದು. ಹೀಗಾಗಿ ಪ್ರಾಥಮಿಕ ತಪಾಸಣೆಗೆ ನುಎಐ ಅತ್ಯಂತ ಪರಿಣಾಮಕಾರಿ' ಎಂದು ಪೀಯೂಷ್ ಹೇಳಿದರು.



ಬೆಂಗಳೂರು ತಂತ್ರಜ್ಞಾನ ಶೃಂಗಸಭೆಯ ಪ್ರದರ್ಶನ ಮಳಿಗೆಯಲ್ಲಿ 'ಮುಖದ ಚಹರೆ ಆಧರಿಸಿ ಆರೋಗ್ಯ ಮಾಹಿತಿ ನೀಡುವ' ಮೊಬೈಲ್ ಆ್ಯಪ್ —ಚಿತ್ರ: ಕೃಷ್ಣಕುಮಾರ್ ಪಿ.ಎಸ್

ಆರ್ಟ್‌ಪಾರ್ಕ್‌ನಲ್ಲಿ ಡ್ರೋನ್, ರೊಬೊ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಇಲ್ಲಿವರೆಗೂ ಡ್ರೋನ್ ತಂತ್ರಜ್ಞಾನವನ್ನು ವಿಡಿಯೊ ಚಿತ್ರೀಕರಣ, ಕಣ್ಗಾವಲು ಹಾಗೂ ಕೃಷಿಯಲ್ಲಷ್ಟೇ ಬಳಕೆ ಮಾಡಲಾಗುತ್ತಿತ್ತು. ಈ ಬಳಕೆಯನ್ನು ಇನ್ನಷ್ಟು ವಿಸ್ತರಿಸುವ ಹಲವಾರು ಸಾಧ್ಯತೆಗಳು ಬೆಂಗಳೂರು ತಂತ್ರಜ್ಞಾನ ಶೃಂಗಸಭೆಯಲ್ಲಿ ಅನಾವರಣಗೊಂಡಿದೆ.

ಹಾಗೆಯೇ, ರೊಬೊ ನಿರ್ಮಾಣ ಹಾಗೂ ಭವಿಷ್ಯದ ಬಳಕೆ ಕುರಿತು ಸ್ಥೂಲ ಪರಿಚಯದ ಜತೆಗೆ, ಹೊಸ ಅವಕಾಶಗಳ ಸಾಧ್ಯತೆಯನ್ನೂ ಇಲ್ಲಿ ಕಾಣಬಹುದಾಗಿದೆ.

ಆರ್ಟ್‌ಪಾರ್ಕ್ ಎಂಬ ಪ್ರತ್ಯೇಕ ಪ್ರದರ್ಶನ ಮಳಿಗೆಯಲ್ಲಿ ವಿಮಾನ ಮಾದರಿಯ ಕಾರ್ಗೊ ಡ್ರೋನ್, ಆರೋಗ್ಯ ಕ್ಷೇತ್ರದಲ್ಲಿ ಬಳಸುವ ರೊಬೊಗಳ ಬಿಡಿಭಾಗಗಳು, ಪುಟ್ಟ ಡ್ರೋನ್‌ಗಳು, ಅವುಗಳನ್ನು ಚಾರ್ಜ್ ಮಾಡುವ ನೂತನ ಮಾದರಿಯ ವ್ಯವಸ್ಥೆಗಳು ಲಭ್ಯ.

ಯುವ ತಂತ್ರಜ್ಞರ ತಂಡಗಳೇ ತುಂಬಿರುವ ಆರ್ಟ್‌ಪಾರ್ಕ್‌ನ ಬಹಳಷ್ಟು ಉಪಕರಣಗಳಿಗೆ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಸೈನ್ಸ್ ನೆರವಾಗುತ್ತಿದೆ. ಅಲ್ಲಿನ ವಿಜ್ಞಾನಿಗಳ ಮಾರ್ಗದರ್ಶನದಲ್ಲಿ ಸಿದ್ಧಗೊಂಡ ಉಪಕರಣಗಳು ದೇಶ ಹಾಗೂ ವಿದೇಶಗಳಿಂದ ಬಂದಿರುವ ವೀಕ್ಷಕರ ಗಮನ ಸೆಳೆಯುತ್ತಿವೆ.

ಸಂಚಾರ ದಟ್ಟಣೆಯ ಪ್ರದೇಶಗಳಲ್ಲಿ ತ್ವರಿತವಾಗಿ ವಸ್ತುಗಳನ್ನು ಒಂದೆಡೆಯಿಂದ ಇನ್ನೊಂದೆಡೆ ಸಾಗಿಸಲು ಡ್ರೋನ್‌ಗಳನ್ನು ಪರಿಣಾಮಕಾರಿಯಾಗಿ ಬಳಸುವ ತಂತ್ರಜ್ಞಾನ ಇಲ್ಲಿನ ಕಾಮ್‌ರ್‍ಯಾಡೊ ಏರೋಸ್ಪೇಸ್‌ನಲ್ಲಿ ಕಾಣಬಹುದು. ಬ್ಯಾಟರಿ ಚಾಲಿತ ಡ್ರೋನ್ ಇದಾಗಿದ್ದು, 25 ಕೆ.ಜಿ. ತೂಕವನ್ನು ಹೊತ್ತೊಯ್ಯಬಲ್ಲದು. 2.5 ಕಿ.ಮೀ. ಎತ್ತರದಲ್ಲಿ ಹಾರುವ ಸಾಮರ್ಥ್ಯವಿರುವ ಇದು ಸುಮಾರು 100 ರಿಂದ 200 ಕಿ.ಮೀ.ವರೆಗೂ ದೂರ ಕ್ರಮಿಸಬಲ್ಲದು.

ಯುವ ತಂತ್ರಜ್ಞರನ್ನು ಸೆಳೆಯುತ್ತಿರುವ ಆರ್ಟ್‌ಪಾರ್ಕ್‌ನಲ್ಲಿ ಆಕ್ಯುಟಾಟರ್ಸ್, ಸಾಫ್ಟ್ ಗ್ರಿಪ್ಪರ್, ಆಕ್ಯುಟಾಡರ್ ಟೆಸ್ಟಿಂಗ್ ರಿಗ್ ಸೇರಿದಂತೆ ವೈದ್ಯಕೀಯ ಕ್ಷೇತ್ರದಲ್ಲಿ ಬಳಸುವ ರೊಬೊಗಳು ಹಾಗೂ ಅವುಗಳ ಬಿಡಿ ಭಾಗಗಳು ಲಭ್ಯ.

ಮತ್ತೊಂದೆಡೆ ದೆಹಲಿ ಮೂಲದ ಹವೇಲಿ ಎಂಬ ಕಂಪನಿಯು ಕಾಫಿ, ಟೀ ಎಸ್ಟೇಟ್‌ಗಳಿಗಾಗಿಯೇ ಡ್ರೋನ್ ಅಭಿವೃದ್ಧಿಪಡಿಸಿದೆ. ಇದು 15 ರಿಂದ 25 ಕೆ.ಜಿ. ತೂಕದ ವಸ್ತುಗಳನ್ನು ಹೊತ್ತು ಸಾಗಬಲ್ಲದು. ಇದಕ್ಕೆ ಕೃತಕ ಬುದ್ಧಿಮತ್ತೆ ಅಳವಡಿಸಲಾಗಿದೆ. ಸಾಧನ ಬಳಸುವ ಮಾಲೀಕರ ತೋಟವನ್ನು ಒಮ್ಮೆ ಡಿಜಟಲ್ ಮೂಲಕ ಒಮ್ಮೆ ಪರಿಚಯಿಸಿದರೆ ಸಾಕು, ಇದು ಅದರಾಚೆ ಒಂದಿಂಚೂ ಹೋಗದು. ಬೆಳೆಗಳ ಮೇಲೆ ಕಣ್ಗಾವಲು, ಔಷಧ ಸಿಂಪರಣೆಯಿಂದ ಹಿಡಿದು, ಮೋಡ ಬಿತ್ತನೆಗೂ ಇದನ್ನು ಬಳಸಲು ಸಾಧ್ಯ. ಬಳಕೆ ಹೆಚ್ಚಾದಂತೆಲ್ಲಾ, ಡ್ರೋನ್‌ನ ಬುದ್ಧಿಮತ್ತೆಯೂ ಹೆಚ್ಚುತ್ತಲೇ ಸಾಗುತ್ತದೆ. ಆಗ ತೋಟದ ಮಾಲೀಕರ ಕೆಲಸ ಇನ್ನಷ್ಟು ಹಗುರವಾಗುತ್ತಲೇ ಸಾಗುತ್ತದೆ ಎನ್ನುತ್ತಾರೆ ಸಂಸ್ಥಾಪಕ ಕೆ.ವೈ. ಅರವಿಂದ್.



ಆರ್ಟ್‌ಪಾರ್ಕ್‌ನಲ್ಲಿ ವಿಮಾನ ಮಾದರಿಯ ಕಾರ್ಗೊ ಡ್ರೋನ್

'ಸಂಶೋಧನೆ ಕ್ಷೇತ್ರದಲ್ಲಿ ಹೆಚ್ಚಿನ ಹೂಡಿಕೆ ಅಗತ್ಯ'

ಬೆಂಗಳೂರು: 'ಭಾರತವು ಜಾಗತಿಕ ಮಟ್ಟದಲ್ಲಿ 3ನೇ ಅತಿದೊಡ್ಡ ಆರ್ಥಿಕ ಶಕ್ತಿಯಾಗುವ ನಿಟ್ಟಿನಲ್ಲಿ ಹೈಟೆಕ್ ಉತ್ಪಾದನಾ ರಾಷ್ಟ್ರವಾಗಬೇಕಿದೆ. ಆತ್ಮನಿರ್ಭರತೆ ಮತ್ತು ತಂತ್ರಜ್ಞಾನದ ಸಾರ್ವಭೌಮತೆಯ ಮೂಲಕ ನಾವು ಎಲ್ಲ ರೀತಿಯಲ್ಲೂ ಸಜ್ಜಾಗಬೇಕಿದೆ' ಎಂದು ತೇಜಸ್ ನೆಟ್‌ವರ್ಕ್ಸ್ ಸಂಸ್ಥಾಪಕ ಸಂಜಯ್ ನಾಯಕ್ ಹೇಳಿದರು.

ಬೆಂಗಳೂರು ತಂತ್ರಜ್ಞಾನ ಶೃಂಗಸಭೆಯಲ್ಲಿ ಗುರುವಾರ 'ಭಾರತದಲ್ಲಿ ಟೆಲಿಕಾಂ ಉತ್ಪನ್ನಗಳ ನಿರ್ಮಾಣ' ಕುರಿತು ಮಾತನಾಡಿ, ಭಾರತದ ಡಿಜಿಟಲ್ ಆರ್ಥಿಕತೆಗೆ ವೇಗ ನೀಡಲು ಮತ್ತು ಯಶಸ್ಸು ಸಾಧಿಸಲು ಸಂಶೋಧನೆ, ಅಭಿವೃದ್ಧಿ ಕ್ಷೇತ್ರದಲ್ಲಿ ಹೆಚ್ಚಿನ ಮಟ್ಟದಲ್ಲಿ ಹೂಡಿಕೆಯಾಗಬೇಕಿದೆ ಎಂದರು.

'ಭಾರತ ಸರಕಾರದ ಆಸ್ಥೆಯಿಂದಾಗಿ ಈಗಾಗಲೇ ಆಧಾರ್, ಯುಪಿಐ, ನೇರ ನಗದು ವರ್ಗಾವಣೆ, ಡಿಜಿಲಾಕರ್, ಅಗ್ಗದ 4ಜಿ-5ಜಿ ಶುಲ್ಕಗಳು, ಭಾರತ್‌ನೆಟ್, ವೈರ್‌ಲೆಸ್ ತಂತ್ರಜ್ಞಾನ ಮತ್ತು ಆ್ಯಪ್‌ಗಳ ಬಳಕೆಯು ಜನ ಸಾಮಾನ್ಯರನ್ನೂ ತಲುಪುತ್ತಿದೆ ಎಂದರು.

'ರಾಜ್ಯದಲ್ಲಿ ಸಂಚಾರಕ್ಕೆ ಒಂದೇ ಕಾರ್ಡ್'

ಪ್ರಜಾವಾಣಿ ವಾರ್ತೆ


ಬೆಂಗಳೂರು: 'ಬೆಂಗಳೂರು ಸೇರಿ ರಾಜ್ಯದ ಆರೂ ಪಾಲಿಕೆಗಳ ವ್ಯಾಪ್ತಿಯಲ್ಲಿ ಸಂಚಾರಕ್ಕೆ ಒಂದೇ ಮಾದರಿಯ ಕಾರ್ಡ್ ಪರಿಚಯಿಸಲು ಸರ್ಕಾರ ಯೋಜನೆ ರೂಪಿಸಿದ್ದು, ಶೀಘ್ರದಲ್ಲಿ ಅದು ಜಾರಿಗೆ ಬರಲಿದೆ' ಎಂದು ಬಿಎಂಆರ್‌ಸಿಎಲ್ ವ್ಯವಸ್ಥಾಪಕ ನಿರ್ದೇಶಕ ಅಂಜುಮ್ ಪರ್ವೇಜ್ ಹೇಳಿದರು.

ಬೆಂಗಳೂರು ತಂತ್ರಜ್ಞಾನ ಶೃಂಗದಲ್ಲಿ ಸಂಚಾರ ಕುರಿತ ವಿಚಾರಗೋಷ್ಠಿಯಲ್ಲಿ ಮಾತನಾಡಿ ಅವರು ಈ ವಿಷಯ ತಿಳಿಸಿದರು. 'ಇದರೊಂದಿಗೆ ಮೆಟ್ರೊ, ಬಿಎಂಟಿಸಿ, ಆಟೊ, ಟ್ಯಾಕ್ಸಿ ಸೇರಿದಂತೆ ನಗರ ಸಾರಿಗೆ ವ್ಯವಸ್ಥೆಯಲ್ಲಿನ ಪ್ರತಿಯೊಂದರಲ್ಲೂ ಒಂದೇ ಕಾರ್ಡ್ ಬಳಸಿ ಪ್ರಯಾಣಿಸಬಹುದಾದ ಕಾರ್ಡ್ ಪರಿಚಯಿಸುವ ಯೋಜನೆಯೂ ಇದೆ. ಇಂಥದ್ದೊಂದು ವ್ಯವಸ್ಥೆಯನ್ನು ಸಿದ್ಧಪಡಿಸುವ ಯುವ ತಂತ್ರಜ್ಞರ ಗುಂಪಿಗೆ ಸ್ವಾಗತವಿದೆ' ಎಂದು ಹೇಳಿದರು.

'ಬೆಂಗಳೂರಿನಲ್ಲಿ ಒಟ್ಟು 55 ಮೆಟ್ರೊ ನಿಲ್ದಾಣಗಳಿವೆ. ಇವುಗಳ ಸುತ್ತಲಿರುವ 2 ರಿಂದ 3 ಕಿ.ಮೀ ಪ್ರದೇಶವನ್ನು ಸಮಗ್ರವಾಗಿ ಬದಲಿಸುವ ನಿಟ್ಟಿನಲ್ಲಿ ಸಾರಿಗೆ ಆಧಾರಿತ ಅಭಿವೃದ್ಧಿ ಯೋಜನೆಯನ್ನು ಸರ್ಕಾರ ಜಾರಿಗೆ ತರುತ್ತಿದೆ. ಇದರ ಭಾಗವಾಗಿ ನಗರದ ಹೊರವಲಯದಲ್ಲಿ ನಿರ್ಮಾಣವಾಗಲಿರುವ ಆರು ಮೆಟ್ರೊ ನಿಲ್ದಾಣಗಳ ಸುತ್ತಲಿನ ಪ್ರದೇಶವನ್ನು ಹೀಗೆಯೇ ಬದಲಿಸಲಾಗುವುದು. ಜನರು ನಡೆದು ಅಥವಾ ಸೈಕಲ್ ಮೂಲಕ ನೇರವಾಗಿ ಮೆಟ್ರೊ ನಿಲ್ದಾಣ ತಲುಪುವಂತಹ ವಾತಾವರಣ ನಿರ್ಮಿಸಲಾಗುತ್ತದೆ' ಎಂದರು.

ಭವಿಷ್ಯದಲ್ಲಿ ಚಾಲಕ ರಹಿತ ಮೆಟ್ರೊ: 'ದೆಹಲಿ ಮೆಟ್ರೊ ಚಾಲಕ ರಹಿತ ರೈಲನ್ನು ಪರಿಚಯಿಸಿದೆ. ಇದಕ್ಕೆ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗಿದೆ. ಇನ್ನು ಮುಂದೆ ಖರೀದಿಸುವ ಎಲ್ಲಾ ಮೆಟ್ರೊ ರೈಲುಗಳು ಚಾಲಕ ರಹಿತ ವ್ಯವಸ್ಥೆಯನ್ನೇ ಹೊಂದಿರುತ್ತವೆ. ಹೀಗಾಗಿ 'ನಮ್ಮ ಮೆಟ್ರೊ' ಕೂಡಾ ಇದನ್ನು ಅಳವಡಿಸುವಲ್ಲಿ ಸದಾ ಮುಂದಿರಲಿದೆ' ಎಂದು ಅಂಜುಮ್ ಪರ್ವೇಜ್ ಹೇಳಿದರು.

ಷೇರುಪೇಟೆ ವಹಿವಾಟು ▲ 86



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	20,096
ಇಂದಿನ ಅಂತ್ಯ	20,096
▲	207
ದಿನದ ಗರಿಷ್ಠ	20,104

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹550
12 ಮೊಟ್ಟೆಗೆ	₹75
ಮೈಸೂರು	
100 ಮೊಟ್ಟೆಗೆ	₹540

ಖಾದ್ಯ ತೈಲ ಮುಂಬೈ (10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1615 (1590)
ಸೋಯಾ (ರಿಫೈನ್ಡ್)	₹945 (945)
ಸೂರ್ಯಕಾಂತಿ (ರಿಫೈನ್ಡ್)	₹950 (950)
ಪಾಮೋಲಿನ್	₹842 (838)

ರಾಮನಗರ ರೇಷ್ಮೆಗೂಡು ಧಾರಣೆ

ಮಿಶ್ರತಳಿ (ಸಿ.ಬಿ)	₹198-480
ದ್ವಿತಳಿ (ಬಿ.ವಿ)	₹255-589

ಪ್ರಸಕ್ತ ಹಣಕಾಸು ವರ್ಷದ ಜುಲೈ–ಸೆಪ್ಟೆಂಬರ್ ತ್ರೈಮಾಸಿಕ ಅವಧಿ

ಜಿಡಿಪಿ: ನಿರೀಕ್ಷೆಗೂ ಮೀರಿ ಬೆಳವಣಿಗೆ

ನವದೆಹಲಿ (ಪಿಟಿಐ): ದೇಶದ ಆರ್ಥಿಕತೆಯು ಪ್ರಸಕ್ತ ಹಣಕಾಸು ವರ್ಷದ ಜುಲೈ-ಸೆಪ್ಟೆಂಬರ್ ತ್ರೈಮಾಸಿಕದಲ್ಲಿ ಮಾರುಕಟ್ಟೆ ನಿರೀಕ್ಷೆಗಳನ್ನೂ ಮೀರಿ ಶೇ 7.6ರಷ್ಟು ಬೆಳವಣಿಗೆ ಕಂಡಿದೆ. ಶೇ 6.8ರಿಂದ ಶೇ 7.4ರ ಆಸುಪಾಸಿನ ಬೆಳವಣಿಗೆ ಆಗಿರಬಹುದು ಎನ್ನುವುದು ಆರ್ಥಿಕ ತಜ್ಞರು ಮತ್ತು ಸಂಸ್ಥೆಗಳ ಅಂದಾಜಾಗಿತ್ತು.

ವಿಶ್ವದ ಪ್ರಮುಖ ಅರ್ಥ ವ್ಯವಸ್ಥೆಗಳಲ್ಲಿ ಅತ್ಯಂತ ವೇಗವಾಗಿ ಬೆಳವಣಿಗೆ ಕಾಣುತ್ತಿರುವ ಆರ್ಥಿಕತೆ ಎನ್ನುವ ಹೆಗ್ಗಳಿಕೆಯನ್ನು ಭಾರತ ಉಳಿಸಿಕೊಂಡಿದೆ. ಚೀನಾದ ಆರ್ಥಿಕತೆಯು ಜುಲೈ-ಸೆಪ್ಟೆಂಬರ್ ಅವಧಿಯಲ್ಲಿ ಶೇ 4.9ರಷ್ಟು ಬೆಳವಣಿಗೆ ಕಂಡಿದೆ.

ತಯಾರಿಕೆ, ಗಣಿಗಾರಿಕೆ ಮತ್ತು ಸೇವಾ ವಲಯಗಳ ಚಟುವಟಿಕೆ ಹೆಚ್ಚಾಗಿರುವುದು ಜಿಡಿಪಿ ಬೆಳವಣಿಗೆ ಏರಿಕೆ ಕಾಣಲು ಕಾರಣವಾಗಿವೆ. ಹಿಂದಿನ ಹಣಕಾಸು ವರ್ಷದ ಜುಲೈ-ಸೆಪ್ಟೆಂಬರ್ ತ್ರೈಮಾಸಿಕದಲ್ಲಿ ಜಿಡಿಪಿ ಶೇ 6.2ರಷ್ಟು ಬೆಳವಣಿಗೆ ಕಂಡಿತ್ತು. ಇದಕ್ಕೆ ಹೋಲಿಸಿದರೆ ಈ ಬಾರಿ ಶೇ 1.4ರಷ್ಟು ಹೆಚ್ಚಳ ಆಗಿದೆ. ಆದರೆ, 2022–23ರ ಏಪ್ರಿಲ್–ಜೂನ್ ತ್ರೈಮಾಸಿಕದಲ್ಲಿ ಆಗಿದ್ದ ಶೇ 7.8ರಷ್ಟಕ್ಕೆ ಹೋಲಿಸಿದರೆ ಅಲ್ಪ ಇಳಿಕೆ ಕಂಡುಬಂದಿದೆ.

> ಜಾಗತಿಕ ಸವಾಲಿನ ನಡುವೆಯೂ ಈ ಪ್ರಮಾಣದ ಬೆಳವಣಿಗೆ ಕಂಡಿರುವುದು ಭಾರತದ ಆರ್ಥಿಕತೆಯ ಚೇತರಿಸಿಕೊಳ್ಳುವ ಗುಣ ಮತ್ತು ಶಕ್ತಿಯ ಸೂಚಕ
> **ನರೇಂದ್ರ ಮೋದಿ,** ಪ್ರಧಾನಿ

ವಿವಿಧ ಸಂಸ್ಥೆಗಳು ಮಾಡಿದ್ದ ಜಿಡಿಪಿ ಅಂದಾಜು (%)

ಆರ್‌ಬಿಐ	6.5
ರಾಯಿಟರ್ಸ್ ಸಮೀಕ್ಷೆ	6.8
ಐಸಿಆರ್‌ಎ	7

ಮೂಲಸೌಕರ್ಯ: ಹೆಚ್ಚಿದ ಬೆಳವಣಿಗೆ

ದೇಶದ ಪ್ರಮುಖ ಎಂಟು ಮೂಲಸೌಕರ್ಯ ವಲಯಗಳ ಬೆಳವಣಿಗೆಯು 2022ರ ಅಕ್ಟೋಬರ್‌ಗೆ ಹೋಲಿಸಿದರೆ (ಶೇ 0.7), 2023ರ ಅಕ್ಟೋಬರ್ ತಿಂಗಳಲ್ಲಿ ಶೇ 12.1ಕ್ಕೆ ಏರಿಕೆ ಕಂಡಿದೆ.

ಕಲ್ಲಿದ್ದಲು, ಉಕ್ಕು, ಸಿಮೆಂಟ್ ಮತ್ತು ವಿದ್ಯುತ್ ಉತ್ಪಾದನೆ ಹೆಚ್ಚಾಗಿದೆ. ಹೀಗಾಗಿ ಒಟ್ಟಾರೆ ಬೆಳವಣಿಗೆ ಪ್ರಮಾಣದಲ್ಲಿ ಏರಿಕೆ ಕಂಡುಬಂದಿದೆ. 2023ರ ಸೆಪ್ಟೆಂಬರ್‌ನಲ್ಲಿ 8 ವಲಯಗಳ ಬೆಳವಣಿಗೆ ಶೇ 9.2ರಷ್ಟು ಆಗಿತ್ತು.

ಸರ್ಕಾರ ಬಿಡುಗಡೆ ಮಾಡಿರುವ ಮಾಹಿತಿಯ ಪ್ರಕಾರ, ಕಲ್ಲಿದ್ದಲು ಉತ್ಪಾದನೆಯು 2022ರ ಅಕ್ಟೋಬರ್‌ನಲ್ಲಿ ಶೇ 3.8 ರಷ್ಟು ಇದ್ದಿದ್ದು 2023ರ ಅಕ್ಟೋಬರ್‌ನಲ್ಲಿ ಶೇ 18.4ಕ್ಕೆ ಏರಿಕೆ ಕಂಡಿದೆ. ಉಕ್ಕು ತಯಾರಿಕೆ ಶೇ 5.8ರಿಂದ ಶೇ 11ಕ್ಕೆ, ಸಿಮೆಂಟ್ ತಯಾರಿಕೆ ಶೇ 4.2ರಿಂದ ಶೇ 17.1ಕ್ಕೆ ಹೆಚ್ಚಾಗಿದೆ. ವಿದ್ಯುತ್ ಉತ್ಪಾದನೆಯು ಶೇ 1.2 ರಿಂದ ಶೇ 20.3ಕ್ಕೆ ಏರಿಕೆ ಕಂಡಿದೆ.

ರಾಷ್ಟ್ರೀಯ ಸಾಂಖ್ಯಿಕ ಕಚೇರಿಯು (ಎನ್‌ಎಸ್‌ಒ) ಬಿಡುಗಡೆ ಮಾಡಿರುವ ಅಂಕಿ-ಅಂಶಗಳ ಪ್ರಕಾರ, ಕೃಷಿ ವಲಯದ ಬೆಳವಣಿಗೆಯು 2022ರ ಅಕ್ಟೋಬರ್‌ನಲ್ಲಿ ಶೇ 2.5ರಷ್ಟು ಇದ್ದಿದ್ದು 2023ರ ಅಕ್ಟೋಬರ್‌ನಲ್ಲಿ ಶೇ 1.2ಕ್ಕೆ ಇಳಿಕೆ ಕಂಡಿದೆ. ಆದರೆ, ತಯಾರಿಕಾ ವಲಯದ ಬೆಳವಣಿಗೆಯು ಶೇ 3.8ರಿಂದ ಶೇ 13.9ಕ್ಕೆ ಜಿಗಿದಿದೆ. ಗಣಿಗಾರಿಕೆ ವಲಯದ ಬೆಳವಣಿಗೆ ಶೇ0.1ರಿಂದ ಶೇ 10ಕ್ಕೆ ಏರಿಕೆ ಕಂಡಿದೆ. ನಿರ್ಮಾಣ ವಲಯದ ಬೆಳವಣಿಗೆಯು ಶೇ 5.7 ರಿಂದ ಶೇ 13.3ಕ್ಕೆ ಏರಿಕೆ ಕಂಡಿದೆ.

ಮುಂಬೈ ಧಾರಣೆ

ಶೇಂಗಾ

30-11-2023

ಜಾವಾ 70/80(ಹೊಸ)	11200-11300
ಜಾವಾ 80/90(ಹೊಸ)	10600-10700
ದಪ್ಪ ಮಧ್ಯಪ್ರದೇಶ(ಹೊಸ)	10100-10200
ದಪ್ಪ ಗುಜರಾತ್(ಹೊಸ)	10800-10900

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1625 (1600)
ಒಂದು ವಾರದ ಡೆಲಿವರಿ	1620 (1595)
ಸೋಯಾ ಕಚ್ಚಾ	930 (930)
ಪಾಮ್ ವಾರದ ಡೆಲಿವರಿ	844 (840)
ಸೂರ್ಯಕಾಂತಿ ಎಣ್ಣೆ ಕಚ್ಚಾ	900 (900)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ
62,400 (62,400)
ಬೆಳ್ಳಿ ಕೆ.ಜಿ 76,000 (76,650)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ಎನ್.ಆರ್.ಪುರ ರಬ್ಬರ್



(ಪ್ರತಿ ಕೆ.ಜಿಗೆ)

ಆರ್‌ಎಸ್‌ಎಸ್-4	₹150
ಆರ್‌ಎಸ್‌ಎಸ್-5	₹146
ಗುಡ್ ಲಾಟ್	₹130

ಐಡಿಎಫ್‌ಸಿ ಫಸ್ಟ್ ಬ್ಯಾಂಕ್–ಹುರೂನ್ ಇಂಡಿಯಾ ವರದಿ

ಮೌಲ್ಯಯುತ ಕಂಪನಿಗಳ ತಾಣ ಬೆಂಗಳೂರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸ್ವಂತ ಪರಿಶ್ರಮದಿಂದ ಉದ್ಯಮಿಗಳಾಗಿರುವವರು ಸ್ಥಾಪನೆ ಮಾಡಿರುವ ಅತ್ಯಂತ ಮೌಲ್ಯಯುತ ಕಂಪನಿಗಳಿಗೆ ದೇಶದಲ್ಲಿಯೇ ಬೆಂಗಳೂರು ಅತಿದೊಡ್ಡ ಕೇಂದ್ರವಾಗಿದೆ ಎಂದು ಹುರೂನ್ ಇಂಡಿಯಾ ಹೇಳಿದೆ.

ಬೆಂಗಳೂರು ಅತ್ಯಂತ ಮೌಲ್ಯಯುತ 129 ಕಂಪನಿಗಳ ಆಶ್ರಯವಾಗಿದೆ. ಮುಂಬೈನಲ್ಲಿ 78, ಗುರುಗ್ರಾಮ ಮತ್ತು ನವದೆಹಲಿಯಲ್ಲಿ 49 ಕಂಪನಿಗಳಿವೆ ಎಂದು ವರದಿ ಹೇಳಿದೆ. 2000ನೇ ವರ್ಷದಿಂದ ಈಚೆಗೆ ಆರಂಭ ಆಗಿರುವ 200 ಕಂಪನಿಗಳ 405 ಸ್ಥಾಪಕರ ಪಟ್ಟಿಯನ್ನು ಸಿದ್ಧಪಡಿಸಲಾಗಿದೆ. ಈ ಕಂಪನಿಗಳ ಒಟ್ಟು ಮೌಲ್ಯವು ₹30 ಲಕ್ಷ ಕೋಟಿಯಷ್ಟು ಇದೆ ಎಂದು ಗುರುವಾರ ಬಿಡುಗಡೆ ಮಾಡಿರುವ ವರದಿಯಲ್ಲಿ ತಿಳಿಸಿದೆ.

ಡಿ-ಮಾರ್ಟ್ ಮೂಲಕ ಕಾರ್ಯಾಚರಿಸುವ ರಾಧಾಕಿಷನ್ ದಮನಿ ಅವರ ಅವೆನ್ಯು ಸೂಪರ್‌ಮಾರ್ಕೆಟ್ಸ್ ಮೌಲ್ಯಯುತ ಕಂಪನಿಗಳ ಸಾಲಿನಲ್ಲಿ ಮೊದಲ ಸ್ಥಾನದಲ್ಲಿದೆ. ಇದರ ಮಾರುಕಟ್ಟೆ ಮೌಲ್ಯವು ಸೆಪ್ಟೆಂಬರ್ ಅಂತ್ಯಕ್ಕೆ ₹2.38 ಲಕ್ಷ ಕೋಟಿಯಷ್ಟು ಆಗಿದೆ. ಬಿನ್ನಿ ಬನ್ಸಲ್ ಮತ್ತು ಸಚಿನ ಬನ್ಸಲ್ ಅವರು ಸ್ಥಾಪಿಸಿರುವ ಫ್ಲಿಪ್‌ಕಾರ್ಟ್ ಕಂಪನಿಯು ಎರಡನೇ ಸ್ಥಾನದಲ್ಲಿದ್ದು ಮಾರುಕಟ್ಟೆ ಮೌಲ್ಯ ₹1.19 ಲಕ್ಷ ಕೋಟಿಯಷ್ಟು ಇದೆ.

ನೋಂದಾಯಿತ ಮತ್ತು ನೋಂದಣಿ ಆಗದೇ ಇರುವ ಕಂಪನಿಗಳು ಸಹ ಪಟ್ಟಿಯಲ್ಲಿ ಇವೆ. ಕಂಪನಿಗಳ ಮಾರುಕಟ್ಟೆ ಮೌಲ್ಯವನ್ನು ಪರಿಗಣಿಸಲಾಗಿದೆ ಎಂದು ಹುರೂನ್ ಇಂಡಿಯಾದ ಸ್ಥಾಪಕ ಮತ್ತು ವ್ಯವಸ್ಥಾಪಕ ನಿರ್ದೇಶಕ ಅನಸ್ ರಹಮಾನ್ ಜುನೈದ್ ತಿಳಿಸಿದ್ದಾರೆ.

ನೈಕಾ ಕಂಪನಿಯ ಸಿಇಒ ಫಲ್ಗುಣಿ ನಾಯರ್ ಅವರನ್ನೂ ಒಳಗೊಂಡು 20 ಮಹಿಳಾ ಉದ್ಯಮಿಗಳು ಪಟ್ಟಿಯಲ್ಲಿದ್ದಾರೆ. ವಯಸ್ಸಿನ ಆಧಾರದಲ್ಲಿ ಹ್ಯಾಪಿಯೆಸ್ಟ್ ಮೈಂಡ್ಸ್ ಕಂಪನಿಯ ಸಂಸ್ಥಾಪಕ 80 ವರ್ಷದ ಅಶೋಕ್ ಸೂಟಾ, 21 ವರ್ಷದ ಜೆಪ್ಟೊ ಕಂಪನಿಯ ಕೈವಲ್ಯ ವೊಹ್ರಾ ಇದ್ದಾರೆ.

ಅತ್ಯಂತ ಮೌಲ್ಯಯುತ 10 ಕಂಪನಿಗಳು

ಕಂಪನಿ	ಸ್ಥಾಪಕರು	ಮಾರುಕಟ್ಟೆ ಮೌಲ್ಯ
ಅವೆನ್ಯು ಸೂಪರ್‌ಮಾರ್ಕೆಟ್ಸ್	ರಾಧಾಕಿಷನ್ ದಮನಿ	₹2.38 ಲಕ್ಷ ಕೋಟಿ
ಫ್ಲಿಪ್‌ಕಾರ್ಟ್	ಬಿನ್ನಿ ಬನ್ಸಲ್ ಮತ್ತು ಸಚಿನ ಬನ್ಸಲ್	₹1.19 ಲಕ್ಷ ಕೋಟಿ
ಜೊಮಾಟೊ	ದೀಪೇಂದ್ರ ಗೋಯಲ್	₹86,835 ಕೋಟಿ
ಸ್ವಿಗ್ಗಿ	ಶ್ರೀಹರ್ಷ ಮಜೆಟಿ, ನಂದನ್ ರೆಡ್ಡಿ	₹66,542 ಕೋಟಿ
ಡ್ರೀಮ್11	ಭವಿತ್ ಶೇಠ್, ಹರ್ಷ ಜೈನ್	₹66,542 ಕೋಟಿ
ರೋಜರ್‌ಪೇ	ಹರ್ಷಿಲ್ ಮಾಥೂರ್,ಶಶಾಂಕ್ ಕುಮಾರ್	₹62,384 ಕೋಟಿ
ಮ್ಯಾಕ್ಸ್ ಹೆಲ್ತ್‌ಕೇರ್ ಇನ್‌ಸ್ಟಿಟ್ಯೂಟ್	ಅಭಯ್ ಸೋಯಿ	₹55,085 ಕೋಟಿ
ಪೇಟಿಎಂ	ವಿಜಯ ಶೇಖರ ಶರ್ಮ	₹54,328 ಕೋಟಿ
ಕ್ರೆಡ್	ಕುನಾಲ್ ಶಾ	₹53,234 ಕೋಟಿ
ಜಿರೋದಾ	ನಿತಿನ್ ಕಾಮತ್,ನಿಕಿಲ್ ಕಾಮತ್	₹50,630 ಕೋಟಿ

ಬೆಂಗಳೂರಿನ ಪ್ರಮುಖ 10 ಕಂಪನಿಗಳು (ಕೋಟಿಗಳಲ್ಲಿ)

ಕಂಪನಿ	ಸ್ಥಾಪಕರು	ಮಾರುಕಟ್ಟೆ ಮೌಲ್ಯ
ಸ್ವಿಗ್ಗಿ	ಶ್ರೀಹರ್ಷ ಮಜೆಟಿ, ನಂದನ್ ರೆಡ್ಡಿ	₹66,542
ಡೈಲಿಹಂಟ್	ವೀರೇಂದ್ರ ಗುಪ್ತಾ, ಉಮಂಗ್ ಬೇಡಿ	₹41,589
ಪಾಲಿಗಾನ್	ಜಯಂತಿ ಕಾನನಿ, ಸಂದೀಪ್ ನೈಲ್ವಾಲ್	₹16,636
ಮು ಸಿಗ್ಮಾ	ಧೀರಜ್ ಸಿ. ರಾಜಾರಾಮ್	₹15,470
ಅಕೊ ಜನರಲ್ ಇನ್ಶುರೆನ್ಸ್	ವರುಣ್ ದುವಾ, ರುಚಿ ದೀಪಕ್	₹9,150
ಓಪನ್	ಅಜೀಶ್ ಅಚ್ಯುತನ್,ಮೇಬಲ್ ಚಾಕೊ	₹8,318
ಕ್ರೆಡಿಟ್‌ಬೀ	ಮಧುಸೂದನ್ ಏಕಾಂಬರಮ್, ಕಾರ್ತಿಕೇಯನ್ ಕೆ, ವಿವೇಕ್ ವೇದಾ	₹5,615
ಬೌನ್ಸ್	ವಿವೇಕಾನಂದ ಹಳ್ಳಿಕೆರೆ	₹4,325
ಹೋಮ್‌ಲೇನ್	ಶ್ರೀಕಾಂತ್ ಅಯ್ಯರ್,ತನುಜ್ ಚೌಧರಿ	₹4,159
ಕ್ಯಾಪ್ಟನ್ ಫ್ರೆಶ್	ಉತ್ತಮ್ ಗೌಡ	₹4,159

ಸಂಕ್ಷಿಪ್ತ ಸುದ್ದಿ

ಕರ್ನಾಟಕಕ್ಕೆ ಇಂದು ಚಂಡೀಗಡ ಸವಾಲು

ಆನಂದ್, ಗುಜರಾತ್: ಮಯಂಕ್ ಅಗರವಾಲ್ ನಾಯಕತ್ವದ ಕರ್ನಾಟಕ ತಂಡವು ವಿಜಯ್ ಹಜಾರೆ ಟ್ರೋಫಿ ಕ್ರಿಕೆಟ್ ಟೂರ್ನಿಯಲ್ಲಿ ಶುಕ್ರವಾರ ಚಂಡೀಗಡ ತಂಡವನ್ನು ಎದುರಿಸಲಿದೆ.

ಕರ್ನಾಟಕ ತಂಡವು ಸಿ ಗುಂಪಿನಲ್ಲಿ ಆಡಿರುವ ನಾಲ್ಕು ಪಂದ್ಯಗಳಲ್ಲಿಯೂ ಜಯಿಸಿದೆ. ಪಾಯಿಂಟ್ ಪಟ್ಟಿಯಲ್ಲಿ ಎರಡನೇ ಸ್ಥಾನದಲ್ಲಿದೆ. ಮನನ್ ವೊಹ್ರಾ ನಾಯಕತ್ವದ ಚಂಡೀಗಡ ತಂಡವು ನಾಲ್ಕು ಪಂದ್ಯ ಆಡಿ ಎರಡರಲ್ಲಿ ಗೆದ್ದು, ಉಳಿದಿದ್ದರಲ್ಲಿ ಸೋತಿದೆ.

ಪಂದ್ಯ ಆರಂಭ: ಬೆಳಿಗ್ಗೆ 9

ಫುಟ್‌ಬಾಲ್: ಕರ್ನಾಟಕಕ್ಕೆ ಸೋಲು

ಬೆಂಗಳೂರು: ಸಾಂಘಿಕ ಆಟವಾಡಿದ ಕೇರಳದ ವನಿತೆಯರು 28ನೇ ಸೀನಿಯರ್ ಮಹಿಳೆಯರ ರಾಷ್ಟ್ರೀಯ ಫುಟ್‌ಬಾಲ್ ಚಾಂಪಿಯನ್‌ಷಿಪ್‌ನ 'ಸಿ' ಗುಂಪಿನ ಪಂದ್ಯದಲ್ಲಿ 3-2 ರಿಂದ ಕರ್ನಾಟಕ ತಂಡವನ್ನು ಮಣಿಸಿದರು.

ಗುರುವಾರ ನಡೆದ ಪಂದ್ಯದಲ್ಲಿ ಎಂ.ಪಿ. ಗ್ರೇಷ್ಮಾ, ಕೆ. ಮಾನಸಾ, ಆರ್. ಆಭರಣಿ ಕೇರಳದ ಪರ ಗೋಲು ದಾಖಲಿಸಿದರು. ಕರ್ನಾಟಕದ ಪರ ರೋಸಿ ತಂಗಾ ಎಡು ಬಾರಿ ಚೆಂಡನ್ನು ಗುರಿ ಸೇರಿಸಿದರು. ಇತರ ಪಂದ್ಯದಲ್ಲಿ ಚಂಡೀಗಢ 2-0 ಯಿಂದ ತ್ರಿಪುರ ತಂಡವನ್ನು, ಸಿಕ್ಕಿಂ 3-0 ಯಿಂದ ಅಸ್ಸಾಂ ತಂಡ ಮಣಿಸಿದವು.

ಟಿಟಿ ಅಂಪೈರ್ ರಾಜು ಇನ್ನಿಲ್ಲ

ಬೆಂಗಳೂರು: ಅಂತರರಾಷ್ಟ್ರೀಯ ಟೇಬಲ್ ಟೆನಿಸ್ ಅಂಪೈರ್ ಜಿ.ಎಲ್.ಕೆ. ರಾಜು (68) ಗುರುವಾರ ನಿಧನರಾದರು. ಒಂದೂವರೆ ದಶಕದಿಂದ ರಾಜ್ಯ ಮತ್ತು ರಾಷ್ಟ್ರ ಮಟ್ಟದ ಟೂರ್ನಿಗಳಲ್ಲಿ ಅಂಪೈರ್ ಆಗಿ ಕಾರ್ಯ ನಿರ್ವಹಿಸಿದ್ದರು.

ರಾಜೀವ್ ಗಾಂಧಿ ವಿವಿ ಅಥ್ಲೆಟಿಕ್ಸ್: ರಾಕೇಶ್, ದುರ್ಗಾಗೆ ವೈಯಕ್ತಿಕ ಪ್ರಶಸ್ತಿ

ಆಳ್ವಾಸ್ ಕಾಲೇಜು ಚಾಂಪಿಯನ್

ಪ್ರಜಾವಾಣಿ ವಾರ್ತೆ

ಮೂಡುಬಿದಿರೆ (ದಕ್ಷಿಣ ಕನ್ನಡ): ಆತಿಥೇಯ ಆಳ್ವಾಸ್ ಶಿಕ್ಷಣ ಸಂಸ್ಥೆಯ ಆಳ್ವಾಸ್ ಅಲೈಡ್ ಹೆಲ್ತ್ ಸೈನ್ಸಸ್ ಸಂಸ್ಥೆ, ರಾಜೀವಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯದ ಅಥ್ಲೆಟಿಕ್ ಕೂಟದ ಸಮಗ್ರ ಚಾಂಪಿಯನ್ ಪಟ್ಟ ತನ್ನದಾಗಿಸಿಕೊಂಡಿತು.

ಆಳ್ವಾಸ್ ಆಯುರ್ವೇದ ಕಾಲೇಜು ಆಶ್ರಯದಲ್ಲಿ ಇಲ್ಲಿನ ಸ್ವರಾಜ್ಯ ಮೈದಾನದಲ್ಲಿ ಗುರುವಾರ ಕೊನೆಗೊಂಡ ಕೂಟದ ಟ್ರ್ಯಾಕ್‌ನಲ್ಲಿ 7 ಸೇರಿದಂತೆ ಒಟ್ಟು 10 ಕೂಟ ದಾಖಲೆ ಬರೆದ ಆಳ್ವಾಸ್ ಅಲೈಡ್ ಹೆಲ್ತ್ ಸೈನ್ಸಸ್ ವಿದ್ಯಾರ್ಥಿಗಳು 154 ಪಾಯಿಂಟ್ ಕಲೆ ಹಾಕಿದರು. 20 ಚಿನ್ನ, 9 ಬೆಳ್ಳಿ ಮತ್ತು 5 ಕಂಚಿನ ಪದಕಗಳು ತಂಡದ ಪಾಲಾದವು.

ಪುರುಷ ಮತ್ತು ಮಹಿಳೆಯರ ವಿಭಾಗದ ಚಾಂಪಿಯನ್ ಪಟ್ಟವೂ ಆಳ್ವಾಸ್ ಅಲೈಡ್ ಹೆಲ್ತ್ ಸೈನ್ಸಸ್ ಸಂಸ್ಥೆಯ ಪಾಲಾಯಿತು. ಪುರುಷರ ವಿಭಾಗದಲ್ಲಿ 26 ಪಾಯಿಂಟ್ ಗಳಿಸಿದ ಮಂಡ್ಯ ವೈದ್ಯಕೀಯ ಕಾಲೇಜು ಮತ್ತು ಮಹಿಳೆಯರ ವಿಭಾಗದಲ್ಲಿ 33 ಪಾಯಿಂಟ್‌ಗಳೊಂದಿಗೆ ಆಳ್ವಾಸ್ ಪ್ರಕೃತಿ ಚಿಕಿತ್ಸೆ ಮತ್ತು ಯೋಗ ವಿಜ್ಞಾನಗಳ ಕಾಲೇಜು ರನ್ನರ್ ಅಪ್ ಸ್ಥಾನ ತನ್ನದಾಗಿಸಿಕೊಂಡಿತು.

ಆಳ್ವಾಸ್ ಅಲೈಡ್ ಹೆಲ್ತ್ ಸೈನ್ಸಸ್‌ನ ದುರ್ಗಾ ಮತ್ತು ರಾಕೇಶ್ ಉತ್ತಮ ಅಥ್ಲೀಟ್ ಎನಿಸಿಕೊಂಡರು.

ಕೊನೆಯ ದಿನದ ಫಲಿತಾಂಶಗಳು: ಪುರುಷರ ವಿಭಾಗ: 400 ಮೀ ಓಟ: ಶರಣ್ (ಆಳ್ವಾಸ್ ಅಲೈಡ್ ಹೆಲ್ತ್ ಸೈನ್ಸಸ್ ಕಾಲೇಜು, ಮೂಡುಬಿದಿರೆ)-1, ಶದಾನ್ (ಆಳ್ವಾಸ್)-2, ಕ್ರಿಸ್ಪಿನ್ ದಾಸ್ (ಎಸ್.ವಿ. ನರ್ಸಿಂಗ್ ಕಾಲೇಜು, ಬೆಂಗಳೂರು)-3. ಕಾಲ: 49.4 ಸೆ (ಕೂಟದ ದಾಖಲೆ: ಹಿಂದಿನ ದಾಖಲೆ, 50 ಸೆ, ದೇವಯ್ಯ ಟಿ.ಎಚ್, ಆಳ್ವಾಸ್, 2019); 110 ಮೀ. ಹರ್ಡಲ್ಸ್: ರಘು (ಆಳ್ವಾಸ್)-1, ಸೂರ್ಯ (ಆಳ್ವಾಸ್)-2, ಅಂಕಿತ್ ಬಿ.ಶೆಟ್ಟಿ (ಎಸ್‌ಡಿಎಂ, ಧಾರವಾಡ)-3. ಕಾಲ: 15.9 ಸೆ; 10000 ಮೀ: ಪ್ರಣವ್ ಜಗದೀಶ್ (ಲಕ್ಷ್ಮಿ ಸ್ಮಾರಕ ಕಾಲೇಜು, ಮಂಗಳೂರು)-1, ಚಂದನ್ ಎಸ್ (ಆಳ್ವಾಸ್)-2, ವಿರೂಪಾಕ್ಷಿ ಸುಭಾಸ ದೊಡ್ಡಮನಿ (ಎವಿಎಸ್ ಆಯುರ್ವೇದ ಕಾಲೇಜು, ವಿಜಯಪುರ)-3. ಕಾಲ: 41 ನಿ, 13.3 ಸೆ; 4x400 ಮೀ ರಿಲೆ: ಮಂಡ್ಯ ವೈದ್ಯಕೀಯ ಕಾಲೇಜು-1, ಆಳ್ವಾಸ್ ಹೋಮಿಯೊಪಥಿ ಕಾಲೇಜು-2, ಎಸ್‌ಡಿಎಂ ಉಜಿರೆ-3. ಕಾಲ:47.7 ಸೆ; ಟ್ರಿಪಲ್ ಜಂಪ್: ರಾಜೇಶ್ (ಮಂಡ್ಯ ವೈದ್ಯಕೀಯ ಕಾಲೇಜು)-1, ಪ್ರಿನ್ಸನ್ ಪಿಂಟೊ (ಲಕ್ಷ್ಮಿ ಸ್ಮಾರ ಕಾಲೇಜು, ಮಂಗಳೂರು)-2, ರಘು (ಆಳ್ವಾಸ್)-3. ಅಂತರ: 12.6 ಮೀ.

ಮಹಿಳೆಯರ ವಿಭಾಗ: 400 ಮೀ: ವಿಸ್ಮಯಾ (ಆಳ್ವಾಸ್)-1, ಲಕ್ಷ್ಮಿ ವೈಷ್ಣವಿ (ಆಳ್ವಾಸ್)-2, ತ್ರಿಷಾ ಜೋಸೆಫ್ (ಅಂಬೇಡ್ಕರ್ ನರ್ಸಿಂಗ್ ಕಾಲೇಜು, ಬೆಂಗಳೂರು)-3. ಕಾಲ:1ನಿ 2.9 ಸೆ; 10000 ಮೀ: ಐಶ್ವರ್ಯಾ ಎಸ್.ವಿ (ಸಜ್ಜಲಶ್ರೀ ನರ್ಸಿಂಗ್ ಕಾಲೇಜು, ಬಾಗಲಕೋಟೆ)-1, ಮುಕ್ತಾಯಿ ಗುರಿಕಾರ್ (ಸಜ್ಜಲಶ್ರೀ, ಬಾಗಲಕೋಟೆ)-2, ಅಮೀನ್ ಫರಿಹಾ (ಸರ್ಕಾರಿ ಪ್ರಕೃತಿ ಚಿಕಿತ್ಸೆ ಕಾಲೇಜು, ಮೈಸೂರು)-3. ಕಾಲ: 1 ತಾಸು 5ನಿ 36.3 ಸೆ; 110 ಮೀ ಹರ್ಡಲ್ಸ್: ವಿಸ್ಮಯಾ (ಆಳ್ವಾಸ್)-1, ಎವ್ಲಿನ್ ತ್ರಿಸಾ ಜಾಯ್ (ಅಥೆನಾ ನರ್ಸಿಂಗ್ ಕಾಲೇಜು, ಮಂಗಳೂರು)-2, ಡಾಲಿಯಾ ಸಿ.ಸಿ (ಸೇಂಟ್ ಆ್ಯನ್ಸ್, ಮೂಲ್ಕಿ)-3. ಕಾಲ: 18 ಸೆ (ಕೂಟ ದಾಖಲೆ: ಹಳೆಯ ದಾಖಲೆ, 19.91 ಸೆ, ಖ್ಯಾತಿ ಎಸ್.ವಿ, ಬಿಎಂಸಿ ಕಾಲೇಜು ಮಂಗಳೂರು-2007); 4x400 ಮೀ ರಿಲೆ: ಆಳ್ವಾಸ್ ಅಲೈಡ್ ಹೆಲ್ತ್ ಸೈನ್ಸಸ್-1, ಆಳ್ವಾಸ್ ಪ್ರಕೃತಿ ಚಿಕಿತ್ಸೆ ಕಾಲೇಜು-2, ಎಸ್‌ಡಿಎಂ, ಉಜಿರೆ-3. ಕಾಲ:55.7 ಸೆ; ಟ್ರಿಪಲ್ ಜಂಪ್: ದುರ್ಗಾ (ಆಳ್ವಾಸ್)-1, ಅಮಲಾ ಸುರೇಶ್ (ಮಸೂದ್ ನರ್ಸಿಂಗ್ ಕಾಲೇಜು, ಮಂಗಳೂರು)-2, ಜ್ಯೋತಿಕಾ ಪಿ (ಮಲ್ಲಿಗೆ ನರ್ಸಿಂಗ್ ಕಾಲೇಜು, ಬೆಂಗಳೂರು)-3. ದೂರ: 9.46 ಮೀ; ಹ್ಯಾಮರ್ ಥ್ರೋ: ಆದಿರಾ ಎನ್.ಕೆ (ಆಳ್ವಾಸ್)-1, ವಮಿಕಾ ಆರ್ (ಅಂಬೇಡ್ಕರ್ ಕಾಲೇಜು, ಬೆಂಗಳೂರು)-2, ನೇಹಾ ಮರಿಟಾ ಪಾಯಸ್ (ಫಾದರ್ ಮುಲ್ಲರ್, ಬೆಂಗಳೂರು)-3. ದೂರ: 15.83 ಮೀ.



ಚಾಂಪಿಯನ್ ಆದ ಆಳ್ವಾಸ್ ಅಲೈಡ್ ಹೆಲ್ತ್ ಸೈನ್ಸಸ್ ಕಾಲೇಜು ತಂಡ. ನಿಂತವರು (ಎಡದಿಂದ): ರಾಕೇಶ್, ಕಾರ್ತಿಕ್, ಸೂರ್ಯ, ಶರಣ್, ಅಜಿತ್ ಕುಮಾರ್ (ಕೋಚ್), ವಸಂತ ಶೆಟ್ಟಿ (ಪ್ರಾಂಶುಪಾಲ), ವಿನಯ್ ಆಳ್ವ (ಆಡಳಿತ ಮಂಡಳಿ ಟ್ರಸ್ಟಿ), ಅವಿನಾಶ್ (ದೈಹಿಕ ಶಿಕ್ಷಣ ವಿಭಾಗದ ನಿರ್ದೇಶಕ), ಶದಾನ್, ರಘು, ಶ್ರವಣ ಗಿರಿ; ಕೆಳಗಿನ ಸಾಲು: ಪ್ರಿವೇಶ್, ದುರ್ಗಾ, ವಿಸ್ಮಯಾ, ಶೈಲಜಾ, ಭೂಮಿಕಾ, ಚಂದನ್

ಟೆನಿಸ್: ಮನೀಷ್, ರಿಷಭ್ ಕ್ವಾರ್ಟರ್‌ಗೆ

• ಬಸವರಾಜ ದಳವಾಯಿ

ಕಲಬುರಗಿ: ಎದುರಾಳಿಯನ್ನು ಸುಲಭವಾಗಿ ಮಣಿಸಿದ ಭಾರತದ ಮನೀಷ್ ಸುರೇಶ್‌ಕುಮಾರ್ ಹಾಗೂ ರೋಚಕ ಜಯ ದಾಖಲಿಸಿದ ರಿಷಭ್ ಅಗರವಾಲ್ ಅವರು ಕಲಬುರಗಿ ಓಪನ್ ಐಟಿಎಫ್ ಪುರುಷರ ಟೆನಿಸ್ ಟೂರ್ನಿಯ ಕ್ವಾರ್ಟರ್‌ಫೈನಲ್ ಪ್ರವೇಶಿಸಿದರು.

ಚಂದ್ರಶೇಖರ ಪಾಟೀಲ ಕ್ರೀಡಾಂಗಣದಲ್ಲಿ ನಡೆಯುತ್ತಿರುವ ಟೂರ್ನಿಯ ಸಿಂಗಲ್ಸ್ ವಿಭಾಗದ 16ರ ಘಟ್ಟದ ಹಣಾಹಣಿಯಲ್ಲಿ ಗುರುವಾರ ಭಾರತದ ಮನೀಷ್ ಸುರೇಶ್‌ಕುಮಾರ್ 6-1, 6-0ಯಿಂದ ಸ್ವದೇಶದ ಆಟಗಾರ ಭರತ್ ನಿಶೋಕ್ ಕುಮಾರನ್ ಅವರನ್ನು ಪರಾಭವಗೊಳಿಸಿದರು.

ವೇಗದ ಸರ್ವ್ ಮತ್ತು ತಾಂತ್ರಿಕ ನೈಪುಣ್ಯದ ನೆರವಿನಿಂದ ಮನೀಷ್ ಅವರು ಕೇವಲ ಒಂದು ಗೇಮ್ ಮಾತ್ರ ಎದುರಾಳಿಗೆ ಬಿಟ್ಟುಕೊಟ್ಟು, ಮೊದಲ ಸೆಟ್ ಜಯಿಸಿದರು. ಆದರೆ, ಎರಡನೇ ಸೆಟ್‌ನಲ್ಲಿ ಏಕಪಕ್ಷೀಯ ಜಯ ಸಾಧಿಸಿದರು. ಈ ಹಂತದಲ್ಲಿ ಅವರು ಎರಡು ಏಸ್‌ಗಳನ್ನು ಸಿಡಿಸಿದರೆ, 31 ಸರ್ವಿಸ್ ಪಾಯಿಂಟ್ಸ್ ಗಳಿಸಿದರು.

ಇನ್ನೊಂದು ಪಂದ್ಯದಲ್ಲಿ ರಿಷಭ್ ಅಗರವಾಲ್ 6-1, 7-6 (1)ರಿಂದ ಕರ್ನಾಟಕದ ಮನೀಷ್ ಗಣೇಶ್ ಅವರನ್ನು ಮಣಿಸಿದರು. ಮೊದಲ ಸೆಟ್ ಸುಲಭವಾಗಿ ಕೈಚೆಲ್ಲಿದ ಮನೀಷ್, ಎರಡನೇ ಸೆಟ್‌ನಲ್ಲಿ ಕೊಂಚ ಹೋರಾಟ ತೋರಿದರು. ಆದರೆ, ಗೆಲುವು ಒಲಿಯಲಿಲ್ಲ. ಟೈಬ್ರೇಕರ್‌ನಲ್ಲಿ ಫಲಿತಾಂಶ ನಿರ್ಧಾರವಾಯಿತು.

ರಾಮಕುಮಾರ್‌ಗೆ ಜಯ: ಐದನೇ ಶ್ರೇಯಾಂಕದ ರಾಮಕುಮಾರ್ ರಾಮನಾಥನ್ ಅವರು ಪ್ರೀಕ್ವಾರ್ಟರ್‌ಫೈನಲ್‌ನಲ್ಲಿ ಗೆಲುವಿಗೆ ತಿಣುಕಾಡಿ ದರು. ವೈಲ್ಡ್‌ಕಾರ್ಡ್ ಪ್ರವೇಶ ಪಡೆದಿದ್ದ ಆಟಗಾರ ಕಬೀರ್ ಹಂಸ್ ಎದುರು 7-5, 3-6, 6-2ರಿಂದ ಗೆದ್ದ ಅವರು ನಿಟ್ಟುಸಿರುಬಿಟ್ಟರು. 2 ಗಂಟೆ 49 ನಿಮಿಷಗಳ ಸುದೀರ್ಘ ಕಾಲ ನಡೆದ ಮತ್ತೊಂದು ಹಣಾಹಣಿಯಲ್ಲಿ, ಅರ್ಹತಾ ಸುತ್ತಿನಿಂದ ಗೆದ್ದು ಬಂದ ಆರ್ಯನ್ ಶಾ 4-6, 7-6 (4), 7-6 (3)ರಿಂದ ನಾಲ್ಕನೇ ಶ್ರೇಯಾಂಕದ ಸಿದ್ಧಾರ್ಥ್ ರಾವತ್ ಅವರಿಗೆ ಆಘಾತ ನೀಡಿದರು.

ಪ್ರೀ ಕ್ವಾರ್ಟರ್‌ನ ಇನ್ನುಳಿದ ಪಂದ್ಯಗಳಲ್ಲಿ ಜಪಾನ್‌ನ ರೂಕಿ ಮತ್ಸುದಾ 6-2, 6-0ರಿಂದ ಭಾರತದ ರಾಘವ್ ಜೈಸಿಂಘಾನಿ ಎದುರು, ಆಸ್ಟ್ರಿಯಾದ ಡೇವಿಡ್ ಪಿಚ್ಲರ್ 7-6 (6), 6-3ರಿಂದ ಅಮೆರಿಕದ ಆ್ಯಡಂ ಹ್ಯಾರಿಸನ್ ವಿರುದ್ಧ, ಜಪಾನ್‌ನ ರಿಯೊತಾರೊ ತಗುಚಿ 7-5, 6-1ರಿಂದ ಭಾರತದ ಕರಣ್ ಸಿಂಗ್ ಮೇಲೆ, ಜಪಾನ್‌ನ ಸಿಯೆಟಾ ವಾಟನಬೆ 6-2, 6-3ರಿಂದ ಭಾರತದ ರಿಷಿ ರೆಡ್ಡಿ ವಿರುದ್ಧ ಗೆದ್ದು ಮುನ್ನಡೆದರು.



ಐಟಿಎಫ್ ಪುರುಷರ ಟೆನಿಸ್ ಟೂರ್ನಿಯ ಸಿಂಗಲ್ಸ್ ವಿಭಾಗದ ಪ್ರಿಕ್ವಾರ್ಟರ್ ಫೈನಲ್ ಪಂದ್ಯದಲ್ಲಿ ಭಾರತದ ಆಟಗಾರ ರಿಷಭ್ ಅಗರವಾಲ್ ಆಟದ ವೈಖರಿ
–ಪ್ರಜಾವಾಣಿ ಚಿತ್ರ/ ತಾಜುದ್ದೀನ್ ಆಜಾದ್

ಬ್ಯಾಡ್ಮಿಂಟನ್: ಎಂಟರ ಘಟ್ಟಕ್ಕೆ ಪ್ರಿಯಾಂಶು ರಾಜಾವತ್

ಲಖನೌ (ಪಿಟಿಐ): ಭಾರತದ ಪ್ರಿಯಾಂಶು ರಾಜಾವತ್ ಗುರುವಾರ ಸೈಯ್ಯದ್ ಮೋದಿ ಅಂತರ ರಾಷ್ಟ್ರೀಯ ಬ್ಯಾಡ್ಮಿಂಟನ್ ಟೂರ್ನಿಯ ಪುರುಷರ ಸಿಂಗಲ್ಸ್‌ನಲ್ಲಿ ಕ್ವಾರ್ಟರ್ ಫೈನಲ್ ಪ್ರವೇಶಿಸಿದರು.

ಮಹಿಳೆಯರ ಡಬಲ್ಸ್‌ನಲ್ಲಿ ಟ್ರೀಸಾ ಜೋಳಿ ಮತ್ತು ಗಾಯತ್ರಿ ಗೋಪಿಚಂದ್ ಜೋಡಿಯು ಎಂಟರ ಘಟ್ಟ ಪ್ರವೇಶಿಸಿತು.

ಪ್ರಿಯಾಂಶು ಎರಡನೇ ಸುತ್ತಿನಲ್ಲಿ 18-21, 6-11ರಿಂದ ಹಿಂದೆ ಇದ್ದಾಗ ಸ್ವದೇಶದ ತೀಶ್ ಕುಮಾರ್ ಕರುಣಾಕರನ್ ಪಂದ್ಯದಿಂದ ನಿವೃತ್ತಿಯಾದರು. ಹೀಗಾಗಿ, ಪ್ರಿಯಾಂಶು ಎಂಟರ ಘಟ್ಟ ಪ್ರವೇಶಿಸಿದರು.

ಟ್ರೀಸಾ ಮತ್ತು ಗಾಯತ್ರಿ ಅವರು 21-9, 21-5ರಿಂದ ಭಾರತದವರೇ ಆದ ಧನ್ಯಾ ನಂದಕುಮಾರ್ ಮತ್ತು ರಿಧಿ ಕೌರ್ ತೂರ್ ಅವರನ್ನು ಮಣಿಸಿ ಕ್ವಾರ್ಟರ್ ಫೈನಲ್ ಪ್ರವೇಶಿಸಿದರು.

ರಾಜತಾಂತ್ರಿಕ ನಿಪುಣ ಹೆನ್ರಿ ಕಿಸಿಂಜರ್ ಇನ್ನಿಲ್ಲ

ವಾಷಿಂಗ್ಟನ್ (ರಾಯಿಟರ್ಸ್/ಪಿಟಿಐ): ಶೀತಲ ಸಮರದ ಕಾಲಘಟ್ಟದಲ್ಲಿ ಅಮೆರಿಕದ ವಿದೇಶಾಂಗ ನೀತಿ ರೂಪಿಸುವಲ್ಲಿ ನಿರ್ಣಾಯಕ ಪಾತ್ರ ವಹಿಸಿದ್ದ ಮಾಜಿ ವಿದೇಶಾಂಗ ಕಾರ್ಯದರ್ಶಿ ಹಾಗೂ ನೊಬೆಲ್ ಪುರಸ್ಕೃತ ಹೆನ್ರಿ ಕಿಸಿಂಜರ್ (100) ಬುಧವಾರ ನಿಧನರಾದರು.

ಕನೆಕ್ಟಿಕಟ್‌ನ ತಮ್ಮ ಮನೆಯಲ್ಲಿ ನಿಧನರಾಗಿದ್ದಾರೆ ಎಂದು ರಾಜಕೀಯ ಸಲಹಾ ಸಂಸ್ಥೆ ಕಿಸಿಂಜರ್ ಅಸೋಸಿಯೇಟ್ಸ್ ತಿಳಿಸಿದೆ. ಆದರೆ, ಸಾವಿಗೆ ನಿಖರ ಕಾರಣ ತಿಳಿಸಿಲ್ಲ.

ಏಕಕಾಲಕ್ಕೆ ಶ್ವೇತಭವನದ ವಿದೇಶಾಂಗ ಕಾರ್ಯದರ್ಶಿ ಹಾಗೂ ರಾಷ್ಟ್ರೀಯ ಭದ್ರತಾ ಸಲಹೆಗಾರ ಹುದ್ದೆ ನಿಭಾಯಿಸಿದ್ದು ಹೆನ್ರಿ ಅವರ ಹೆಗ್ಗಳಿಕೆ. ವಿಯೆಟ್ನಾಂ ಯುದ್ಧ, ಪ್ಯಾರಿಸ್ ಶಾಂತಿ ಒಪ್ಪಂದ, ಅಮೆರಿಕ ಮತ್ತು ರಷ್ಯಾ ನಡುವಣ ಶಸ್ತ್ರಾಸ್ತ್ರ ಮಾತುಕತೆ, 70ರ ದಶಕದಲ್ಲಿ ಚೀನಾದೊಂದಿಗೆ ಅಮೆರಿಕದ ರಾಜತಾಂತ್ರಿಕ ಸಂಬಂಧದ ಬೆಸುಗೆಯಲ್ಲಿ ಪ್ರಮುಖ ಪಾತ್ರವಹಿಸಿದ್ದರು.

ಅಧ್ಯಕ್ಷರಾಗಿದ್ದ ರಿಚರ್ಡ್ ನಿಕ್ಸನ್, ಜೆರಾಲ್ಡ್ ಫೋರ್ಡ್ ಅವಧಿಯಲ್ಲಿ ವಿದೇಶಾಂಗ ಕಾರ್ಯದರ್ಶಿಯಾಗಿ ಸೇವೆ ಸಲ್ಲಿಸಿದ್ದು, ಅವರ ಹಿರಿಮೆ.

ಹೆನ್ರಿ ಅವರು 1923ರ ಮೇ 27ರಂದು ಜರ್ಮನಿಯ ಯಹೂದಿ ಕುಟುಂಬದಲ್ಲಿ ಜನಿಸಿದರು. 15ನೇ ವಯಸ್ಸಿಗೆ ನಿರಾಶ್ರಿತರಾಗಿ ಅಮೆರಿಕಕ್ಕೆ ಕಾಲಿಟ್ಟ ಅವರು ಅಲ್ಲಿಯೇ ಶಿಕ್ಷಣ ಪಡೆದು ಸೈನ್ಯದಲ್ಲಿ ಸೇವೆ ಸಲ್ಲಿಸಿದರು. 1943ರಲ್ಲಿ ಅಮೆರಿಕದ ಪೌರತ್ವ ಸಿಕ್ಕಿತು.

ಹಂತ ಹಂತವಾಗಿ ಹಲವು ಹುದ್ದೆಗೇರಿದ ಹೆನ್ರಿ, ಅಮೆರಿಕದ ಅಧ್ಯಕ್ಷ ಸ್ಥಾನದ ಆಕಾಂಕ್ಷಿಯಾಗಿದ್ದ ನ್ಯೂಯಾರ್ಕ್ ಗವರ್ನರ್ ನೆಲ್ಸನ್ ರಾಕ್‌ಫೆಲ್ಲರ್ ಅವರಿಗೆ ಸಲಹೆಗಾರರಾಗಿದ್ದರು. ಆದರೆ, ರಾಕ್‌ಫೆಲ್ಲರ್ ಅವರ ರಾಜಕೀಯ ವಿರೋಧಿಯಾಗಿದ್ದ ರಿಚರ್ಡ್ ನಿಕ್ಸನ್ 1968ರಲ್ಲಿ ಮೇಲುಗೈ ಸಾಧಿಸಿದ ತಕ್ಷಣವೇ, ನಿಕ್ಸನ್ ಬಣಕ್ಕೆ ಸೇರಿದರು.

ನೊಬೆಲ್ ವಿವಾದ: ವಿಯೆಟ್ನಾಂ ಮೇಲೆ ಅಮೆರಿಕ ನಡೆಸಿದ ಯುದ್ಧದಲ್ಲಿ ಹೆನ್ರಿ ಅವರ ಪಾತ್ರವಿದೆ ಎಂದು ಹೇಳಲಾಗಿದೆ. 1973ರಲ್ಲಿ ವಿಯೆಟ್ನಾಂ ಕದನ ವಿರಾಮಕ್ಕೆ ಜಂಟಿಯಾಗಿ ಸಂಧಾನದ ಹೊಣೆ ಹೊತ್ತಿದ್ದರು ಎಂದು ಹೆನ್ರಿಗೆ ಜಂಟಿಯಾಗಿ ನೊಬೆಲ್ ಶಾಂತಿ ಪ್ರಶಸ್ತಿ ಘೋಷಿಸಲಾಗಿತ್ತು. ಇದನ್ನು ಖಂಡಿಸಿ ಆಯ್ಕೆ ಸಮಿತಿಯ ಇಬ್ಬರು ಸದಸ್ಯರು ರಾಜೀನಾಮೆ ನೀಡಿದ್ದರು. ವಿಯೆಟ್ನಾಂನ ಜಂಟಿ ಸಂಧಾನಕಾರ ಲಿ ಡಕ್ ತೋ, ಒಟ್ಟಾಗಿ ನೊಬೆಲ್ ಸ್ವೀಕರಿಸಲು ನಿರಾಕರಿಸಿದ್ದರು.

ಕಾಂಬೋಡಿಯಾದಲ್ಲಿ ನಡೆದ ಬಾಂಬ್‌ದಾಳಿಯಲ್ಲಿ ಸಾವಿರಾರು ಜನರು ಜೀವತೆತ್ತಿದ್ದರು. ಇದರ ಹಿಂದೆ ಹೆನ್ರಿ ಅವರ ಪಾತ್ರವಿದೆ ಎಂದು ಆರೋಪಿಸಲಾಗಿತ್ತು. 'ವಾಟರ್‌ಗೇಟ್' ಹಗರಣದ ಬಳಿಕ ನಿಕ್ಸನ್ ಅಧಿಕಾರದಿಂದ ಕೆಳಗಿಳಿದರು. ಬಳಿಕ ಅಧ್ಯಕ್ಷ ಗಾದಿಗೆ ಹೇರಿದ್ದ ಜೆರಾಲ್ಡ್ ಫೋರ್ಡ್ ಅವಧಿಯಲ್ಲಿಯೂ ಹೆನ್ರಿ ವಿದೇಶಾಂಗ ಕಾರ್ಯದರ್ಶಿಯಾಗಿ ಸೇವೆ ಸಲ್ಲಿಸಿದರು.


ಹೆನ್ರಿ ಕಿಸಿಂಜರ್

ಪ್ರಧಾನಿ ಮೋದಿ ಅಭಿಮಾನಿ

ಎಪ್ಪತ್ತರ ದಶಕದಲ್ಲಿ ಇಂದಿರಾ ಗಾಂಧಿ ಅವರ ಆಡಳಿತದ ಬಗ್ಗೆ ಹೆನ್ರಿ ಅವರು ತಿರಸ್ಕಾರದ ಮಾತುಗಳನ್ನಾಡಿದ್ದರು. ಆದರೆ, ನರೇಂದ್ರ ಮೋದಿ ಅವರು ಭಾರತದ ಪ್ರಧಾನಿಯಾದ ಬಳಿಕ ಭಾರತ–ಅಮೆರಿಕದ ನಡುವಣ ರಾಜತಾಂತ್ರಿಕ ಸಂಬಂಧದ ಬಲವರ್ಧನೆಯ ಪ್ರತಿಪಾದಕರಲ್ಲಿ ಅವರು ಒಬ್ಬರಾಗಿದ್ದರು.

ಕಳೆದ ವರ್ಷದ ಜೂನ್‌ನಲ್ಲಿ ಮೋದಿ ಅಮೆರಿಕಕ್ಕೆ ಭೇಟಿ ನೀಡಿದ್ದರು. ಈ ವೇಳೆ ಉಪಾಧ್ಯಕ್ಷೆ ಕಮಲಾ ಹ್ಯಾರಿಸ್ ಮತ್ತು ವಿದೇಶಾಂಗ ಕಾರ್ಯದರ್ಶಿ ಆ್ಯಂಟನಿ ಬ್ಲಿಂಕನ್ ಜಂಟಿಯಾಗಿ ಆಯೋಜಿಸಿದ್ದ ಔತಣದಲ್ಲಿ ಮೋದಿ ಅವರ ಭಾಷಣ ಕೇಳಲು ಅನಾರೋಗ್ಯದ ನಡುವೆಯೂ ಹೆನ್ರಿ, ವಾಷಿಂಗ್ಟನ್‌ಗೆ ಆಗಮಿಸಿದ್ದರು. ಮೋದಿ ಅವರ ಅಭಿಮಾನಿಯೂ ಆಗಿದ್ದರು ಎಂದು ಹೇಳಲಾಗಿದೆ.

ಇಂದಿರಾ ವಿರುದ್ಧ ಅವಾಚ್ಯ ಪದ ಬಳಸಿದ್ದರು

ರಿಚರ್ಡ್ಸ್ ನಿಕ್ಸನ್, ಹೆನ್ರಿ ಕಿಸಿಂಜರ್ ಅವರಿಗೆ ಮಾಜಿ ಪ್ರಧಾನಿ ಇಂದಿರಾ ಗಾಂಧಿ ಅವರ ಆಡಳಿತದ ಪರ ಅಷ್ಟು ಒಲವು ಇರಲಿಲ್ಲ. ಹಾಗಾಗಿ, ನಿಕ್ಸನ್ ಅವಧಿಯಲ್ಲಿ ಭಾರತದೊಂದಿಗಿನ ಅಮೆರಿಕದ ಸಂಬಂಧವೂ ಹಳಿ ತಪ್ಪಿತ್ತು ಎಂದು ರಾಜಕೀಯ ತಜ್ಞರು ಹೇಳುತ್ತಾರೆ.

ಬಾಂಗ್ಲಾ ಬಿಕ್ಕಟ್ಟು ಉಭಯ ರಾಷ್ಟ್ರಗಳ ನಡುವಿನ ದ್ವಿಪಕ್ಷೀಯ ಸಂಬಂಧ ಹದಗೆಡಲು ಮೂಲ ಕಾರಣವಾಗಿತ್ತು. ಬಾಂಗ್ಲಾ ವಿಮೋಚನೆ ವೇಳೆ ಇಂದಿರಾ ಗಾಂಧಿ ಹಾಗೂ ಭಾರತೀಯರ ವಿರುದ್ಧ ನಿಕ್ಸನ್, ಹೆನ್ರಿ ಅವಾಚ್ಯ ಪದಗಳನ್ನು ಬಳಸಿದ್ದು ದೊಡ್ಡ ಸುದ್ದಿಯಾಗಿತ್ತು. ಬಳಿಕ ಇದಕ್ಕೆ ಅವರು ವಿಷಾದಿಸಿದ್ದರು.

ಹವಾಮಾನ ಬದಲಾವಣೆ ತಡೆಗೆ ಹಣಕಾಸು ನೆರವು: ಮೋದಿ ಆಗ್ರಹ

ನವದೆಹಲಿ (ರಾಯಿಟರ್ಸ್): ಪ್ರವರ್ಧಮಾನಕ್ಕೆ ಬರುತ್ತಿರುವ ದೇಶಗಳಿಗೆ, ಹವಾಮಾನ ಬದಲಾವಣೆಯನ್ನು ತಡೆಯುವ ಕಾರ್ಯಗಳಿಗೆ ಹಣಕಾಸಿನ ನೆರವು ಅಗತ್ಯವಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಹೇಳಿದ್ದಾರೆ. ಅಷ್ಟೇ ಅಲ್ಲದೆ, ಪ್ರವರ್ಧಮಾನಕ್ಕೆ ಬರುತ್ತಿರುವ ಅರ್ಥ ವ್ಯವಸ್ಥೆಗಳಿಗೆ (ದೇಶಗಳಿಗೆ) ತಂತ್ರಜ್ಞಾನದ ನೆರವು ಬೇಕು, ಅಭಿವೃದ್ಧಿ ಚಟುವಟಿಕೆಗಳನ್ನು ಮುಂದುವರಿಸುವ ಹಕ್ಕು ಕೂಡ ಅವುಗಳಿಗೆ ಇರಬೇಕು ಎಂದು ಅವರು ಹೇಳಿದ್ದಾರೆ.

ದುಬೈನಲ್ಲಿ ನಡೆಯುತ್ತಿರುವ ವಿಶ್ವಸಂಸ್ಥೆಯ ಹವಾಮಾನ ಶೃಂಗದಲ್ಲಿ ಪಾಲ್ಗೊಳ್ಳಲು ಮೋದಿ ಅವರು ಗುರುವಾರ ದುಬೈಗೆ ತೆರಳಿದ್ದಾರೆ. ದುಬೈಗೆ ತೆರಳುವ ಮೊದಲು ಅವರು ಈ ಮಾತು ಹೇಳಿದ್ದಾರೆ. ಸಿಒಪಿ28 ಹೆಸರಿನ ಈ ಶೃಂಗವು ಗುರುವಾರ ಆರಂಭವಾಗಿದ್ದು, ಎರಡು ವಾರಗಳ ಕಾಲ ಅಲ್ಲಿ ಮಾತುಕತೆಗಳು ನಡೆಯಲಿವೆ.

ಪಳೆಯುಳಿಕೆ ಇಂಧನಗಳು ಪರಿಸರದ ಮೇಲೆ ಬೀರುವ ಪ್ರಭಾವ ತಗ್ಗಿಸಲು ಕಲ್ಲಿದ್ದಲು, ತೈಲ, ಅನಿಲದ ಬಳಕೆಯನ್ನು ಹಂತಹಂತವಾಗಿ ನಿಲ್ಲಿಸುವುದಕ್ಕೆ ಆದ್ಯತೆ ನೀಡಬೇಕೋ ಅಥವಾ ತಂತ್ರಜ್ಞಾನವನ್ನು ಹೆಚ್ಚಿನ ಪ್ರಮಾಣದಲ್ಲಿ ಬಳಕೆ ಮಾಡುವುದಕ್ಕೆ ಆದ್ಯತೆ ನೀಡಬೇಕೋ ಎಂಬ ವಿಚಾರದಲ್ಲಿ ರಾಷ್ಟ್ರಗಳ ನಡುವೆ ಒಮ್ಮತ ಇಲ್ಲ.

ಅಭಿವೃದ್ಧಿ ಹೊಂದಿರುವ ದೇಶಗಳು ತಮ್ಮ ಪಾಲಿಗೆ ಬರುವುದಕ್ಕಿಂತ ಹೆಚ್ಚಿನ ಪ್ರಮಾಣದಲ್ಲಿ ಪಳೆಯುಳಿಕೆ ಇಂಧನವನ್ನು ಬಳಸಿವೆ ಎಂದು ಚೀನಾ ಮತ್ತು ಭಾರತದಂತಹ ಪ್ರವರ್ಧಮಾನಕ್ಕೆ ಬರುತ್ತಿರುವ ದೇಶಗಳು ಆರೋಪಿಸುತ್ತಿವೆ. ಪ್ರಧಾನಿ ಮೋದಿ ಅವರ ಕಚೇರಿ ಬಿಡುಗಡೆ ಮಾಡಿರುವ ಪ್ರಕಟಣೆಯು, 'ಪ್ರವರ್ಧಮಾನಕ್ಕೆ ಬರುತ್ತಿರುವ ಅರ್ಥ ವ್ಯವಸ್ಥೆಗಳಿಗೆ ಪಳೆಯುಳಿಕೆ ಇಂಧನದ ಲಭ್ಯತೆಯು ಸಮಾನವಾಗಿ ಇರಬೇಕು' ಎಂದು ಹೇಳಿದೆ.

ಕೇಂದ್ರ ವಿದೇಶಾಂಗ ವ್ಯವಹಾರಗಳ ಕಾರ್ಯದರ್ಶಿ ವಿನಯ್ ಕ್ವಾತ್ರಾ ಅವರು ಗುರುವಾರ, 'ಮುಂಬರುವ ವರ್ಷಗಳಲ್ಲಿಯೂ ಭಾರತದಲ್ಲಿ ಕಲ್ಲಿದ್ದಲು ಬಳಕೆ ಮುಂದುವರಿಯಲಿದೆ' ಎಂದು ಹೇಳಿದ್ದಾರೆ. 'ದೇಶದ ಇಂಧನದ ಅಗತ್ಯ ಪೂರೈಸಿಕೊಳ್ಳುವಲ್ಲಿ ಕಲ್ಲಿದ್ದಲು ಈಗಲೂ ಪ್ರಮುಖವಾಗಿದೆ, ಮುಂದೆಯೂ ಇರಲಿದೆ' ಎಂದು ಅವರು ಹೇಳಿದ್ದಾರೆ.


ಧಾರಾಕಾರ ಮಳೆಯಿಂದಾಗಿ ಚೆನ್ನೈ ನಗರದ ಬಡಾವಣೆಯೊಂದರ ವಸತಿ ಪ್ರದೇಶವು ಗುರುವಾರ ಜಲಾವೃತಗೊಂಡಿತ್ತು –ಎಎಫ್‌ಪಿ ಚಿತ್ರ

ವಾಯುಭಾರ ಕುಸಿತ: ಡಿ.3ರ ವೇಳೆಗೆ ಚಂಡಮಾರುತ ಸಾಧ್ಯತೆ

ಪ್ರಜಾವಾಣಿ ವಾರ್ತೆ

ಚೆನ್ನೈ: ವಾಯುಭಾರ ಕುಸಿತದಿಂದಾಗಿ ಬಂಗಾಲಕೊಲ್ಲಿ ಸಮುದ್ರದ ಕಡಿಮೆ ಒತ್ತಡ ವಲಯದಲ್ಲಿ ಶನಿವಾರದ (ಡಿ.3) ವೇಳೆಗೆ ಚಂಡಮಾರುತ ಮೂಡುವ ಸಾಧ್ಯತೆಗಳಿವೆ ಎಂದು ಭಾರತೀಯ ಹವಾಮಾನ ಇಲಾಖೆಯು ಅಂದಾಜು ಮಾಡಿದೆ.

ಪರಿಣಾಮ, ತಮಿಳುನಾಡಿನ ವಿವಿಧೆಡೆ ಮುಂದಿನ ಐದು ದಿನ ಭಾರಿ ಮಳೆಯಾಗಬಹುದು ಎಂದು ಮುನ್ಸೂಚನೆ ನೀಡಿದೆ. ಬುಧವಾರವಷ್ಟೇ ಭಾರಿ ಮಳೆ ಸುರಿದಿದ್ದು, ಚೆನ್ನೈ ಮತ್ತು ನೆರೆಯ ತಿರುವಲ್ಲೂರು, ಕಾಂಚೀಪುರ, ಚೆಂಗಾಲಪಟ್ಟು ಜಿಲ್ಲೆಗಳಲ್ಲಿ ಪರಿಸ್ಥಿತಿ ಸಹಜ ಸ್ಥಿತಿಗೆ ಮರಳುತ್ತಿತ್ತು.

ಚೆನ್ನೈನಲ್ಲಿ ಮಳೆಯ ಸರಾಸರಿ ಪ್ರಮಾಣ 9.8 ಸೆಂ.ಮೀ ಆಗಿದೆ. 'ಚೆನ್ನೈ ಮತ್ತು ತಮಿಳುನಾಡಿನ ಉತ್ತರ ಭಾಗದ ಜಿಲ್ಲೆಗಳಲ್ಲಿ ನವೆಂಬರ್ 30ರಿಂದ ಡಿಸೆಂಬರ್ 4ರ ಅವಧಿಯಲ್ಲಿ ಧಾರಾಕಾರ ಮಳೆಯಾಗುವ ಸೂಚನೆಗಳಿವೆ' ಎಂದು ಇಲಾಖೆ ತಿಳಿಸಿದೆ.

ಚಂಡಮಾರುತವು ಮೊದಲು ಪಶ್ಚಿಮಾಭಿಮುಖವಾಗಿ, ಡಿ. 3ರ ನಂತರ ಉತ್ತರಾಭಿಮುಖವಾಗಿ ಸಾಗಲಿದೆ. ಇದರಿಂದಾಗಿ, ತಮಿಳುನಾಡಿನ ಉತ್ತರದ ಪ್ರದೇಶಗಳು, ಆಂಧ್ರಪ್ರದೇಶದ ದಕ್ಷಿಣ ಭಾಗದ ಜಿಲ್ಲೆಗಳಲ್ಲಿ ಮಳೆಯಾಗಬಹುದು ಎಂದು ತಿಳಿಸಿದೆ.

ಬುಧವಾರ ಸುರಿದ ಮಳೆಯಿಂದಾಗಿ ಚೆನ್ನೈನಲ್ಲಿ ತಗ್ಗು ಭಾಗದ ಹಲವು ಪ್ರದೇಶಗಳಲ್ಲಿ ಇನ್ನೂ ನೀರು ನಿಂತಿದೆ. ಒಳವಲಯದ ಹಲವು ರಸ್ತೆಗಳು ಜಲಾವೃತಗೊಂಡಿವೆ.

ಮುಖ್ಯಮಂತ್ರಿ ಎಂ.ಕೆ.ಸ್ಟಾಲಿನ್ ಅವರು ಗ್ರೇಟರ್ ಚೆನ್ನೈ ಕಾರ್ಪೊರೇಷನ್ (ಜಿಸಿಸಿ) ಸ್ಥಾಪಿಸಿರುವ ನಿಯಂತ್ರಣ ಕೊಠಡಿಗೆ ಭೇಟಿ ನೀಡಿದ್ದು, ವಸ್ತುಸ್ಥಿತಿ ಮಾಹಿತಿ ಪಡೆದರು. ಪರಿಸ್ಥಿತಿಯನ್ನು ಎದುರಿಸಲು ಎಲ್ಲ ಇಲಾಖೆಗಳು ಒಟ್ಟಾಗಿ ಕಾರ್ಯನಿರ್ವಹಿಸಬೇಕು ಎಂದು ನಿರ್ದೇಶನ ನೀಡಿದ್ದಾರೆ.

ಜೋಶಿಮಠ ಮರುನಿರ್ಮಾಣ ಯೋಜನೆ

ನವದೆಹಲಿ (ಪಿಟಿಐ): ಭೂಕುಸಿತದಿಂದ ನಲುಗಿದ್ದ ಜೋಶಿಮಠದಲ್ಲಿ ₹ 1,658 ಕೋಟಿ ಮೊತ್ತದ ಮರುನಿರ್ಮಾಣ ಯೋಜನೆಗೆ ಕೇಂದ್ರ ಒಪ್ಪಿಗೆ ನೀಡಿದೆ.

ಕೇಂದ್ರ ಗೃಹ ಸಚಿವ ಅಮಿತ್ ಶಾ ನೇತೃತ್ವದಲ್ಲಿ ಗುರುವಾರ ನಡೆದ ಉನ್ನತ ಮಟ್ಟದ ಸಭೆ ಈ ನಿರ್ಧಾರ ತೆಗೆದುಕೊಳ್ಳಲಾಗಿದೆ ಎಂದು ಪ್ರಕಟಣೆ ತಿಳಿಸಿದೆ.

ಮರುನಿರ್ಮಾಣ ಯೋಜನೆಗೆ ಎನ್‌ಡಿಆರ್‌ಎಫ್‌ನಿಂದ ₹ 1,079.96 ಕೋಟಿ, ಉತ್ತರಾಖಂಡ ಸರ್ಕಾರ ಎಸ್‌ಡಿಆರ್‌ಎಫ್ ₹ 126.41 ಕೋಟಿ ಹಾಗೂ ರಾಜ್ಯ ಬಜೆಟ್‌ನಿಂದ ₹ 451.80 ಕೋಟಿ ನೀಡಲಿದೆ.

ಟಿ20 ಕ್ರಿಕೆಟ್: ಸರಣಿ ಜಯದ ಆಸೆ ಜೀವಂತವಿರಿಸುವ ಛಲದಲ್ಲಿ ಆಸ್ಟ್ರೇಲಿಯಾ

ಭಾರತಕ್ಕೆ ಬೌಲರ್‌ಗಳದ್ದೇ ಚಿಂತೆ

ರಾಯಪುರ್ (ಪಿಟಿಐ): ಸೂರ್ಯ ಕುಮಾರ್ ಯಾದವ್ ನಾಯಕತ್ವದ ಭಾರತ ಕ್ರಿಕೆಟ್ ತಂಡ ಶುಕ್ರವಾರ ಆಸ್ಟ್ರೇಲಿಯಾ ಎದುರಿನ ಸರಣಿಯ ನಾಲ್ಕನೇ ಟಿ20 ಪಂದ್ಯದಲ್ಲಿ ಆಡಲಿದೆ.

2–1ರಿಂದ ಮುಂದಿರುವ ಭಾರತ ತಂಡವು ಸರಣಿ ಕೈವಶ ಮಾಡಿಕೊಳ್ಳಲು ಇದು ಸುಸಂದರ್ಭ. ಇಲ್ಲದಿದ್ದರೆ ಬೆಂಗಳೂರಿನಲ್ಲಿ ನಡೆಯುವ ಕೊನೆಯ ಪಂದ್ಯದಲ್ಲಿ ಕಠಿಣ ಹಾದಿ ಸವೆಸಬೇಕಾಗಬಹುದು. ಗುವಾಹಟಿಯಲ್ಲಿ ನಡೆದಿದ್ದ ಮೂರನೇ ಪಂದ್ಯದಲ್ಲಿ ಋತುರಾಜ್ ಗಾಯಕವಾಡ್ ಅವರ ಸಿಡಿಲಬ್ಬರದ ಶತಕದಿಂದಾಗಿ ಭಾರತ ತಂಡವು ಬೃಹತ್ ಗುರಿಯನ್ನು ಒಡ್ಡಿತ್ತು. ಆದರೆ, ಆಸ್ಟ್ರೇಲಿಯಾದ ಗ್ಲೆನ್ ಮ್ಯಾಕ್ಸ್‌ವೆಲ್ ಅವರ ಮಿಂಚಿನ ಶತಕವನ್ನು ತಡೆಯಲು ಭಾರತದ ಬೌಲರ್‌ಗಳಿಗೆ ಸಾಧ್ಯವಾಗ ಲಿಲ್ಲ. ಆದ್ದರಿಂದ ಪಂದ್ಯದಲ್ಲಿ ಸೋತಿತು.

ವೇಗಿ ಪ್ರಸಿದ್ಧ ಕೃಷ್ಣ ಕೇವಲ ನಾಲ್ಕು ಓವರ್‌ಗಳಲ್ಲಿ 68 ರನ್‌ಗಳನ್ನು ಕೊಟ್ಟರು. ಅದರಲ್ಲೂ ನಿರ್ಣಾಯಕವಾಗಿದ್ದ ಕೊನೆಯ ಓವರ್‌ನಲ್ಲಿ 21 ರನ್‌ಗಳನ್ನು ಬಿಟ್ಟುಕೊಟ್ಟರು. ಆವೇಶ್ ಖಾನ್ ಕೂಡ ಲೈನ್ ಮತ್ತು ಲೆಂಗ್ತ್ ಕಾಪಾಡಿಕೊಳ್ಳುವಲ್ಲಿ ಯಶಸ್ವಿಯಾಗಲಿಲ್ಲ. ಇದೀಗ ತಂಡಕ್ಕೆ ದೀಪಕ್ ಚಾಹರ್ ಮರಳಿದ್ದಾರೆ. ಆದ್ದರಿಂದ ಅವರ ಮೇಲೆ ಹೊಸ ಚೆಂಡಿನ ಓವರ್‌ಗಳನ್ನು ನಿರ್ವಹಿಸುವ ಹೊಣೆ ಬೀಳುವ ಸಾಧ್ಯತೆ ಇದೆ. ನವವಿವಾಹಿತ ಮುಕೇಶ್ ಕುಮಾರ್ ಒಂದು ಪಂದ್ಯದ ಅನುಪಸ್ಥಿತಿಯ ನಂತರ ತಂಡಕ್ಕೆ ಮರಳಲಿದ್ದಾರೆ.ಅರ್ಷದೀಪ್ ಸಿಂಗ್ ಅವರು ತಮ್ಮ ಎಸೆತಗಳನ್ನು



ಭಾರತ ತಂಡದ ನಾಯಕ ಸೂರ್ಯಕುಮಾರ್ ಯಾದವ್ (ಬಲ) ಮತ್ತು ಋತುರಾಜ್ ಗಾಯಕವಾಡ್ –ಪಿಟಿಐ ಚಿತ್ರ

ಇನ್ನಷ್ಟು ಪರಿಣಾಮಕಾರಿಯಾಗಿ ಪ್ರಯೋಗಿಸುವ ಅಗತ್ಯ ಇದೆ.

ಸ್ಪಿನ್ನರ್ ಅಕ್ಷರ್ ಪಟೇಲ್ ಮತ್ತು ರವಿ ಬಿಷ್ಣೋಯಿ ಅವರು ಜೊತೆಯಾಟಗಳನ್ನು ಮುರಿಯುವಲ್ಲಿ ಸಫಲರಾದರೆ ಭಾರತದ ಹಾದಿ ಸುಗಮವಾಗಬಹುದು.

ಮರಳಿದ ಶ್ರೇಯಸ್: ವಿಶ್ವಕಪ್ ಟೂರ್ನಿಯ ನಂತರ ವಿಶ್ರಾಂತಿ ಪಡೆದಿದ್ದ ಶ್ರೇಯಸ್ ಅಯ್ಯರ್ ತಂಡಕ್ಕೆ ಮರಳಿದ್ದಾರೆ. ಆದ್ದರಿಂದ ಬ್ಯಾಟಿಂಗ್ ವಿಭಾಗ ಮತ್ತಷ್ಟು ಬಲಶಾಲಿಯಾಗಿದೆ. ಅವರಿಗಾಗಿ ತಿಲಕ್ ವರ್ಮಾ ಸ್ಥಾನ ಬಿಟ್ಟುಕೊಡಬಹುದು. ಇಲ್ಲದಿದ್ದರೆ ನಾಯಕ ಸೂರ್ಯಕುಮಾರ್ ವಿಶ್ರಾಂತಿ ಪಡೆಯುವ ಸಾಧ್ಯತೆಯೂ ಇದೆ. ಆಗ ಶ್ರೇಯಸ್ ಅವರೇ ತಂಡವನ್ನು ಮುನ್ನಡೆಸಬಹುದು.

ಯಶಸ್ವಿ ಜೈಸ್ವಾಲ್, ಇಶಾನ್ ಕಿಶನ್ ಮತ್ತು ರಿಂಕು ಸಿಂಗ್ ಅವರು ಉತ್ತಮ ಲಯದಲ್ಲಿದ್ದಾರೆ. ಆದರೆ ಈಗೊಮ್ಮೆ ಗೆಲುವಿನ ರುಚಿ ಕಂಡಿರುವ ಆಸ್ಟ್ರೇಲಿಯಾ ತಂಡವು ಸರಣಿ ಗೆಲುವಿನ ಆಸೆಯನ್ನು ಜೀವಂತವಾಗುಳಿಸಿಕೊಳ್ಳುವ ಛಲದಲ್ಲಿದೆ.

ಆದರೆ ಈ ಪಂದ್ಯದಲ್ಲಿ ತಂಡಕ್ಕೆ ಮ್ಯಾಕ್ಸ್‌ವೆಲ್ ಲಭ್ಯರಿಲ್ಲ. ವಿಶ್ವಕಪ್ ಫೈನಲ್ ಪಂದ್ಯದ ಹೀರೊ ಟ್ರಾವಿಸ್ ಹೆಡ್ ಮತ್ತು ವಿಕೆಟ್‌ಕೀಪರ್ ಜೋಶ್ ಇಂಗ್ಲಿಸ್ ತಂಡದಲ್ಲಿದ್ದಾರೆ. ಅವರನ್ನು ನಿಯಂತ್ರಿಸುವ ಸವಾಲು



ಆಸ್ಟ್ರೇಲಿಯಾ ತಂಡದ ನಾಯಕ ಮ್ಯಾಥ್ಯೂ ವೇಡ್

ಆತಿಥೇಯರ ಮುಂದಿದೆ.

ಮೊದಲ ಟಿ20 ಪಂದ್ಯ: ರಾಯಪುರದ ಶಹೀದ್ ವೀರ್ ನಾರಾಯಣ ಸಿಂಗ್ ಅಂತರರಾಷ್ಟ್ರೀಯ ಕ್ರೀಡಾಂಗಣದಲ್ಲಿ ನಡೆಯಲಿರುವ ಮೊದಲ ಅಂತರ ರಾಷ್ಟ್ರೀಯ ಟಿ20 ಪಂದ್ಯ ಇದಾಗಿದೆ.

ಹೋದ ಜನವರಿಯಲ್ಲಿ ಇಲ್ಲಿ ನಡೆದಿದ್ದ ಏಕದಿನ ಕ್ರಿಕೆಟ್ ಪಂದ್ಯದಲ್ಲಿ ಭಾರತವು ನ್ಯೂಜಿಲೆಂಡ್ ಎದುರು ಜಯಿಸಿತ್ತು. ಆ ಪಂದ್ಯದಲ್ಲಿ ಮೊಹಮ್ಮದ್ ಶಮಿ ಮತ್ತು ಬೌಲರ್‌ಗಳು ಪಾರಮ್ಯ ಮೆರೆದಿದ್ದರು. 60 ಸಾವಿರ ಪ್ರೇಕ್ಷಕರ ಆಸನ ಸಾಮರ್ಥ್ಯ ಇರುವ ಈ ಕ್ರೀಡಾಂಗಣದಲ್ಲಿ ಮುಸ್ಸಂಜೆಯ ನಂತರ ಇಬ್ಬನಿಯ ಪರಿಣಾಮ ಹೆಚ್ಚು. ಆದ್ದ ರಿಂದ ಟಾಸ್ ಜಯಿಸುವ ನಾಯಕ ತೆಗೆದು ಕೊಳ್ಳುವ ನಿರ್ಧಾರವೂ ಪ್ರಮುಖವಾಗಲಿದೆ.

ಪಂದ್ಯ ಆರಂಭ: ಸಂಜೆ 7
ನೇರಪ್ರಸಾರ: ಸ್ಪೋರ್ಟ್ 18 ನೆಟ್‌ವರ್ಕ್, ಜಿಯೊ ಸಿನೆಮಾ

ಶಾಂತೊ ಶತಕ: ಬಾಂಗ್ಲಾದೇಶಕ್ಕೆ ಉತ್ತಮ ಮುನ್ನಡೆ



ನಜ್ಮುಲ್ ಹುಸೇನ್ ಶಾಂತೊ

ಸಿಲೆಟ್ (ಪಿಟಿಐ): ನಾಯಕ ನಜ್ಮುಲ್ ಹುಸೇನ್ ಶಾಂತೊ ಅವರ ಅಮೋಘ ಶತಕದ ಬಲದಿಂದ ಬಾಂಗ್ಲಾದೇಶ ತಂಡವು ನ್ಯೂಜಿಲೆಂಡ್ ಎದುರಿನ ಟೆಸ್ಟ್ ಪಂದ್ಯದಲ್ಲಿ ಉತ್ತಮ ಮುನ್ನಡೆ ಗಳಿಸಿದೆ.

ನ್ಯೂಜಿಲೆಂಡ್ ತಂಡವು ಮೊದಲ ಇನಿಂಗ್ಸ್‌ನಲ್ಲಿ ಕೇವಲ 7 ರನ್‌ಗಳ ಮುನ್ನಡೆ ಪಡೆದು ಆಲೌಟ್ ಆದ ಮೇಲೆ ಬಾಂಗ್ಲಾ ಎರಡನೇ ಇನಿಂಗ್ಸ್ ಆರಂಭಿಸಿತು.

ಆರಂಭಿಕ ಬ್ಯಾಟರ್‌ಗಳಾದ ಮೆಹಮುದುಲ್ ಹಸನ್ ಮತ್ತು ಝಕೀರ್ ಹಸನ್ ಬೇಗನೆ ಔಟಾದರು. ಈ ಹಂತದಲ್ಲಿ ತಾಳ್ಮೆಯ ಬ್ಯಾಟಿಂಗ್ ಮಾಡಿದ ಶಾಂತೊ (104; 193ಎ, 4X10) ತಂಡದ ಕುಸಿತ ತಡೆದರು. ಇದರಿಂದಾಗಿ ಮೂರನೇ ದಿನದಾಟದ ಮುಕ್ತಾಯಕ್ಕೆ ಬಾಂಗ್ಲಾ ತಂಡವು 68 ಓವರ್‌ಗಳಲ್ಲಿ 3 ವಿಕೆಟ್‌ಗಳಿಗೆ 212 ರನ್ ಗಳಿಸಿತು. ಒಟ್ಟು 205 ರನ್‌ಗಳ ಮುನ್ನಡೆ ಸಾಧಿಸಿತು.

ಸಂಕ್ಷಿಪ್ತ ಸ್ಕೋರು: ಮೊದಲ ಇನಿಂಗ್ಸ್: **ಬಾಂಗ್ಲಾದೇಶ:** 85.1 ಓವರ್‌ಗಳಲ್ಲಿ 310. ನ್ಯೂಜಿಲೆಂಡ್: 101.5 ಓವರ್‌ಗಳಲ್ಲಿ 317. ಎರಡನೇ ಇನಿಂಗ್ಸ್: **ಬಾಂಗ್ಲಾದೇಶ:** 68 ಓವರ್‌ಗಳಲ್ಲಿ 3 ವಿಕೆಟ್‌ಗಳಿಗೆ 212 (ನಜ್ಮುಲ್ ಹುಸೇನ್ ಶಾಂತೊ ಬ್ಯಾಟಿಂಗ್ 104, ಮೊಮಿನುಲ್ ಹಕ್ 40, ಮುಷ್ಫಿಕುರ್ ರಹೀಂ ಬ್ಯಾಟಿಂಗ್ 43, ಎಜಾಜ್ ಪಟೇಲ್ 94ಕ್ಕೆ1)

ದಕ್ಷಿಣ ಆಫ್ರಿಕಾದಲ್ಲಿ ನಡೆಯುವ ಕ್ರಿಕೆಟ್ ಸರಣಿ

ಏಕದಿನ ತಂಡಕ್ಕೆ ರಾಹುಲ್ ನಾಯಕ

ನವದೆಹಲಿ (ಪಿಟಿಐ): ದಕ್ಷಿಣ ಆಫ್ರಿಕಾದಲ್ಲಿ ನಡೆಯಲಿರುವ ಏಕದಿನ ಕ್ರಿಕೆಟ್ ಸರಣಿಯಲ್ಲಿ ಭಾರತ ತಂಡವನ್ನು ಕನ್ನಡಿಗ ಕೆ.ಎಲ್. ರಾಹುಲ್ ಮುನ್ನಡೆಸುವರು.

ಇದೇ ಪ್ರವಾಸದಲ್ಲಿ ನಡೆಯುವ ಟಿ20 ಸರಣಿಯಲ್ಲಿ ಸೂರ್ಯಕುಮಾರ್ ಯಾದವ್ ನಾಯಕತ್ವ ವಹಿಸುವರು. ಸದ್ಯ ಆಸ್ಟ್ರೇಲಿಯಾ ಎದುರಿನ ಐದು ಪಂದ್ಯಗಳ ಸರಣಿಯಲ್ಲಿ ಅವರು ನಾಯಕರಾಗಿದ್ದಾರೆ.

ಗುರುವಾರ ನಡೆದ ಬಿಸಿಸಿಐ ಆಯ್ಕೆ ಸಮಿತಿ ಸಭೆಯಲ್ಲಿ ಈ ವಿಷಯ ನಿರ್ಧರಿಸಲಾಯಿತು. ಸಭೆಯಲ್ಲಿ ಮುಖ್ಯ ಕೋಚ್ ರಾಹುಲ್ ದ್ರಾವಿಡ್ ಹಾಜರಿದ್ದರು.

ಡಿಸೆಂಬರ್ 26ರಿಂದ ನಡೆಯುವ ಎರಡು ಟೆಸ್ಟ್‌ಗಳ ಸರಣಿಯಲ್ಲಿ ರೋಹಿತ್ ಶರ್ಮಾ ನಾಯಕತ್ವ ವಹಿಸುವರು. ವೇಗಿ ಜಸ್‌ಪ್ರೀತ್ ಬೂಮ್ರಾ ಉಪನಾಯಕರಾಗಿ ಆಡುವರು. ಕೆ.ಎಲ್.ರಾಹುಲ್ ವಿಕೆಟ್‌ಕೀಪಿಂಗ್ ಮಾಡುವರು.

ರೋಹಿತ್ ಮತ್ತು ವಿರಾಟ್ ಕೊಹ್ಲಿ ಅವರು ಸೀಮಿತ ಓವರ್‌ಗಳ ಸರಣಿಗಳಿಂದ ವಿಶ್ರಾಂತಿ ಪಡೆದಿದ್ದಾರೆ. ಆದ್ದರಿಂದ ಏಕದಿನ ತಂಡದಲ್ಲಿ ಆಡಲು ಬಿ. ಸಾಯಿ ಸುದರ್ಶನ್ ಮತ್ತು ರಿಂಕು



ಕೆ.ಎಲ್. ರಾಹುಲ್

ಸಿಂಗ್ ಅವರಿಗೆ ಅವಕಾಶ ದೊರೆತಿದೆ.

ಮೂರು ಟಿ20 ಪಂದ್ಯಗಳ ಸರಣಿಯು ಡಿಸೆಂಬರ್ 10ರಿಂದ ಆರಂಭವಾಗುತ್ತದೆ. ಡಿಸೆಂಬರ್ 17ರಿಂದ ಏಕದಿನ ಸರಣಿ ನಡೆಯಲಿದೆ.

ತಂಡಗಳು: ಟೆಸ್ಟ್: ರೋಹಿತ್ ಶರ್ಮಾ (ನಾಯಕ), ಶುಭಮನ್ ಗಿಲ್, ಯಶಸ್ವಿ ಜೈಸ್ವಾಲ್, ವಿರಾಟ್ ಕೊಹ್ಲಿ, ಶ್ರೇಯಸ್ ಅಯ್ಯರ್, ಋತುರಾಜ್ ಗಾಯಕವಾಡ, ಇಶಾನ್ ಕಿಶನ್ (ವಿಕೆಟ್‌ಕೀಪರ್), ಕೆ.ಎಲ್. ರಾಹುಲ್ (ವಿಕೆಟ್‌ಕೀಪರ್), ಆರ್. ಅಶ್ವಿನ್, ರವೀಂದ್ರ ಜಡೇಜ, ಶಾರ್ದೂಲ್ ಠಾಕೂರ್, ಮೊಹಮ್ಮದ್ ಸಿರಾಜ್, ಮುಕೇಶ್ ಕುಮಾರ್, ಮೊಹಮ್ಮದ್ ಶಮಿ, ಜಸ್‌ಪ್ರೀತ್ ಬೂಮ್ರಾ (ಉಪನಾಯಕ), ಪ್ರಸಿದ್ಧಕೃಷ್ಣ.

ಏಕದಿನ: ಕೆ.ಎಲ್. ರಾಹುಲ್ (ನಾಯಕ / ವಿಕೆಟ್ ಕೀಪರ್), ಋತುರಾಜ್ ಗಾಯಕವಾಡ, ಸಾಯಿ ಸುದರ್ಶನ್, ತಿಲಕ್ ವರ್ಮಾ, ರಜತ್ ಪಾಟೀದಾರ್, ರಿಂಕು ಸಿಂಗ್, ಶ್ರೇಯಸ್ ಅಯ್ಯರ್, ಸಂಜು ಸ್ಯಾಮ್ಸನ್ (ವಿಕೆಟ್‌ಕೀಪರ್), ಅಕ್ಷರ್ ಪಟೇಲ್, ವಾಷಿಂಗ್ಟನ್ ಸುಂದರ್, ಕುಲದೀಪ್ ಯಾದವ್, ಯಜುವೇಂದ್ರ ಚಾಹಲ್, ಮುಕೇಶ್ ಕುಮಾರ್, ಆವೇಶ್ ಖಾನ್, ಅರ್ಷದೀಪ್ ಸಿಂಗ್, ದೀಪಕ್ ಚಾಹರ್.

ಟಿ20: ಸೂರ್ಯಕುಮಾರ್ ಯಾದವ್ (ನಾಯಕ), ರವೀಂದ್ರ ಜಡೇಜ (ಉಪನಾಯಕ), ಯಶಸ್ವಿ ಜೈಸ್ವಾಲ್, ಶುಭಮನ್ ಗಿಲ್, ಋತುರಾಜ್ ಗಾಯಕವಾಡ್, ತಿಲಕ್ ವರ್ಮಾ, ರಿಂಕು ಸಿಂಗ್, ಶ್ರೇಯಸ್ ಅಯ್ಯರ್, ಇಶಾನ್ ಕಿಶನ್, ಜಿತೇಶ್ ಶರ್ಮಾ (ಇಬ್ಬರೂ ವಿಕೆಟ್‌ಕೀಪರ್), ವಾಷಿಂಗ್ಟನ್ ಸುಂದರ್, ರವಿ ಬಿಷ್ಣೋಯಿ, ಕುಲದೀಪ್ ಯಾದವ್, ಅರ್ಷದೀಪ್ ಸಿಂಗ್, ಮೊಹಮ್ಮದ್ ಸಿರಾಜ್, ಮುಕೇಶ್ ಕುಮಾರ್, ದೀಪಕ್ ಚಾಹರ್.

ಐ ಲೀಗ್ ಪಂದ್ಯ ಫಿಕ್ಸಿಂಗ್: ಎಐಎಫ್‌ಎಫ್

ನವದೆಹಲಿ (ಪಿಟಿಐ): ಐ ಲೀಗ್ ಫುಟ್‌ಬಾಲ್ ಟೂರ್ನಿಯ ಪಂದ್ಯಗಳನ್ನು ಫಿಕ್ಸಿಂಗ್ ಮಾಡಲು ಆಟಗಾರರನ್ನು ಕೆಲವರು ಸಂಪರ್ಕಿಸಿದ್ದರು. ಈ ಪ್ರಕರಣವನ್ನು ತನಿಖೆಗೊಳಪಡಿಸಲಾಗುವುದು ಎಂದು ಅಖಿಲ ಭಾರತ ಫುಟ್‌ಬಾಲ್ ಫೆಡರೇಷನ್ (ಎಐಎಫ್‌ಎಫ್) ತಿಳಿಸಿದೆ.

‘ನಮ್ಮ ಆಟಗಾರರನ್ನು ಕೆಲವರು ಹಲವು ಬಾರಿ ಸಂಪರ್ಕಿಸಿರುವ ಬಗ್ಗೆ ಮಾಹಿತಿ ಲಭಿಸಿದೆ. ಅದನ್ನು ಕೂಲಂಕಷವಾಗಿ ಪರಿಶೀಲಿಸಲಾಗುವುದು. ಸೂಕ್ತ ಕ್ರಮ ಕೈಗೊಳ್ಳಲಾಗುವುದು’ ಎಂದು ಎಐಎಫ್‌ಎಫ್ ಅಧ್ಯಕ್ಷ ಕಲ್ಯಾಣ್ ಚೌಬೆ ತಿಳಿಸಿದ್ದಾರೆ.

ಆದರೆ ಅವರು ತಮಗೆ ಯಾವ ಮೂಲದಿಂದ ಮಾಹಿತಿ ಲಭಿಸಿದೆ ಎಂಬುದನ್ನು ಸ್ಪಷ್ಟಪಡಿಸಲಿಲ್ಲ.

‘ನಮ್ಮ ಆಟಗಾರರು ಮತ್ತು ಈ ಸುಂದರ ಆಟದ ಸುರಕ್ಷತೆಯನ್ನು ಕಾಪಾಡಾಲು ಬದ್ಧವಾಗಿದ್ದೇವೆ. ಇಂತಹ ಪ್ರಕರಣಗಳನ್ನು ನಾವು ಸಹಿಸುವುದಿಲ್ಲ. ಇಂತಹ ಕೆಟ್ಟ ಚಟುವಟಿಕೆಗಳಿಂದ ಆಟ ಮತ್ತು ಆಟಗಾರರ ಭವಿಷ್ಯಕ್ಕೆ ಧಕ್ಕೆಯಾಗುತ್ತದೆ’ ಎಂದು ಕಳವಳ ವ್ಯಕ್ತಪಡಿಸಿದರು.

2023ರ ಐ ಲೀಗ್ ಟೂರ್ನಿಯಲ್ಲಿ ಅಕ್ಟೋಬರ್‌ನಲ್ಲಿ ಆರಂಭವಾಗಿತ್ತು. 40 ಪಂದ್ಯಗಳು ಈಗಾಗಲೇ ನಡೆದಿವೆ. 13 ತಂಡಗಳು ಕಣದಲ್ಲಿವೆ.

ವಿಶ್ವಕಪ್ ಫೈನಲ್ ಸೋತ ಬಳಿಕ ರೋಹಿತ್, ಕೊಹ್ಲಿ ಕಣ್ಣೀರು: ಅಶ್ವಿನ್



ಆರ್. ಅಶ್ವಿನ್

ಚೆನ್ನೈ (ಪಿಟಿಐ): ಏಕದಿನ ವಿಶ್ವಕಪ್‌ನ ಫೈನಲ್‌ನಲ್ಲಿ ಆಸ್ಟ್ರೇಲಿಯಾ ವಿರುದ್ಧ ಭಾರತ ಸೋತ ಬಳಿಕ ನಾಯಕ ರೋಹಿತ್ ಶರ್ಮಾ ಮತ್ತು ಪ್ರಮುಖ ಬ್ಯಾಟರ್ ವಿರಾಟ್ ಕೊಹ್ಲಿ ಅವರು ಡ್ರೆಸ್ಸಿಂಗ್ ಕೊಠಡಿಯಲ್ಲಿ ಕಣ್ಣೀರಿಟ್ಟರು ಎಂದು ತಂಡದಲ್ಲಿದ್ದ ಆಫ್ ಸ್ಪಿನ್ನರ್ ರವಿಚಂದ್ರನ್ ಅಶ್ವಿನ್ ಹೇಳಿದ್ದಾರೆ.

ಅಹಮದಾಬಾದ್‌ನಲ್ಲಿ ನ.19ರಂದು ನಡೆದ ಫೈನಲ್ ಪಂದ್ಯದಲ್ಲಿ ಆಸ್ಟ್ರೇಲಿಯಾ ಆರು ವಿಕೆಟ್‌ಗಳಿಂದ ಭಾರತವನ್ನು ಮಣಿಸಿ ಆರನೇ ಬಾರಿ ವಿಶ್ವಕಪ್ ಪ್ರಶಸ್ತಿ ಗೆದ್ದಿತ್ತು.

‘ಸೋಲಿನ ನಂತರ ಪ್ರಧಾನಿ ನರೇಂದ್ರ ಮೋದಿ ಅವರು ಡ್ರೆಸ್ಸಿಂಗ್ ಕೊಠಡಿಗೆ ಬಂದು ರೋಹಿತ್ ಮತ್ತು ಕೊಹ್ಲಿ ಸೇರಿದಂತೆ ತಂಡದ ಆಟಗಾರರನ್ನು ಹುರಿದುಂಬಿಸಲು ಪ್ರಯತ್ನಿಸಿದರು. ಈ ಸನ್ನಿವೇಶಗಳಿಗೆ ನಾನು ಸಾಕ್ಷಿಯಾಗಿದ್ದೆ’ ಎಂದು ಅಶ್ವಿನ್ ತಿಳಿಸಿದ್ದಾರೆ.

‘ಹೌದು, ನಾವು ನೋವನ್ನು ಅನುಭವಿಸುತ್ತಿದ್ದೇವೆ. ರೋಹಿತ್ ಮತ್ತು ವಿರಾಟ್ ಕಣ್ಣೀರು ಹಾಕಿದರು. ಅದನ್ನು ನೋಡಿದಾಗ ತುಂಬಾ ಬೇಸರವಾಯಿತು’ ಎಂದಿದ್ದಾರೆ.

ರೋಹಿತ್ ನಾಯಕತ್ವದ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದ ಅಶ್ವಿನ್, ಅವರನ್ನು ಮಾಜಿ ನಾಯಕ ಎಂ.ಎಸ್. ಧೋನಿಗೆ ಹೋಲಿಕೆ ಮಾಡಿದರು.

ಟೂರ್ನಿಯಲ್ಲಿ ಅಶ್ವಿನ್ ಒಂದು ಪಂದ್ಯ ಆಡಿದ್ದರು. ಚೆನ್ನೈನಲ್ಲಿ ನಡೆದ ಆಸ್ಟ್ರೇಲಿಯಾ ವಿರುದ್ಧದ ಆರಂಭಿಕ ಪಂದ್ಯದಲ್ಲಿ 34 ರನ್‌ಗಳಿಗೆ ಒಂದು ವಿಕೆಟ್ ಪಡೆದಿದ್ದರು.

ಹಾಕಿ ಟೂರ್ನಿಗೆ ಹರ್ಮನ್‌ಪ್ರೀತ್ ಸಾರಥ್ಯ

ನವದೆಹಲಿ (ಪಿಟಿಐ): ಸ್ಪೇನ್‌ನಲ್ಲಿ ಡಿ.15ರಿಂದ ನಡೆಯಲಿರುವ ಪಂಚ ದೇಶಗಳ ಹಾಕಿ ಟೂರ್ನಿಯಲ್ಲಿ ಹರ್ಮನ್‌ಪ್ರೀತ್ ಸಿಂಗ್ ಭಾರತ ತಂಡವನ್ನು ಮುನ್ನಡೆಸಲಿದ್ದಾರೆ.

ಒಟ್ಟು 24 ಮಂದಿಯ ತಂಡವನ್ನು ಹಾಕಿ ಇಂಡಿಯಾ ಪ್ರಕಟಿಸಿದೆ. ಸುಮಿತ್ ಮತ್ತು ಅಮಿತ್ ರೋಹಿದಾಸ್ ಅವರನ್ನು ಉಪ ನಾಯಕರಾಗಿ ಆಯ್ಕೆ ಮಾಡಲಾಗಿದೆ.

ಸಂಕ್ಷಿಪ್ತ ಸುದ್ದಿ

ಟಿ20 ವಿಶ್ವಕಪ್: ಉಗಾಂಡ ಅರ್ಹತೆ

ಪ್ಯಾರಿಸ್ (ಎಎಫ್‌ಪಿ): ಮುಂದಿನ ವರ್ಷ ಅಮೆರಿಕ ಮತ್ತು ವೆಸ್ಟ್‌ಇಂಡೀಸ್‌ನಲ್ಲಿ ನಡೆಯುವ ಟಿ20 ವಿಶ್ವಕಪ್ ಕ್ರಿಕೆಟ್ ಟೂರ್ನಿಗೆ ಉಗಾಂಡ ಅರ್ಹತೆ ಪಡೆದಿದೆ.

ಆಫ್ರಿಕಾ ವಲಯದ ಅರ್ಹತಾ ಕೂಟದಲ್ಲಿ ಗುರುವಾರ ರುವಾಂಡ ವಿರುದ್ಧ 9 ವಿಕೆಟ್‌ಗಳ ಗೆಲುವು ದಾಖಲಿಸುವ ಮೂಲಕ ದ್ವಿತೀಯ ಸ್ಥಾನದೊಂದಿಗೆ ಪುರುಷರ ವಿಶ್ವಕಪ್ ಟೂರ್ನಿಯಲ್ಲಿ ಮೊದಲ ಬಾರಿಗೆ ಪಾಲ್ಗೊಳ್ಳುವ ಅವಕಾಶ ಪಡೆದಿದೆ.

ಈಗಾಗಲೇ ನಮೀಬಿಯಾ ವಿಶ್ವಕಪ್ ಟೂರ್ನಿಗೆ ಅರ್ಹತೆ ಪಡೆದಿದೆ. ನಮೀಬಿಯಾ ಮತ್ತು ಉಗಾಂಡ ವಿರುದ್ಧ ಸೋತಿರುವ ಜಿಂಬಾಬ್ವೆ ವಿಶ್ವಕಪ್ ಟೂರ್ನಿಯಲ್ಲಿ ಭಾಗವಹಿಸುವ ಅರ್ಹತೆ ಕಳೆದುಕೊಂಡಿದೆ.

ಬೆನ್ ಸ್ಟೋಕ್ಸ್‌ಗೆ ಶಸ್ತ್ರಚಿಕಿತ್ಸೆ



ಲಂಡನ್ (ಪಿಟಿಐ): ಇಂಗ್ಲೆಂಡ್ ಕ್ರಿಕೆಟ್ ತಂಡದ ಆಲ್‌ರೌಂಡರ್ ಬೆನ್ ಸ್ಟೋಕ್ಸ್ ಅವರು ಎಡ ಮೊಣಕಾಲಿನ ಶಸ್ತ್ರಚಿಕಿತ್ಸೆಗೊಳಗಾದರು.

32 ವರ್ಷದ ಬೆನ್ ಅವರಿಗೆ ಮಂಡಿನೋವಿನಿಂದಾಗಿ ಕಳೆದ ಆ್ಯಷಸ್ ಸರಣಿಯಲ್ಲಿ ಬೌಲಿಂಗ್ ಮಾಡಲು ಸಾಧ್ಯವಾಗಿರಲಿಲ್ಲ.

ಈ ವರ್ಷದಲ್ಲಿ ಅವರು ಏಕದಿನ ಕ್ರಿಕೆಟ್ ವಿಶ್ವಕಪ್ ಟೂರ್ನಿಯಲ್ಲಿ ಆಡಿದ್ದರು. ಉಳಿದಂತೆ ಬೇರೆ ಸರಣಿಗಳಲ್ಲಿ ಹೆಚ್ಚು ಪಂದ್ಯಗಳನ್ನು ಆಡಿರಲಿಲ್ಲ.

ತಮ್ಮ ಶಸ್ತ್ರಚಿಕಿತ್ಸೆ ಯಶಸ್ವಿಯಾಗಿದ್ದು, ಪುನಶ್ಚೇತನ ಆರಂಭವಾಗಿದೆ ಎಂಬ ಸಂದೇಶವನ್ನು ಚಿತ್ರ ಸಹಿತ ಸಾಮಾಜಿಕ ಜಾಲತಾಣಗಳಲ್ಲಿ ಹಂಚಿಕೊಂಡಿದ್ದಾರೆ.

ಐಎಸ್‌ಎಲ್: ಡ್ರಾ ಪಂದ್ಯದಲ್ಲಿ ಬಿಎಫ್‌ಸಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಈ ಬಾರಿಯ ಇಂಡಿಯನ್ ಸೂಪರ್ ಲೀಗ್ ಫುಟ್‌ಬಾಲ್ ಟೂರ್ನಿಯಲ್ಲಿ ಎರಡನೇ ಜಯ ಸಾಧಿಸುವ ಬೆಂಗಳೂರು ಫುಟ್‌ಬಾಲ್ ಕ್ಲಬ್ ಆಸೆ ತವರಿನಂಗಳದಲ್ಲಿಯೂ ಕೈಗೂಡಲಿಲ್ಲ.

ಕಂಠೀರವ ಕ್ರೀಡಾಂಗಣದಲ್ಲಿ ಗುರುವಾರ ನಡೆದ ಬಿಎಫ್‌ಸಿ ಮತ್ತು ಪಂಜಾಬ್ ಎಫ್‌ಸಿ ನಡುವಣ ಪಂದ್ಯವು 3–3ರಿಂದ ಡ್ರಾ ಆಯಿತು.

ಈ ಟೂರ್ನಿಯಲ್ಲಿ ಬಿಎಫ್‌ಸಿ ತಂಡವು ಒಟ್ಟು ಎಂಟು ಪಂದ್ಯಗಳನ್ನು ಆಡಿದೆ. ಅದರಲ್ಲಿ ಒಂದು ಜಯ ಸಾಧಿಸಿದೆ. ನಾಲ್ಕು ಡ್ರಾ ಆಗಿದ್ದು, ಮೂರರಲ್ಲಿ ಸೋತಿದೆ.

ಪಂಜಾಬ್ ಎದುರಿನ ಪಂದ್ಯದಲ್ಲಿ ಸಮಬಲದ ಪೈಪೋಟಿ ನಡೆಯಿತು. ಬಿಎಫ್‌ಸಿಯ ಹರ್ಷ ಪತ್ರೆ (21ನೇ ನಿ), ಕರ್ಟಿಸ್ ಮೇನ್ (45+1) ಮತ್ತು ಜವಿ ಹರ್ನಾಂಡೇಜ್ (67ನೇ ನಿ)



ಬೆಂಗಳೂರಿನ ಕಂಠೀರವ ಕ್ರೀಡಾಂಗಣದಲ್ಲಿ ಗುರುವಾರ ನಡೆದ ಐಎಸ್‌ಎಲ್ ಪಂದ್ಯದಲ್ಲಿ ಬೆಂಗಳೂರು ಎಫ್‌ಸಿ ತಂಡದ ಕರ್ಟಿಸ್ ಮೈನ್ ಗೋಲು ಗಳಿಸಲು ಯತ್ನಿಸಿದರು – ಪ್ರಜಾವಾಣಿ ಚಿತ್ರ/ ಕಿಶೋರ್ ಕುಮಾರ್ ಬೋಳಾರ್

ಗೋಲು ಗಳಿಸಿದರು. ಇದಕ್ಕುತ್ತರವಾಗಿ ಪಂಜಾಬ್ ತಂಡದ ನಿಕಿಲ್ ಪ್ರಭು (19ನೇ ನಿ), ದಿಮಿಟ್ರಿಸ್ ಚಾಟ್ಜಿಸಲಾಸ್ (26ನೇ ನಿ) ಮತ್ತು ಲೂಕಾ ಮೆಜೆಸಿನ್ (30ನೇ ನಿ) ಗೋಲು ಹೊಡೆದರು.

ಈ ಪಂದ್ಯವನ್ನು ಒಲಿಂಪಿಕ್ ಚಾಂಪಿಯನ್ ಜಾವೆಲಿನ್ ಥ್ರೋಪಟು ನೀರಜ್ ಚೋಪ್ರಾ ವೀಕ್ಷಿಸಿದರು.